ಸಂವಾದ

ಡಿಸೆಂಬರ್ 2012 ರೂ. 20



ಕನ್ನಡ ಕಲಿಕೆ:

ಮಕ್ಕಳ ಅನ್ನದಲ್ಲಿ ಕಲ್ಲು ಮಣ್ಣು

ದೀಪಾವಳಿ ಬೆಳಕಿನ ಹಬ್ಬವೇ?

www.upkar.co.in

BMRDA

CREDAI BENGALURU

To create Joy for generations to Enjoy

UPKAR Meadows

At **Upkar Meadows**, you will find modernization co-exist in sync with nature. Hence it is an ideal location for one's dream home. You will find every reason to pamper yourself. The parks, colorful flowers, lush green trees and environment, beautiful water bodies, amazing landscapes will encourage you to indulge and enjoy.

Upkar Meadows, a BMRDA approved layout, offers complete peace of mind, free from pollution. There are 700 sites to choose from in the sizes of 30' x 40', 30' x 50', 40' x 60' and 50' x 80'.

UPKAR Green Fields

Upkar Greenfields, as the name suggests, is all about living in harmony with nature and it lives up to its name. It offers you a bouquet of parks, water bodies, trees along with other most modern amenities. Once you get inside **Upkar Greenfields**, life turns into a blissful state of living and your family will enjoy this new freedom, a freedom from hectic city life, and a freedom to enjoy living amidst nature.

Upkar Greenfields, a BMRDA approved residential layout, offers 1200 sites of various sizes : 30' x 40', 30' x 50', 40' x 60', and 50' x 80'.

UPKAR Spring Fields

Upkar Springfields is another fabulous township that has ample space for parks and recreation facilities. With all modern amenities it'll be like living in the lap of luxury. What's more, with the elevated highway and ring road nearby, home will be just a short drive away soon.

The project, a BMRDA approved residential layout, consists of about 1300 sites of different dimensions 30' x 40', 30' x 50', 40' x 60', and 50' x 80'.

A name of repute for over thirty years Upkar Estates has always been an icon resembling the value of trust, quality and deliverance. We inspire healthy living through each of our projects where we ensure meticulous planning and flawless execution along with the personalised guidance & care taken to handle all the documentation procedures and hand them over to you with minimal hassles. With thousands of happy customers, we have built and maintained relationships and bonds that have lasted over three decades. Now, we invite you to be a part of this ongoing story of trust and confidence.

UPKAR SINCE 1974

UPKAR ESTATES

UPKAR TOWERS, #28, 9th Cross, Off R.V Road, 2nd Block, Jayanagar, Bangalore-560011

PH: 080-2698 0900 (30 Lines) 080-40300900 Fax: 080-26572155

E-Mail:marketing@upkar.co.in Web: www.upkar.co.in

ಒಳಪುಟಗಳಲ್ಲಿ

- ಪತ್ರಗಳು ೦೪
- ಸಂಪಾದಕರೊಂದಿಗೆ ಸಂವಾದ:
  - ಸುರೇಶ್‌ಕುಮಾರ್ ಎಂ.ಆರ್ ೦೬
  - ಸಂಗಮೇಶ್ ಎಸ್. ಗಣಿ ೦೭
  - ಮಾರುತಿ ಹೆಚ್ ೦೮
  - ಮಲ್ಲಿಕಾರ್ಜುನ ಗುಮ್ಮಗೋಳ ೦೯
- ಹುಸಿ ವಾದ; ವಿಕೃತ ಇತಿಹಾಸ
  - ಬಾಬು ಹೆದ್ದೂರಶೆಟ್ಟಿ ೧೦
- ಯಾರಾದರೂ ಆಗಲಿ, ಸಾವು ಸೂತಕವೇ
  - ಡಾ॥ ಎಚ್.ಎಸ್ ಅನುಪಮಾ ೧೪
- ಮುಸ್ಲಿಂ ರಾಜಕಾರಣದ ಅಧ್ವಾನಗಳು...
  - ಮಹಮದ್ ಮುಸ್ತಫಾ ಆತೂರು ೧೬
- ಹೊಸ ಪುಸ್ತಕ ೧೯





- ದೇಶಿವಾದ: ಪರ್ಯಾಯ ಚಿಂತನೆಯ ಸ್ವರೂಪ
  - ಅರುಣ್ ಜೋಳದಕೂಡ್ಲಿಗಿ ೨೦
- ದೀಪಾವಳಿ ಬೆಳಕಿನ ಹಬ್ಬವೇ
  - ಸುಭಾಶ ಜಿ. ಶೀಲವಂತ ೨೪
- ಕುರಿಯನ್ ನೆನಪಿನಲ್ಲಿ...
  - ಡಿ. ಈರೇಶ್ ನಗರ್ಲೆ ೨೬
- ರಾಷ್ಟ್ರಾದ್ಯಂತ ವ್ಯಾಪಿಸಿರುವ ಕೋಮು ವಿಷಯವನ್ನು ತೊಡೆದುಹಾಕಬೇಕಿದೆ
  - ನಿ. ನ್ಯಾ. ಮಾರ್ಕಂಡೇಯ ಖಟ್ಜು
  - ಕನ್ನಡಕ್ಕೆ: ಸುರೇಶ್‌ಭಟ್ ಬಾಕ್ರಬೈಲು ೨೮
- ಕನ್ನಡ ಕಲಿಕೆ: ಮಕ್ಕಳ ಅನ್ನದಲ್ಲಿ ಕಲ್ಲು...
  - ಆರ್. ಚಲಪತಿ ೩೦
- ಪುಸ್ತಕ ಅವಲೋಕನ
  - ನಾಗಣ್ಣ ಕಿಲಾರಿ ೩೪

- ಬತ್ತದ ಬಯಲು-೧೧
  - ಡಾ॥ ಬಿ.ಎಂ ಪುಟ್ಟಯ್ಯ ೩೬
- ನೋಯುವ ಹಲ್ಲಿಗೆ ಹೊರಳುವ ನಾಲಿಗೆ-೧೩
  - ಡಾ॥ ಎಚ್.ಎಸ್ ಅನುಪಮಾ ೪೦
- ದಲಿತ್ ಡೈರಿ
  - ಚಂದ್ರಭಾನ್ ಪ್ರಸಾದ್/ ಎಸ್ ಮರಿಸ್ವಾಮಿ ೪೪
- ಮುಲ್ಲಾ ನಸ್ರುದ್ದೀನ್ ಕಥೆಗಳು ೫೦
- ಕವನಗಳು:
  - ಗಾಯಗಾರುಡಿ ೧೩
  - ಅವನು ಹೇಳುತ್ತಿದ್ದಾನೆ ೪೮

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಸಂವಾದ

ಮಾಸ ಪತ್ರಿಕೆ

ಸಂಪುಟ 11 ಸಂಚಿಕೆ 2

ಡಿಸೆಂಬರ್ 2012

ಸಂಪಾದಕ:

ಇಂದೂಧರ ಹೊನ್ನಾಪುರ

ಉಪ ಸಂಪಾದಕ:

ಭೈರಸಂದ್ರ ಗಂಗರಾಜು

ಸಂಪಾದಕೀಯ ಬಳಗ:

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಡಾ॥ ಕೆ. ಪುಟ್ಟಸ್ವಾಮಿ

ಡಾ॥ ಡಿ. ಡೊಮಿನಿಕ್

ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ Editorial: 9448048306
✆ Circulation: 9945264687
080 - 23480278

e-mail :
Editorial: samvaada@hotmail.com
honnapura@yahoo.co.in

Circulation :
samvaadacirculation@gmail.com

EDITOR :
INDUDHARA HONNAPURA

'ಸಂವಾದ' ಮಾಡಿಸಿದ ಅಂತರ್‌ಜಾತಿ ಮದುವೆ

ಮಾನ್ಯರೇ,

'ಸಂವಾದ' ಪತ್ರಿಕೆಯ ಲೇಖನಗಳು ನನ್ನ ಮೇಲೆ ಬಹಳಷ್ಟು ಪ್ರಭಾವ ಬೀರಿವೆ. ವಿಶೇಷವಾಗಿ ಜಾತಿ ಅಸಮಾನತೆ ಕುರಿತು ನಾನು ಕಲಿತಿದ್ದು 'ಸಂವಾದ'ದಿಂದಲೇ. ನಾವು ನಂಬಿರುವ ತತ್ವಗಳಲ್ಲಿ ಸ್ವಲ್ಪವಾದರೂ ನಿಜಜೀವನದಲ್ಲಿ ಅಳವಡಿಸಿಕೊಳ್ಳದಿದ್ದರೆ, ನಮ್ಮ ಓದು ಮತ್ತು ಲೇಖನಗಳು ಡಾಂಬಿಕತೆ ಮತ್ತು ಬೂಟಾಟಿಕೆ ಎಂದೆನಿಸಿಕೊಳ್ಳುತ್ತವೆ. ಬಸವ ಹೇಳುವ ಹಾಗೆ "ನುಡಿದಂತೆ ನಡೆಯದಿದ್ದಡೆ ಮೆಚ್ಚ ಕೂಡಲಸಂಗಮದೇವ". ಅಂತರ್‌ಜಾತಿ ವಿವಾಹಗಳ ಕುರಿತು ಅನೇಕ ಲೇಖನಗಳನ್ನು ತಾವು 'ಸಂವಾದ' ಪತ್ರಿಕೆಯಲ್ಲಿ ಪ್ರಕಟಿಸಿದ್ದಿರಿ. ಈ ವಿವಾಹಗಳು ಜಾತಿವಿನಾಶ ಮಾಡುತ್ತವೆ ಎಂದು ನಂಬಲಾಗಿದೆ. ಆದರೆ, ಕೆಲವು ಲೇಖನಗಳಲ್ಲಿ ಹೇಳಿದಂತೆ, ಪ್ರೇಮ ವಿವಾಹವು ಭಾವನಾತ್ಮಕತೆಯಿಂದ ಕೂಡಿರುವುದರಿಂದ ಮತ್ತು ಜಾತಿ ಸಮಾನತೆಯನ್ನು ಪ್ರಜ್ಞಾಪೂರ್ವಕವಾಗಿ ಖಂಡಿಸದಿರುವುದರಿಂದ ಗಂಡ ಅಥವಾ ಹೆಂಡತಿಯಲ್ಲಿ ಯಾರು ಪ್ರಬಲ ಜಾತಿಗೆ ಸೇರಿರುತ್ತಾರೋ ಅವರ ಪ್ರಭಾವ ಇಡೀ ಸಂಸಾರದ ಮೇಲೆ ಬೀಳುವುದರಿಂದ ಈ ರೀತಿಯ ಮದುವೆ ಜಾತಿಯನ್ನು ನಿರ್ಮೂಲನೆ ಮಾಡುವುದಿಲ್ಲ.

'ಸಂವಾದ' ಲೇಖನ ಮತ್ತು ಬುದ್ಧ, ಬಸವ, ಅಂಬೇಡ್ಕರ್ ತತ್ವಗಳಿಂದ ಪ್ರಭಾವಿತಗೊಂಡ ನಾನು ಮತ್ತು ನನ್ನ ಗೆಳತಿ ಪ್ರಜ್ಞಾಪೂರ್ವಕವಾಗಿ ಜಾತಿ ಮುರಿಯಲು ಅಂತರ್‌ಜಾತಿ ಮದುವೆಗೆ ಸಿದ್ಧವಾಗುತ್ತಿದ್ದೇವೆ. ಡಿಸೆಂಬರ 16, 2012 ರಂದು ನಾವು ಮದುವೆಯಾಗಲು ನಿರ್ಧರಿಸಿದ್ದೇವೆ. ನಮ್ಮಿಬ್ಬರ ತಂದೆ-ತಾಯಿಗಳು ಕೂಡ ಒಪ್ಪಿಕೊಂಡಿದ್ದಾರೆ.

ತಮ್ಮಂತ ಬುದ್ಧಿಜೀವಿ ಮತ್ತು ಹೋರಾಟಗಾರ ಈ ಮದುವೆಗೆ ಬಂದರೆ ಅದಕ್ಕೆ ಕಳೆ ಬರುತ್ತದೆ. ಕಾರಣ, ತಾವು ದಯವಿಟ್ಟು ಈ ಮದುವೆಗೆ ಬರಬೇಕಾಗಿ ವಿನಂತಿ.

ಇತಿ ನಿಮ್ಮ

ಜಿ ಎಸ್ ದಸ್ತಾಪೂರ ಮತ್ತು ಜ್ಯೋತಿ ಕುಮಾರಿ

09492047570



ಪತ್ರಾಗಾರ

ಪ್ರಳಯ; ಭೀತಿ ಮೂಡಿಸುತ್ತಿರುವ ಮಾಧ್ಯಮಗಳು!

ಮಾನ್ಯ ಸಂಪಾದಕರೇ,

ಪ್ರಜಾಪ್ರಭುತ್ವ ಮುಖ ಸರ್ವಾಧಿಕಾರಿ ಅಮೆರಿಕಾಕ್ಕೆ ಈಗ ಸ್ಯಾಂಡಿಯ ತಲೆ ನೋವು. ಅಧ್ಯಕ್ಷನೇ ಇದು ಶತಮಾನದ ದುರಂತವೆಂದ ಮೇಲೆ ಪ್ರಪಂಚದ ಸುದ್ದಿವಾಹಿನಿಗಳನ್ನು ಕೇಳಬೇಕೆ? ಅಮೆರಿಕಾದ ದುಃಖತಪ್ತ, ಭಯಭೀತ ಜನತೆಗೆ ಧೈರ್ಯ ತುಂಬುವ ಬದಲು ಅದೇ ಬೊಗಳುವ ಕಿಸುಬಾಯಿ ದಾಸನಂತೆ ಡಿಸೆಂಬರ್ 21ರ ಪ್ರಳಯವನ್ನು ಸಾರುತ್ತಿವೆ. ಈ ಪ್ರಕೃತಿ ವಿಕೋಪ ಭೂಮಿಗೇನು ಹೊಸತೆ ಎಂಬ ಸಾಮಾನ್ಯ ಪ್ರಜ್ಞೆಯು ನಮ್ಮ ಬುದ್ಧಿವಂತ ವಾಹಿನಿಗಳಿಗೆ ತಿಳಿಯುತ್ತಿಲ್ಲ. ಪ್ರಕೃತಿ ವಿಕೋಪ ಇದುವರೆಗೆ ಏನೆಲ್ಲ ಮಾಡಿಲ್ಲ? ಈ ಪ್ರಕೃತಿ ವಿಕೋಪಗಳಿಂದ ತಾನೇ ಮಾನವ ದೇವರು ದಿಂಡಿರು, ಭೂತ ಪ್ರೇತಗಳನ್ನು ಸೃಷ್ಟಿಸಿಕೊಂಡಿದ್ದು! ಇದರ ಆಧಾರದ ಮೇಲೆ ತಾನೆ ಮಾನವ ಹಲವು ಧರ್ಮಗಳನ್ನು ಮಾಡಿಕೊಂಡಿದ್ದು? ಬಹುಷಃ ಈ ಧರ್ಮಗಳ ಕಾರಣ ಕಲಹಗಳಲ್ಲಿ ಮನುಷ್ಯ ತನ್ನ ಪ್ರಾಣ ಕಳೆದುಕೊಂಡಷ್ಟು ಬೇರಾವುದರಲ್ಲೂ ಕಳೆದುಕೊಂಡಿಲ್ಲ. ಇದನ್ನು ಮಾಧ್ಯಮಗಳು ಕಂತುಗಳಲ್ಲಿ ಪ್ರಸಾರಮಾಡುತ್ತವೆಯೆ? ಇಲ್ಲ. ಏಕೆಂದರೆ ಅದರಿಂದ ಇವರ ಟಿಆರ್‌ಪಿ ಹೆಚ್ಚಾಗುವುದಿಲ್ಲ. ಈ ಪ್ರಳಯಕ್ಕೆ ತಲೆ ಕೆಡಿಸಿಕೊಂಡಷ್ಟು ಸಾಮಾಜಿಕ ಪಿಡುಗುಗಳಾದ ಹೆಣ್ಣುಭ್ರೂಣ ಹತ್ಯೆ, ಅತ್ಯಾಚಾರ, ಅಸ್ಪೃಶ್ಯತೆ, ಆತ್ಮಹತ್ಯೆ, ಮರ್ಯಾದಾಹೀನ ಹತ್ಯೆಗಳ ಬಗ್ಗೆ ತಲೆಕೆಡಿಸಿಕೊಂಡಿದ್ದರೆ ಸ್ವಲ್ಪವಾದರೂ ಪರಿಹಾರ ಕಂಡುಕೊಳ್ಳಬಹುದಿತ್ತೋ ಏನೋ. ಅದೇನೇ ಇರಲಿ ಸ್ಯಾಂಡಿಯು ಸದ್ಯಕ್ಕೆ ಮೂಢ ಜ್ಯೋತಿಷಿಗಳಿಗೆ, ಮಾಧ್ಯಮದವರಿಗೆ ಭರ್ಜರಿ ಆಹಾರವಾಗಿರುವುದಂತು ಸತ್ಯ. ಇಂದಿಗೆ ಸ್ಯಾಂಡಿಯಿಂದಾಗಿ ಮೃತರಾಗಿರುವವರ ಸಂಖ್ಯೆ 65. (ಸಾವು ಎಷ್ಟೇ ಆದರೂ ನೋವು ಒಂದೆ). ಈ ವಾಹಿನಿಗಳು ಇದನ್ನು ಭಯಾನಕ ದುರಂತವೆಂಬಂತೆ, ಜಗತ್ತಿನ ಅಳಿಯುವಿಕೆಯ ಆರಂಭ ಎನ್ನುತ್ತಿರುವುದು ಎಷ್ಟು ಸರಿ? ಏಕೆಂದರೆ ಇದನ್ನೂ ಮೀರಿಸುವ ಭಯಾನಕ ದುರಂತಗಳೇ ಅಮೆರಿಕಾದಲ್ಲಿ ನಡೆದು ಹೋಗಿದೆ. 1909ರಲ್ಲಿ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ 3000 ಜನ ಭೂಕಂಪಕ್ಕೆ ಮೃತಪಟ್ಟಿದ್ದರು. 1933 ಕ್ಯಾಲಿಫೋರ್ನಿಯಾದ ಬೀಚಿನಲ್ಲಿ 115 ಜನ ಪ್ರವಾಹಕ್ಕೆ ಮೃತಪಟ್ಟಿದ್ದರು. 1946ರಲ್ಲಿ ಅಲಸ್ಕಾದಲ್ಲಿ 165 ಜನ ಸುನಾಮಿಗೆ ಮೃತಪಟ್ಟರು. 1948ರಲ್ಲಿ ಮತ್ತದೇ ಅಲಾಸ್ಕದಲ್ಲಿ ಸುನಾಮಿಗೆ 128 ಜನ ಮೃತಪಟ್ಟರು. ಹೀಗೆ ಕಳೆದ ಶತಮಾನದಲ್ಲಿ ಅಮೆರಿಕಾದಲ್ಲಿ 4000ಕ್ಕೂ ಹೆಚ್ಚು ಜನ ಪ್ರಕೃತಿ ವಿಕೋಪದಿಂದ ಮೃತಪಟ್ಟಿದ್ದಾರೆ. ಇವೆಲ್ಲವೂ ಸಹ ಒಬಾಮಾರಿಗೆ ದೊಡ್ಡದೆಂದೆನಿಸಲಾರವು ಏಕೆಂದರೆ ಆಗ ಅವರು ಪದವಿಯಲ್ಲಿ ಇರಲಿಲ್ಲ. ಎಲೆಕ್ಷನ್ನು ಸಹ ಬಂದಿರಲಿಲ್ಲ.

ಇನ್ನು ಮಾಧ್ಯಮಗಳಿಗೆ ಕೇಳಬಯಸುವುದೇನೆಂದರೆ ಇಂತಹ ಪ್ರಕೃತಿ ವಿಕೋಪಗಳು ಹಿಂದೆ ಸಂಭವಿಸಿವೆಯೇ ಇಲ್ಲವೇ. ಅದ್ಯಾವುದೊ ಅರೆ ಜ್ಞಾನದಿಂದ ಬರೆದ ಸರಿಯಾಗಿ ಓದಲಾಗದ ಕ್ಯಾಲಂಡರಿನ ಹಿಂದೆಬಿದ್ದು ಎಲ್ಲ ವಿಕೋಪಗಳನ್ನು ಪ್ರಳಯಕ್ಕೆ ಲಿಂಕ್ ಮಾಡುವುದು ಸರಿಯೇ? 1920ರಲ್ಲಿ ಚೀನಾದ ಹಯುವಾದಲ್ಲಿ 2 ಲಕ್ಷ ಜನ, 1948ರಲ್ಲಿ ರಷ್ಯಾದ ಅಷ್ಗಬಾಟ್ನಲ್ಲಿ 1 ಲಕ್ಷ ಜನ, 1976ರಲ್ಲಿ ಚೀನಾದ ತಂಗಶಾನ್‌ನಲ್ಲಿ 2 ಲಕ್ಷ 50 ಸಾವಿರ ಜನ, 2003ರಲ್ಲಿ ಇರಾನ್‌ನಲ್ಲಿ 31 ಸಾವಿರ ಜನ, 2004 ಸುಮಾತ್ರಾದಲ್ಲಿ 2 ಲಕ್ಷದ 30 ಸಾವಿರ ಜನ, 2005ರಲ್ಲಿ ಪಾಕಿಸ್ತಾನದಲ್ಲಿ 86 ಸಾವಿರ ಜನ, 2005ರಲ್ಲಿ ಮತ್ತೆ ಚೀನಾದಲ್ಲಿ 88 ಸಾವಿರ ಜನ ಅಷ್ಟೇ ಏಕೆ ಭಾರತದಲ್ಲಿ 2001ರಲ್ಲಿ ಗುಜರಾತಿನಲ್ಲಿ 20 ಸಾವಿರ ಜನ. ಹೀಗೆ ವಿವಿಧ ಪ್ರಕೃತಿ ವಿಕೋಪಗಳಿಗೆ ಕೋಟ್ಯಾಂತರ ಜನ ಬಲಿಯಾಗಿದ್ದಾರೆ. ಆಗಲೂ ಸಹ ಜನ ಪ್ರಳಯವಾಗುತ್ತದೆ ಎಂದೇ ಭಾವಿಸಿರುತ್ತಾರೆ. ಅದು ಮನುಷ್ಯನ ಜೀವಭಯದ ಸಂಕೇತ. ಇದು ಹೀಗೆ ಮುಂದುವರೆಯುತ್ತಲೇ ಹೋಗುತ್ತದೆ. ಡಿಸೆಂಬರ್ 22ರ ಬೆಳಿಗ್ಗೆ ನಾವೆಲ್ಲರೂ ಹೀಗೆಯೇ ಇರುತ್ತೇವೆ. ಅದರಲ್ಲಿ ಅಲ್ಪಸ್ವಲ್ಪ ಬದಲಾವಣೆಗಳು ಆಗಬಹುದು. ಆದರೆ ಅತಿ ಹೆಚ್ಚು ಬದಲಾಗುವುದು ಮಾಧ್ಯಮದವರ ಹಣಗಳಿಕೆಯಲ್ಲಿ. ನಮ್ಮನ್ನೆಲ್ಲರನ್ನು ಬಕ್ರಗಳನ್ನಾಗಿ ಮಾಡಿ ಅವರು ಹಣ ಸಂಪಾದನೆ ಮಾಡುತ್ತಾರೆ. ಡಿಸೆಂಬರ್ 22ರಿಂದ ಹೊಸ ತಂತ್ರ ಉಪಯೋಗಿಸುತ್ತಾರೆ. ಅದಕ್ಕೆ ಮೊದಲು ನಾವು ಬದಲಾಗಬೇಕು ನಂತರ ಇಡೀ ಜಗತ್ತೇ ಬದಲಾಗುತ್ತದೆ. ವೈಚಾರಿಕತೆಯನ್ನು ಬೆಳೆಸಿಕೊಳ್ಳಿ ಇಂತಹ ಸುಳ್ಳು ಕಾರ್ಯಕ್ರಮಗಳನ್ನು ಧಿಕ್ಕರಿಸಿ. ಮಾಧ್ಯಮಗಳು ಡಿಸೆಂಬರ್ 22ರಂದು ಬದುಕಿದೆವೆ ಬಡಜೀವಗಳು ಅಥವಾ 2025ಕ್ಕೆ ಮುಂದೂಡಿದ ಪ್ರಳಯ ಎಂಬ ಕಾರ್ಯಕ್ರಮ ನೀಡಲು ಸಜ್ಜಾಗಿವೆ. ಎಚ್ಚರ! ಎಚ್ಚರ!!

ವಿಕಾಸ ಆರ್. ಮೌರ್ಯ, ಬೆಂಗಳೂರು.

ಮಹಿಳೆಯರಿಗೆ ಎಲ್ಲಿದೆ ರಕ್ಷಣೆ?

ಮಾನ್ಯ ಸಂಪಾದಕರೇ,

ತಾಯಿ, ಅಕ್ಕ, ತಂಗಿ ಎಲ್ಲಾ ರೂಪದಲ್ಲಿಯ ಮಾತೆಯೇ ಹೆಣ್ಣು. ಇಂದು ಹೆಣ್ಣನ್ನು ಅಸಹಾಯಕರನ್ನಾಗಿಸಿರುವ ಈ ನಾಡಿನಲ್ಲಿ ಹೆಣ್ಣನ್ನು ನಾನಾ ದೃಷ್ಟಿಯಲ್ಲಿ ನೋಡುತ್ತಿದ್ದಾರೆ.

ಸಮಾಜದಲ್ಲಿ ಮಹಿಳೆ ಎಲ್ಲಾ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದಾಳೆ. ಆಕೆ ತನ್ನ ಶಕ್ತಿ ಮೀರಿದ ವೃತ್ತಿಯಲ್ಲೂ ತನ್ನನ್ನು ಗುರುತಿಕೊಂಡಿದ್ದಾಳೆ. ವೈದ್ಯಕೀಯ ಶುಶ್ರೂಸೆ ಮಾಡುವುದು, ಶಿಕ್ಷಕಿ, ಗಗನಸಕಿ, ಪೊಲೀಸ್ ವೃತ್ತಿ, ಎಂಜಿನಿಯರ್ಸ್ ಮತ್ತಿತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಈಕೆ, ಸಂಸಾರವೆಂಬ ಸಾಗರದಲ್ಲೂ ತನ್ನನ್ನು ಗುರುತಿಸಿಕೊಂಡಿದ್ದಾಳೆ.

ಕುಟುಂಬ ಎಂಬುದು ಭಾರತೀಯ ಸಮಾಜದಲ್ಲಿ ಪ್ರೀತಿ, ವಾತ್ಸಲ್ಯ ಸುರಕ್ಷತೆಯ ತಾಣ. ಆದರೆ ಹೆಣ್ಣುಮಗುವಿಗೆ ಇದೇ ಕುಟುಂಬ ಹಿಂಸೆ, ದೌರ್ಜನ್ಯದ ತಾಣವೂ ಆಗಿರುತ್ತಿರುವುದು ಆತಂಕಕಾರಿ ವಿಚಾರ. ಜನ್ಮ ಕೊಟ್ಟ ತಂದೆಯೇ ಹೆಣ್ಣುಮಕ್ಕಳ ಪಾಲಿಗೆ ಯಮನಾಗುತ್ತಿರುವ ವರದಿಗಳಂತೂ ಕುಟುಂಬದೊಳಗಿನ ಹಿಂಸೆಯನ್ನು ಬಹಿರಂಗಪಡಿಸಿದೆ. ಬೆಂಗಳೂರಿನಲ್ಲಿ ಸ್ವಂತ ತಂದೆಯ ದೌರ್ಜನ್ಯದಿಂದ ಪ್ರಾಣ ಕಳೆದುಕೊಂಡ ಮೂರು ತಿಂಗಳ ಹಸುಳೆ ನೇಹ ಅಫ್ರೀನಳ ಪ್ರಕರಣ, ಆಂಧ್ರಪ್ರದೇಶದಲ್ಲಿ ವರದಕ್ಷಿಣೆ ಉಳಿಸಲು ತನ್ನಿಬ್ಬರ ಹೆಣ್ಣುಮಕ್ಕಳನ್ನು ತಂದೆಯೇ ಹತ್ಯೆಗೈದ ಪ್ರಕರಣ, ಗ್ವಾಲಿಯರ್‌ನಲ್ಲಿ ಎರಡು ದಿನದ ಹಸುಗೂಸಿಗೆ ತಂದೆಯೇ ನಿಕೋಟಿನ್ ಕೊಟ್ಟು ಸಾಯಿಸಿದ ಪ್ರಕರಣಗಳು ಸಾಲುಗಟ್ಟಿ ನಿಲ್ಲುತ್ತವೆ.

ಈ ಸರಣಿ ಪ್ರಕರಣಗಳು ಸೂಚಿಸುತ್ತಿರುವುದಾದರೂ ಏನು? "ಕುಟುಂಬದ ಕಣ್ಣು" ಎಂದು ಕರೆಸಿಕೊಳ್ಳುವ ಹೆಣ್ಣು ಹೆಸರಿಗಷ್ಟೇ ಯಜಮಾನಿ. 'ಹೆಣ್ಣು ಸಂಸಾರದ ಕಣ್ಣು' ಎಂದು ಹೊಗಳುವ ನಮ್ಮ ಸಮಾಜ ಗಂಡಿಗೆ 'ಕುಟುಂಬದ ಯಜಮಾನ'ನ ಪಟ್ಟ ಕಟ್ಟುತ್ತದೆ. ಕುಟುಂಬದೊಳಗಿನ ಈ ಅಧಿಕಾರ ಸಂದರ್ಭಗಳಲ್ಲೆಲ್ಲಾ ನಲುಗುವುದು ಹೆಣ್ಣು ಮಗುವಿನ ಕುರಿತಾದ ದೃಷ್ಟಿಕೋನದಿಂದ. ಸಮಾಜದಲ್ಲಿ ಪೆಡಂಭೂತವಾಗಿರುವ ವರದಕ್ಷಿಣೆ ಸಮಸ್ಯೆ ಹೆಣ್ಣು ಮಗುವನ್ನು ಮತ್ತಷ್ಟು ಅಪಮೌಲ್ಯಗೊಳಿಸುತ್ತದೆ. ಇದು ಹೆಣ್ಣುಮಗುವಿನ ವಿರುದ್ಧದ ಹಿಂಸೆ, ದೌರ್ಜನ್ಯಗಳಿಗೆ ನಾಂದಿಯಾಗುತ್ತದೆ. ಹೆಚ್ಚಿನ ಶಿಕ್ಷಣಕ್ಕೆಂದು ಹೆಣ್ಣು ಮಕ್ಕಳಿಗೆ ಹಣ ವ್ಯಯ ಮಾಡುವುದು ವ್ಯರ್ಥ ಎಂಬುದು ಶೇ. 43ರಷ್ಟು ವಿದ್ಯಾರ್ಥಿಗಳ ಅಭಿಪ್ರಾಯ. ರಾಷ್ಟ್ರದ ಪ್ರಮುಖ ನಗರಗಳ ಪ್ರತಿಷ್ಠಿತ ಶಾಲೆಗಳಲ್ಲಿ ಕಲಿಯುವ ಅತಿಗಣ್ಯ ಸಾಮಾಜಿಕ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಇತ್ತೀಚೆಗೆ ನಡೆಸಲಾದ ಸಮೀಕ್ಷೆಯೊಂದರಲ್ಲಿ ವ್ಯಕ್ತಪಡಿಸಿರುವ ಈ ಅಭಿಪ್ರಾಯ ಆಘಾತಕಾರಿ. ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಸಾಧನೆಗಳ ಶಿಖರಗಳೇರುತ್ತಿರುವ ಈ ಕಾಲದಲ್ಲಿ ಆಳವಾಗಿ ಬೇರೂರಿರುವ ನಿಲುವು ಪೂರ್ವಾಗ್ರಹದ ನಿದರ್ಶನವಲ್ಲದೆ ಮತ್ತೇನು?

ಇನ್ನೂ ಕುಟುಂಬದಲ್ಲಿ ಹೆಣ್ಣುಮಗು ಎಂಬ ಅಸಡ್ಡೆ ತೋರುವ ಕಥೆಯಂತೂ ಮಾಮೂಲು. ಕುಟುಂಬಗಳಲ್ಲಿನ 'ಯಜಮಾನ ಸಂಸ್ಕೃತಿ' ಪ್ರೀತಿ, ವಾತ್ಸಲ್ಯ ಅಂತಃಕರಣಗಳ 'ಸಹಜೀವನ ಸಂಸ್ಕೃತಿ' ಯಾಗಿ ಬದಲಾಗಬೇಕಿರುವ ಅವಶ್ಯಕತೆ ಯಿದೆಯೆಂದು ಈ ಎಲ್ಲಾ ಬೆಳವಣಿಗೆಗಳೂ ಸೂಚಿಸುತ್ತವೆ. ಭಾರತೀಯ ಸಂಸ್ಕೃತಿಯ ಕೌಟುಂಬಿಕ ಮೌಲ್ಯಗಳ ನಿಜವಾದ ಆದರ್ಶ ಕಟ್ಟಕಡೆಗೆ ಅದೇ ಅಲ್ಲವೇ? ಸರಿಯಾಗಿ ಜಾರಿಯಾಗದ ಆಸ್ತಿ ಹಕ್ಕು, ವರದಕ್ಷಿಣೆ ಸಮಸ್ಯೆ, ಅರ್ಥವ್ಯವಸ್ಥೆಗೆ ಮಹಿಳೆಯ ಕೊಡುಗೆ ಅಗೋಚರ– ಇವೆಲ್ಲವೂ ಹೆಣ್ಣುಮಕ್ಕಳನ್ನು ಕೀಳಾಗಿ ಪರಿಗಣಿಸುವುದಕ್ಕೆ ಕಾರಣವಾಗಿದೆ.

ಈ ಸಮಸ್ಯೆಗಳ ನಿವಾರಣೆಗೆ ಆದ್ಯತೆ ಸಿಗಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಹೆಣ್ಣು ಮಗುವನ್ನು ಭಾಗ್ಯಲಕ್ಷ್ಮಿ ಎಂದು ಅಲಂಕಾರಿಕವಾಗಿ ಎತ್ತರಕ್ಕೇರಿಸಿದರಷ್ಟೇ ಸಾಲದು; ಹುಟ್ಟುವ ಹಕ್ಕು ಕಳೆದುಕೊಳ್ಳುತ್ತಾ, ಸುರಕ್ಷಿತವಾಗಿ ಬಾಳುವ ಹಕ್ಕನ್ನು ಕಳೆದುಕೊಳ್ಳುತ್ತಿರುವ ಹೆಣ್ಣುಮಗುವಿನ ಕುರಿತಾದ ದೃಷ್ಟಿಕೋನ ಮಾರ್ಪಾಡಿಗೆ ಸಾಮಾಜಿಕವಾಗಿ ದೊಡ್ಡ ಪರಿವರ್ತನೆ ಆಗಬೇಕು. ಇಲ್ಲದಿದ್ದಲ್ಲಿ ಮುಂಬರುವ ನಾಳೆಗಳು ಗಂಡು–ಹೆಣ್ಣು ಅನುಪಾತದಿಂದ ತೀವ್ರ ಅಸಮತೋಲನದಲ್ಲಿ ನಲುಗಲಿವೆ.

ದೀಪ. ಎಂ, ಬೆಂಗಳೂರು

ಸ್ವಕೀಯರನ್ನೇ ಹೊಸಕಿಹಾಕುವ ಸರ್ಕಾರಗಳು

ಮಾನ್ಯ ಸಂಪಾದಕರೇ,

ಸ್ವತಂತ್ರ ಭಾರತದಲ್ಲಿ ದಲಿತ, ಆದಿವಾಸಿ, ಅಲ್ಪಸಂಖ್ಯಾತ ಸಮುದಾಯಗಳ ಪರಿಸ್ಥಿತಿ ಎಂತಹ ಅಧೋಗತಿಗಿಳಿದಿದೆ ಎಂಬುದಕ್ಕೆ ಮತ್ತೊಂದು ಸಾಕ್ಷಿ ಛತ್ತೀಸ್‌ಗಡದ 22 ಅಮಾಯಕ ಆದಿವಾಸಿಗಳ ಸಾಮೂಹಿಕ ಹತ್ಯೆ. ಹತರಾದವರ ಪೈಕಿ 12 ಮಂದಿ 16ರ ಹರೆಯಕ್ಕೆ ಕೆಳಗಿನ ಮಕ್ಕಳು ಎಂಬುದನ್ನು ನೋಡಿದಾಗ ಯಾರ ರಕ್ತವೂ ಕುದಿಯುತ್ತದೆ. ವಾಸ್ತವ ಏನೆಂದರೆ ಶೋಷಣೆ, ದಮನ, ದೌರ್ಜನ್ಯ ಇತ್ಯಾದಿ ಜನವಿರೋಧಿ ನೀತಿಗಳ ವಿಷಯದಲ್ಲಿ ಸ್ವತಂತ್ರ ಭಾರತದ ಪ್ರಭುತ್ವಗಳು ವಸಾಹತುಶಾಹಿ ಬ್ರಿಟಿಷ್ ಆಡಳಿತವನ್ನೂ ಹಿಂದಿಕ್ಕಿ ಹಲವಾರು ಹೆಜ್ಜೆ ಮುಂದೆಹೋಗಿವೆ. ಬ್ರಿಟಿಷರಾದರೋ ಪರಕೀಯರು. ಆದರೆ ಅಸಹಾಯಕ, ದುರ್ಬಲ ಸ್ವಕೀಯರನ್ನೇ ಹೊಸಕಿಹಾಕುವ ಭಾರತೀಯ ಸರ್ಕಾರಗಳಿಗೆ ಏನೆನ್ನಬೇಕು.

ನಮ್ಮದು ಹೆಸರಿಗೆ ಪ್ರಜಾಪ್ರಭುತ್ವವಾದರೂ ನಮ್ಮನ್ನಾಳುತ್ತಿರುವುದು ಅದೇ ಊಳಿಗಮಾನ್ಯ ಮನಸ್ಸುಗಳು. ಇದರ ಮೇಲಿಂದ ಆರ್ಥಿಕ ಉದಾರೀಕರಣ, ಮುಕ್ತ ಮಾರುಕಟ್ಟೆ ನೀತಿಗಳನ್ನು ಅಪ್ಪಿಕೊಂಡಿರುವುದು ಕೋತಿಗೆ ಕಳ್ಳು ಕುಡಿಸಿದಂತಾಗಿದೆ. ಎಲ್ಲೆಲ್ಲೂ ಅನೀತಿಯೇ ತಾಂಡವವಾಡುತ್ತಿದೆ. ಎತ್ತ ನೋಡಿದರೂ 'ಅಭಿವೃದ್ಧಿ'ಯ ಮಂತ್ರ ಜಪಿಸುತ್ತ ವೈಯುಕ್ತಿಕ ಪ್ರಗತಿಯನ್ನು ಸಾಧಿಸುವವರೇ ತುಂಬಿದ್ದಾರೆ. ಪೊಲೀಸ್, ಸಿಆರ್‌ಪಿಎಫ್, ಬಿಎಸ್‌ಎಫ್, ನಕ್ಸಲ್ ನಿಗ್ರಹ ದಳದಂತಹ ಪಡೆಗಳು ಇರುವುದೇ ಇಂಥವರ ರಕ್ಷಣೆಗೆಂದಾಗಿದೆ.

ಸಾವಿರಾರು ನಿರಪರಾಧಿ ಮುಸ್ಲಿಂ ಯುವಕರಿಗೆ ಉಗ್ರರ ಹಣೆಪಟ್ಟಿ ಕಟ್ಟಿ ವರ್ಷಾನುಗಟ್ಟಲೆ ಜೈಲುಗಳಲ್ಲಿ ಕೊಳೆಹಾಕಿ ಅವರ ಭವಿಷ್ಯವನ್ನೇ ಹಾಳುಗೆಡವುವವರಿಗೆ ವಿಚಾರಣೆಯೂ ಇಲ್ಲ, ಶಿಕ್ಷೆಯೂ ಇಲ್ಲ. ಚರ್ಚ್‌ಗಳಿಗೆ ದಾಳಿ ಮಾಡುವವರನ್ನು ರಾಜಕೀಯ ಕಾರ್ಯಕರ್ತರೆಂದು ಕರೆದು ಬಿಡುಗಡೆಗೊಳಿಸಲಾಗುತ್ತದೆ. ದಲಿತರ ಮೇಲೆ ನಡೆಯುವ ಸಹಸ್ರಾರು ದೌರ್ಜನ್ಯ ಪ್ರಕರಣಗಳು ದಾಖಲೇ ಆಗುವುದಿಲ್ಲ. ಮಾವೋವಾದಿಗಳ ಹೆಸರಿನಲ್ಲಿ ಯಾರನ್ನೇ ಬಲಿಕೊಟ್ಟರೂ ಸರ್ಕಾರಗಳ ಅಭಯಹಸ್ತ. ಇವೆಲ್ಲ ಕಾರಣಗಳಿಗಾಗಿ ಕಾಶ್ಮೀರ, ಛತ್ತೀಸ್‌ಗಡ ಮೊದಲಾದ ಪ್ರಕ್ಷುಬ್ಧ ಪ್ರದೇಶಗಳಲ್ಲಿ ಅಮಾಯಕರನ್ನು ಕೊಲ್ಲುವ ಪ್ರವೃತ್ತಿ ವಿಫುಲವಾಗಿ ಬೆಳೆದಿದೆ. ಕಾಶ್ಮೀರ ಒಂದರಲ್ಲೇ ಇಂತಹ ಸಾವಿರಾರು ಅನಾಮಧೇಯ ಸಮಾಧಿಗಳಿರುವುದು ಪತ್ತೆಯಾಗಿದೆ. ಆದರೂ ನಮ್ಮ ಘನತೆವೆತ್ತ ಪ್ರಧಾನಿ, ಗೃಹಸಚಿವರು ಮುಂತಾದ ನಾಯಕರಿಗೆ ಹೇಗೆ ನಿದ್ದೆ ಬರುತ್ತದೋ!?

ಎಸ್. ಭಟ್ ಬಾಕ್ರಬೈಲು

ಚಂದಾ ವಿವರ

ಬಿಡಿ ಪ್ರತಿ ರೂ. 20

ಚಂದಾ ಅವಧಿ:	1 ವರ್ಷಕ್ಕೆ	3 ವರ್ಷಕ್ಕೆ	5 ವರ್ಷಕ್ಕೆ
ವ್ಯಕ್ತಿಗಳು :	ರೂ. 200	ರೂ. 550	ರೂ. 900
ಸಂಸ್ಥೆಗಳು :	ರೂ. 240	ರೂ. 720	ರೂ. 1200
ಹಿತೈಷಿಗಳು :	ರೂ. 500	ರೂ. 1500	ರೂ. 2500

ಆಜೀವ ಚಂದಾ ರೂ.5,000/–
ಪೋಷಕ ಚಂದಾ ರೂ.10,000/–

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಈ ಕೆಳಗಿನ ಖಾತೆಗೆ ಕಳುಹಿಸಬಹುದು:
A/C NAME: SAMVAADA MAGAZINE
BANK NAME: STATE BANK OF INDIA,
BRANCH: BHARATHNAGAR, BANGALURU
A/C No: 30140484351, IFS Code: SBIN0005198

ಚಂದಾದಾರರ ಗಮನಕ್ಕೆ

'ಸಂವಾದ' ಪತ್ರಿಕೆಯ ಚಂದಾ ವಿವರ, ಹೊಸದಾಗಿ ಚಂದಾದಾರರಾಗುವವರು, ಚಂದಾ ನವೀಕರಿಸುವವರು ಹಾಗೂ ಪತ್ರಿಕೆ ಸರಬರಾಜಿನಲ್ಲಾಗುವ ಯಾವುದೇ ವ್ಯತ್ಯಯ–ದೂರುಗಳನ್ನು ಕುರಿತ ಮಾಹಿತಿಗಾಗಿ ಈ ಕೆಳಕಂಡ ಫೋನ್ ಸಂಖ್ಯೆಗಳನ್ನು ಮಾತ್ರ ಸಂಪರ್ಕಿಸಬೇಕಾಗಿ ವಿನಂತಿ.

ಮೊಬೈಲ್: 9945264687
ದೂರವಾಣಿ: 080–23480278
ಇ–ಮೇಲ್: samvaadacirculation@gmail.com

ಸಂಪಾದಕರೊಡನೆ ಸಂವಾದ

ಸ್ವಾತ್ ಕಣಿವೆಯ ಶಾಂತಿಧೂತೆ

ಸುರೇಶ್‌ಕುಮಾರ್ ಎಂ.ಆರ್

ಪ್ರಿಯ ಸಂಪಾದಕರೇ,

"ಅವರು ನನ್ನನ್ನು ತಡೆಯಲಾರರು, ನಾನು ನನ್ನ ಶಿಕ್ಷಣವನ್ನು ಪಡೆದೇ ತೀರುತ್ತೇನೆ. ಅದು ಶಾಲೆಯಲ್ಲಿಯೇ ಆಗಲಿ, ಮನೆಯಲ್ಲಿಯೇ ಆಗಲಿ ಅಥವಾ ಮತ್ತಾವುದೇ ಜಾಗವಾಗಲಿ, ಶಿಕ್ಷಣ ನನ್ನ ಮೂಲಭೂತ ಹಕ್ಕು" ("They can not stop me. I will get my education if it is in home, school or any place. Education is my basic right") ಎಂದು ತನ್ನ ಹಕ್ಕನ್ನು ಪ್ರತಿಪಾದಿಸಿದವಳು "ಮಲಾಲಾ ಯೂಸಫ್ಜಾಯ್" ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಹೋರಾಡಿ ತಾಲಿಬಾನಿಗಳ ಗುಂಡೇಟಿಗೆ ಒಳಗಾದವಳು.

"ಸ್ವಾತ್ ಕಣಿವೆ"ಯು ತಾಲಿಬಾನಿಗಳ ವಶವಾದಂದಿನಿಂದಲೂ ಅಲ್ಲಿ ಅರಾಜಕತೆ ತಾಂಡವವಾಡುತ್ತಿತ್ತು. ಜನರ ಮೇಲಿನ ಅಟ್ಟಹಾಸ, ಸಾಮಾಜಿಕ ಕಾರ್ಯಕರ್ತರ ಕಗ್ಗೊಲೆ, ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ ಇತ್ಯಾದಿಗಳು ಹೆಚ್ಚುತ್ತಲೇ ಹೋದವು. ಮೂಲಭೂತವಾದಿಗಳಾದ ತಾಲಿಬಾನಿಗಳು "ಸ್ವಾತ್ ಕಣಿವೆ ನಾಯಕಿಯಾಗಬೇಕೆಂಬುದೇ ದೊಡ್ಡ ಕನಸು. ಅದಕ್ಕೆ ಅವರು ಕೊಡುವ ಕಾರಣ "ನನ್ನ ಮಗಳು ವೈದ್ಯೆಯಾಗಿ ಸಾಧಿಸುವುದಕ್ಕಿಂತ ಹೆಚ್ಚಿನದನ್ನು ಒಬ್ಬ ನಾಯಕಿಯಾಗಿ ಸಾಧಿಸಬಲ್ಲಳು, ಅವಳಲ್ಲಿ ಅಂತಹ ಶಕ್ತಿಯಿದೆ" ಎಂಬುದು.

"Stop girls education through guns" ಎಂಬ ತಾಲಿಬಾನಿಗಳ ಮೂಲಭೂತವಾದಿ ಧ್ಯೇಯ ವಾಕ್ಯವು ಇಡೀ ಸ್ವಾತ್ ಕಣಿವೆಯ ಹೆಣ್ಣುಮಕ್ಕಳ ಶಿಕ್ಷಣವನ್ನು ಬಂದೂಕಿನ ಕೊಳವೆಯ ತುದಿಯಲ್ಲಿ ನಲುಗುವಂತೆ ಮಾಡಿತು. ಜನವರಿ 15, 2009ರ ನಂತರ ಸ್ವಾತ್ ಕಣಿವೆಯ ಯಾವೊಬ್ಬ ಹುಡುಗಿಯೂ ಶಾಲೆಗೆ ಹೋಗುವಂತಿಲ್ಲ ಎಂಬ ಫತ್ವ ಹೊರಡಿಸಿದ ತಾಲಿಬಾನಿಗಳ ಮಾತನ್ನು ಧಿಕ್ಕರಿಸಿದ ಅನೇಕ ಸಾಮಾಜಿಕ ಕಾರ್ಯಕರ್ತರ ರುಂಡಗಳನ್ನು ಕತ್ತರಿಸಿ ಶವಗಳನ್ನು ಬೀದಿಗಳಲಿ ಎಸೆಯಲಾಯಿತು. ಶಾಲೆಗಳಿಗೆ ಹೋಗುವ ಹೆಣ್ಣುಮಕ್ಕಳ ಮುಖದ ಮೇಲೆ ಆಸಿಡ್ ದಾಳಿ ಮತ್ತು ಬೆನ್ನ ಮೇಲೆ ಛಡಿ ಏಟುಗಳಂತಹ ಶಿಕ್ಷೆಯನ್ನು ವಿಧಿಸುತ್ತಿದ್ದರು. ತಾಲಿಬಾನಿಗಳ ಅಟ್ಟಹಾಸ ಹೆಚ್ಚುತ್ತಿದ್ದಂತೆ ಸ್ವಾತ್ ಕಣಿವೆಯ ಬಹುಪಾಲು ಜನರು ಅಲ್ಲಿಂದ ಬೇರೆ ಬೇರೆ ಸ್ಥಳಗಳಿಗೆ ಹೊರಟುನಿಂತರು. ಸರ್ಕಾರದ ಆಜ್ಞೆಯಂತೆ ಮಲಾಲಾಳ ಕುಟುಂಬವು ಸಹ ಅನಿವಾರ್ಯವಾಗಿ ಸ್ವಾತ್ ಕಣಿವೆಯನ್ನು ತೊರೆಯಬೇಕಾಯಿತು.

ತಾಲಿಬಾನ್ ಪ್ರಭಾವಿತ ಸ್ವಾತ್ ಕಣಿವೆಯಿಂದ ತಾಲಿಬಾನಿಗಳನ್ನು ಹಿಮ್ಮೆಟ್ಟಿಸಲು ಸರ್ಕಾರವು ಮುಂದಾಯಿತು. ತನ್ನ ಮಿಲಿಟರಿ ಶಕ್ತಿಯನ್ನು ಉಪಯೋಗಿಸಿ ಅಲ್ಲಿಂದ ಅವರನ್ನು ಹಿಮ್ಮೆಟ್ಟಿಸಿದರಾದರೂ ಅಷ್ಟುಹೊತ್ತಿಗಾಗಲೇ ಸ್ವಾತ್ ಕಣಿವೆ ಸಿಡಿಮದ್ದು, ಬಂದೂಕಿನ ನರ್ತನದಿಂದ ನಲುಗಿ ಹೋಗಿತ್ತು. ಸಾಲದೆಂಬಂತೆ 200ಕ್ಕೂ ಹೆಚ್ಚು ಶಾಲೆಗಳು ಛಿದ್ರಗೊಂಡಿದ್ದವು. 3 ತಿಂಗಳುಗಳ ಕಾಲ ಸ್ವಾತ್ ಕಣಿವೆಯಿಂದ ದೂರವಾಗಿದ್ದ ಮಲಾಲಾಳ ಕುಟುಂಬ ಮತ್ತೆ ತಮ್ಮ ತವರು ನೆಲಕ್ಕೆ ಬಂದಿಳಿದಾಗ ಅವರ ಆನಂದಕ್ಕೆ ಪಾರವೇ ಇರಲಿಲ್ಲ. ಸ್ವಾತ್ ಕಣಿವೆಯ ನಿಶಬ್ಧತೆಯನ್ನು ವೀಕ್ಷಿಸಿದ ತಂದೆ ಝಿಯದ್-ದೀನ್-ಯೂಸಫ್ಜಾಯ್" ನಾನೆಂದೂ ಇಂತಹ ನಿಶಬ್ಧತೆಯನ್ನು ಸ್ವಾತ್ ಕಣಿವೆಯಲ್ಲಿ ಕಂಡಿರಲಿಲ್ಲ" ಎಂದು ಹೇಳುವಾಗ ಅವರ ಕಣ್ಣಂಚಿನಿಂದ ನೀರು ಸುರಿಯಲಾರಂಭಿಸಿತು.

ಮಲಾಲಾ, ತಾನು ಮತ್ತು ತನ್ನವರು ತಾಲಿಬಾನಿಗಳ ನೆಲದಲ್ಲಿ ಅನುಭವಿಸುತ್ತಿರುವ ಯಾತನಾಮಯ ಬದುಕನ್ನು BBC ಪತ್ರಿಕೆಯಲ್ಲಿ ಬರೆಯಲಾರಂಭಿಸಿದಳು. ತಾಲಿಬಾನಿಗಳ ವಿರುದ್ಧವಾದ ಹೇಳಿಕೆಗಳೂ, ಸ್ತ್ರೀ ಶಿಕ್ಷಣದ ಪರವಾದ ನಿಲುವು ಇತ್ಯಾದಿಗಳನ್ನು ಅರ್ಥವತ್ತಾಗಿ ಬರೆಯಲಾರಂಭಿಸಿದ್ದು ಮೂಲಭೂತವಾಗಿ ತಾಲಿಬಾನಿಗಳ ತಲೆ ಕೆಡುವಂತೆ ಮಾಡಿತು. ಸ್ವಾತ್ ಕಣಿವೆಯು ಶಾಂತವಾದ ನಂತರ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ದನಿ ಎತ್ತಿದಳು. 2009ರ ಆಗಸ್ಟ್ ನಂತರ ಶಾಲೆಗಳು ಪ್ರಾರಂಭವಾದವಾದರೂ, ಶಾಲೆಗಳಲ್ಲಿ ವಿದ್ಯಾರ್ಥಿನಿಯರ ಹಾಜರಾತಿ ಬಹಳ ಕ್ಷೀಣಿಸಿತ್ತು. ಶಿಕ್ಷಕರು ತಮ್ಮ ಪ್ರಾಣಪಕ್ಷಿ ಯಾವ ಸಮಯದಲ್ಲಿ ಹಾರಿ ಹೋಗುವುದೋ ಎಂಬ ಒತ್ತಡದಲ್ಲಿದ್ದರು.

ತಂದೆಯ ಉತ್ತೇಜನದಿಂದಾಗಿ, ಧೃತಿಗೆಡದೆ ಮುನ್ನುಗ್ಗಿದ ಮಲಾಲಾ, ನಿರಂತರವಾಗಿ BBC ಪತ್ರಿಕೆಗೆ ತನ್ನ ಲೇಖನಗಳ ಸರಣಿಯನ್ನು ಬರೆಯಲಾರಂಭಿಸಿದಳು, ತಾಲಿಬಾನಿಗಳನ್ನು ಉದ್ದೇಶಿಸಿ "How dare the Taliban

(12ನೇ ಪುಟಕ್ಕೆ)



ಶಿಕ್ಷಣ ಪ್ರತಿಯೊಬ್ಬ ನಾಗರೀಕನ ಹಕ್ಕು. ಲಿಂಗ ಭೇದದ ನೆಪವೊಡ್ಡಿ ಶಿಕ್ಷಣದಿಂದ ಹೆಣ್ಣು ಮಕ್ಕಳನ್ನು ದೂರ ಉಳಿಯುವಂತೆ ಮಾಡುವುದು ಅವರ ಮೂಲಭೂತ ಹಕ್ಕನ್ನು ಕಸಿದಂತೆಯೇ ಸರಿ. ಹೆಣ್ಣು ಮಕ್ಕಳಿಗೆ ಶಿಕ್ಷಣದ ಹಕ್ಕಿಲ್ಲ ಎಂದು ಯಾವ ಧರ್ಮವು ಎಲ್ಲೂ ಸಾರುವುದಿಲ್ಲ. ಸಾರುವುದಾದರೆ ಅದು ಧರ್ಮವಿರೋಧಿ ತಾಲಿಬಾನಿಗಳಿಂದ ಮಾತ್ರ ಸಾಧ್ಯ. ಮಲಾಲಾಳಂತಹ ಹೋರಾಟಗಾರ್ತಿಯರ ಪರಿಶ್ರಮದಿಂದ ಅನೇಕ ಹೆಣ್ಣುಮಕ್ಕಳಿಗೆ ಶಿಕ್ಷಣ ದೊರೆಯುವಂತಾಗಿರುವುದೇ ಇದಕ್ಕೆ ನೈಜ ಸಾಕ್ಷಿ.

ಪ್ರದೇಶದಲ್ಲಿ ಹೆಣ್ಣು ಮಕ್ಕಳು ಶಿಕ್ಷಣವನ್ನು ನಿಲ್ಲಿಸಬೇಕು. ಇಲ್ಲದೇ ಹೋದರೆ ಮುಂದೆ ನಾವು ನಿಮಗೆ ನೀಡುವ ಹಿಂಸೆಗೆ ನೀವೇ ಕಾರಣರಾಗುತ್ತೀರಿ" ಎಂದು ಎಚ್ಚರಿಸಿದ್ದೇ ತಡ, ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸಲು ಹೆತ್ತವರು ಹಿಂದೇಟಾಕುವಂತಾಯಿತು. ಶೇ.70% ಹೆಣ್ಣು ಮಕ್ಕಳು ಮನೆಗಳನ್ನು ಬಿಟ್ಟು ಹೊರಬರಲೇ ಇಲ್ಲ. ಅಲ್ಲಿಗೆ ಶಿಕ್ಷಣದ ಆಸೆಯ ಭವಿಷ್ಯದ ಆಶಾಗೋಪುರವನ್ನು ಕಟ್ಟಿಕೊಂಡಿದ್ದ ಮಲಾಲಾ ಯೂಸಫ್ಜಾಯ್ ತರಹದ ಅನೇಕ ಹೆಣ್ಣು ಮಕ್ಕಳ ಕನಸು ಛಿದ್ರ-ಛಿದ್ರವಾದಂತಾಯಿತು.

ಮಲಾಲಾ ಮೂಲತಃ ಹೋರಾಟದ ಮನೋಭಾವದವಳು, ಕುಶಗ್ರಮತಿ. ಅವಳ ತಂದೆ ಝಿಯದ್-ದೀನ್-ಯೂಸಫ್ಜಾಯ್ ಕೂಡ ಒಬ್ಬ ದಿಟ್ಟ ಸಾಮಾಜಿಕ ಕಾರ್ಯಕರ್ತ. ತಾಲಿಬಾನಿಗಳ ಬೆದರಿಕೆಗೆ ಎದೆಯೊಡ್ಡಿ ತನ್ನ ಮಗಳನ್ನು ಶಿಕ್ಷಿತಳನ್ನಾಗಿಸುವುದೇ ಅವರ ಗುರಿಯಾಗಿತ್ತು. ಮಲಾಲಾ ತಾನು ವೈದ್ಯೆಯಾಗಬೇಕೆಂಬ ಆಸೆಯುಳ್ಳವಳಾದರೆ, ತಂದೆಗೆ ಅವಳು ಒಬ್ಬ ರಾಜಕೀಯ

ಸಂಪಾದಕರೊಡನೆ ಸಂವಾದ

ಬೆಳವಣಿಗೆಗೆ ಒತ್ತಾಯಿಸುವ ಸಮುದಾಯಗಳ ಆಂತರಿಕ ಸಂಘರ್ಷಗಳು

ಸಂಗಮೇಶ ಎಸ್. ಗಣಿ

ಪ್ರಿಯ ಸಂಪಾದಕರೇ,

ಇತ್ತೀಚೆಗೆ ಕ್ಷೇತ್ರಕಾರ್ಯ ನಿಮಿತ್ತ ಹಾವೇರಿ ತಾಲೂಕಿನ ಕಳ್ಳಿಹಾಳ ಗ್ರಾಮಕ್ಕೆ ಭೇಟಿ ನೀಡಿದ್ದೆ. ಆ ಊರಿನ ಪಂಚಾಯತನ ಸಿಪಾಯಿ ಪರಮೇಶಪ್ಪ ರಾಮಣ್ಣನವರ ಎಂಬಾತ ಊರಿನ ಎರಡು ಏರಿಯಾಗಳನ್ನು ತೋರಿಸಿದ. ಒಂದು ಸ್ಥಳದಲ್ಲಿ ಮಾದಿಗ ಸಮುದಾಯ ವಾಸಿಸುತ್ತಿದ್ದರೆ, ತಳವಾರ ಸಮುದಾಯದವರು ಇನ್ನೊಂದು ಪ್ರದೇಶದಲ್ಲಿ ವಾಸಿಸುತಿದ್ದರು. ಮಾದಿಗರು ವಾಸವಾಗಿದ್ದ ಪ್ರದೇಶ ಅಚ್ಚುಕಟ್ಟಾಗಿತ್ತು. ಸ್ವಚ್ಛವಾಗಿತ್ತು. ರಸ್ತೆ ಕಾಂಕ್ರೀಟು ಕಂಡಿತ್ತು. ಅಲ್ಲಿನ ಜನರಲ್ಲಿ ನಾಗರಿಕ ಲಕ್ಷಣಗಳು ಕಂಡವು. ಆದರೆ ತಳವಾರ ಸಮುದಾಯದವರು ವಾಸವಾಗಿದ್ದ ಪ್ರದೇಶದಲ್ಲಿ ಸರಿಯಾದ ರಸ್ತೆ ಇರಲಿಲ್ಲ. ಮನೆಗಳ ಮುಂದೆ ಗಲೀಜು, ದುರ್ವಾಸನೆ ಬೀರುವ ಗಟಾರುಗಳು, ಯಾವ ರೀತಿಯಲ್ಲೂ ಸುಧಾರಿಸದ ಜೀವನಕ್ರಮ ಅಲ್ಲಿ ವಾಸಿಸುವ ಜನರದ್ದಾಗಿತ್ತು.

ನಂತರ ಪರಮೇಶಪ್ಪ 'ಯಾರೂ ನಮ್ಮನ್ನು ತುಳಿಯಲಾರರು. ನಾವು ಸಮಾಜದೊಂದಿಗೆ ಹೇಗೆ ಹೊಂದಿಕೊಂಡು ಬಾಳುತ್ತೇವೆಯೋ ಎನ್ನುವದರ ಮೇಲೆ ಮೇಲ್ಸಮಾಜಗಳು ನಮ್ಮನ್ನು ಹಾಗೇ ನೋಡಿ, ನಡೆಸಿಕೊಳ್ಳತ್ತವೆ. ಆದರೆ ಈಗ ತಮಗೆ ಕಾನೂನುಗಳಿವೆ ಎಂದು ತಿಳಿದು ದಲಿತರು ಅವನ್ನು ಅಪ್ರಜ್ಞಾಪೂರ್ವಕವಾಗಿ ಸಾಮಾಜಿಕ ಮೌಲ್ಯಗಳು ಸಾರ್ವತ್ರಿಕ ರೂಪಧಾರಣೆ ಪಡೆದುಕೊಂಡು ಮನ್ನಣೆ ಪಡೆದುಕೊಳ್ಳುತ್ತವೆ.

ಆದರೆ ನಮಗೆ 'ಜಾತಿ' ಸಮಸ್ಯೆ ಕಾಡಿದಷ್ಟು ಬಹುಶಃ ಬೇರಾವ ಸಮಸ್ಯೆಗಳು ಹೆಚ್ಚು ಕಾಡುವುದಿಲ್ಲ. ಕಾರಣ ಜಾತಿ ನಮ್ಮ ನಮ್ಮ ಮೂಲ ಅಸ್ಮಿತೆಯ ಕುರುಹು ಮತ್ತು ಅದೇ ನಮ್ಮ ಬದುಕಿಗೆ ಮೂಲ ಎಂದು ತಿಳಿದುಕೊಂಡಿರುವುದು. ಜಾತ್ಯಾತೀತ ರಾಷ್ಟ್ರ ಎಂದು ಕರೆಸಿಕೊಳ್ಳುವ ಭಾರತದಲ್ಲಿ ಅಷ್ಟೇ ಅಲ್ಲ ಎಲ್ಲ ಕಡೆಗೂ ಈ ಜಾತಿ ತನ್ನ ಪ್ರಾಬಲ್ಯವನ್ನು ಮೆರೆಯುತ್ತಿದೆ. ಮುಖ್ಯವಾಗಿ ಪ್ರಜಾಪ್ರಭುತ್ವ ರಾಷ್ಟ್ರವೊಂದರ ಭವಿಷ್ಯ ಜಾತ್ಯಾತೀತ, ಪಕ್ಷಾತೀತ, ಧರ್ಮಾತೀತ, ಪ್ರದೇಶಾತೀತವಾಗಿ ಎಲ್ಲ ಸಮುದಾಯಗಳ ಮತ್ತು ಎಲ್ಲ ಜನಾಂಗದ ಸರ್ವತೋಮುಖ ಬೆಳವಣಿಗೆಯನ್ನು ಅವಲಂಬಿಸಿರುತ್ತದೆ ಎನ್ನುವುದು ಸತ್ಯವಾದರೂ ಈಗ ಅದು ಕೇವಲ ಆದರ್ಶವಾಗಿ ತೋರುತ್ತಿದೆ. ಯಾವುದೇ ಚುನಾವಣೆ, ಸರ್ಕಾರಿ ಹುದ್ದೆಗಳ ನೇಮಕಾತಿ, ಉನ್ನತ ಹುದ್ದೆಗಳ ಆಯ್ಕೆ, ಮದುವೆ ಮುಂತಾದ ಸಂದರ್ಭಗಳಲ್ಲಿ ಹೆಚ್ಚು ಪ್ರಭಾವ ಬೀರುವ ಕೆಲ ಸಮಸ್ಯೆಗಳಲ್ಲಿ ಹೆಚ್ಚಾಗಿ ಕಂಡುಬರುವುದು ಜಾತಿಯೇ. ಅಂದರೆ ಒಂದು ಜನಸಮುದಾಯ ತನ್ನ ಸಮುದಾಯದೊಂದಿಗೆ ರಿಯಾಕ್ಟ್ ಮಾಡುವ ರೀತಿಗೂ ಇನ್ನೊಂದು ಸಮುದಾಯದೊಂದಿಗೆ ಮಾಡುವ ಸ್ಪಂದನೆಗೂ ವ್ಯತ್ಯಾಸ ಇದೆ.

ಜಾತ್ಯಾತೀತ ಎನ್ನುವ ಭ್ರಮೆಯಲ್ಲಿ ಬದುಕುತ್ತಿರುವ ನಮಗೆ ಕನವಳ್ಳಿ ಗ್ರಾಮದ ಸಮಸ್ಯೆ ಮೂಲತಃ ಮನುಷ್ಯ ಕುಲದಲ್ಲಿಯೇ ಪ್ರತ್ಯೇಕತೆ ಬೀಜ ಮೊಳಕೆವೊಡೆದೇ ಇರುತ್ತದೆ ಎಂಬುದನ್ನು ಸಂಕೇತಿಸುತ್ತದೆ. ಯಾವುದೇ ಸಮಾಜದಲ್ಲಿ ಒಳಸಂಘರ್ಷಗಳು ಮೊದಲಿನಿಂದಲೇ ಇರುತ್ತವೆ. ಆದರೆ ಬೇರೊಂದು ಸಮುದಾಯ ಒಡ್ಡುವ ಸವಾಲು ಮತ್ತು ಸಮಸ್ಯೆಗಳಿಗೆ ಮುಖಾಮುಖಿ ಆಗುವಾಗ ಒಂದು ಕೋಮು ಅಥವಾ ಸಮುದಾಯ ತಾನು 'ಒಂದು' ಎಂಬುದನ್ನು ಪ್ರಜ್ಞಾಪೂರ್ವಕವಾಗಿ ತೋರಿಸುವ ಹವಣಿಕೆಯನ್ನು ಪ್ರದರ್ಶಿಸುವುದು ರಾಜಕಾರಣ ಅಲ್ಲದೇ ಬೇರೇನೂ ಅಲ್ಲ. ಆದರೆ ಮೂಲತಃ ಎಲ್ಲ ಸಮುದಾಯಗಳು ಒಳಸಂಘರ್ಷವನ್ನು ಇಟ್ಟುಕೊಂಡೇ ಪಡೆದುಕೊಂಡು ತಮ್ಮದೇ ಜಾತಿಯ ಕೆಲವರಿಗೆ ಅನ್ಯಾಯ ಬಗೆಯುವದನ್ನು, ಅವರಿಗೆ ಸೌಲಭ್ಯಗಳು ದೊರಕದಂತೆ ಮಾಡುವ ಹುನ್ನಾರದಲ್ಲೂ ಕೆಳ ಸಮುದಾಯವರು ಅಲ್ಲಿಯೇ ಉಳಿಯುವ ಸಾಧ್ಯತೆ ಇರುತ್ತದೆ ಎಂಬ ಮನೋಭಾವದಿಂದ ಮೇಲಿನ ಘಟನೆಯನ್ನು ನೋಡುವುದು ಉಚಿತ ಎಂದು ತೋರುತ್ತದೆ. ಇಲ್ಲಿಯೇ ಮೇಲ್ವರ್ಗಗಳಲ್ಲಿರುವ ಆಂತರಿಕ ಸಂಘರ್ಷಗಳು ಎಷ್ಟೇ ಇದ್ದರೂ ಅವನ್ನು ತೋರಗೊಡದೇ ಕೆಳವರ್ಗಗಳ ಮೇಲೆ ಪ್ರಭುತ್ವ ಸಾಧಿಸುವ ಹುನ್ನಾರದ ರಾಜಕಾರಣವನ್ನು ಅರ್ಥ ಮಾಡಿಕೊಳ್ಳಬೇಕು.

ಪರಮೇಶಪ್ಪನ ಮಾತಿನಲ್ಲಿ ಎರಡು ಅಂಶಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಒಂದು ಮೇಲ್ವರ್ಗಗಳು ತಾವಾಗಿಯೇ ಕೆಳವರ್ಗಗಳ ಮೇಲೆ ತಮ್ಮ ಪ್ರಭುತ್ವ ಸಾಧಿಸಲಾರವು. ಇನ್ನೊಂದು ಕೆಳವರ್ಗಗಳು ಎಚ್ಚರವಹಿಸಿ, ಸರ್ಕಾರ ಮತ್ತು ಸಂವಿಧಾನವು ಸಮಾನತೆ ಉದ್ದೇಶ ಇಟ್ಟುಕೊಂಡು ಜಾರಿಗೆ ತಂದ ಕಾನೂನುಗಳನ್ನು ದುರ್ಬಳಕೆ ಮಾಡಿಕೊಳ್ಳುವ ಪ್ರಸಂಗಗಳು ನಡೆಯುತ್ತಿವೆ ಎಂಬುದನ್ನು ಸೂಚಿಸುತ್ತದೆ. ಇದು ಒಪ್ಪತಕ್ಕ ಮಾತೇ. ಸರ್ಕಾರ ಜಾರಿಗೆ ತರುವ ಯಾವುದೇ ರೀತಿಯ ಕಾನೂನುಗಳು ಸಂಪೂರ್ಣವಾಗಿ ನ್ಯಾಯಯುತವಾಗಿ ಅನುಷ್ಠಾನಗೊಳ್ಳುವುದು ಆಯಾಯ ಸಮುದಾಯಗಳು ಎಷ್ಟರ ಮಟ್ಟಿಗೆ ಅವನ್ನು ಸದುಪಯೋಗ ಪಡಿಸಿಕೊಳ್ಳುತ್ತವೆ ಎನ್ನುವುದರ ಆಧಾರದ ಮೇಲೆ ಅದು ನಿಂತಿದೆ. ಆದರೆ ಕೆಳವರ್ಗದ ಜನಸಮುದಾಯಗಳು ಇದನ್ನು ಅರ್ಥಮಾಡಿಕೊಳ್ಳಬೇಕಿದೆ. ಅಲ್ಲದೇ ಯಾವುದೇ ಕಾನೂನುಗಳು ಜನರಿಗೆ ನೇರವಾಗಿ ತಲುಪಬೇಕಾದಲ್ಲಿ ದಲ್ಲಾಳಿ ಸಂಸ್ಕೃತಿ ತಲೆದೋರಲು ಅವಕಾಶ ಇರಬಾರದು. ತಾನು ನಂಬಿರುವ ನಂಬಿಕೆ, ಆಚರಣೆ, ಮೌಲ್ಯ, ಆದರ್ಶಗಳು ಆಯಾಯ ಸಮುದಾಯಗಳಿಗೆ ಮುಖ್ಯವೇ. ಅವುಗಳೊಂದಿಗೆ ತನ್ನ ಸುತ್ತನ ಸಮುದಾಯದ ಜನಾಂಗದ ನಂಬಿಕೆ ಆಚರಣೆ ಮೌಲ್ಯ ಆದರ್ಶಗಳ ಜೊತೆಗೆ ಹೊಂದಿಕೊಳ್ಳುವ ಮೂಲತಃ ಹಸಿವು ನೀರಡಿಕೆ ನಿದ್ದೆ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಪಡೆದುಕೊಳ್ಳಲು ಒಟ್ಟಾಗಿ ಪ್ರಯತ್ನಿಸುವುದೇ ನಿಜವಾದ ಜತ್ಯಾತೀತತೆ

ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ' ಎಂದ. ಅವನ ಈ ಮಾತು ನನ್ನನ್ನು ಹೆಚ್ಚು ವಿವೇಚನೆಗೆ ಹಚ್ಚಿತು. ಒಂದು ಜನಸಮುದಾಯ ಯಾವತ್ತಿಗೂ ತನ್ನಷ್ಟಕ್ಕೆ ತಾನು ಶ್ರೇಷ್ಠವೂ ಅಲ್ಲ. ಕನಿಷ್ಠವೂ ಅಲ್ಲ. ವ್ಯಕ್ತಿ ಅಥವಾ ಸಮುದಾಯವೊಂದು ತಾನು ನಂಬಿಕೊಂಡ ಮೌಲ್ಯಾದರ್ಶ, ಆಚರಣೆ, ರೂಢಿ-ಸಂಪ್ರದಾಯಗಳು ತನ್ನ ಸುತ್ತನ ಸಮುದಾಯದವರ ನಂಬಿಕೆ, ಆಚರಣೆ, ಸಂಪ್ರದಾಯಗಳೊಂದಿಗೆ ಮೇಳವಿಸಿಕೊಂಡು ಸಮತೆ ಸಾಧಸುವುದರ ಮೂಲಕ ಮನುಷ್ಯನ ಸ್ವಾಸ್ಥ್ಯ ಬದುಕು ರೂಪಗೊಳ್ಳುತ್ತದೆ. ಅಷ್ಟೇ ಅಲ್ಲ ಅದರ ಆಧಾರದ ಮೇಲೆ ಬದುಕುತ್ತಿರುತ್ತವೆ. ಮೇಲ್ವರ್ಗಗಳು ಹೇರುವ ಒತ್ತಡ ಮತ್ತು ನಿಯಂತ್ರಣಗಳಿಗೆ ಬಲಿಯಾಗಿ ಬದುಕುವ ಕೆಳವರ್ಗಗಳು ಎಚ್ಚರಗೊಳ್ಳಬೇಕಾದ ಪರಿಸ್ಥಿತಿ ಇಂದು ಹೆಚ್ಚಿದೆ.

ಕನವಳ್ಳಿ ಘಟನೆಯನ್ನು ಕೇವಲ ಸ್ಥಗಿತಗೊಂಡ ಚರಿತ್ರೆಯ ಕಣ್ಣಿನಿಂದ ನೋಡುವ ಹಾಗಿಲ್ಲ. ಇದು ತುಂಬ ಅಪಾಯಕಾರಿ. ಎಲ್ಲ ಕೆಳವರ್ಗಗಳು ಮೇಲ್ವರ್ಗಗಳ ಆದರ್ಶ ಪಾಲನೆ ಮತ್ತು ಅನುಕರಿಸುವ ಮೇಲ್ಚಲನೆಯತ್ತ ಸಾಗುವುದು ಸಾಮನ್ಯ. ಇದು ಸಾಂಸ್ಕೃತಿಕ ಪಲ್ಲಟ ಸೂಚಿ. ಆದರೆ ಕೆಳ ಜಾತಿಯಲ್ಲೇ ಇರುವ ಕೆಲವರು ಮೇಲ್ವರ್ಗದ ಜೊತಗೆ ಸಂಪರ್ಕ ಸಾಧಿಸಿ, ಸಿಗುವ ಸೌಲಭ್ಯಗಳನ್ನು ಎನ್ನಬಹುದು.

ಮನುಷ್ಯ ಹೆಚ್ಚು ಮಾನವೀಯಗೊಳ್ಳುವತ್ತ ಮುನ್ನಡೆದರೆ ಮಾತ್ರ 'ಜಾತಿ' ಸಮಸ್ಯೆ ಹೆಚ್ಚು ಕಾಡದೇ ಎಲ್ಲ ಸಮುದಾಯಗಳು ಒಂದು ಸಮಾಧಾನದ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ ಎನ್ನುವ ಸತ್ಯ ಬೇಗ ಅರ್ಥವಾಗಬೇಕಿದೆ. ಕನವಳ್ಳಿ ಗ್ರಾಮದಲ್ಲಿನ ಕೆಳವರ್ಗದ ಆಂತರಿಕ ವೈರುಧ್ಯಗಳು ನಮ್ಮ ಎಲ್ಲ ಸಮುದಾಯಗಳು ಸಹ ತಮ್ಮೊಳಗೇ ಇರುವ ಸಂಘರ್ಷ ಹಾಗೂ ತಾಕಲಾಟಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನಕ್ಕೆ ಈಡು ಮಾಡುವಂತೆ ಒತ್ತಾಯಿಸುತ್ತದೆ. ■

ಸಂಪಾದಕರೊಡನೆ ಸಂವಾದ

ಜಾಗತೀಕರಣಕ್ಕೆ ಸಿಲುಕಿರುವ ನಮ್ಮ ಕನ್ನಡ ಭಾಷೆ ಅನ್ನ ಕೊಡುವ ಸಾಮರ್ಥ್ಯ ಕಳೆದುಕೊಂಡಿದೆಯೇ? ಎಂಬ ಪ್ರಶ್ನೆ ಕಾಡತೊಡಗಿದೆ. ನಮ್ಮ ಭಾಷೆಯ ಅಸ್ತಿತ್ವದ ಪ್ರಶ್ನೆ ಬಂದಾಗ ಗೋಕಾಕ್ ಚಳವಳಿ ಅದರ ಭಾಗವಾದ ಸರೋಜಿನಿ ಮಹಿಷಿ ವರದಿ ಪ್ರಕಟವಾಗಿ ಹಲವು ದಶಕಗಳೇ ಕಳೆದಿವೆ ವಿನಃ ಕಾರ್ಯರೂಪಕ್ಕೆ ಸಂಪೂರ್ಣವಾಗಿ ಬಂದಿಲ್ಲ. ಕನ್ನಡ ಭಾಷೆ–ಉದ್ಯೋಗ ಸೃಷ್ಟಿ ಅದರ ಭಾಗವಾದ ಕನ್ನಡ ಶಾಲೆಗಳನ್ನು ಮುಚ್ಚುತ್ತಿರುವ ಈ ಸಂದರ್ಭದಲ್ಲಿ ನಾಡಿನ ಬುದ್ಧಿಜೀವಿಗಳು, ಸಾಹಿತಿಗಳು, ಕಲಾವಿದರು, ವಿದ್ಯಾರ್ಥಿಗಳು, ಶಿಕ್ಷಣ ತಜ್ಞರು 2ನೇ ಗೋಕಾಕ್ ಚಳವಳಿಗೆ ಚಾಲನೆ ನೀಡುವುದು ಅತ್ಯಾವಶ್ಯಕವಾಗಿದೆ.

ಮಾರುತಿ ಹೆಚ್

ತಾರತಮ್ಯ ಶಿಕ್ಷಣದ ವಿಸ್ತೃತರೂಪ ಖಾಸಗೀಕರಣ

ಪ್ರಿಯ ಸಂಪಾದಕರೇ,

ಸರಕಾರವು ಶಾಲಾವ್ಯವಸ್ಥೆ ಪುನರಚನೆಗಾಗಿ ನೇಮಿಸಿದ ಖಾಸಗಿ ವಿ.ವಿ.ಉಪಕುಲಪತಿ ಪ್ರೋ॥ ಆರ್.ಗೋವಿಂದ ಸಮಿತಿಯು, ಸರಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಕೊರತೆಯ ಕುಂಟು ನೆಪಹೇಳಿ, ತರಗತಿಗಳನ್ನು ಕಂಬೈನ್ಡ್ ಮಾಡುವುದರಿಂದ 12,740 ಶಾಲೆಗಳಿಗೆ ಬೀಗ ಜಡಿಯಬಹುದಾದ ಬಾಲಿಶಾ ವರದಿ ನೀಡಿರುವುದು ಖಂಡನೀಯವಾಗಿದೆ.

ದಶಕಗಳ ಇತಿಹಾಸವಿರುವ ಕನ್ನಡ ಶಾಲೆಗಳನ್ನು ವಿಲೀನದ ಹೆಸರಿನಲ್ಲಿ ಮುಚ್ಚಿ ಸರಕಾರ ತನ್ನ ಆರ್ಥಿಕ ಹೊರೆ ತಗ್ಗಿಸಿಕೊಳ್ಳುವುದು ಅದೇ ವೇಳೆಗೆ ಡಿ.ಇಡಿ, ಬಿ.ಇಡಿ ಪದವೀಧರರಿಗೆ ಉದ್ಯೋಗ ಕಲ್ಪಿಸುವ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುವುದು ಸೇರಿದಂತೆ ಇಡೀ ಶಿಕ್ಷಣ ವ್ಯವಸ್ಥೆಯನ್ನೇ ಖಾಸಗಿ ಲಾಬಿಯ ಹಿಡಿತಕ್ಕೆ ಒಪ್ಪಿಸುವ ಕಾರ್ಯದಲ್ಲಿ ಮಗ್ನವಾಗಿದೆ.

ಇಂದು ದೇಶದ ಎಲ್ಲ ರಂಗಗಳಲ್ಲಿ ಹೆಚ್ಚುತ್ತಿರುವ ಅಸಮಾನತೆಗಳಂತೆ ಶೈಕ್ಷಣಿಕ ಅಸಮಾನತೆ ಕೂಡ ಮೀತಿ ಮೀರಿ ಬೆಳೆಯುತ್ತಿದೆ. ಶಿಕ್ಷಣ ವ್ಯವಸ್ಥೆಯಲ್ಲಿರುವ ಏಕಪಕ್ಷೀಯ ಧೋರಣೆ, ತಾರತಮ್ಯ ಆಧಾರಿತ ಶಿಕ್ಷಣ ಮಾಧ್ಯಮ ಹಾಗೂ ಭಾಷಾ ನೀತಿ ಕುರಿತು ಕನ್ನಡ ನಾಡಿನ ಆಚರಣೆಯ ಈ ಸಂದರ್ಭದಲ್ಲಿ ಆರೋಗ್ಯಕರ ಚರ್ಚೆಗೆ ಒಳಪಡಿಸಬೇಕಾದ ಪ್ರಸ್ತುತತೆ ಇದೆ.

ಖಾಸಗಿ ಶಾಲೆಯಲ್ಲಿ ಹಣವಂತರ ಮಕ್ಕಳು ಪಡೆಯುತ್ತಿರುವ ಶಿಕ್ಷಣ ಪದ್ಧತಿಗೂ ಸರಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಬಡವರ ಮಕ್ಕಳ ಶಿಕ್ಷಣ ಪದ್ಧತಿಗಳ ನಡುವೆ ಅಜಗಜಾಂತರ ವ್ಯತ್ಯಾಸಗಳು ಸೃಷ್ಟಿಯಾಗಿವೆ. ಈ ಸರಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಗ್ರಾಮೀಣ ಪ್ರದೇಶದ ಬಡಜನರ ಮಕ್ಕಳು, ದಲಿತರ, ಆದಿವಾಸಿಗಳ ಮಕ್ಕಳ ಶಿಕ್ಷಣ ಅಸಮರ್ಪಕ–ತಾರತಮ್ಯದಿಂದ ಕೂಡಿದ್ದು "ದ್ವಿತೀಯ ದರ್ಜೆಯ" ಪ್ರಜೆಗಳನ್ನಾಗಿ ಪರಿವರ್ತಿಸುತ್ತಿರುವ ಸನ್ನಿವೇಶ ಬಹಳ ಸ್ಪಷ್ಟವಾಗಿದೆ. ಈ ಎಲ್ಲಾ ಅಸಮಾನತೆಯ ಪೋಷಕ ಸರಕಾರ ಅದರ ಯೋಜನೆ ಪಾಲಿಸಿಗಳೇ ಆಗಿದೆ.

ಪ್ರಸ್ತುತ ನಮ್ಮ ಸರಕಾರಿ ಪ್ರಾಥಮಿಕ ಶಾಲೆಗಳು 22,599 ಹಿರಿಯ ಪ್ರಾಥಮಿಕ ಶಾಲೆಗಳು 22,60! ಅನುದಾನಿತ ಶಾಲೆಗಳು 2567 ಒಟ್ಟು 47,767 ಶಾಲೆಗಳಿವೆ. ಇವುಗಳಲ್ಲಿ ಶಾಲೆಗಳು ಹೊಂದಿರಬಹುದಾದ ಕಟ್ಟಡ, ಕೊಠಡಿಗಳು, ಪೀಠೋಪಕರಣ ಶೌಚಾಲಯ ಇತ್ಯಾದಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಇಲ್ಲವೇ ಸಮಗ್ರ ಸರ್ವೆ ಕಾರ್ಯ ಕೈಗೊಂಡು ಉನ್ನತೀಕರಿಸುವ ಇಚ್ಛಾಶಕ್ತಿ ಹೊಂದಿಲ್ಲದ ಸರಕಾರ, ಖಾಸಗಿ ಆಂಗ್ಲಮಾಧ್ಯಮ ಶಾಲೆಗಳ ಸ್ಥಾಪನೆಗೆ ಅನುಮತಿ ನೀಡುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಪ್ರತಿಷ್ಠಿತ ಖಾಸಗಿ ಶಾಲೆಗಳು ಹೊಂದಿರುವ ಸೌಲಭ್ಯಗಳನ್ನು ಗಮನಿಸುವ ನಮ್ಮ ನಾಗರಿಕ ಸಮಾಜ ಸರ್ಕಾರಿ ಶಾಲಾವ್ಯವಸ್ಥೆ ಬಗ್ಗೆ ನಂಬಿಕೆಯನ್ನೇ ಕಳೆದುಕೊಳ್ಳುತ್ತಿರುವುದು ಸಾಬೀತಾಗಿದೆ.

ಸರ್ಕಾರಿ ಶಾಲೆಯಲ್ಲಿನ ಮಕ್ಕಳ ಕಲಿಕಾಮಟ್ಟ ಉತ್ತಮವಾಗಿಲ್ಲ, ಹಿಂದುಳಿದ ರಾಜ್ಯವಾದ ಬಿಹಾರಕ್ಕಿಂತಲೂ ರಾಜ್ಯದ ಶಿಕ್ಷಣ ಸ್ಥಿತಿಗತಿ ಕೆಟ್ಟದಾಗಿದೆ. ರಾಜ್ಯದಲ್ಲಿನ ಸರಕಾರಿ ಶಾಲೆಗಳಲ್ಲಿ 1ರಿಂದ 10ನೇ ತರಗತಿಯೊಳಗಿನವರಲ್ಲಿ ಶೇ.20%ರಷ್ಟು ಮಕ್ಕಳು ಶಾಲೆಯಿಂದ ಹೊರ ಉಳಿದಿದ್ದಾರೆ. ಹೆಣ್ಣು ಮಕ್ಕಳ ಪ್ರಮಾಣ ಶೇ.32%ರಷ್ಟು, ದಲಿತರಲ್ಲಿ ಶೇ.62%ರಷ್ಟು ಹೊರಗಿದ್ದಾರೆ [2010ರ ಪ್ರಕಾರ] ಎನ್ನುವ ಅಂಕಿ ಅಂಶಗಳು ಎಲ್ಲಾ ಮಕ್ಕಳು ಕಡ್ಡಾಯ ಪ್ರಾಥಮಿಕ ಶಿಕ್ಷಣ ಪಡೆಯುತ್ತಿಲ್ಲ ಎಂದು ತಿಳಿಸುತ್ತದೆ.

ಸರಕಾರ 90ರ ದಶಕದಲ್ಲಿ ಖಾಸಗಿ ಶಾಲೆಗಳಿಗೆ ಪರವಾನಗಿ ನೀಡಿ ಭಾಷಾ ನೀತಿ ಸಡಿಲಿಸಿದ ಪರಿಣಾಮ, ಖಾಸಗಿ ಶಾಲೆಗಳು ಯಾವುದೇ ಅಡ್ಡಿ ಇಲ್ಲದೇ ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣವನ್ನು ಆರಂಭಿಸಿದ್ದವು ಅಲ್ಲದೇ ಈ ರೀತಿಯ ಸದಾವಕಾಶಕ್ಕಾಗಿ ಅಂದರೆ ಶಿಕ್ಷಣ ಸಂಸ್ಥೆಗಳ ಒಡೆತನ ಪಡೆಯುವ ಸಲುವಾಗಿ ಭಕ ಪಕ್ಷಿಗಳಂತೆ ಕಾದಿದ್ದ ರಾಜಕಾರಣಿಗಳು, ಮಾರ್ವಾಡಿಗಳು, ಮಠಾಧೀಶರು, ಉದ್ಯಮಿಗಳು, ಲೇವಾದೇವಿಗಾರರು, ಕೆಲವು ಅಲ್ಪಸಂಖ್ಯಾತ ಟ್ರಸ್ಟಿಗಳು ಬಂಡವಾಳ ಹೂಡಿ, ತಮ್ಮ ಆದಾಯವನ್ನು ಹೆಚ್ಚಿಕೊಳ್ಳುವತ್ತ ದೃಷ್ಟಿ ಹರಿಸಿದರೇ ವಿನಃ ತಮ್ಮ ಸಂಸ್ಥೆಗಳಲ್ಲಿ ಸಂವಿಧಾನದ ಆಶಯವಾದ ಸಮಾನತೆ, ಜಾತ್ಯಾತಿತತೆಯ ಅಡಿಯಲ್ಲಿ ಕಾರ್ಯನಿರ್ವಹಿಸಿದ್ದು ಕಡಿಮೆ. ತಮ್ಮ ಸಂಸ್ಥೆಗಳಲ್ಲಿ ಬಡವರು, ದಲಿತರು, ಆದಿವಾಸಿಗಳು, ಕೊಳೆಗೇರಿ ಸ್ಲಂ ಜನರ ಮಕ್ಕಳಿಗೆ ಪ್ರವೇಶ ನೀಡಲು ರಿಯಾಯಿತಿ ತೋರಿದ್ದು ಬಲು ಅಪರೂಪ ಕೂಡ.

ಇಂಡಿಯನ್ ಕೌನ್ಸಿಲ್ ಫಾರ್ ಸೆಕೆಂಡರಿ ಎಜುಕೇಷನ್ (ICSE) ಸೆಂಟ್ರಲ್ ಬೋರ್ಡ್ ಆಫ್ ಎಜುಕೇಷನ್ (CBSE) ಹಾಗೂ ಕೇಂದ್ರಿಯ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಸಹಜವಾಗಿ ಹಣವಂತರ–ಆರ್ಥಿಕ ಶ್ರೇಣಿಯಲ್ಲಿ ಮೇಲ್ ಪಂಕ್ತಿಯ ಜನರ ಮಕ್ಕಳು, ಇನ್ನು ಈ ಸರಕಾರಿ ಶಾಲೆಗಳನ್ನು ಅವಲಂಬಿಸಿರುವುದು ದುರ್ಬಲ ಜಾತಿಯ, ಆರ್ಥಿಕವಾಗಿ ಹಿಂದುಳಿದ ವರ್ಗದವರ ಮಕ್ಕಳೇ ಆಗಿದ್ದಾರೆ. ಇದು ಪ್ರತ್ಯೇಕವಾಗಿ ಉಳ್ಳವರ ಮಕ್ಕಳಿಗೆ ಇಂಗ್ಲಿಷ್ ಮಾಧ್ಯಮದ ಶಿಕ್ಷಣ, ಬಡವರ ಮಕ್ಕಳಿಗೆ ಕನ್ನಡ ಮಾಧ್ಯಮದ ಶಿಕ್ಷಣ ಎಂಬ ವಿಭಾಗವನ್ನು ಸರಕಾರವೇ ಮಾಡಿದ ತಾರತಮ್ಯ ನೀತಿಯ ಭಾಗವಾಗಿದೆ. ಬಹುಸಂಖ್ಯಾತರ ಮಕ್ಕಳಿಗೆ ವಿದ್ಯೆಯ ಕೇಂದ್ರವಾಗಿರುವ ಈ ಸರಕಾರಿ ಶಾಲೆಗಳಿಗೆ ಬೀಗಬಿದ್ದರೆ, ಕೋಟ್ಯಾಂತರ ಮಕ್ಕಳು ವಿದ್ಯೆಯಿಂದ ವಂಚಿತರಾಗುವುದರಲ್ಲಿ ಯಾವ ಸಂಶಯವಿಲ್ಲ.

ಮಕ್ಕಳ ಶಿಕ್ಷಣದ ಹಕ್ಕಿಗಾಗಿ 2010 ಏಪ್ರಿಲ್ 1ರಿಂದ ಜಾರಿಯಾದ "ಶಿಕ್ಷಣ ಹಕ್ಕು ಕಾಯ್ದೆ" (RTE) ಪ್ರತಿ ಖಾಸಗಿ ಶಾಲೆ ಶೇ.25%ರಷ್ಟು ಸೀಟುಗಳನ್ನು ದುರ್ಬಲ ವರ್ಗದ ಮಕ್ಕಳಿಗೆ ನೀಡಬೇಕು, ಅದಕ್ಕೆ ಸರಕಾರ ಪ್ರತಿ ಮಗುವಿಗೂ 11,500/–ರೂ ಭರಿಸುವ ಆಜ್ಞಾಪನೆ ಹೊರಡಿಸಿದರೂ, ಖಾಸಗಿ ಸಂಸ್ಥೆಗಳು ದುರ್ಬಲ ವರ್ಗದ ಮಕ್ಕಳನ್ನು ಅಮಾನವೀಯವಾಗಿ ನಡೆಸಿಕೊಂಡವು. ಮುಂದುವರೆದು ಖಾಸಗಿ ಶೈಕ್ಷಣಿಕ ಸಂಸ್ಥೆಗಳ (ಕುಸ್ಮಾ) ಅಧ್ಯಕ್ಷರು, ಬಡಮಕ್ಕಳ ಆರೋಗ್ಯ ತಪಾಸಣೆ ನೈರ್ಮಲ್ಯ ಇತ್ಯಾದಿಗಳ ಕುರಿತು ನಿರ್ಭಿತಿಯಿಂದ ದೂರಿದರು. ಇಷ್ಟು ದೊಡ್ಡ ಮೊತ್ತವನ್ನು ಖಾಸಗಿ ಸಂಸ್ಥೆಗಳಿಗೆ ಪಾವತಿಸಲು ಮುಂದಾಗುವ ಸರಕಾರ, ತನ್ನ ಅಧೀನದ ಶಾಲೆಗಳನ್ನು ಪುನಶ್ಚೇತನಗೊಳಿಸುವ ಕಾರ್ಯಕ್ಕೆ ಕೈಹಾಕದಿರುವುದು ನಾಚಿಕೆಗೇಡಿನ ವಿಚಾರ.

ಕಳೆದ ವರ್ಷ ಬಜೆಟ್‌ನಲ್ಲಿ ಉದ್ಯೋಗ ಸೃಷ್ಟಿಗಾಗಿ

(12ನೇ ಪುಟಕ್ಕೆ)

ಸಂಪಾದಕರೊಡನೆ ಸಂವಾದ

ಬೆಲೆ ನಿಗದಿ ಮತ್ತು ಮಾರುಕಟ್ಟೆ ವ್ಯವಸ್ಥೆ

ಮಲ್ಲಿಕಾರ್ಜುನ ಗುಮ್ಮಗೋಳ

ಪ್ರಿಯ ಸಂಪಾದಕರೇ,

ಸಗಟು ಮಾರುಕಟ್ಟೆಯಲ್ಲಿ ಒಂದು ಕಿಲೊ ಟೊಮ್ಯಾಟೊ ಬೆಲೆ ಒಂದು ರೂಪಾಯಿಗೆ ಕುಸಿದ ಕಾರಣ, ಇತ್ತೀಚೆಗೆ ರೈತರು ಚಿಕ್ಕಮಗಳೂರು ಮಾರುಕಟ್ಟೆಯಲ್ಲಿ ಟೊಮ್ಯಾಟೊ ಫಸಲನ್ನು ರಸ್ತೆಗೆ ಸುರಿದು ಪ್ರತಿಭಟನೆ ಮಾಡಿದರು. ಅದೆ ಟೊಮ್ಯಾಟೊ ಕಿಲೊ ಒಂದಕ್ಕೆ ಚಿಲ್ಲರೆ ಮಾರುಕಟ್ಟೆಯಲ್ಲಿ ಕನಿಷ್ಠ ಹತ್ತು ರೂಪಾಯಿ ಇದೆ. ಒಂದು ಕಿಲೊ ಟೊಮ್ಯಾಟೊ ಸಾಸ್‌ಗೆ 112 ರೂಪಾಯಿ, ಒಂದು ಕಿಲೊ ಟೊಮ್ಯಾಟೊ ಕೆಚ್ಚಪ್‌ಗೆ 109 ರೂಪಾಯಿ, 50 ಗ್ರಾಮ್ ಟೊಮ್ಯಾಟೊ ಸೂಪ್‌ಗೆ 36 ರೂಪಾಯಿ ಇದೆ. ಈ ಎಲ್ಲ ಸಿದ್ಧ ಉತ್ಪನ್ನಗಳಿಗೆ ಮೂಲವಾದ ರೈತನ ಬೆಳೆಗೆ ಏಕೆ ಯೋಗ್ಯ ಬೆಲೆ ಸಿಗುತ್ತಿಲ್ಲ? ಇದು ಕೇವಲ ಟೊಮ್ಯಾಟೊ ಒಂದರ ಕತೆಯಲ್ಲ. ಎಲ್ಲ ಕೃಷಿ ಉತ್ಪನ್ನಗಳ ಬೆಲೆಯು ದಿಢೀರ್ ಕುಸಿತ ಕಂಡಿದೆ. ಕಂಗಾಲಾದ ರೈತ ಹತಾಶೆಗೊಂಡು ಅವುಗಳನ್ನು ಬೀದಿಗೆ ಸುರಿದು ಪ್ರತಿಭಟನೆ ಮಾಡುತ್ತಿದ್ದಾನೆ. ಅವನ ಪ್ರತಿಭಟನೆಗೆ ಯಾರಾದರು ಸೊಪ್ಪು ಹಾಕಿದರೇ, ಅವನ ಪ್ರತಿಭಟನೆಯಿಂದ ಏನಾದರೂ ಪ್ರಯೋಜನವಾಯಿತೆ? ಈ ರೀತಿಯ ಬೆಲೆ ಕುಸಿತಕ್ಕೆ ಏನು ಕಾರಣ? ಕಚ್ಚಾ ಪದಾರ್ಥ ಮತ್ತು ಸಿದ್ಧ ಉತ್ಪನ್ನಗಳ ನಡುವೆ ಏಕೆ ಇಷ್ಟು ದೊಡ್ಡ ವ್ಯತ್ಯಾಸ ಉಂಟಾಗುತ್ತಿದೆ? ಎಂಬುದರ ಬಗ್ಗೆ ಯೋಚಿಸಬೇಕಾಗಿದೆ.

ಒಂದು ಮಾರುಕಟ್ಟೆಯಲ್ಲಿ ಮಾರಾಟವಾಗುವ ನಿತ್ಯದ ಪ್ರಮಾಣಕ್ಕಿಂತ ಹೆಚ್ಚಿನ ಉತ್ಪನ್ನ ಆವಕವಾದರೆ ಅದಕ್ಕೆ ಅನುಗುಣವಾಗಿ ಖರೀದಿಸುವವರು ಇಲ್ಲದೆ ಬೆಲೆಯಲ್ಲಿ ಕುಸಿತವಾಗುತ್ತದೆ. ಹೂವು, ಹಣ್ಣು, ತರಕಾರಿ ಹಾಗೂ ಇತರ ಉತ್ಪನ್ನಗಳು ಬೇಗನೆ ಹಾಳಾಗುವ ಗುಣವನ್ನು ಹೊಂದಿವೆ. ಅಲ್ಲದೆ, ಅವುಗಳನ್ನು ಕೆಡದಂತೆ ಸಂಗ್ರಹಿಸುವ ಮತ್ತು ಬೇಡಿಕೆ ಇರುವ ಕಡೆ ಸರಬರಾಜು ಮಾಡುವ ಒಂದು ಸರಿಯಾದ ವ್ಯವಸ್ಥೆ ಇಲ್ಲದ ಕಾರಣ ದಲ್ಲಾಳಿಗಳು ಅಂದಿನ ದಿನ ಎಷ್ಟು ಉತ್ಪನ್ನ ಮಾರಾಟವಾಗುತ್ತದೆಯೋ ಅಷ್ಟನ್ನು ಮಾತ್ರ ಖರೀದಿಸುತ್ತಾರೆ. ಹೀಗಾಗಿ ಮಾರುಕಟ್ಟೆಯಲ್ಲಿ ತಮ್ಮ ಉತ್ಪನ್ನಗಳನ್ನು ಕೊಳ್ಳುವವರಿಲ್ಲದೆ ರೈತರು ಬೀದಿಗೆ ಸುರಿದು ಹೋಗಬೇಕಾಗುತ್ತದೆ. ವರ್ಷವೆಲ್ಲ ಶ್ರಮ ಮತ್ತು ಬಂಡವಾಳ ಹಾಕಿ ಬೆಳೆದ ಬೆಳೆ ಹೀಗೆ ಹಾಳಾಗಿಹೋದರೆ, ಸಹಜವಾಗಿ ರೈತ ಮಾಡಿದ ಸಾಲವನ್ನು ತೀರಿಸಲಾಗದೆ ಕಂಗೆಟ್ಟುಹೋಗುತ್ತಾನೆ.

ಸರಕಾರಗಳು ಇಂತಹ ಸಂಕಷ್ಟದಿಂದ ರೈತರನ್ನು ಪಾರುಮಾಡಲು ಕನಿಷ್ಠ ಬೆಂಬಲ ಬೆಲೆಯನ್ನು ನೀಡುವ ಮುಖಾಂತರ ರೈತರ ಉತ್ಪನ್ನಗಳನ್ನು ಕೃಷಿ ಮಾರುಕಟ್ಟೆ ಸಮಿತಿಗಳು ಖರೀದಿಸಬೇಕೆಂದು ಹೇಳುತ್ತವೆ. ಆದರೆ, ಸಮಿತಿಗಳಾದರೂ ಕನಿಷ್ಠ ಪ್ರಮಾಣದಲ್ಲಿ ಉತ್ಪನ್ನಗಳನ್ನು ಖರೀದಿಸುತ್ತವೆ. ಹಾಲಿ ವರ್ಷದಲ್ಲಿ ಕಂಡುಬರುವ ಬಂಪರ್ ಬೆಲೆಯನ್ನು ನೆಚ್ಚಿಕೊಂಡ ರೈತರು ಹೆಚ್ಚು ಬೆಲೆ ಸಿಗುವ ಬೆಳೆಯನ್ನೇ ಬೆಳೆಯಲು ಆರಂಭಿಸುತ್ತಾರೆ. ಇದರಿಂದ ಉತ್ಪಾದನೆ ಹೆಚ್ಚಾಗುತ್ತದೆ. ಅದಕ್ಕೆ ಅನುಗುಣವಾಗಿ ಕೊಳ್ಳುವವರ ಸಂಖ್ಯೆಯೇನು ಹೆಚ್ಚಾಗುವದಿಲ್ಲ. ಹೀಗಾಗಿ ಬೆಲೆ ಕುಸಿಯುತ್ತದೆ. ಉತ್ಪನ್ನ ಹಾಳಾಗಬಾರದೆಂದು ಕೈಗೆ ಬಂದ ಬೆಲೆಗೆ ಮಾರಾಟ ಮಾಡಬೇಕಾಗುತ್ತದೆ. ರೈತರು ಯೋಗ್ಯ ಬೆಲೆ ಸಿಗದೆ ಹತಾಷೆಗೆ ಒಳಗಾಗಿ, ಮಾಡಿದ ಸಾಲ ತೀರಿಸಲಾಗದೆ ಆತ್ಮಹತ್ಯೆಯಂತಹ ದಾರಿಯನ್ನು ಹಿಡಿಯುತ್ತಾರೆ. ಇಂತಹ ಅನಾಹುತಗಳಿಗೆ ಅವಕಾಶ ಮಾಡಿಕೊಳ್ಳುವುದಕ್ಕಿಂತ ಸಮತೋಲನ ಮತ್ತು ಆವರ್ತ ಬೆಳೆಯನ್ನು ಬೆಳೆಯುವ ಮುಖಾಂತರ ರೈತರು ಆರ್ಥಿಕ ಸುಸ್ಥಿರತೆಯನ್ನು ಕಾಯ್ದುಕೊಳ್ಳುವ ಬಗ್ಗೆ ಗಮನಕೊಡಬೇಕು.

ಸರಕಾರಗಳು ಹೈನುಗಾರಿಕೆಯನ್ನು ಒಂದು ಉದ್ಯಮ ಎಂದು ಪರಿಗಣಿಸಿವೆ. ಕೆ.ಎಮ್.ಎಫ್ (KMF) ನಂತಹ ಹಾಲು ಒಕ್ಕೂಟ ಮಹಾಮಂಡಳಿಗಳನ್ನು ರಚಿಸಿ, ಆ ಮೂಲಕ ಹಾಲಿನ ಸಂಗ್ರಹಣೆ, ಸಂರಕ್ಷಣೆ, ಉಪ-ಉತ್ಪನ್ನಗಳ ತಯಾರಿಕೆ ಹಾಗೂ ಸರಬರಾಜು ಕಾರ್ಯಗಳ ಮುಖಾಂತರ ಹೈನುಗಾರಿಕೆಯಲ್ಲಿ ತೊಡಗಿಕೊಂಡವರಿಗೆ ಒಂದು ನಿರ್ದಿಷ್ಟ ಆದಾಯ ಮತ್ತು ಭದ್ರತೆಯನ್ನು ತಂದುಕೊಟ್ಟಿವೆ. ಇದೇ ರೀತಿ ಪ್ರತಿಯೊಂದು ಕೃಷಿ ಉತ್ಪನ್ನಕ್ಕೆ ಕೆ.ಎಮ್.ಎಫ್ ತರಹವೇ ಬೇರೆ ಬೇರೆ ಉದ್ಯಮಗಳನ್ನು ಸ್ಥಾಪಿಸುವ ಮೂಲಕ ಕೃಷಿಯನ್ನು ಉದ್ಯಮದ ಮಟ್ಟಕ್ಕೆ ಬೆಳೆಸಬಹುದು. ಇದರಿಂದ ಕೃಷಿ ಅವಲಂಬಿತರಿಗೆ ಉದ್ಯೋಗದ ಮತ್ತು ಆದಾಯದ ಭದ್ರತೆಯನ್ನು ನೀಡಬಹುದಾಗಿದೆ.

ಕೈಗಾರಿಕಾ ಉತ್ಪನ್ನಗಳು ಮತ್ತು ಮಾರುಕಟ್ಟೆ ವ್ಯವಸ್ಥೆಯನ್ನು 'ಕಾಂಪಿಟೇಷನ್ ಆಕ್ಟ್-2002' (Compitation Act 2002) ವ್ಯಾಪ್ತಿಗೆ ಕಟ್ಟುನಿಟ್ಟಾಗಿ ಒಳಪಡಿಸಬೇಕಾಗಿದೆ. ಕೈಗಾರಿಕೆಗಳು ತಾವು ತಯಾರಿಸುವ ಉತ್ಪನ್ನಗಳಿಗೆ ಬೆಲೆಯನ್ನು ನಿಗದಿಮಾಡುವಾಗ ಒಂದು ನ್ಯಾಯಯುತ ಮಾನದಂಡವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಕಚ್ಚಾ ಪದಾರ್ಥದ ಮೌಲ್ಯ, ಉತ್ಪಾದನಾ ವೆಚ್ಚ, ಬಂಡವಾಳ ಹೂಡಿಕೆಯ ಮೇಲಿನ ಲಾಭಾಂಶ ಹಾಗೂ ಸಾಗಾಟದ ವೆಚ್ಚಗಳನ್ನು ಸಮೀಕರಿಸಿ ಒಂದು ಬೆಲೆಯನ್ನು ನಿಗದಿಪಡಿಸಬೇಕಾಗುತ್ತದೆ. ಆದರೆ, ಬಹುಪಾಲು ಉದ್ಯಮಗಳು ತಾವು ಉತ್ಪಾದಿಸುವ ವಸ್ತುಗಳಿಗೆ ಏಕಪಕ್ಷೀಯವಾದ ಹಾಗೂ ಅತಾರ್ಕಿಕವಾದ ಬೆಲೆಯನ್ನು ನಿಗದಿಪಡಿಸುತ್ತವೆ. ಇಂತಹ ಹಲವಾರು ದೂರುಗಳನ್ನು 'ಕಾಂಪಿಟೇಷನ್ ಕಮಿಷನ್ ಆಫ್ ಇಂಡಿಯಾ' (Compitation Commission of India) ಸ್ವಿಕರಿಸುತ್ತದೆ. ಆದರೆ, ಕ್ರಮ ತೆಗೆದುಕೊಂಡದ್ದು ಮಾತ್ರ ವಿರಳ. ಇತ್ತೀಚೆಗೆ ಹನ್ನೊಂದು ಸಿಮೆಂಟ್ ಕಂಪನಿಗಳು ಅತೀ ಹೆಚ್ಚು ದರದಲ್ಲಿ ಸಿಮೆಂಟ್ ಮಾರಾಟ ಮಾಡಿದ್ದ ಕಾರಣಕ್ಕಾಗಿ ಅವುಗಳ ಮೇಲೆ ದಂಡವನ್ನು ವಿಧಿಸಲಾಯಿತು. ಆದರೆ, ಅಂತಹದೆ ಕ್ರಮವನ್ನು ನಿತ್ಯ ಬಳಕೆಯ ಆಹಾರೋತ್ಪನ್ನಗಳ ವಿಷಯದಲ್ಲಿ ತೆಗೆದುಕೊಳ್ಳದೇ ಇರುವದು ವಿಷಾದನೀಯ.

ಹಲವಾರು ಕೈಗಾರಿಕೆ/ಕಂಪನಿಗಳು ತಮ್ಮ ಉತ್ಪಾದನೆಗಳ ಮೇಲೆ ಅತೀ ಹೆಚ್ಚಿನ ಬೆಲೆಯನ್ನು

(12ನೇ ಪುಟಕ್ಕೆ)

ಎಲ್ಲ ಸಿದ್ಧ ಉತ್ಪನ್ನಗಳಿಗೆ ಮೂಲವಾದ ರೈತನ ಬೆಳೆಗೆ ಏಕೆ ಯೋಗ್ಯ ಬೆಲೆ ಸಿಗುತ್ತಿಲ್ಲ? ಇದು ಕೇವಲ ಟೊಮ್ಯಾಟೊ ಒಂದರ ಕತೆಯಲ್ಲ. ಎಲ್ಲ ಕೃಷಿ ಉತ್ಪನ್ನಗಳ ಬೆಲೆಯು ದಿಢೀರ್ ಕುಸಿತ ಕಂಡಿದೆ. ಕಂಗಾಲಾದ ರೈತ ಹತಾಶೆಗೊಂಡು ಅವುಗಳನ್ನು ಬೀದಿಗೆ ಸುರಿದು ಪ್ರತಿಭಟನೆ ಮಾಡುತ್ತಿದ್ದಾನೆ. ಅವನ ಪ್ರತಿಭಟನೆಗೆ ಯಾರಾದರು ಸೊಪ್ಪು ಹಾಕಿದರೇ, ಅವನ ಪ್ರತಿಭಟನೆಯಿಂದ ಏನಾದರೂ ಪ್ರಯೋಜನವಾಯಿತೆ? ಈ ರೀತಿಯ ಬೆಲೆ ಕುಸಿತಕ್ಕೆ ಏನು ಕಾರಣ? ಕಚ್ಚಾ ಪದಾರ್ಥ ಮತ್ತು ಸಿದ್ಧ ಉತ್ಪನ್ನಗಳ ನಡುವೆ ಏಕೆ ಇಷ್ಟು ದೊಡ್ಡ ವ್ಯತ್ಯಾಸ ಉಂಟಾಗುತ್ತಿದೆ? ಎಂಬುದರ ಬಗ್ಗೆ ಯೋಚಿಸಬೇಕಾಗಿದೆ.



ಜಾತಿಗಳು ಹಾಗೂ ಜಾತಿ ವಿನಾಶದ ಬಗ್ಗೆ ಅಂಬೇಡ್ಕರ್ ಅವರ ಮೇಲೆ ತಮ್ಮ ವಿಚಾರಗಳನ್ನು ಆರೋಪಿಸಿ ಅವರನ್ನು ಟೀಕಿಸುವುದು ಸಾಧುವಲ್ಲ. ಅಂಬೇಡ್ಕರ್ "ಸಹ-ಭೋಜನ ಹಾಗೂ ಅಂತರ್ಜಾತೀಯ ವಿವಾಹಗಳಿಗಾಗಿ ಹೋರಾಡುವುದು ಹಾಗೂ ಅವುಗಳನ್ನು ಆಯೋಜಿಸುವುದು ಕೃತಕ ವಿಧಾನದಿಂದ ಒಬ್ಬ ವ್ಯಕ್ತಿಗೆ ಒತ್ತಾಯದ ಊಟ ಮಾಡಿಸಿದಂತೆ" ಎಂದಿದ್ದರು.

ಹುಸಿ ವಾದ; ವಿಕೃತ ಇತಿಹಾಸ

— ಬಾಪು ಹೆದ್ದೂರಶೆಟ್ಟಿ.

ಚರ್ಚೆ

ಗಾಂಧಿಯ ಬಗ್ಗೆ ಡಿ.ಎಸ್.ನಾಗಭೂಷಣ ಅವರ ಲೇಖನದ ಬಗ್ಗೆ ಎಸ್.ಮರಿಸ್ವಾಮಿಯವರ ಪ್ರತಿಕ್ರಿಯೆಯನ್ನು ಪ್ರಕಟಿಸುವಾಗ ನಾಗಭೂಷಣ ಅವರನ್ನು 'ಸಮಾಜವಾದಿ' ಚಿಂತಕ ಎಂದು ನೀವು ಹೇಳಿರುವುದರಿಂದ ನಾನು ನನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವುದು ಅನಿವಾರ್ಯವಾಗಿದೆ.

ಮೊದಲನೆಯದಾಗಿ, ನಾಗಭೂಷಣ ಅವರು ಇತಿಹಾಸವನ್ನು ನೋಡುವ ವಿಧಾನ ವಿಚಿತ್ರವಾಗಿದೆ. ಗಾಂಧಿಯವರ ನಾಲ್ಕನೆಯ ತಪ್ಪನ್ನು ಹೇಳಲು ಹೋಗಿ ನಾಗಭೂಷಣ ತಾವೇ ಎಂದಿನಂತೆ ಇತಿಹಾಸವನ್ನು ವಿಕೃತಗೊಳಿಸಿದ್ದಾರೆ. ಲೋಹಿಯಾ ಅವರು ತಮ್ಮ ಮತ ಚಲಾಯಿಸದೇ ಇದ್ದುದು ಹರಿಪುರ ಕಾಂಗ್ರೆಸ್ ಅಧಿವೇಶನದಲ್ಲಿ ನಡೆದ ಚುನಾವಣೆಯಲ್ಲಿ ಗಾಂಧಿಯವರ ಅಭ್ಯರ್ಥಿಯಾದ ಪಟ್ಟಾಭಿ ಸೀತಾರಾಮಯ್ಯನವರ ವಿರುದ್ಧ ಸಮಾಜವಾದದ ಬಗ್ಗೆ ಒಲವಿದ್ದ ಸುಭಾಷಚಂದ್ರ ಬೋಸರು ಸ್ಪರ್ಧಿಸಿದ ಹಿನ್ನೆಲೆಯಲ್ಲಿ ಸಮಾಜವಾದಿಗಳು ಬೋಸರನ್ನು ಬೆಂಬಲಿಸಲು ನಿರ್ಧರಿಸಿದಾಗ. ಚುನಾವಣೆಯಲ್ಲಿ ಗಾಂಧಿ ತಮ್ಮ ಅಭ್ಯರ್ಥಿ ಸೋಲುತ್ತಾರೆ, 'ಕಾಂಗ್ರೆಸ್ ತಮ್ಮ ಕೈ ತಪ್ಪಿ ಹೋಗುತ್ತದೆ' ಎಂದು 'ಆತಂಕ' ಪಟ್ಟಿರಲಿಲ್ಲ? ಪಟ್ಟಾಭಿಯವರು ತಮ್ಮ ಅಭ್ಯರ್ಥಿ ಎಂದು ಗಾಂಧಿ ಘೋಷಿಸಿದ್ದು ನಾಗಭೂಷಣರು ಹೇಳುವಂತೆ 'ಅಪ್ರಜಾಸತ್ತಾತ್ಮಕ'ವಾಗಿಯೂ ಇರಲಿಲ್ಲ. ಹಾಗೆ ಆಗಿದ್ದು ಬೋಸರು ಚುನಾವಣೆ ಗೆದ್ದ ನಂತರ, ಕಾಂಗ್ರೆಸ್ ಅಧ್ಯಕ್ಷರು ತಮ್ಮ ಕಾರ್ಯಕಾರಿ ಸಮಿತಿಯನ್ನು ಗಾಂಧಿಯವರೊಂದಿಗೆ ಚರ್ಚಿಸಿ ರಚಿಸಬೇಕು ಎಂದು ಗೋವಿಂದ ವಲ್ಲಭ ಪಂತರು ನಿರ್ಣಯ ಮಂಡಿಸಿದಾಗ. ಆ ನಿರ್ಣಯದ ಬಗ್ಗೆ ಸಮಾಜವಾದಿಗಳು ತಟಸ್ಥರಾಗಿರುವ ನಿರ್ಧಾರ ಕೈಗೊಂಡರೆ, ಲೋಹಿಯಾ ಪಂತರ ನಿರ್ಣಯದ ಪರವಾಗಿ ಮತ ನೀಡಿದ್ದರು. ಅಂದರೆ 'ಕಾಂಗ್ರೆಸ್ ಕೈತಪ್ಪಿ ಹೋಗುತ್ತದೆ' ಎಂದು ಆಂತಕಪಟ್ಟು ಗಾಂಧಿ 'ಅಪ್ರಜಾಸತ್ತಾತ್ಮಕ' ನಿರ್ಧಾರ ಕೈಗೊಂಡ ಸಂದರ್ಭದಲ್ಲಿ ಲೋಹಿಯಾ ಪಂತರ ನಿರ್ಣಯದ ಪರ ಮತ ನೀಡಿದ್ದರೇ ಹೊರತು ನಾಗಭೂಷಣ ಹೇಳುವಂತೆ ಮತ ಚಲಾಯಿಸದೇ ಇರಲಿಲ್ಲ. ಇತಿಹಾಸವನ್ನು ಹೀಗೆ ತಪ್ಪಾಗಿ ಗ್ರಹಿಸುವ ಕಾರಣದಿಂದ ನಾಗಭೂಷಣ ಮುಂದಿಡುವ ವಾದಗಳು ಹುಸಿ ವಾದಗಳಾಗುತ್ತವೆ.

ನಾಗಭೂಷಣರ ಪ್ರಕಾರ ಗಾಂಧಿಯವರ ಇನ್ನೊಂದು ತಪ್ಪು ಅವರು ಖಿಲಾಫತ್ ಚಳವಳಿಯನ್ನು ಬೆಂಬಲಿಸಿದ್ದು. ಅಹಿಂಸೆ ಗಾಂಧಿಯವರ ವೈಯಕ್ತಿಕ ತತ್ವವಾಗಿತ್ತು, ಅದನ್ನು ಅವರು ಕಾಂಗ್ರೆಸ್ ಮೇಲೆ ಕೂಡ ಹೊರಿಸಿರಲಿಲ್ಲ. 'ಗಾಂಧಿ ಸತ್ಯ ಮತ್ತು ಅಹಿಂಸೆಯ ಆರಾಧಕರಾಗಿದ್ದರು ಆದರೆ ಸ್ವರಾಜ್ಯವನ್ನು ಗಳಿಸಲು ಕಾಂಗ್ರೆಸ್ ಪಕ್ಷದಲ್ಲಿ ಅವುಗಳ ಬದಲಿಗೆ ಶಾಂತಿಯುತ ಮತ್ತು ಸೂಕ್ತ ಸಾಧನಗಳನ್ನು ಬಳಸಲು ಅವರು ಸಿದ್ಧರಾಗಿದ್ದರು' ಎನ್ನುತ್ತಾರೆ ಆಚಾರ್ಯ ಕೃಪಲಾನಿ. ಆದುದರಿಂದ ಸ್ವಾತಂತ್ರ ಚಳವಳಿಯಲ್ಲಿ ಸಂತನ ಪಾತ್ರ ಧರಿಸಿ ಹಿಂದುಗಳನ್ನು ಆಕರ್ಷಿಸಬಯಸಿದ ಗಾಂಧಿ, ಖಿಲಾಫತ್ ಚಳವಳಿಯನ್ನು ಬೆಂಬಲಿಸಿ ಮುಸ್ಲಿಮರನ್ನು ಸ್ವಾತಂತ್ರ ಚಳವಳಿಯಲ್ಲಿ ತೊಡಗಿಸಿಕೊಳ್ಳಬಯಸಿದುದು ಆಶ್ಚರ್ಯವೇನಲ್ಲ. ಆದುದರಿಂದ ಇಲ್ಲಿ ಇಸ್ಲಾಂ ಹಿಂಸೆಯನ್ನು ಒಪ್ಪುತ್ತದೆಯೋ ಇಲ್ಲವೋ ಎನ್ನುವುದು ಗಾಂಧಿಯವರಿಗೆ ಅಪ್ರಸ್ತುತವಾಗಿತ್ತು.

ಅಂಬೇಡ್ಕರ್ 'ಅಸ್ಪೃಷ್ಯ ಬೆಂಬಲಿಗರನ್ನಷ್ಟೇ ನೆಚ್ಚಿಕೊಂಡು ಮೀಸಲು ಸ್ಥಾನಗಳಲ್ಲಿ ಕೂಡ ಚುನಾವಣೆಗಳಲ್ಲಿ ಗೆಲ್ಲಲು ಆಗಲೇ ಇಲ್ಲ' ಎನ್ನುವಾಗ ನಾಗಭೂಷಣರಿಗೆ ಮೀಸಲು ಮತಕ್ಷೇತ್ರದ ಅರ್ಥವನ್ನು ಗೊಂದಲಿಸಿಕೊಳ್ಳುತ್ತಾರೆ. ಈಗ ಇರುವ ಮೀಸಲು ಮತಕ್ಷೇತ್ರಗಳು 'ಗಾಂಧಿ' ಪುಣೆಯಲ್ಲಿ ಒತ್ತಾಯ ಮಾಡಿದ ಹಾಗೂ ಅವರ ಪ್ರಾಣವನ್ನುಳಿಸಲು ಅಂಬೇಡ್ಕರ್ ಒಪ್ಪಿದ 'ಮೀಸಲು' ಮತ್ರಕ್ಷೇತ್ರಗಳು. ಸವರ್ಣೀಯ ಹಿಂದೂಗಳೇ ಭಾರತದ ಸುಮಾರು ಎಲ್ಲಾ ಮತಕ್ಷೇತ್ರಗಳಲ್ಲಿ ಅಧಿಕ ಸಂಖ್ಯೆಯಲ್ಲಿರುವಾಗ ಹಾಗೂ ಅಸ್ಪೃಷ್ಯರು ಅತ್ಯಂತ ಅಲ್ಪಸಂಖ್ಯಾತರಾಗಿದ್ದಾಗ, ಸವರ್ಣಿಯ ಹಿಂದೂಗಳನ್ನು ಬದುಕಿನುದ್ದಕ್ಕೂ ಎದುರಿಸುತ್ತ ಬಂದಿದ್ದ ಅಂಬೇಡ್ಕರ್ ಹೇಗೆ ಗೆಲ್ಲಲು ಸಾಧ್ಯವಿತ್ತು? ದಲಿತರನ್ನೇ ಒಂದು ಮತಕ್ಷೇತ್ರವೆಂದು ಪರಿಗಣಿಸಿ ಚುನಾವಣೆ ನಡೆಸಿದ್ದರೆ ಅಲ್ಲಿ ಅಂಬೇಡ್ಕರ್ ಅಸ್ಪೃಷ್ಯರನ್ನು ನೆಚ್ಚಿ ಗೆಲ್ಲಬಹುದಿತ್ತು. ಅಂತಹ ಮತಕ್ಷೇತ್ರಗಳ ರಚನೆಯನ್ನು ತಪ್ಪಿಸಿ ನಂತರ ಅಂಬೇಡ್ಕರ್ ಅವರಿಗೆ ದಲಿತರ ಬೆಂಬಲ ಮಾತ್ರದಿಂದ ಗೆಲ್ಲಲು ಸಾಧ್ಯವಾಗಲಿಲ್ಲ ಎನ್ನುವುದು ಅಂತಹ ಸಾಧುವಲ್ಲ. ಸಮಾಜವಾದಿಗಳು ವೃತ್ತಿ ಆಧಾರಿತ ಮತಕ್ಷೇತ್ರಗಳ ಬೇಡಿಕೆಯನ್ನು 1934ರಲ್ಲಿಯೇ ಮುಂದಿಟ್ಟಿದ್ದು ನಾಗಭೂಷಣರಿಗೆ ಗೊತ್ತಿರಬಹುದು. ಹಾಗಾಗಿದ್ದರೆ, ಅಂತಹ ಮತಕ್ಷೇತ್ರಗಳಲ್ಲಿ ಯಾರು ಆಯ್ಕೆಯಾಗುತ್ತಿದ್ದರು?

ಆದರೆ ಅಂಬೇಡ್ಕರ್ ಅವರು ಪ್ರಾರಂಭಿಸಿದ ಮೊದಲ ಪಕ್ಷ 'ಇಂಡಿಪೆಂಡೆಂಟ್ ಲೇಬರ್ ಪಾರ್ಟಿ' 1937ರ ಚುನಾವಣೆಯಲ್ಲಿ 13 ಮೀಸಲು ಕ್ಷೇತ್ರಗಳಲ್ಲೂ, 4 ಸಾಮಾನ್ಯ ಕ್ಷೇತ್ರಗಳಲ್ಲೂ ಸ್ಪರ್ಧಿಸಿ 11 ಮೀಸಲು ಹಾಗೂ 3 ಸಾಮಾನ್ಯ ಕ್ಷೇತ್ರಗಳಲ್ಲಿ ಜಯಗಳಿಸಿತ್ತು. ಗೆದ್ದ ಮೂರು ಚುನಾವಣೆಗಳನ್ನು 'ಕಾಂಗ್ರೆಸ್ಸೇತರ ಉದಾರವಾದಿ ಸವರ್ಣೀಯ ಹಿಂದೂ ನಾಯಕರೊಂದಿಗೆ ಹೊಂದಾಣಿಕೆ ಮಾಡಿಕೊಂಡು', ಮುಸ್ಲಿಂ ಲೀಗ್ ಹಾಗೂ ಕಾಂಗ್ರೆಸ್ ಪ್ರಾಯೋಜಿತ ಅಭ್ಯರ್ಥಿಯಾಗಿ ಗೆದ್ದರು ಎನ್ನುವ ಈ ಮಾಹಿತಿ ನಾಗಭೂಷಣರಿಗೆ ಎಲ್ಲಿ ಸಿಕ್ಕಿತು ಎಂದು ಹೇಳಿದರೆ ಉಪಕಾರವಾದೀತು. ಕಾಂಗ್ರೆಸ್ ವಿರುದ್ಧ ಮೀಸಲು ಕ್ಷೇತ್ರದಿಂದ ಗೆಲ್ಲುವ ಎಲ್ಲಾ ದಲಿತ ಅಭ್ಯರ್ಥಿಗಳಿಗೆ ನಾಗಭೂಷಣರ ಮೊದಲ ಆಪಾದನೆ ಅನ್ವಯವಾಗುತ್ತದೆ. ಕೇಂದ್ರ ವಿಧಾನ ಸಭೆಗೆ ಅಂಬೇಡ್ಕರ್ ಬಂಗಾಳದ ಮತಕ್ಷೇತ್ರದಿಂದ ಗೆದ್ದಿದ್ದರು. ಅಲ್ಲಿ ಅವರು ಮುಸ್ಲಿಂ ಲೀಗ್ ಪ್ರಾಯೋಜಿತ ಅಭ್ಯರ್ಥಿಯಾಗಿದ್ದರೆ? ದೇಶದ ವಿಭಜನೆಯ ನಂತರ ಅ ಕ್ಷೇತ್ರ ಪಾಕಿಸ್ತಾನಕ್ಕೆ ಹೋಗಿದ್ದುದರಿಂದಾಗಿ ಅವರು ತಮ್ಮ ಸದಸ್ಯತ್ವ ಕಳೆದುಕೊಂಡಿದ್ದರಿಂದ ಕಾಂಗ್ರೆಸ್ ಅವರನ್ನು ಮುಂಬಯಿ ರಾಜ್ಯದಿಂದ ಆಯ್ಕೆ ಮಾಡಿತು. ಆದರೆ ಹಾಗೆ ಆಯ್ಕೆ ಮಾಡಲು ಅಂಬೇಡ್ಕರ್ ಅವರ ಯೋಗ್ಯತೆ ಕಾರಣವಾಗಿರದೇ, ಬದುಕಿನುದ್ದಕ್ಕೂ ಗಾಂಧಿಯನ್ನು ವಿರೋಧಿಸಿದ ಅವರ ಬಗ್ಗೆ ಕಾಂಗ್ರೆಸ್ಸಿನ ಕರುಣೆ ಕಾರಣವಾಗಿತ್ತು ಎಂದು ಯಾರು ಬೇಕಾದರೂ ತಮ್ಮ ಪೂರ್ವಾಗ್ರಹಗಳಿಗನುಗುಣವಾಗಿ ಗ್ರಹಿಸಲು ಸ್ವತಂತ್ರರಾಗಿರುತ್ತಾರೆ.

ಜಾತಿಗಳು ಹಾಗೂ ಜಾತಿ ವಿನಾಶದ ಬಗ್ಗೆ ಅಂಬೇಡ್ಕರ್ ಅವರ ಮೇಲೆ ತಮ್ಮ ವಿಚಾರಗಳನ್ನು ಆರೋಪಿಸಿ ಅವರನ್ನು ಟೀಕಿಸುವುದು ಸಾಧುವಲ್ಲ. ಜಾತಿ ವಿನಾಶದ ಬಗ್ಗೆ ನಾಗಭೂಷಣರಿಗಿರುವ ಕಲ್ಪನೆ ಅಂಬೇಡ್ಕರ್ ಅವರಿಗಿರಲಿಲ್ಲ. 1936ರಷ್ಟರಲ್ಲಿಯೇ

"ನನ್ನ ಬದುಕಿನುದ್ದಕ್ಕೂ ನಾನು ಭಾವನೆಗಳಿಗಿಂತ ಹೆಚ್ಚು ವಿಚಾರಗಳಿಗೆ ಮಹತ್ವ ಕೊಟ್ಟಿದ್ದೇನೆ, ವಿಚಾರಗಳಿಗಿಂತ ಹೆಚ್ಚು ಕ್ರಿಯೆಗೆ ಮಹತ್ವ ಕೊಟ್ಟಿದ್ದೇನೆ. ಆದುದರಿಂದಲೇ ನಾನು ಸಂತ ರಾಮದಾಸರಿಗಿಂತ ಶಿವಾಜಿಯನ್ನು, ರಾನಡೆಯವರಿಗಿಂತ ಜ್ಯೋತಿಬಾ ಫುಲೆ ಅವರನ್ನು, ಜೆ.ಕೃಷ್ಣಮೂರ್ತಿಯವರಿಗಿಂತ ಮದರ ಥೆರೆಸಾ ಅವರನ್ನು, ಹಾಗೂ ಅಸ್ಪೃಶ್ಯತೆಯ ಬಗ್ಗೆ ಮೇಲ್ಜಾತಿಯ ಹಿಂದೂಗಳ ಮನಪರಿವರ್ತನೆ ಮಾಡಲು ಪ್ರಯತ್ನಿಸಿದ ಮಹಾತ್ಮಾ ಗಾಂಧೀಜಿಯವರಿಗಿಂತ ಜಾತಿ ಪದ್ಧತಿಯ ವಿರುದ್ಧ ಬಂಡಾಯವೇಳಲು ದಲಿತರನ್ನು ಪ್ರಚೋದಿಸಿದ ಅಂಬೇಡ್ಕರ್ ಅವರನ್ನು ಶ್ರೇಷ್ಠರೆಂದು ಪರಿಗಣಿಸುತ್ತೇನೆ".

–ನಾನಾಸಾಹೇಬ ಗೋರೆ

ಗಾಂಧಿ-ಅಂಬೇಡ್ಕರ್ ಮುಂದುವರೆದ ಚರ್ಚೆ

ಅಂಬೇಡ್ಕರ್ "ಸಹ–ಭೋಜನ ಹಾಗೂ ಅಂತರ್ಜಾತೀಯ ವಿವಾಹಗಳಿಗಾಗಿ ಹೋರಾಡುವುದು ಹಾಗೂ ಅವುಗಳನ್ನು ಆಯೋಜಿಸುವುದು ಕೃತಕ ವಿಧಾನದಿಂದ ಒಬ್ಬ ವ್ಯಕ್ತಿಗೆ ಒತ್ತಾಯದ ಊಟ ಮಾಡಿಸಿದಂತೆ" ಎಂದಿದ್ದರು. ಧರ್ಮವೇ ಜಾತಿ ಪದ್ಧತಿಯ ಮೂಲದಲ್ಲಿರುವುದಾಗಿ ವಾದಿಸಿದ ಅಂಬೇಡ್ಕರ್ ಜಾತಿ ಪದ್ಧತಿಯನ್ನು ಕೊನೆಗಾಣಿಸಲು ಹೇಳಿದ ಪರಿಹಾರ "ಶಾಸ್ತ್ರಗಳ ಪರಿಶುದ್ಧತೆಯ ಬಗೆಗಿರುವ ಜನರ ನಂಬಿಕೆಯನ್ನು ಹೋಗಲಾಡಿಸಬೇಕು.. ..ನೀವು ಶ್ರುತಿ ಹಾಗೂ ಸ್ಮೃತಿಗಳ ಧರ್ಮವನ್ನು ಹೋಗಲಾಡಿಸಬೇಕು. ಇನ್ನಾವುದೂ ಪ್ರಯೋಜನಕಾರಿಯಾಗಲಾರದು". ಈ ಪ್ರಯತ್ನದ ಅಂಗವಾಗಿಯೇ ಅವರು ಹಿಂದೂ ಕೋಡ್ ಬಿಲ್ ತಂದಿದ್ದರಲ್ಲವೇ? ಅದಕ್ಕೆ ವಿರೋಧ ಬಂದಾಗ ಪಟ್ಟು ಹಿಡಿದಿದ್ದರಲ್ಲವೇ? 1936ರಲ್ಲಿಯೇ ಅಂತರ್ಜಾತೀಯ ವಿವಾಹಗಳಿಂದ ಸಾಮಾಜಿಕ ಬದಲಾವಣೆ ಅಸಾಧ್ಯ ಎಂಬ ನಿಲುವಿಗೆ ಅಂಬೇಡ್ಕರ್ ಬಂದಿದ್ದರೆ, (ನಾಗಭೂಷಣರ ಲೋಹಿಯಾ ಕೂಡ ಇಪ್ಪತ್ತು ವರ್ಷಗಳ ನಂತರ ಇದೇ ನಿಲುವನ್ನು ತಲುಪಿ ಸಾಮಾಜಿಕ ಬದಲಾವಣೆಗಾಗಿ ಮೀಸಲಾತಿಯನ್ನು ಪ್ರತಿಪಾದಿಸಿದ್ದರು) ಗಾಂಧಿ ತಮ್ಮ ಬದುಕಿನ ಕೊನೆಯಲ್ಲಿ ಅಂತರ್ಜಾತೀಯ ವಿವಾಹಗಳಿಂದ ಸಾಮಾಜಿಕ ಬದಲಾವಣೆ ಸಾಧ್ಯ ಎಂಬ ನಿರ್ಧಾರಕ್ಕೆ ಬಂದು ಅವುಗಳನ್ನು ಬೆಂಬಲಿಸಿದರು. ಇಲ್ಲಿ ಅಂಬೇಡ್ಕರ್ ನಿರೀಕ್ಷೆಗಿಂತ ಗಾಂಧಿ ಮುಂದೆ ಹೋದರೇ ಅಥವಾ ಗಾಂಧಿಗಿಂತ ಬಹಳ ಮೊದಲೇ ಈ ವಿಷಯದಲ್ಲಿ ಅಂಬೇಡ್ಕರ್ ಮುಂದಿದ್ದರೆ ಎನ್ನುವುದನ್ನು ವಾಚಕರೇ ನಿರ್ಧರಿಸಬೇಕು. ಇನ್ನು 1935ರ ಅಕ್ಟೋಬರ್ 13ರಷ್ಟು ಹಿಂದೆಯೇ ತಾನು ಹಿಂದೂವಾಗಿ ಜನಿಸಿದ್ದರೂ ಹಿಂದೂವಾಗಿ ಸಾಯುವುದಿಲ್ಲ ಎಂದು ಘೋಷಿಸಿದ್ದ ಅಂಬೇಡ್ಕರ್ ಅವರು 1956ರ ಅಕೋಬರ್ 14ರ ವರೆಗೆ ಹಿಂದೂ ಧರ್ಮವನ್ನು ಪರಿಷ್ಕರಿಸಲು ಪ್ರಯತ್ನಿಸಿ, ಸೋತು, ಅದು ಸಾಧ್ಯವಿಲ್ಲ ಎಂಬ ನಿರ್ಧಾರಕ್ಕೆ ಬಂದು, ಬುದ್ಧ ಧರ್ಮವನ್ನು ಅಂಗೀಕರಿಸಿದ್ದು ನಾಗಭೂಷಣರಂತಹ ಲೋಹಿಯಾವಾದಿಗಳಿಗೆ 'ನಾಟಕ'ವಾಗಿ ಕಾಣುವುದು ಸ್ವಾಭಾವಿಕವೇ.

ದೇಶದ ಆರ್ಥಿಕ–ಸಾಮಾಜಿಕ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ವಲಸೆಯಂತಹ ಕ್ರಿಯೆಗಳು ಸ್ವಾಭಾವಿಕ. ನಮ್ಮ ಗಮನ ಅದರ ತೀವ್ರತೆಯನ್ನು ಕಡಿಮೆ ಮಾಡುವುದಾಗಿರಬೇಕೇ ಹೊರತು ವಲಸೆ ಹೋಗುವುದನ್ನೇ 'ಬುಡ ಕಡಿದುಕೊಳ್ಳುವ ಅತಿ ಕಠೋರ ಶಿಕ್ಷೆ' ಎನ್ನುವ ಮೂಲಕ ಅದನ್ನು ತಪ್ಪಿಸಲು ಪ್ರಯತ್ನ ಮಾಡುವುದು ಸರಿಯಲ್ಲ. ವಲಸೆಯನ್ನು 'ಬುಡ ಕಡಿದುಕೊಳ್ಳುವ ಅತಿ ಕಠೋರ ಶಿಕ್ಷೆ' ಎನ್ನುವುದು ಗ್ರಾಮಾಂತರ ಪ್ರದೇಶಗಳಲ್ಲಿ ತಮ್ಮ ಮೇಲೆ ನಡೆಯುತ್ತಿರುವ ದೌರ್ಜನ್ಯದಿಂದ ಸ್ವಲ್ಪ ಮಟ್ಟಿಗಾದರೂ ಬಿಡುಗಡೆ ಪಡೆಯಲು ದಲಿತರು ನಗರಗಳಿಗೆ ಹೋಗುತ್ತಿರುವುದನ್ನು ತಡೆಯುವ ಒಂದು ವರಸೆಯಲ್ಲವೇ? ಗಾಂಧಿ ಹಾಗೂ ಲೋಹಿಯಾವಾದಿಗಳು ನಗರೀಕರಣ, ಔದ್ಯೋಗೀಕರಣಗಳ ವಿರುದ್ಧ ಇರಬಹುದು, ಸಮಾಜವಾದಿಗಳಲ್ಲ. ಸಮಾಜವಾದಿಗಳು ಔದ್ಯೋಗೀಕರಣ ಹಾಗೂ ಅದಕ್ಕಾಗಿ ನಗರೀಕರಣದ ಅವಶ್ಯಕತೆಯನ್ನು ಒಪ್ಪುತ್ತಾರೆ, ಆದರೆ ಅವರ ಚಿಂತನೆ ಈ ಸಂದರ್ಭದಲ್ಲಿ ಸಮಾನತೆಯನ್ನು ಹೇಗೆ ಸಾಧಿಸುವುದು ಎನ್ನುವುದಾಗಿರುತ್ತದೆ.

ನಾಗಭೂಷಣರು ಸಮಾಜವಾದಿ ಚಿಂತಕರೋ ಅಲ್ಲವೊ, ಓದುಗರು ನಿರ್ಧರಿಸಬೇಕು. ಆದರೆ ಗಾಂಧಿಯವರ ಬಗ್ಗೆ ನಾಗಭೂಷಣರಿಗಿಂತ ಹೆಚ್ಚು ತರ್ಕಬದ್ಧ ಶ್ರದ್ಧೆ ಇದ್ದ ಇನ್ನೊಬ್ಬ ಹಿರಿಯ ಸಮಾಜವಾದಿ ನಾನಾಸಾಹೇಬ ಗೋರೆ, ಅಂಬೇಡ್ಕರ್ ಅವರ ಬಗ್ಗೆ ಹೀಗೆ ಹೇಳಿದ್ದಾರೆ: "ನನ್ನ ಬದುಕಿನುದ್ದಕ್ಕೂ ನಾನು ಭಾವನೆಗಳಿಗಿಂತ ಹೆಚ್ಚು ವಿಚಾರಗಳಿಗೆ ಮಹತ್ವ ಕೊಟ್ಟಿದ್ದೇನೆ, ವಿಚಾರಗಳಿಗಿಂತ ಹೆಚ್ಚು ಕ್ರಿಯೆಗೆ ಮಹತ್ವ ಕೊಟ್ಟಿದ್ದೇನೆ. ಆದುದರಿಂದಲೇ ನಾನು ಸಂತ ರಾಮದಾಸರಿಗಿಂತ ಶಿವಾಜಿಯನ್ನು, ರಾನಡೆಯವರಿಗಿಂತ ಜ್ಯೋತಿಬಾ ಫುಲೆ ಅವರನ್ನು, ಜೆ.ಕೃಷ್ಣಮೂರ್ತಿಯವರಿಗಿಂತ ಮದರ ಥೆರೆಸಾ ಅವರನ್ನು, ಹಾಗೂ ಅಸ್ಪೃಶ್ಯತೆಯ ಬಗ್ಗೆ ಮೇಲ್ಜಾತಿಯ ಹಿಂದೂಗಳ ಮನಪರಿವರ್ತನೆ ಮಾಡಲು ಪ್ರಯತ್ನಿಸಿದ ಮಹಾತ್ಮಾ ಗಾಂಧೀಜಿಯವರಿಗಿಂತ ಜಾತಿ ಪದ್ಧತಿಯ ವಿರುದ್ಧ ಬಂಡಾಯವೇಳಲು ದಲಿತರನ್ನು ಪ್ರಚೋದಿಸಿದ ಅಂಬೇಡ್ಕರ್ ಅವರನ್ನು ಶ್ರೇಷ್ಠರೆಂದು ಪರಿಗಣಿಸುತ್ತೇನೆ".

ಲೋಹಿಯಾ ಅವರನ್ನು ಸಮಾಜವಾದಿ ಎಂದೂ, ಲೋಹಿಯಾವಾದಿಗಳನ್ನು ಸಮಾಜವಾದಿಗಳೆಂದೂ ಪರಿಗಣಿಸುವುದು ಇನ್ನೊಂದು ದುಷ್ಪರಿಣಾಮ ಎಂಬುದು ಈ ಸಲದ ಚಂದ್ರಭಾನ್ ಪ್ರಸಾದ್ ಅವರ ಡೈರಿಯಲ್ಲಿ ಕಂಡು ಬರುತ್ತದೆ. ವಿದೇಶೀ ಮಾರಾಟ ಮಳಿಗೆಗಳನ್ನು ಉತ್ತರ ಪ್ರದೇಶದ ಅಖಿಲೇಶ್ ಯಾದವ್ ಹಾಗೂ ಬಿಹಾರದ ನಿತೀಶ್ ಕುಮಾರ್ ವಿರೋಧಿಸಿರುವುದನ್ನು ಉದಾಹರಿಸುತ್ತ ಪ್ರಸಾದ್ "ಜ್ಯೋತಿ ಬಸು ಭಾರತದ ಒಂದೇ ಒಂದು ರಾಜ್ಯವನ್ನು ಹಾಳುಮಾಡಿದರು. ರಾಮ್ ಮನೋಹರ ಲೋಹಿಯಾ ಇಡೀ ಉತ್ತರ ಭಾರತವನ್ನು ಹಾಳು ಮಾಡಿದರು" ಎನ್ನುತ್ತಾರೆ. ಪ್ರಸಾದ್ ಲೋಹಿಯಾವಾದಿಗಳು ಹಾಗೂ ಸಮಾಜವಾದಿಗಳು ಎಂಬ ಶಬ್ದಗಳನ್ನು ಸಮಾನಾರ್ಥಕವಾಗಿಯೇ ಬಳಸುತ್ತಾರೆ. ಇದಕ್ಕೆ ಭಾರತದ ಲೋಹಿಯಾವಾದಿಗಳೂ ಕಾರಣ. ಏಕೆಂದರೆ ಸಮಾಜವಾದ ಅತ್ಯಂತ ಜನಪ್ರಿಯ ಸಿದ್ಧಾಂತವಾಗಿರುವುದರ ಲಾಭ ಪಡೆಯಲು ಅವರೂ ತಮ್ಮನ್ನು ಸಮಾಜವಾದಿಗಳು ಎಂದು ಕರೆದುಕೊಂಡು ಗೊಂದಲ ಉಂಟು ಮಾಡುತ್ತಾರೆ. ಅಂತರ್ರಾಷ್ಟ್ರೀಯ ಸ್ತರದಲ್ಲಿ ಕಮ್ಯುನಿಸ್ಟರೊಂದಿಗೆ ಕಳಚಿಕೊಳ್ಳುವುದಕ್ಕಿಂತ ಬಹಳ ಮೊದಲೇ ಅರಾಜಕವಾದಿಗಳಿಂದ ಸಮಾಜವಾದಿಗಳು ಕಳಚಿಕೊಂಡಿದ್ದರೂ, ಇಂದಿಗೂ ಅವರು ಇಂತಹ ಸೈದ್ಧಾಂತಿಕ ಗೊಂದಲಗಳನ್ನು ಉಂಟು ಮಾಡುತ್ತಿದ್ದಾರೆ. ಲೋಹಿಯಾ ಅವರು ಸಮಾಜವಾದದ ಕೇಂದ್ರ ತತ್ವವಾದ ಸಮಾನತೆಯನ್ನು ಕಡೆಗಣಿಸಿ "ತಮ್ಮ ಸಮಾಜವಾದಿ ದರ್ಶನದ ಕೇಂದ್ರ ಬಿಂದುವಿನಿಂದ ಹುಟ್ಟಿದ ಚಟುವಟಿಕೆಗಳಿಗೆ ತೊಡಗಿದರು. ಅವರ ರಾಜಕಾರಣವು ವಿಲಕ್ಷಣ, ಯದ್ವಾ ತದ್ವಾ ಹಾಗೂ ನಿಷ್ಕಾರಣವಾಗಿ ಹೋಯಿತು. ನೆಹರೂ ದ್ವೇಷ, ಕಾಂಗ್ರೆಸ್ಸೇತರವಾದ ಮತ್ತು ಇಂಗ್ಲಿಷ್ ವಿರೋಧ ಅವರ ಗೀಳುಗಳಾಗಿಬಿಟ್ಟವು. ಹೀಗೆ ಲೋಹಿಯಾ ಅವರ ಮಾನವತಾ ದರ್ಶನ ಅವರಿಂದಲೇ ವಿಡಂಬನೆಗೊಂಡು, ನಿಕೃಷ್ಟವಾಗಿಬಿಟ್ಟಿತು" ಎನ್ನುತ್ತಾರೆ ಜಾರ್ಜ್ ಜಾನ್. ಹೀಗೆ ಲೋಹಿಯಾ ಇನ್ನಿತರ ವಿಷಯಗಳ ಬಗ್ಗೆ ಗಮನ ಸೆಳೆದು ಸಮಾಜವಾದಿ ಆಂದೋಲನದ ದಾರಿ ತಪ್ಪಿಸಲು ಪ್ರಯತ್ನಿಸಿದರು. ಅವರ ಪ್ರಯತ್ನಗಳ ಫಲವೇ ಇಂದು ಚಂದ್ರಭಾನ್ ಪ್ರಸಾದ್‌ರಂತಹವರ ತಪ್ಪು ಕಲ್ಪನೆಗಳು. ಜಾಗತೀಕರಣದ ಬಗ್ಗೆ ಸಮಾಜವಾದಿ ಅಂತರ್ರಾಷ್ಟ್ರೀಯ ಸಂಘಟನೆ ತಳೆದ ನಿಲುವನ್ನು ಪ್ರಸಾದ್‌ಲ್ಲದೇ ಎಲ್ಲಾ ದಲಿತರೂ ಅವಲೋಕಿಸಬೇಕು ಎನ್ನುವುದು ನನ್ನ ಒತ್ತಾಯ. ಇದರ ಒಂದು ತುಣುಕು ಕಳೆದ ಸಂಚಿಕೆಯಲ್ಲಿ ಸಂಪಾದಕರಿಗೆ ಸಮಾಜವಾದಿ ಅಧ್ಯಯನ ಕೇಂದ್ರದ ಸದಸ್ಯರಾದ ಜಿ.ವಿ.ಸುಂದರ್ ಬರೆದ ಪತ್ರದಲ್ಲಿ ಕಾಣುತ್ತದೆ.

ಕೊನೆಯದಾಗಿ, ಗಾಂಧಿ ಒಂದು ಕೈ, ತಾನು ಗಾಂಧಿ ಶಿಷ್ಯ ಎಂದು ಹೇಳಿಕೊಳ್ಳುತ್ತಲೂ ಗಾಂಧಿಯ ಎಲ್ಲಾ ವಿಚಾರಗಳಿಗೆ ವಿರುದ್ಧವಾಗಿ ಬದುಕಿದ್ದ, ಲೋಹಿಯಾ ಹೆಗಲ ಮೇಲೂ, ಇನ್ನೊಂದು ಕೈ, ಗಾಂಧಿಯ ವಿಚಾರಗಳನ್ನು ತರ್ಕಬದ್ಧವಾಗಿ ಹಾಗೂ ಬಹಿರಂಗವಾಗಿ ಬದುಕಿನುದ್ದಕ್ಕೂ ವಿರೋಧಿಸುತ್ತ ಬಂದ, ಅಂಬೇಡ್ಕರ್ ಅವರ ಹೆಗಲ ಮೇಲೂ ಇಟ್ಟುಕೊಂಡು ನಡೆಯುತ್ತಿರುವಂತಹ ವಿಕ್ಷಿಪ್ತ ಹಗಲುಗನಸುಗಳನ್ನು ನಾಗಭೂಷಣರಂತಹ ಲೋಹಿಯಾವಾದಿಗಳೇ ಕಾಣಬಲ್ಲರು. ■

(6ನೇ ಪುಟದಿಂದ)

ಸ್ವಾತ್ ಕಣಿವೆಯ ಶಾಂತಿಧೂತೆ

take away my basic right to education" ಎಂಬ ಆಕ್ರೋಶಭರಿತ ಮಾತುಗಳು ತಾಲಿಬಾನಿಯರಲ್ಲಿ ಮಲಾಲಾಳ ಕೊಲೆಯ ಯೋಚನೆ ಬರುವಂತೆ ಮಾಡಿತು. ತಾಲಿಬಾನಿಗಳ ಅಜೆಂಡಾದ ಪ್ರಕಾರ "ಇಸ್ಲಾಂ ವಿರೋಧಿಯಾಗಿ ಮಾತನಾಡುವ ಯಾರೊಬ್ಬರೂ ಬದುಕಲು ಯೋಗ್ಯರಲ್ಲ, ಅವರು ದೊಡ್ಡವರೇ ಆಗಲಿ ಅಥವಾ ಸಣ್ಣವರೇ ಆಗಲಿ ಅವರು ಶಿಕ್ಷೆಗೆ ಅರ್ಹರು" ಎಂದು ಮಲಾಲಾಳ ಮೇಲಿನ ಆಕ್ರಮಣವನ್ನು ಸಮರ್ಥಿಸಿಕೊಳ್ಳುತ್ತ ತಂಡದ ಮುಖ್ಯಸ್ಥ "ಮೌಲಾನಾ ಫಜುಲ್ಲಾ" ಹೇಳಿಕೊಂಡನು. ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಹೋರಾಡುವುದು ಇಸ್ಲಾಂ ವಿರೋಧಿ ಚಟುವಟಿಕೆಯೇ? ಅದನ್ನು ಅಲ್ಲಾ ದೇವರು ಹೇಳಿದನೇ? ಅಥವಾ ಪವಿತ್ರ ಖುರಾನಿನಲ್ಲಿ ಉಲ್ಲೇಖಿತವಾಗಿದೆಯೇ? ಇಂತಹ ಮಾತುಗಳು ಕೇವಲ ಮುಸ್ಲಿಂ ಮೂಲಭೂತವಾದಿಗಳದೇ ಹೊರತು ಇಸ್ಲಾಂ ಧರ್ಮದ್ದಲ್ಲ. ಧರ್ಮವು ಎಂದೂ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ವಿರೋಧಿಯಲ್ಲ ಎಂಬುದು ಮಲಲಾಳಂತಹ ಪುಟ್ಟ ಹೋರಾಟಗಾರ್ತಿಯ ಮಾತುಗಳಿಂದ ತಿಳಿದುಕೊಳ್ಳುವುದನ್ನು ಬಿಟ್ಟು ಇಸ್ಲಾಂ ವಿರೋಧಿಯಾಗಿ ನಡೆದುಕೊಳ್ಳುತ್ತಿರುವುದು ತಾಲಿಬಾನಿ ಸಂಘಟನೆಯಲ್ಲದೆ ಮಲಲಾಳಲ್ಲ.

ಆಕೆಯ ಹೋರಾಟ ಮನೋಭಾವ, ಅವಳಲ್ಲಿ ಮೊಳಕೆಯೊಡೆದಿದ್ದಂತಹ ಸ್ತ್ರೀ ಶಿಕ್ಷಣ ಜಾಗೃತಿಯನ್ನು ಗುರುತಿಸಿ "Kids rights foundation" ಸಂಸ್ಥೆಯು ಆಕೆಗೆ "ಅಂತರರಾಷ್ಟ್ರೀಯ ಮಕ್ಕಳ ಶಾಂತಿ ಪ್ರಶಸ್ತಿ" ನೀಡಿ ಗೌರವಿಸಿತು. ತದನಂತರ ಪಾಕಿಸ್ತಾನ ಸರ್ಕಾರವು "ರಾಷ್ಟ್ರೀಯ ಯುವ ಶಾಂತಿ ಪ್ರಶಸ್ತಿ" ನೀಡಿ ಗೌರವಿಸಿತು. ಇದರಿಂದ ಕುಪಿತಕ್ಕೊಳಗಾದ ತಾಲಿಬಾನಿಯರು ಮಲಾಲಾಳನ್ನು ಮುಗಿಸಲೇಬೇಕೆಂದು ನಿರ್ಧರಿಸಿದರು. "ಮಲಾಲಾ ಅನೀತಿಯ ಮತ್ತು ಅಸಭ್ಯತೆಯ ಚಿಹ್ನೆ" ಎಂದು ಭಾವಿಸಿದರು. 2012 ಅಕ್ಟೋಬರ್ 12ರಂದು ಶಾಲೆಯಿಂದ ಮನೆಗೆ ಶಾಲಾ ವಾಹನದಲ್ಲಿ ವಾಪಾಸಾಗುವಾಗ ಏಕಾಏಕಿ ವಾಹನದೊಳಗೆ ನುಗ್ಗಿದ ತಾಲಿಬಾನಿ ಬಂದೂಕುಧಾರಿಗಳು ಹದಿನಾಲ್ಕು ವರ್ಷದ ಮಲಾಲಾ ಮತ್ತು ತನ್ನಿಬ್ಬರು ಸಹಪಾಠಿಗಳ ಮೇಲೆ ಗುಂಡು ಸಿಡಿಸಿದರು. "ನಿಮ್ಮ ಶಕ್ತಿಯಿಲ್ಲದ ಗುಂಡೇಟಿಗೆ ನಾ ಹೆದರಲಾರೆ" ಎಂಬ ಸಂದೇಶದ ಕುರುಹಿನಂತೆ ಮಲಾಲಾ ಪವಾಡ ಸದೃಶ್ಯವಾಗಿ ಬದುಕುಳಿದಿದ್ದಾಳೆ. ಸ್ವತಃ "ಅಲ್ಲಾ"ದೇವನೇ ಅವಳ ಹೋರಾಟವನ್ನು ಪ್ರೋತ್ಸಾಹಿಸಿ ಮತ್ತೆ ಹೋರಾಟಕ್ಕಿಳಿ ಎಂದು ಬೆನ್ನು ತಟ್ಟಿ ಕಳುಹಿಸಿದ್ದಾನೆ.

ಶಿಕ್ಷಣ ಪ್ರತಿಯೊಬ್ಬ ನಾಗರೀಕನ ಹಕ್ಕು. ಲಿಂಗ ಭೇದದ ನೆಪವೊಡ್ಡಿ ಶಿಕ್ಷಣದಿಂದ ಹೆಣ್ಣು ಮಕ್ಕಳನ್ನು ದೂರ ಉಳಿಯುವಂತೆ ಮಾಡುವುದು ಅವರ ಮೂಲಭೂತ ಹಕ್ಕನ್ನು ಕಸಿದಂತೆಯೇ ಸರಿ. ಹೆಣ್ಣು ಮಕ್ಕಳಿಗೆ ಶಿಕ್ಷಣದ ಹಕ್ಕಿಲ್ಲ ಎಂದು ಯಾವ ಧರ್ಮವು ಎಲ್ಲೂ ಸಾರುವುದಿಲ್ಲ. ಸಾರುವುದಾದರೆ ಅದು ಧರ್ಮವಿರೋಧಿ ತಾಲಿಬಾನಿಗಳಿಂದ ಮಾತ್ರ ಸಾಧ್ಯ. ಎಲ್ಲಾ ಧರ್ಮಗಳು "ಹೆಣ್ಣು ರಕ್ಷಣೆಗೆ ಅರ್ಹಳು" ಎಂದು ತಿಳಿಸಿವೆಯೇ ಹೊರತು. ರಕ್ಷಣೆಯ ಹೆಸರಿನಲ್ಲಿ ಅವಳ ಹಕ್ಕನ್ನು ಕಸಿದುಕೊಳ್ಳಬೇಕೆಂದಲ್ಲ. ಮಲಾಲಾಳಂತಹ ಹೋರಾಟಗಾರ್ತಿಯರ ಪರಿಶ್ರಮದಿಂದ ಅನೇಕ ಹೆಣ್ಣುಮಕ್ಕಳಿಗೆ ಶಿಕ್ಷಣ ದೊರೆಯುವಂತಾಗಿರುವುದೇ ಇದಕ್ಕೆ ನೈಜ ಸಾಕ್ಷಿ. ಸ್ತ್ರೀ ಶಿಕ್ಷಣಕ್ಕಾಗಿ ಹೋರಾಡುತ್ತಿರುವ ಮಲಾಲಾ ತನ್ನ ಜೀವ ಉಳಿಸಿಕೊಳ್ಳುವ ಹೋರಾಟದಲ್ಲಿ ಜಯಿಸಿ ಮತ್ತೆ ಕ್ರಿಯಾಶೀಲಳಾಗಲಿ, ತಾಲಿಬಾನಿಗಳಂತಹ ದುಷ್ಟ ಶಕ್ತಿಗಳು ತೊಲಗಲಿ ಎಂಬುದೇ ಅನೇಕರ ಆಶಯ. ■

(8ನೇ ಪುಟದಿಂದ)

ತಾರತಮ್ಯ ಶಿಕ್ಷಣ...

ರಾಜ್ಯ ಸರಕಾರ ಮೀಸಲಿಟ್ಟ ಹಣ ಕೇವಲ 42.85 ಕೋಟಿ ರೂ. ವ್ಯಂಗ್ಯವೆಂದರೆ ಇದೇ ಸರಕಾರ ಮಠ ಮಾನ್ಯಗಳಿಗೆ ಪುಕ್ಕಟೆಯಾಗಿ ನೂರಾರು ಕೋಟಿ ನೀಡುತ್ತದೆ. ಇತ್ತ ನಮ್ಮ ಶಾಲೆಗಳಿಗೆ ಶಿಕ್ಷಕರನ್ನು ನೇಮಿಸಿಕೊಳ್ಳುವಷ್ಟು ಹಣವಿಲ್ಲ ಎಂಬ ಬೇಜವಾಬ್ದಾರಿ ಹೇಳಿಕೆ ನೀಡುತ್ತದೆ.

ಸಾಮ್ರಾಜ್ಯ ವಿಸ್ತರಣೆಯನ್ನು ನಾಚಿಸುವಂತೆ ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರತಿವರ್ಷ ಹೆಚ್ಚಾಗುತ್ತಲಿವೆ. ಇವುಗಳು ಶಿಕ್ಷಣ ಗುಣಮಟ್ಟದ ನೆಪದಲ್ಲಿ ಅನಗತ್ಯ ದುಬಾರಿ ಪುಸ್ತಕಗಳನ್ನು, ಸಲಕರಣೆಗಳನ್ನು, ಸಮವಸ್ತ್ರ ದಂಧೆಯನ್ನು ಜೊತೆಗೆ ಅಭಿವೃದ್ಧಿ ಶುಲ್ಕ ಇತ್ಯಾದಿಯಾಗಿ ಸಾರ್ವಜನಿಕರಿಂದ ರಾಜರೋಷವಾಗಿ ಹಣವನ್ನು ಕೊಳ್ಳೆ ಹೊಡೆಯುತ್ತಿವೆ. ಇದಕ್ಕೆ ಕಡಿವಾಣ ಹಾಕುವ ಪ್ರಾಮಾಣಿಕ ಕಾರ್ಯವಾಗಬೇಕಿದೆ. ಅಲ್ಲದೆ ಪ್ರತಿವರ್ಷ ಕಡ್ಡಾಯವಾಗಿ ಇವುಗಳ ಮೂಲ ಆಸ್ತಿಗಳ ಬಗ್ಗೆಯೂ ಸರಕಾರ ತನಿಖೆ ನಡೆಸಬೇಕಿದೆ.

ಶಿಕ್ಷಣದ ಉದ್ದೇಶ ನೌಕರಿ ಗಿಟ್ಟಿಸುವ ಧ್ಯೇಯವಾದ ಈ ದಿನಗಳಲ್ಲಿ ಪೋಷಕರು ತಮ್ಮ ಮಕ್ಕಳಿಗೆ ಆಂಗ್ಲಮಾಧ್ಯಮದ ಶಿಕ್ಷಣ ಕೊಡಿಸುವ ಮನಸ್ಥಿತಿಗೆ ಬಂದು ತಲುಪಿದ್ದಾರೆ. ಏಕೆಂದರೆ ಕನ್ನಡ ಮಾಧ್ಯಮದಲ್ಲಿ ಕಲಿತವರು ನೌಕರಿಗಾಗಿ ಪರದಾಡುತ್ತಿರುವ ಇಂದಿನ ಅಸಹನೀಯ ಸ್ಥಿತಿ ಗಮನಿಸಿದಾಗ ಆಂಗ್ಲಭಾಷೆ ಪರಿಣಿತಿ ಇಲ್ಲದಿದ್ದಲ್ಲಿ ನೌಕರಿ ಮರಿಚೀಕೆ ಎಂಬ ಸತ್ಯ ಅರ್ಥವಾಗಿ ಬಿಟ್ಟಿದೆ.

ಸರಕಾರ ಖಾಸಗಿಯವರಿಗೆ ಅನುದಾನ ನೀಡುವ ಬದಲು ತಾನೇ ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೂ ಏಕರೂಪಿ, ಸಮಾನ ಶಿಕ್ಷಣ ಜಾರಿ ಮಾಡಬೇಕಿದೆ. ನಮ್ಮ ಸರಕಾರಿ ಶಾಲೆಗಳಿಗೂ ಕೇಂದ್ರಿಯ ಶಾಲೆಗಳು, ICSE, CBSE ಶಾಲೆಗಳ ಪಠ್ಯಕ್ರಮ, ಸಹಪಠ್ಯ ಚಟುವಟಿಕೆಗಳನ್ನು ಜಾರಿಮಾಡಿ ಆ ಮೂಲಕ ಲಕ್ಷಾಂತರ ಡಿ.ಇಡಿ, ಬಿ.ಇಡಿ, ನಿರುದ್ಯೋಗಿ ಪದವೀಧರರಿಗೆ ನೌಕರಿ ಕಲ್ಪಿಸುವ ಕಾರ್ಯವನ್ನು ಶೀಘ್ರವಾಗಿ ಆರಂಭಿಸಬೇಕಿದೆ.

ಜಾಗತೀಕರಣಕ್ಕೆ ಸಿಲುಕಿರುವ ನಮ್ಮ ಕನ್ನಡ ಭಾಷೆ ಅನ್ನ ಕೊಡುವ ಸಾಮರ್ಥ್ಯ ಕಳೆದುಕೊಂಡಿದೆಯೇ? ಎಂಬ ಪ್ರಶ್ನೆ ಕಾಡತೊಡಗಿದೆ. ನಮ್ಮ ಭಾಷೆಯ ಅಸ್ತಿತ್ವದ ಪ್ರಶ್ನೆ ಬಂದಾಗ ಗೋಕಾಕ್ ಚಳವಳಿ ಅದರ ಭಾಗವಾದ ಸರೋಜಿನಿ ಮಹಿಷಿ ವರದಿ ಪ್ರಕಟವಾಗಿ ಹಲವು ದಶಕಗಳೇ ಕಳೆದಿವೆ ವಿನಃ ಕಾರ್ಯರೂಪಕ್ಕೆ ಸಂಪೂರ್ಣವಾಗಿ ಬಂದಿಲ್ಲ. ಕನ್ನಡ ಭಾಷೆ-ಉದ್ಯೋಗ ಸೃಷ್ಟಿ ಅದರ ಭಾಗವಾದ ಕನ್ನಡ ಶಾಲೆಗಳನ್ನು ಮುಚ್ಚುತ್ತಿರುವ ಈ ಸಂದರ್ಭದಲ್ಲಿ ನಾಡಿನ ಬುದ್ದಿಜೀವಿಗಳು, ಸಾಹಿತಿಗಳು, ಕಲಾವಿದರು, ವಿದ್ಯಾರ್ಥಿಗಳು, ಶಿಕ್ಷಣ ತಜ್ಞರು 2ನೇ ಗೋಕಾಕ್ ಚಳವಳಿಗೆ ಚಾಲನೆ ನೀಡುವುದು ಅತ್ಯಾವಶ್ಯಕವಾಗಿದೆ/ಪ್ರಸ್ತುತವಾಗಿದೆ. ■

(9ನೇ ಪುಟದಿಂದ)

ಬೆಲೆ ನಿಗದಿ ಮತ್ತು ಮಾರುಕಟ್ಟೆ ವ್ಯವಸ್ಥೆ

ನಮೂದಿಸುತ್ತವೆ ಮತ್ತು ಮಾರಾಟಗಾರರಿಗೆ ಹೆಚ್ಚಿನ ಕಮಿಷನ್‌ನಿನ ಆಮೀಷವನ್ನು ಒಡ್ಡುತ್ತವೆ. ಉದಾಹರಣೆಗೆ ಅಡುಗೆ ಎಣ್ಣೆ ಉತ್ಪಾದನಾ ಕಂಪನಿಗಳನ್ನೆ ತೆಗೆದುಕೊಂಡರೆ ಅವು ಮಾರಾಟಮಾಡುವ ಬೆಲೆಗಿಂತ ಹೆಚ್ಚಿನ ದರವನ್ನು ಪಾಕೇಟ್ ಮೇಲೆ ನಮೂದಿಸುತ್ತವೆ. ಅದನ್ನು ಈ ಕೆಳಗಿನಂತೆ ಗಮನಿಸಬಹುದು:

ಸನ್‌ಫ್ಲಾವರ್ ಎಣ್ಣೆ ಕಂಪನಿಗಳು	ಮುದ್ರಿತ ದರ ಪ್ರತಿ ಕೆಜಿಗೆ	ಮಾರಾಟದ ಬೆಲೆ
ಧಾರಾ	109 ರೂ.	82 ರೂ.
ಫಾರ್ಚೂನ್	111 ರೂ.	86 ರೂ.
ಜೆಮಿನಿ	120 ರೂ.	92 ರೂ.
ಇಮಾಮಿ ಹೆಲ್ತಿ&ಟೇಸ್ಟಿ	115 ರೂ.	86 ರೂ.

ಈ ರೀತಿಯ ದರ ನಿಗದಿಯಲ್ಲಿ ಮಾಡಿರುವ ವ್ಯತ್ಯಾಸವನ್ನು ಮಾರಾಟಗಾರರಿಗೆ ಪ್ರಶ್ನಿಸಿದರೇ ಅವರು ಹೇಳುವ ಉತ್ತರ ಸಖೇದಾಶ್ಚರ್ಯವನ್ನು ಉಂಟು ಮಾಡುತ್ತದೆ. ನಿರಂತರವಾಗಿ ಬೆಲೆ ಏರುತ್ತದೆ ಅದಕ್ಕನುಗುಣವಾಗಿ ಪ್ಯಾಕೇಟ್ ಮೇಲಿನ ಬೆಲೆಯನ್ನು ತಿದ್ದುಪಡಿ ಮಾಡಲು ಅಥವಾ ಬದಲಾದ ಬೆಲೆಯ ಲೇಬಲ್‌ನ್ನು ಅಂಟಿಸಲು ಬರುವದಿಲ್ಲ. ಆದ್ದರಿಂದ ಪ್ಯಾಕೇಜಿಂಗ್ ಸಂದರ್ಭದಲ್ಲಿಯೇ ಒಂದು ಊಹಾತ್ಮಕ ಬೆಲೆಯನ್ನು ಮುದ್ರಿಸಲಾಗುತ್ತದೆ. ಇದರಿಂದ ಪ್ಯಾಕೇಜ್‌ನ್ನು ಬದಲಾಯಿಸುವದು ತಪ್ಪುತ್ತದೆ ಎಂದು ಹೇಳುತ್ತಾರೆ. ಆದರೆ, ಮುಗ್ದ ಗ್ರಾಹಕರಿಗೆ ಅದರ ಮೇಲೆ ನಮೂದಿಸಿದ ಎಮ್.ಆರ್.ಪಿ. ಬೆಲೆಗೆ ಮಾರಾಟಮಾಡಿದರೆ, ಅದನ್ನು ಕೇಳುವವರು ಯಾರು?

ಗ್ರಾಹಕರು ತಾವು ಖರೀದಿಸಿದ ವಸ್ತುಗಳಿಗೆ ರಸೀದಿಯನ್ನು ಕೇಳಿ ಪಡೆಯಬೇಕೆಂದು ಮಾರಾಟ ತೆರಿಗೆ ಇಲಾಖೆ ಹೇಳುತ್ತದೆ. ರಸೀದಿಯನ್ನು ಕೇಳಿದರೆ, ಮಾರಾಟಗಾರರು 4% ವ್ಯಾಟ್ ಕೊಡಿ ಎನ್ನುತ್ತಾರೆ. ಎಮ್.ಆರ್.ಪಿ. ಬೆಲೆಗಿಂತ ಹೆಚ್ಚು ಬೆಲೆ ನೀಡುವಂತೆ ಕೇಳುತ್ತಾರೆ. ಇಂತಹ ಮಾರುಕಟ್ಟೆ ವ್ಯವಸ್ಥೆಯನ್ನು ನಿರ್ಬಂಧಿಸಲು ಒಂದು ಕಟ್ಟುನಿಟ್ಟಿನ ಕಾನೂನು ವ್ಯವಸ್ಥೆ ಜಾರಿಗೆ ಬರಬೇಕಾಗಿದೆ. ಚಿನ್ನದಿಂದ ಹಿಡಿದು ದಿನಬಳಕೆಯ ವಸ್ತುವಿನ ವರೆಗಿನ ಬೆಲೆಯನ್ನು ನಿಗದಿಮಾಡುವವರು ಯಾರು? ಉತ್ಪಾದಕರೆ, ಮಾರಾಟಗಾರರೆ, ಗ್ರಾಹಕರೆ, ಷೇರು-ದಲ್ಲಾಳಿಗಳೆ ಅಥವಾ ಸರಕಾರವೆ? ಎಂಬುದು ದೊಡ್ಡ ಪ್ರಶ್ನೆ. ■

ಕವನ

ಗಾಯಗಾರುಡಿ

■ ಹುಲಿಕುಂಟೆ ಮೂರ್ತಿ



ನಾನು ಈಗಲೂ
ಈಕರಿಸಿಕೊಳ್ಳುತ್ತೇನೆ..
ಬೆಳಕಿನಲ್ಲೂ...
ನೆನಪುಗಳು ಸಿಹಿ ಎಂದವರು
ಬೆಚ್ಚಿ
ತಾಯತ ಕಟ್ಟಿಸಿಕೊಳ್ಳುವ ಹಾಗೆ

ಎದೆಯ ಗಾಯಕ್ಕೆ
ಅಕ್ಷರಗಳ ಮುಲಾಮು ಹಚ್ಚಿ ನೋಡುತ್ತೇನೆ
ಚಣದಲ್ಲೇ ಕೀವುದುಂಬಿ
ರಣಗೊಂಡು
ಒಡೆದು ಉದರಕ್ಕೂ ಹರಿಯುತ್ತದೆ.
ಕರುಳಿನಾಳಕ್ಕೆ ಇಳಿದು
ಕಿವುಚಿ ಕಿವುಚಿ ಹುಣ್ಣಾಗಿಸುತ್ತದೆ.

ಈ ಗಾಯ ಮಾಯದ
ಕಾಯ–ಕಾಯಿ ಕಸಕಟ್ಟೆ
ನಸುರು ನಸುರಾಗಿ
ಸತ್ತ ನಾಯಿಯ ನೆನಪು...

ಗಾಯದ ನೆನಪು ಸರಿ
ನೆನಪೇ ಗಾಯವಾದರೆ....

ಇಲ್ಲೊಂದು ಹೂ ಅರಳಿಸುವ
ಕನಸು ಕಂಡಿದ್ದೇ ತಪ್ಪೇ..?
ನೆನಪಿನಿಂದ ಕನಸಿಗೂ.. ಹರಿವ
ಸೋಜಿಗವೇನಿದು
ಗಾಯಗಾರುಡಿ....

ಅಕ್ಷರಕ್ಷರಕ್ಕೂ ಗಾಯದ ನಸುರು ಮೆತ್ತಿ
ಮತ್ತೆ ಎದೆಯೊಳಗೇ
ಗಾಯ ಚಿಗುರಿ.. ಹೊರಗೂ
ಕಾಣುವಂತೆ ರಾಜಾರೋಷ.. ನೆನಪಿನ ಪಾಶ
ಕೇಶಕಪ್ಪಿನ ಶೇಷ... ಶ–ಸ, ಸ–ಶ..

ಅಯ್ಯಯ್ಯೋ
ಬದುಕೇ ಬೇಡವೆನಿಸಿ
ಅರಚುತ್ತೇನೆ
ಆ ಅರಚು ಹಾಡಾಗಿ ಬೀಳುತ್ತವೆ
ಚಪ್ಪಾಳೆ.. ಛಟಿ..ಛಟಿ...

ಆ ಸದ್ದು ಸಾವಿನದ್ದೆಂದು
ಭಯಗೊಂಡು ಅದರಾಚೆಗೆ
ಕಿವಿಗೊಡುತ್ತೇನೆ...

ಅಲ್ಲಿ
ಯಾರೋ..
'ಅಳುವ– ಹಾಡುವ ಸದ್ದು...'

ಯಾರದಾದರೂ ಆಗಲಿ, ಸಾವು ಸೂತಕವೇ..

■ ಡಾ. ಎಚ್.ಎಸ್. ಅನುಪಮಾ

ಅಜ್ಮಲ್ ಕಸಬ್ ಮರಣದಂಡನೆಗೆ ಇಡೀ ದೇಶವೇ ಸಂಭ್ರಮಿಸುತ್ತಿದೆಯೆಂಬ ವರದಿ ಬರುತ್ತಿರುವಾಗ ಏಕೋ ಮನಸ್ಸು ಖಿನ್ನವಾಗುತ್ತಿದೆ. ರಕ್ಷಣಾ ವ್ಯವಸ್ಥೆಯ ದಕ್ಷ ಅಧಿಕಾರಿಗಳನ್ನೂ ಸೇರಿಸಿ ನೂರಾರು ಜನರನ್ನು ಬಲಿ ತೆಗೆದುಕೊಂಡ ಮುಂಬಯಿ ಬಾಂಬ್ ದಾಳಿಯಲ್ಲಿ ಸಿಕ್ಕಿಬಿದ್ದ ಏಕೈಕ ವ್ಯಕ್ತಿ ಕಸಬ್ ಆಗಿರಬಹುದು. ಅಂಥ ದಾಳಿಯ ಮೂಲಕ ಜನಸಾಮಾನ್ಯರಲ್ಲಿ ಭಯ, ಅಭದ್ರತೆ ಹುಟ್ಟುಹಾಕಿರಬಹುದು. ಭಾರತ ಭಯೋತ್ಪಾದಕ ಚಟುವಟಿಕೆಗಳನ್ನು ಗಂಭೀರವಾಗಿ ಪರಿಗಣಿಸುವುದೆಂಬ ಸೂಚನೆಯೂ ಈ ಮರಣದಂಡನೆ ಮೂಲಕ ರವಾನೆಯಾಗಿರಬಹುದು. ಅದೆಲ್ಲ ಸರಿಯೇ, ಆದರೆ ಒಂದು ಜೀವಹರಣವನ್ನು ಸಂಭ್ರಮಿಸುವುದಾದರೂ ಹೇಗೆ? ಸಾಯುವುದಕ್ಕೆ ಸಿದ್ಧವಾಗಿಯೇ ಬಂದ ಕಸಬ್‌ಗೆ ಚಿಕಿತ್ಸೆ-ರಕ್ಷಣೆ ಒದಗಿಸಿ, ಐದು ವರ್ಷ ಜೀವಂತವಾಗಿರಿಸಿ ಈಗ ಗಲ್ಲಿಗೇರಿಸಿದ್ದೇವೆ. ಭಯೋತ್ಪಾದನೆ ಮತ್ತು ಭಯೋತ್ಪಾದನೆ ವಿರುದ್ಧ ಸಮರ ಎರಡರಲ್ಲೂ ಕೇವಲ ಪಾತ್ರಧಾರಿಯಾಗಿ ತನ್ನ ಬದುಕನ್ನು ತಾನೇ ನಾಶ ಮಾಡಿಕೊಂಡ ಕಸಬ್ ಹಲವಾರು ವಿಚಾರಗಳ ಕುರಿತು ಯೋಚನೆಗೆ ಹಚ್ಚುತ್ತಾನೆ.

ಕಸಬ್ ಮತ್ತು ಅಫ್ಜಲ್ ಗುರು ತರಹದ ವ್ಯಕ್ತಿಗಳು ಸ್ವರ್ಗ ಇಳಿಸಿ ತರುವ ಉದ್ದೇಶ ಹೊತ್ತು ಜೀವ ತೆರಲು ಸಿದ್ಧವಾಗಿರಬಹುದು. ಆದರೆ ಅವರು ಈ ಸರ್ವಧರ್ಮಗಳ ನಾಡಿನಲ್ಲಿ ಎಲ್ಲ ಮುಸ್ಲಿಮರಿಗೂ ನೀಡಿರುವುದು ಶಂಕಿತ ಬದುಕಿನ ಕೊಡುಗೆ ಹಾಗೂ ಪರದಾ ಒಳಗೆ ನಲುಗುತ್ತಿರುವ ಮುಸ್ಲಿಂ ಅಮ್ಮಂದಿರಿಗೆ ಪುತ್ರ ವಿಯೋಗದ ದುಃಖ. ರದ್ದಿ ಕೊಳ್ಳುವ, ಹಣ್ಣು ಮಾರುವ, ಕಲಾಯಿ ಹಾಕುವ, ಸೈಕಲ್ ಶಾಪು ನಡೆಸುವ – ಹೀಗೆ ಅತಿ ಕಡಿಮೆ ಆದಾಯ ತರುವ, ಯಾರೂ ಮಾಡದ ಸಣ್ಣಪುಟ್ಟ ಕೆಲಸ ಮಾಡುತ್ತ; ತಮ್ಮ ಮಕ್ಕಳನ್ನೂ ಕಠಿಣ ಶ್ರಮದ ಕೆಲಸಗಳಿಗೆ ಕಳಿಸುತ್ತ ಹೊಟ್ಟೆ ತುಂಬಿಸಿಕೊಳ್ಳುವ ಭಾರತದ ಕೋಟ್ಯಂತರ ಬಡ ಮುಸ್ಲಿಮರ ಬದುಕನ್ನು ದುರ್ಭರಗೊಳಿಸಿದವರು ಜಿಹಾದಿಗಳು. ಹೀಗಿರುತ್ತ ಸೂತ್ರಧಾರ ವ್ಯವಸ್ಥೆಯನ್ನು ಬದಲಿಸಲಾಗದೇ ಕೇವಲ ಕಸಬ್, ಗುರು ಅವರಂಥವರನ್ನು ಗಲ್ಲಿಗೇರಿಸಿ ನಾವಿನ್ನು ಸುರಕ್ಷಿತವೆಂದು, ದುಷ್ಟರನ್ನು ಶಿಕ್ಷಿಸಿದೆವೆಂದು ಸಂಭ್ರಮಿಸಿ ಸುಮ್ಮನಿರಬಹುದೆ?

ಗಲ್ಲುಶಿಕ್ಷೆಯ ಸುದ್ದಿ ಸಿಕ್ಕ ಸಮಯದಲ್ಲಿ ಮರಣ ದಂಡನೆ ಬೇಕೇ ಬೇಡವೇ ಎಂಬ ಆನ್‌ಲೈನ್ ವೋಟಿಂಗ್ ನಡೆಯಿತು. 17% ಜನ ಬೇಡವೆಂದು ಮತ ಹಾಕಿದ್ದರೆ 80% ಬೇಕು ಎಂದು ಹೇಳಿದ್ದರು. ತಪ್ಪಿತಸ್ಥನನ್ನು ಶಿಕ್ಷಿಸುವ ಉನ್ಮಾದ ಯುದ್ಧೋನ್ಮಾದದ ಹಾಗೆ. ಈ ಉನ್ಮಾದವೇ ಅವನೊಬ್ಬನನ್ನು ಗಲ್ಲಿಗೇರಿಸಿದರೆ ಭಯೋತ್ಪಾದನೆಯೇ ನಿಂತುಹೋದ ಹಾಗೆ ಎಂದು ಜನ ಭಾವಿಸುವಂತೆ ಮಾಡುತ್ತದೆ. ಕಸಬ್ ರಕ್ಷಣೆಗಾಗಿ ಖರ್ಚು ಮಾಡಿದ ಕೋಟ್ಯಂತರ ರೂಪಾಯಿ ವೆಚ್ಚ ಕುರಿತು ಎಲ್ಲರ ಬಾಯಲ್ಲೂ ಮಾತು. ಅಷ್ಟೊಂದು ಖರ್ಚು ಏತಕ್ಕಾಯಿತು? ಕೋಟ್ಯಂತರ ಮಕ್ಕಳು ಅಪೌಷ್ಟಿಕತೆ-ಹಸಿವಿನಿಂದ ನಾನಾ ರೋಗರುಜಿನಗಳಿಗೆ ತುತ್ತಾಗುತ್ತಿರುವಾಗ ಭಯೋತ್ಪಾದಕನೊಬ್ಬನ ರಕ್ಷಣೆಗೆ ಕೋಟಿಗಟ್ಟಲೆ ಖರ್ಚು ಮಾಡಿದ್ದರೆ ಅದಕ್ಕೆ ಈ ವ್ಯವಸ್ಥೆ ಕಾರಣವೇ ಹೊರತು ಜೈಲು ಸೇರಿರುವ ಕಸಬನಲ್ಲ. ಅಷ್ಟು ದುಡ್ಡು ಕಸಬ್ ಬಟ್ಟೆಬರೆ, ಊಟತಿಂಡಿಗಾಗಿ ಖರ್ಚಾಯಿತೆ? ಅದನ್ನು ಪಡೆದವರು ಸೆಕ್ಯುರಿಟಿ ಏಜೆನ್ಸಿ ಹೆಸರಿನ ಪೊಲೀಸ್ ಮತ್ತಿತರ ಆಂತರಿಕ ರಕ್ಷಣಾ ವ್ಯವಸ್ಥೆಯವರಲ್ಲವೆ? ಖರ್ಚು ಮಾಡಿದ್ದು ಕಸಬ್‌ನನ್ನು ಜೀವಂತ ಉಳಿಸಿ, ವಿಚಾರಣೆ ನಡೆಸಿ, ಪಾಕಿಸ್ತಾನಕ್ಕೆ ಛೀಮಾರಿ ಹಾಕಬೇಕೆಂಬ ಭಾರತದ ರಾಜಕೀಯ ಹಿತಾಸಕ್ತಿಗಾಗಿ ಅಲ್ಲವೆ? ಹಾಗಿರುವಾಗ ಅದರ ಭಾರ ಕಸಬ್ ತಲೆಯ ಮೇಲೆ ಹೇರುವುದಲ್ಲ.

ಅಪ್ಪನಿಂದ ಒಂದೂವರೆ ಲಕ್ಷ ರೂಪಾಯಿಗೆ ಮಾರಲ್ಪಟ್ಟ ಅತಿ ಬಡ ಕುಟುಂಬದ ಅಜ್ಮಲ್ ಕಸಬ್‌ನಿಗೆ ಜಿಹಾದ್ ಅರ್ಥ ಗೊತ್ತಿರಲಿಲ್ಲ. ದುಡ್ಡಿಗಾಗೇ ಭಾರತಕ್ಕೆ ಬಂದಿದ್ದ. ಹಸಿವಿನಿಂದ ಮಿಠಾಯಿ ಅಂಗಡಿಯಲ್ಲಿ ಕಳ್ಳತನ ಶುರುಮಾಡಿ ಕರುಣೆಯಿಲ್ಲದ ಅಪರಾಧ ಜಗತ್ತಿಗೆ ಕಾಲಿಟ್ಟವನು ಅವನು. ನಂತರ ಅವರಿವರ ಕಿಸೆ ಎಗರಿಸುವುದು, ಕಳ್ಳತನ ಧಂದೆಯಾಗಿತ್ತು. ಕರಾಚಿಯ ಶಸ್ತ್ರಾಸ್ತ್ರ ಎಕ್ಸಿಬಿಷನ್‌ನಲ್ಲಿ ಆಸೆಯ ಕಂಗಳಿಂದ ಪಿಸ್ತೂಲು-ಬಂದೂಕುಗಳನ್ನು ನೋಡುತ್ತ, ಕೊಳ್ಳಲು ದುಡ್ಡಿರದಿದ್ದುದಕ್ಕಾಗಿ ಪರಿತಪಿಸುತ್ತ, ಎಗರಿಸಬಹುದೇ ಎಂದು ಸಂಚು ಹಾಕುತ್ತಿದ್ದವ ಬಿದ್ದದ್ದು ಲಷ್ಕರೆ ತೊಯ್ಬಾ ಕಣ್ಣಿಗೆ. ಅವನನ್ನು ತಮ್ಮ ಜೊತೆಗೊಯ್ದವರು ಉಣಿಸಿ, ತಿನಿಸಿ, ಧಾರ್ಮಿಕ ಪಠಣ ಕಲಿಸಿ, ಐದು ಲಕ್ಷ ರೂಪಾಯಿ ಮತ್ತು ಸತ್ತ ಮೇಲಿನ ಸ್ವರ್ಗದ ಆಸೆಗೆ ಇನ್ನಿತರ 9 ಜನರೊಡನೆ ಭಾರತಕ್ಕೆ ಕಳಿಸಿದರು. ದುಡ್ಡು ಕೊಡುವುದಾದರೆ ಪಾಕಿಸ್ತಾನದ ಮೇಲೆ ಬೇಕಾದರೂ ದಾಳಿ ನಡೆಸಲು ಸಿದ್ಧನಿದ್ದ ಹುಂಬ ಕಸಬ್‌ನ ಮುಂದಿನ ಕತೆ ಏನಾಯಿತು ಎನ್ನುವುದು ಎಲ್ಲರಿಗೂ ಗೊತ್ತಿರುವುದೇ.

ಬದುಕು ಕೆಲವರ ಪಾಲಿಗೆ ಕಠೋರವಾಗುತ್ತದೆ; ಕೆಲವರಿಗೆ ದುರ್ಗಮವಾಗಿ ಉಳಿದುಬಿಡುತ್ತದೆ.

'ಅಮ್ಮಿಗೆ ವಿಷಯ ತಿಳಿಸಿ' ಎನ್ನುವುದು ಬಿಟ್ಟರೆ ಕೊನೆ ಆಸೆಯೊಂದೂ ಇಲ್ಲದೇ ಗಲ್ಲಿಗೇರಿದ ಕಸಬ್ ನೆನೆದರೆ ಪ್ರತಿ ಅಮ್ಮನಿಗೂ ಸಂಕಟವಾಗದೇ ಇರದು. ಜೈಲಿನಲ್ಲಿದ್ದಷ್ಟು ದಿನವೂ ತನ್ನ ತಾಯಿಯನ್ನು ಬಿಟ್ಟರೆ ಮತ್ತ್ಯಾರನ್ನೂ ನೆನಪಿಸಿಕೊಂಡಿರಲಿಲ್ಲ ಅವನು. ಆ ತಾಯಿಗಾದರೂ ತನ್ನ ಮಗ ಎಲ್ಲಿ ಹೋದ? ಏಕೆ ದೇಶ ಬಿಟ್ಟು ಹೋದ ಎಂದು ತಿಳಿದಿತ್ತೆ? ತಿಳಿದಿದ್ದರೆ ಎಲ್ಲ ತಾಯಿಯರಂತೆಯೇ ಬುದ್ಧಿ ಹೇಳದೇ ಇರುತ್ತಿದ್ದಳೆ? ಅವಳ ಇಂದಿನ ಬೇಗುದಿಯೇನೋ? ಆ ಅಸಹಾಯಕತೆಗೆ ಉತ್ತರವೇನೋ?

ಗಲ್ಲಿಗೇರುವ ಮುನ್ನ ಪ್ರಾರ್ಥನೆ ಸಲ್ಲಿಸಿ, ಮೌನವಾಗಿದ್ದರೂ ಅಧೀರನಾಗಿದ್ದುದು ಅವನ ಚಹರೆಯಿಂದ ತಿಳಿದುಬರುತ್ತಿತ್ತೆಂದು ಜೈಲು ಅಧಿಕಾರಿಗಳು ಹೇಳಿದ್ದಾರೆ. ನವೆಂಬರ್ 21, ಬೆಳಿಗ್ಗೆ ಏಳೂವರೆಗೆ ಗಲ್ಲಿಗೇರಿದ ಅವನಿಗೆ ಗಲ್ಲುಶಿಕ್ಷೆ ನಿಶ್ಚಿತವಾದ ಸುದ್ದಿ ತಿಳಿದಿದ್ದು 10 ದಿನ ಮೊದಲು. ಶಿಕ್ಷೆಗೆ ಎರಡು ದಿನ ಮೊದಲು ಮುಂಬೈ ಜೈಲಿನಿಂದ ಪುಣೆಯ ಯರವಾಡಾ ಜೈಲಿಗೆ ಸ್ಥಳಾಂತರಿಸಲಾಗಿತ್ತು. ಯರವಾಡಾ ಜೈಲು ಭಾರತೀಯರ ಭಾವಕೋಶದಲ್ಲಿ ಬೇರೆಬೇರೆ ಕಾರಣಗಳಿಗೆ ನೆನಪಿನಲ್ಲುಳಿದಿದೆ. ಈಗದಕ್ಕೆ ಒಂದು ಸಾವಿನ ಸೂತಕವೂ ಸೇರಿಕೊಂಡಿದೆ. ಭಾರತ ದೂತವಾಸದ ಅಧಿಕಾರಿಗಳು ಕೇಳಿದಾಗಲೂ ಅವನ ಮೃತದೇಹ ಬೇಕೆಂದು ಪಾಕಿಸ್ತಾನ ಸರ್ಕಾರ ಹೇಳದಿದ್ದ ಕಾರಣ ಅವನನ್ನು ಯರವಾಡಾ ಜೈಲಿನಲ್ಲೇ ಹೂಳಲಾಯಿತು.

ಈ ಸಾವಿಗೆ ಪ್ರತಿಕ್ರಿಯಿಸಿ ಅವನ ದೇಹವನ್ನು ಕುಟುಂಬದವರಿಗೆ ಕೊಡಬೇಕೆಂದು ತಾಲಿಬಾನ್ ಒತ್ತಾಯಿಸಿದೆ. ಕಸಬ್‌ನನ್ನು ತಮ್ಮ ಹೀರೋ ಎಂದು ಪರಿಗಣಿಸುವುದಾಗಿ ಅವರು ಹೇಳಿದ್ದು ಮತ್ತಷ್ಟು ಎಳೆಯರನ್ನು ಧರ್ಮದ ಹೆಸರಿನಲ್ಲಿ ದಾರಿ ತಪ್ಪಿಸುವ ಸಾಧ್ಯತೆಯಿದೆ. ಆದರೆ ಜಗತ್ತಿನ ಎರಡನೇ ಅತಿ ದೊಡ್ಡ ಧರ್ಮ ಇಸ್ಲಾಂ ನಿಜ ಇಸ್ಲಾಮಿನ ಮುಖವನ್ನು ಉಳಿದ ಜಗತ್ತಿಗೆ ಪರಿಚಯಿಸಿಕೊಡುವ ಅಗತ್ಯ ತುರ್ತಾಗಿ ಆಗಬೇಕಿದೆ. ಇಲ್ಲದಿದ್ದರೆ ತಾಲಿಬಾನ್, ಲಷ್ಕರೆ ತೊಯ್ಬಾ, ಮುಜಾಹಿದೀನ್, ಪಿಎಲ್‌ಎಫ್‌ನಂತಹ ತೀವ್ರಗಾಮಿ ಜಿಹಾದಿ ಗುಂಪುಗಳನ್ನು ಇಸ್ಲಾಂ ಉತ್ತೇಜಿಸುತ್ತದೆ ಎಂಬ ಅಪಪ್ರಚಾರದಿಂದ ಮುಕ್ತವಾಗುವುದು ಕಷ್ಟವಾಗುತ್ತದೆ.

ಸಾವು ಪಾಠವಾಗುವುದಾದರೆ ಐರ್ಲೆಂಡಿನಲ್ಲಿ ಸಂಭವಿಸಿದ ಸವಿತಾ ಹಾಲಪ್ಪನವರ್ ಸಾವು ಅಲ್ಲಿ ಪ್ರಜನನ ಹಕ್ಕು ಕಾನೂನನ್ನು ಬದಲಿಸಲು ಸಂಭವಿಸಿತೆಂದೇ ದಾಖಲಾಗಲಿ. ಹಾಗೇ ಚರಿತ್ರೆಯಿಂದ ಯಾರಂತೆ ಆಗಬಾರದೆಂಬ ನೇತ್ಯಾತ್ಮಕ ಉದಾಹರಣೆಯಾಗಿ ಕಸಬ್ ಸಾವು ಎಳೆಯರನ್ನು ಧಾರ್ಮಿಕ ಮೂಲಭೂತವಾದದ ಸೆಳೆತದಿಂದ ಪಾರುಮಾಡಲಿ.

ಈಗೆರಡು ವರ್ಷ ಕೆಳಗೆ ಕಸಬ್ ಕುರಿತು ಬರೆದ ನನ್ನ ಪ್ರಕಟಿತ ಕವಿತೆಯೊಂದಿಗೆ ಅವನಿಗೆ ವಿದಾಯ..

ಕಸಬ್ ಮತ್ತು ಅಫ್ಜಲ್ ಗುರು ತರಹದ ವ್ಯಕ್ತಿಗಳು ಸ್ವರ್ಗ ಇಳಿಸಿ ತರುವ ಉದ್ದೇಶ ಹೊತ್ತು ಜೀವ ತೆರಲು ಸಿದ್ಧವಾಗಿರಬಹುದು. ಆದರೆ ಅವರು ಈ ಸರ್ವಧರ್ಮಗಳ ನಾಡಿನಲ್ಲಿ ಎಲ್ಲ ಮುಸ್ಲಿಮರಿಗೂ ನೀಡಿರುವುದು ಶಂಕಿತ ಬದುಕಿನ ಕೊಡುಗೆ ಹಾಗೂ ಪರದಾ ಒಳಗೆ ನಲುಗುತ್ತಿರುವ ಮುಸ್ಲಿಂ ಅಮ್ಮಂದಿರಿಗೆ ಪುತ್ರ ವಿಯೋಗದ ದುಃಖ. ರದ್ದಿ ಕೊಳ್ಳುವ, ಹಣ್ಣು ಮಾರುವ, ಕಲಾಯಿ ಹಾಕುವ, ಸೈಕಲ್ ಶಾಪು ನಡೆಸುವ – ಹೀಗೆ ಅತಿ ಕಡಿಮೆ ಆದಾಯ ತರುವ, ಯಾರೂ ಮಾಡದ ಸಣ್ಣಪುಟ್ಟ ಕೆಲಸ ಮಾಡುತ್ತ; ತಮ್ಮ ಮಕ್ಕಳನ್ನೂ ಕಠಿಣ ಶ್ರಮದ ಕೆಲಸಗಳಿಗೆ ಕಳಿಸುತ್ತ ಹೊಟ್ಟೆ ತುಂಬಿಸಿಕೊಳ್ಳುವ ಭಾರತದ ಕೋಟ್ಯಂತರ ಬಡ ಮುಸ್ಲಿಮರ ಬದುಕನ್ನು ದುರ್ಭರಗೊಳಿಸಿದವರು ಜಿಹಾದಿಗಳು. ಹೀಗಿರುತ್ತ ಸೂತ್ರಧಾರ ವ್ಯವಸ್ಥೆಯನ್ನು ಬದಲಿಸಲಾಗದೇ ಕೇವಲ ಕಸಬ್, ಗುರು ಅವರಂಥವರನ್ನು ಗಲ್ಲಿಗೇರಿಸಿ ನಾವಿನ್ನು ಸುರಕ್ಷಿತವೆಂದು, ದುಷ್ಟರನ್ನು ಶಿಕ್ಷಿಸಿದೆವೆಂದು ಸಂಭ್ರಮಿಸಿ ಸುಮ್ಮನಿರಬಹುದೆ?

ಅದಕ್ಕೂ ಮುನ್ನ..

ಗಲ್ಲುಶಿಕ್ಷೆಯ ನೇಣು
ಕಣ್ಣೆದುರು ತೂಗುತ್ತಿರುವಾಗಲೂ
ಮನಬಿಚ್ಚಿ ಅಳಲಾರದ
ಅಜ್ಮಲ್ ಕಸಬ್ ಎಂಬ
ಚಂಚಲ ಉಡಾಫೆ ಕಣ್ಣುಗಳ ಹುಡುಗ
ಸತ್ತ ಮೇಲಿನ ಸ್ವರ್ಗದಾಸೆಗೆ
ಸೊಂಟಕ್ಕೆ ಬಾಂಬು ಕಟ್ಟಿಕೊಂಡ
ನಂಬರ್ ವನ್ ಭಯೋತ್ಪಾದಕ..

ಅದಕ್ಕೂ ಮುನ್ನ
ಲಕ್ಷಗಳ ಕನವರಿಕೆಯಲ್ಲಿ
ಅಮ್ಮಿಗೂ ತನ್ನ ಜೊತೆ
ಸ್ವರ್ಗದಲ್ಲೊಂದು ಸೀಟು ಕಾದಿರಿಸಿ
ಧರ್ಮಾರ್ಥ ಚಿಂತಿಸುತ್ತಿದ್ದ
ಭಾವೀ ಭಯೋತ್ಪಾದಕ..

ಅದಕ್ಕೂ ಮುನ್ನ
ಯಾರದೋ ದ್ವೇಷದ ಬೆಂಕಿಗೆ
ಮತ್ಯಾರದೋ ಕೈಕಾಲು ಮುರಿದು
ಹಲವು ಸಾವಿರ ಗಳಿಸಿದ್ದ
ಕ್ರಿಮಿನಲ್..

ಅದಕ್ಕೂ ಮುನ್ನ
ಪುಡಿಕಾಸಿಗೆ ಅವರಿವರ ಪರ್ಸು ಎಗರಿಸಿ
ಸ್ಲೇಟು ಹಿಡಿದು ಪಟ ತೆಗೆಸಿಕೊಂಡ
ಆರ್ಡಿನರಿ ಕಿಸೆಗಳ್ಳ..

ಅದಕ್ಕೂ ಮುನ್ನ
ಕಾಸಿಲ್ಲದೇ ಕೆಲಸವಿಲ್ಲದೇ
ಗುರಿಯಿಲ್ಲದೇ ನೆಲೆಯಿಲ್ಲದೇ
ಬರಿಗೈಲಿ ಅಂಡಲೆದ
ಹಸಿದ ಪುಂಡಪೋಕರಿ..

ಅದಕ್ಕೂ ಮುನ್ನ
ಮದರಸಾದ ಮೂಲೆಯಲಿ
ನೆಲಕಚ್ಚಿ ಕುಳಿತು
ಅಲಿಫ್ ಬೆ ಪೆ ತಿದ್ದಿದ
ಎಳೆಯ ಪೋರ..

ಅದಕ್ಕೂ ಮುನ್ನ
ಅಮ್ಮಿಯ ದುಪಟ್ಟಾದ ಮರೆಯಲ್ಲವಿತು
ಬಿಸಿಲ ಕೋಲಿನ ಜಾಡ ಹಿಡಿದು
ಆಕಾಶ ದೀಪ ನೋಡಿದವ..
ಅವಳ ಮಡಿಲೊಳಾಡಿದ ಕೂಸು..
ಅವಳು ಸಹಿಸಿದ ಬೇನೆಯ ನೋವು..
ಅವಳ ಭವಿಷ್ಯದ ಕನಸು
ಮೊಳೆಯಲು ಕಾದಿದ್ದ ಒಡಲ ಬೀಜ...

ಒಂದೇ ಆಸೆ
ಈ ಕಸಾಬ್‌ನನ್ನೊಮ್ಮೆ ಹೆರಬೇಕು
ಬೆಚ್ಚಗಿನ ಮೊಲೆವಾಲು ಕುಡಿಸಿ
ಮಗನೇ ಹಾಗಲ್ಲ ಹೀಗೆಂದು
ಕಿವಿ ಹಿಂಡಿ ಹೇಳುವ
ಅಮ್ಮನಾಗಬೇಕು..

* * * * *

ಸಾವು ನಮಗೆ ಪಾಠ ಕಲಿಸುವುದಾದರೆ ಕಸಬ್ ಸಾವು ಎಳೆಯರು ಯಾವ ದಾರಿ ಹಿಡಿಯಬಾರದೆಂದು ತೋರಿಸುವ ಪ್ರತೀಕವಾಗಲಿ. ■

ಮುಸ್ಲಿಂ ರಾಜಕಾರಣದ ಅಧ್ವಾನಗಳು ಮತ್ತು ಪೌರ ರಾಜಕೀಯದ ವಾಗ್ದಾನಗಳು

■ ಮಹಮ್ಮದ್ ಮುಸ್ತಫಾ ಆತೂರು

> ಕಳೆದ 20 ವರ್ಷಗಳಲ್ಲಿ ಮುಸ್ಲಿಂ ಸಮುದಾಯ ರಾಜಕೀಯದಲ್ಲಿ ಪಾಲ್ಗೊಳ್ಳುತ್ತಿರುವ ರೀತಿ ಬಹಳಷ್ಟು ಭಿನ್ನವಾಗಿದೆ. ಮುಸ್ಲಿಮರಲ್ಲಿ ತುಳಿತಕ್ಕೊಳಗಾಗಿರುವ ವರ್ಗದ ಸಮಾನತೆಗಾಗಿ ನಡೆಸುತ್ತಿರುವ ಹೋರಾಟದಲ್ಲಿ ಸಾಂಪ್ರದಾಯಿಕವಾಗಿ ನೇತೃತ್ವ ನೀಡುತ್ತಿದ್ದ ಗಣ್ಯ ವರ್ಗದಿಂದ ದೂರ ಸರಿಯುತ್ತಿದೆ. ಜನಸಾಮಾನ್ಯರಾದ ಮುಸ್ಲಿಂ ಸಮುದಾಯ ಮತ್ತು ಸ್ಥಾಪಿತ ಶ್ರೀಮಂತ ವರ್ಗವೆಂದು ವಿಭಜನೆಗೊಂಡಿದೆ. ಸಾಮಾಜಿಕವಾಗಿ ತುಳಿತಕ್ಕೊಳಗಾಗಿರುವ ಇತರ ಅಂಚಿನ ಸಮುದಾಯಗಳ ಜೊತೆ ಮೈತ್ರಿಯನ್ನು ಹೊಂದಲು ಶ್ರಮಿಸುತ್ತಿದ್ದಾರೆ. ಈ ಕಾರಣದಿಂದಲೇ ಉತ್ತರ ಭಾರತದಲ್ಲಿ ತುಳಿತಕ್ಕೊಳಗಾದವರನ್ನು ಪ್ರತಿನಿಧಿಸುವ ವಿವಿಧ ಪಕ್ಷಗಳಿಗೆ ತಮ್ಮ ಬೆಂಬಲವನ್ನು ನೀಡುತ್ತಾ ಬಂದಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಮುಸ್ಲಿಂ ಸಮುದಾಯದಲ್ಲಿ ವಿಶೇಷವಾದ ಬದಲಾವಣೆಯ ಅಲೆ ಏಳುತ್ತಿದೆ. ಡಿಸೆಂಬರ್-2006ರಲ್ಲಿ ಸಾಚಾರ್ ವರದಿ ಸರ್ಕಾರಕ್ಕೆ ಸಲ್ಲಿಕೆಯಾದಂದಿನಿಂದ ಭಾರತೀಯ ಮುಸ್ಲಿಮರ ಸಕಾರಾತ್ಮಕ ರಾಜಕೀಯ ಬೇಡಿಕೆಗಳಿಗೆ ಸ್ಪಷ್ಟ ರೂಪ ಕೊಡುತ್ತಿದೆ. ಇದು ಬಹಳ ಮುಖ್ಯವಾಗಿ ಪೌರರಾಗಿ ಒಳಗೊಳ್ಳುವ ರಾಜಕೀಯ ಅಥವಾ 'ಪೌರ ರಾಜಕೀಯ' ಎಂದು ಕರೆಯಲ್ಪಡುತ್ತಿದೆ. ಪೌರರಾಜಕೀಯ ಎಲ್ಲಾ ಬಗೆಯ ತಾರತಮ್ಯಗಳನ್ನು ಮೆಟ್ಟಿನಿಂತು ಸಮಾನ ಸಾಮಾಜಿಕ ಆಶೋತ್ತರಗಳ ಕಡೆಗೆ ಕೊಂಡೊಯ್ಯುತ್ತದೆ.

ಹಿಂದುಳಿದ ಮತ್ತು ತುಳಿತಕ್ಕೊಳಗಾಗಿರುವ ಸಮುದಾಯಗಳು ಇಂದು ಸಮಾನ ಸಾಮಾಜಿಕ ವ್ಯವಸ್ಥೆಗಾಗಿ ಮುಂಚೂಣಿಯ ಹೋರಾಟದಲ್ಲಿರುವುದು ಕಂಡು ಬರುತ್ತದೆ. ಕಳೆದ 15-20 ವರ್ಷಗಳಲ್ಲಿ ಪ್ರಜಾಸತ್ತಾತ್ಮಕ ರಾಜಕೀಯ ಸಮುದಾಯಗಳ ಮುಂದಿರುವ ಸವಾಲುಗಳು ಹೊಸ ಆಯಾಮವನ್ನು ಪಡೆದುಕೊಳ್ಳುತ್ತಿವೆ.

ಕಾರ್ಲ್‌ಮಾರ್ಕ್ಸ್ ವರಸೆಯಲ್ಲಿ ಹೇಳುವುದಾದರೆ ಆಧುನಿಕ ಶ್ರಮಿಕ ವರ್ಗವಲ್ಲದೆ, ಭಾರತದಲ್ಲಿ ದಲಿತರು, ಹಿಂದುಳಿದ ವರ್ಗ ಮತ್ತು ಈ ವರ್ಗಗಳಿಗೆ ಸೇರಿದ ಮಹಿಳೆಯರನ್ನೊಳಗೊಂಡ ಆಳಿಸಿಕೊಳ್ಳುವ ವರ್ಗವಿದೆ. ಈ ಗುಂಪುಗಳಿಗೆ ಸೇರಿದ ಎಲ್ಲರೂ ಬಂಡವಾಳಶಾಹಿಪೂರ್ವ ಅರ್ಥಿಕ ವ್ಯವಸ್ಥೆಯಲ್ಲಿ ಪ್ರತ್ಯಕ್ಷ ಉತ್ಪಾದಕರಾಗಿದ್ದರು. ಗೃಹ ಮತ್ತು ಕೃಷಿ ಉತ್ಪಾದನೆಗಳಲ್ಲಿ ಹಾಗೂ ಕುಟುಂಬದ ಆರ್ಥಿಕ ಅಭಿವೃದ್ಧಿಗೆ ನೆರವಾಗುವ ಜೊತೆಗೆ ಒಟ್ಟು ಆರ್ಥಿಕ ವ್ಯವಸ್ಥೆಯ ಅಭಿವೃದ್ಧಿಗೂ ಮಹಿಳೆಯರು

ತಮ್ಮ ಕೊಡುಗೆಗಳನ್ನು ನೀಡಿದ್ದಾರೆ. ಉತ್ಪಾದನಾ ಶಕ್ತಿಗಳ ಅಭಿವೃದ್ಧಿಯ ಮಟ್ಟದಲ್ಲಿ ಮಹಿಳೆಯರು ಹೆಚ್ಚು ಪರಿಣತಿಯನ್ನು ಹೊಂದಿದ್ದು, ಎಲ್ಲಾ ಕ್ಷೇತ್ರಗಳಲ್ಲಿ ಪುರುಷರಿಗೆ ಸರಿಸಮಾನವಾಗಿ ಹೊರಹೊಮ್ಮುತ್ತಿದ್ದಾರೆ. ಆದರೆ ತುಳಿತಕ್ಕೊಳಗಾದ ಸಮುದಾಯಗಳಲ್ಲಿ ಸಮಾನತೆ ಮತ್ತು ಹಕ್ಕುಗಳಿಗಾಗಿ ನಡೆದ ಹೋರಾಟದಲ್ಲಿ ಮಹಿಳೆಯರನ್ನು ವ್ಯವಸ್ಥಿತವಾಗಿ ಹೊರಗಿಡಲಾಗಿದೆಯೆಂಬ ಅಂಶವನ್ನು ಇಲ್ಲಿ ಗಮನಿಸಬೇಕಾಗುತ್ತದೆ.

ಈಗ ಎಲ್ಲಾ ತುಳಿತಕ್ಕೊಳಗಾದ ಸಮುದಾಯಗಳಿಂದ ಮಧ್ಯಮ ವರ್ಗದ ಸಮಾನತೆಗಾಗಿ ರಾಜಕೀಯ ಹೋರಾಟದ ಪಥವನ್ನು ಹೇಗೆ ಸಿದ್ಧಗೊಳಿಸಬಹುದೆಂಬ ಪ್ರಶ್ನೆ ನಮ್ಮ ಮುಂದಿದೆ. ಈ ಹೋರಾಟ ಎರಡು ಅಂಶಗಳನ್ನು ಒಳಗೊಂಡಿದೆ.

1) ಔಪಚಾರಿಕ ಸಂವಿಧಾನಾತ್ಮಕ ಸಮಾನತೆ–ಅಂದರೆ ಎಲ್ಲರೂ ಸಮಾನರು ಅಂತ ಘೋಷಿಸಿದರೆ ಸಾಕಾಗಿಬಿಡುತ್ತದೆ. ಇದು ಒಂದು ರೀತಿಯಲ್ಲಿ ನಿರ್ಲಿಪ್ತ(Passive)ವಾಗಿದ್ದು ಯಾವುದೇ ರೀತಿಯಲ್ಲಿ ಸ್ಥಿತಿಗತಿಗಳನ್ನು ಬದಲಾಯಿಸಬೇಕಿಲ್ಲ.

2) ಕಾನೂನಾತ್ಮಕ ನ್ಯಾಯಬದ್ಧ ಅಂಗೀಕಾರ ಮತ್ತು ಮಾನ್ಯತೆಗಾಗಿ ಹೋರಾಟ– ಇದು ಪ್ರಕ್ರಿಯೆಯ ಕ್ರಿಯಾಶೀಲ ಭಾಗವಾಗಿದ್ದು, ಕಾನೂನುಬದ್ಧ ಮಾನ್ಯತೆಗಾಗಿನ ಹೋರಾಟದ ಪ್ರಕ್ರಿಯೆಯಲ್ಲಿ ತೊಡಕಾಗಿರುವ ಅಂಶಗಳ ಜೊತೆ ಅರ್ಥಪೂರ್ಣ ಸಂವಾದ ಮತ್ತು ಮುಖಾಮುಖಿಗೆ ಅವಕಾಶವಿರುತ್ತದೆ.

ಕಳೆದ 20 ವರ್ಷಗಳಲ್ಲಿ ಮುಸ್ಲಿಂ ಸಮುದಾಯ ರಾಜಕೀಯದಲ್ಲಿ ಪಾಲ್ಗೊಳ್ಳುತ್ತಿರುವ ರೀತಿ ಬಹಳಷ್ಟು ಭಿನ್ನವಾಗಿದೆ. ಮುಸ್ಲಿಮರಲ್ಲಿ ತುಳಿತಕ್ಕೊಳಗಾಗಿರುವ ವರ್ಗದ ಸಮಾನತೆಗಾಗಿ ನಡೆಸುತ್ತಿರುವ ಹೋರಾಟದಲ್ಲಿ ಸಾಂಪ್ರದಾಯಿಕವಾಗಿ ನೇತೃತ್ವ ನೀಡುತ್ತಿದ್ದ ಗಣ್ಯ ವರ್ಗದಿಂದ ದೂರ ಸರಿಯುತ್ತಿದೆ. ಜನಸಾಮಾನ್ಯರಾದ ಮುಸ್ಲಿಂ ಸಮುದಾಯ ಮತ್ತು ಸ್ಥಾಪಿತ ಶ್ರೀಮಂತ ವರ್ಗವೆಂದು ವಿಭಜನೆಗೊಂಡಿದೆ. ಸಾಮಾಜಿಕವಾಗಿ ತುಳಿತಕ್ಕೊಳಗಾಗಿರುವ ಇತರ ಅಂಚಿನ ಸಮುದಾಯಗಳ ಜೊತೆ ಮೈತ್ರಿಯನ್ನು ಹೊಂದಲು ಶ್ರಮಿಸುತ್ತಿದ್ದಾರೆ. ಈ ಕಾರಣದಿಂದಲೇ ಉತ್ತರ ಭಾರತದಲ್ಲಿ ತುಳಿತಕ್ಕೊಳಗಾದವರನ್ನು ಪ್ರತಿನಿಧಿಸುವ ವಿವಿಧ ಪಕ್ಷಗಳಿಗೆ ತಮ್ಮ ಬೆಂಬಲವನ್ನು ನೀಡುತ್ತಾ ಬಂದಿದ್ದಾರೆ.

1990ರಲ್ಲಿ ಮಂಡಲ್ ಆಯೋಗದ ವರದಿಯನ್ನು ಜಾರಿಗೊಳಿಸಲಾಗುವುದೆಂಬ ಘೋಷಣೆಯ ಹಿನ್ನೆಲೆಯಲ್ಲಿ ಮೇಲ್ವರ್ಗದ ಯುವಕರು ತೋರಿದ ಹಿಂಸಾತ್ಮಕ ಪ್ರತಿರೋಧವನ್ನು ನಾವಿಲ್ಲಿ ಗಮನಿಸಬೇಕಾಗುತ್ತದೆ. ಮಾಧ್ಯಮಗಳು ಮತ್ತು ಆಡಳಿತಾಶಾಹಿ ಈ ಹಿನ್ನೆಲೆಯಲ್ಲಿ ಬಹಳಷ್ಟು ಕೆಲಸ ಮಾಡಿತೆಂಬುದು ಸತ್ಯ.

ರಾಮಜನ್ಮಭೂಮಿ – ಬಾಬರೀ ಮಸೀದಿ ಚಳವಳಿಯ ಸಂದರ್ಭದಲ್ಲಿ ಮತ್ತು ನಂತರದಲ್ಲಿ ಆಗಿರುವ ಬೆಳವಣಿಗೆಗಳು, 2002ರಲ್ಲಿ ನಡೆದ ಗುಜರಾತ್ ಗಲಭೆಗಳು ಹಾಗೂ ಇತರ ಸಮುದಾಯಗಳಲ್ಲಿನ ರಾಜಕೀಯ ನಡೆಯನ್ನು ಹೊರತುಪಡಿಸಿ ಮುಸ್ಲಿಂ ರಾಜಕಾರಣವನ್ನು ಅಧ್ಯಯನ ಮಾಡುವುದು ಅಪೂರ್ಣವೆನಿಸುತ್ತದೆ. ಮಂಡಲ್ ಆಯೋಗದ ವರದಿ ಜಾರಿಗೊಳಿಸುವ ಹಿನ್ನೆಲೆಯಲ್ಲಿ ದಿ. ವಿ.ಪಿ. ಸಿಂಗ್‌ರವರ ಪಾತ್ರ ಮತ್ತು ಬಾಬರೀ ಮಸೀದಿಗಾಗಿ ಪ್ರಧಾನ ಮಂತ್ರಿ ಸ್ಥಾನವನ್ನು ತ್ಯಜಿಸಿದ್ದು, ಮುಸ್ಲಿಮರ ದೃಷ್ಟಿಯಲ್ಲಿ ಅತ್ಯಂತ ದೊಡ್ಡ ತ್ಯಾಗವಾಗಿತ್ತು. ಮುಸ್ಲಿಂ ಸಮುದಾಯದ ಗೌರವ ಮತ್ತು ಘನತೆಯನ್ನು ಎತ್ತಿಹಿಡಿದ ವಿ. ಪಿ. ಸಿಂಗ್ ರವರ ಈ ಸ್ಥೈರ್ಯವನ್ನು ಮುಸ್ಲಿಂ ಸಮುದಾಯ ಕೊಂಡಾಡುತ್ತಿದೆ.

ಕಾಂಗ್ರೆಸ್ ಪಕ್ಷ ಪರಂಪರಾಗತವಾಗಿ ಮುಂದಿಟ್ಟಿದ್ದ ಮುಸ್ಲಿಂ ಸಮುದಾಯದ ರಕ್ಷಣೆಯ ವಿಷಯ ನೇಪಥ್ಯಕ್ಕೆ ಸರಿದು ಘನತೆ ಮತ್ತು ಗೌರವದ ಪ್ರಶ್ನೆ ಮುಂಚೂಣಿಗೆ ಬಂದಿರುವುದನ್ನು ನಾವಿಲ್ಲಿ ಗಮನಿಸಬಹುದಾಗಿದೆ. ಈ ಬೆಳವಣಿಗೆಗಳು ಮುಸ್ಲಿಂ ರಾಜಕಾರಣಕ್ಕೆ ಅಖಿಲ ಭಾರತೀಯ ಆಯಾಮವನ್ನು ನೀಡಿತ್ತು. ಶಿಮ್ಲಾ, ಹೈದರಾಬಾದ್, ಗುಜರಾತ್, ಕೋಲ್ಕತ್ತಾ, ಅಸ್ಸಾಂ, ಮಧ್ಯಪ್ರದೇಶ, ಕರ್ನಾಟಕ ಹೀಗೆ ಸಕಾರಾತ್ಮಕ ರಾಜಕೀಯದ ಕುರಿತಾಗಿ ಮುಸ್ಲಿಮರು ನಡೆಸುತ್ತಿದ್ದ ಚರ್ಚೆಗಳು ಮತ್ತು ಹೊರ ಹೊಮ್ಮುತ್ತಿದ್ದ ಧ್ವನಿಗಳು ಒಂದೇ ರೀತಿಯಾಗಿತ್ತು. ಹಿಂದುತ್ವ ಸಿದ್ಧಾಂತದ ಪ್ರಖರತೆ ಮತ್ತು ಸಾಧುಗಳ ಕೈಯಲ್ಲಿನ ತ್ರಿಶೂಲದ ಹಿನ್ನಲೆಯಲ್ಲಿ ಸೆಕ್ಯೂಲರ್ ಕೂಟಗಳ ಜೊತೆಗೆ ಎಷ್ಟು ಉತ್ತಮ ರೀತಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಬೇಕೆಂಬುದು ಹೆಚ್ಚಿನ ಆಗತ್ಯತೆಯಾಗಿತ್ತು. ಆದರೆ ನಂತರದ ದಶಕದಲ್ಲಿ ಮುಸ್ಲಿಂ ರಾಜಕಾರಣ ಭಿನ್ನ ದಿಕ್ಕಿನಲ್ಲಿ ಚಲಿಸುತ್ತಿದೆ. ಹೈದರಾಬಾದಿನ ಮುಸ್ಲಿಂ ರಾಜಕಾರಣ, ಆಂಧ್ರಪ್ರದೇಶದ ತೆಲಂಗಾಣ ರಾಜಕಾರಣ, ಕೇರಳದ ಮಲಬಾರ್ ರಾಜಕಾರಣದ ಜೊತೆಗೆ ಯಾವ ಸಂಬಂಧವನ್ನು ಹೊಂದಿಲ್ಲ. ಉತ್ತರ ಪ್ರದೇಶ, ಬಿಹಾರ ಮತ್ತು ದಕ್ಷಿಣ ರಾಜ್ಯಗಳಲ್ಲಿರುವ ರಾಜಕಾರಣಕ್ಕೆ ಯಾವುದೇ ಸಾಮ್ಯತೆಗಳಿಲ್ಲ. ಪಶ್ಚಿಮ ಬಂಗಾಳ, ಅಸ್ಸಾಂ ತನ್ನದೇ ಆದ ಮಾದರಿಯನ್ನು ಹೊಂದಿದ್ದು, ಪ್ರಾದೇಶಿಕ ಮಟ್ಟದಲ್ಲಿ ಮುಸ್ಲಿಮರು ವಿಭಿನ್ನ ಸಮಸ್ಯೆಗಳನ್ನು ಎದುರಿಸುತ್ತಿದ್ದು ಈ ಪ್ರದೇಶಗಳಲ್ಲಿನ ಮುಸ್ಲಿಂ ನಾಯಕರ ನಡುವೆ ಸರಿಯಾದ ಸಂವಹನ ಮತ್ತು ಸಂಪರ್ಕದ ಕೊರತೆ ಇದೆ. ಮುಸ್ಲಿಮರು ದೇಶದ ಎಲ್ಲಾ ಭಾಗಗಳಲ್ಲಿ ಅಲ್ಪಸಂಖ್ಯಾತರಾಗಿದ್ದು, ಸ್ವಾತಂತ್ರ್ಯಪೂರ್ವ ಮತ್ತು ನಂತರದಲ್ಲಿ ಇವರು ಸಾಂಸ್ಕೃತಿಕವಾಗಿ ರಾಷ್ಟ್ರೀಯ ಗುಂಪುಗಳ ಜೊತೆಗೆ ಸಮಗ್ರತೆಯನ್ನು ಹೊಂದಿಲ್ಲ.

ಮುಸ್ಲಿಂ ಅಲ್ಪಸಂಖ್ಯಾತರು ತಾನು ಭಾಗವಾಗಿರುವ ರಾಷ್ಟ್ರೀಯತೆಯ ಜೊತೆಗೆ ಹೊಂದಿರುವ ವಿಭಿನ್ನ ಸಂಬಂಧಗಳನ್ನು ಗಣನೆಗೆ ತೆಗೆದುಕೊಳ್ಳುವುದು ಅಗತ್ಯವೆನಿಸುತ್ತದೆ. ಬಂಗಾಳದ ಮುಸ್ಲಿಮರು ಅಲ್ಲಿನ ಹಿಂದೂಗಳ ಜೊತೆ ಹೊಂದಿರುವ ಸಂಬಂಧ, ಕೇರಳ, ತಮಿಳುನಾಡು ಹಾಗೂ ಉತ್ತರ ಪ್ರದೇಶದಲ್ಲಿ ಮುಸ್ಲಿಮರು ಹಿಂದೂಗಳ ಜೊತೆ ಹೊಂದಿರುವ ಸಂಬಂಧಕ್ಕಿಂತ ಭಿನ್ನವಾಗಿರುತ್ತದೆ.

ಮುಸ್ಲಿಮರನ್ನು ಪ್ರತಿನಿಧಿಸುತ್ತಿರುವ ಪ್ರಾದೇಶಿಕ ಮಟ್ಟದಲ್ಲಿರುವ ಪಕ್ಷಗಳು ಕೋಮು ಸ್ವರೂಪವನ್ನು ಹೊಂದಿವೆ. ಮುಸ್ಲಿಂ ಕೋಮು ಸಂಘಟನೆಗಳು ಹಿಂದೂ ಕೋಮುವಾದ ಬಲಿಷ್ಠವಾಗಿಲ್ಲದ ಕಡೆ ಪ್ರಬಲವಾಗಿರುತ್ತಾರೆ. ಹಿಂದುತ್ವ ಶಕ್ತಿಗಳು ಪ್ರಬಲವಾಗಿರುವ ಪ್ರದೇಶಗಳಲ್ಲಿ ಮುಸ್ಲಿಂ ಕೋಮುವಾದ ದುರ್ಬಲವಾಗಿರುತ್ತದೆ. ಅಂದರೆ ಈ ಪ್ರದೇಶಗಳಲ್ಲಿ ಮುಸ್ಲಿಂ ಕೋಮುವಾದಿ ಪ್ರಜ್ಞೆಗಳು ಇಲ್ಲವೆಂದು ಅರ್ಥವಲ್ಲ. ಒಂದು ವಿಧದ ಕೋಮುವಾದ ಇನ್ನೊಂದು ಬಗೆಯ ಕೋಮುವಾದವನ್ನು ಶಕ್ತಿಗೊಳಿಸುತ್ತದೆಂಬುದು ಎಷ್ಟು ಸತ್ಯವೋ ಅದೇ ರೀತಿ ರಾಜಕೀಯ ಪ್ರೇರಿತ ಸೆಕ್ಯೂಲರ್‌ವಾದ ಕೋಮುವಾದವನ್ನು ಗಟ್ಟಿಗೊಳಿಸುತ್ತದೆಂಬುದು ಅಷ್ಟೇ ಸತ್ಯ.

ಮುಸ್ಲಿಂ ಕೋಮುವಾದಕ್ಕೆ ಏಕೀಕೃತ ಅಖಿಲ ಭಾರತೀಯ ಸಿದ್ಧಾಂತವಿರಲಿಲ್ಲ. ರಾಷ್ಟ್ರೀಯ ಸ್ವಯಂ ಸೇವಕ ಸಂಘದಂತಹ ಏಕೀಕೃತ ಸಂಘಟನೆಯೂ ಇರಲಿಲ್ಲ. ಆದರೆ ಇತ್ತೀಚಿನ ವರ್ಷಗಳಲ್ಲಿ ಕೆಲವು ಸಂಘಟನೆಗಳು ಮುಸ್ಲಿಂ ಕೋಮುವಾದದ ಗುತ್ತಿಗೆ ಪಡೆಯಲು ಶ್ರಮಿಸುತ್ತಿರುವುದು ಹೆಚ್ಚು ಆತಂಕಕಾರಿ ಬೆಳವಣಿಗೆಯಾಗಿದೆ. ಮುಸ್ಲಿಂ ಕೋಮುವಾದ ಮತ್ತು ಕೋಮು ಪ್ರಜ್ಞೆ ದೇಶದ ವಿವಿಧ ಪ್ರದೇಶಗಳಲ್ಲಿ ವ್ಯಾಪಕವಾಗಿ ಹರಡಲಿಲ್ಲ. ಬಾಬರೀ ಮಸೀದಿ ಧ್ವಂಸದ ನಂತರ ಕೇಂದ್ರದಲ್ಲಿ ಬಿ.ಜೆ.ಪಿ ಸರಕಾರ ಅಧಿಕಾರದಲ್ಲಿದ್ದಾಗಲೂ ಹೈದರಾಬಾದಿನ ಮಜ್ಲಿಸ್ ಇತ್ತಿಹಾದ್ ಮತ್ತು ಕೇರಳದಲ್ಲಿ ಮುಸ್ಲಿಂ ಲೀಗ್ ಸೆಕ್ಯೂಲರಿಸಂನ್ನು ಬಲಗೊಳಿಸುವುದಕ್ಕೆ ತಮ್ಮ ಬೆಂಬಲ ಸೂಚಿಸಿದ್ದರು. ಇನ್ನು ಧಾರ್ಮಿಕ ಮತ್ತು ಸಾಂಸ್ಕೃತಿಕ ಪ್ರಶ್ನೆಗಳು ಬಂದಾಗ ಮುಸ್ಲಿಮರು ಸಣ್ಣ ಪ್ರಮಾಣದ ಪ್ರಚೋದನೆಯಿಂದಲೂ ಕೆರಳಿ ಬೀದಿಗಿಳಿದು ಪ್ರತಿಭಟಿಸುತ್ತಾರೆಂಬ ತಪ್ಪು ಗ್ರಹಿಕೆಯಿದೆ. ಆದರೆ ಬಾಬರೀ ಮಸೀದಿ ಧ್ವಂಸವಾದಾಗ ಕೇರಳದಲ್ಲಿ ಸಣ್ಣಮಟ್ಟ ಘಟನೆಗಳನ್ನು ಹೊರತುಪಡಿಸಿದರೆ ಇಡೀ ರಾಜ್ಯ ಶಾಂತಿಯುತವಾಗಿತ್ತು.

ಕೇರಳ, ಕರ್ನಾಟಕದ ಮುಸ್ಲಿಮರು ತಮ್ಮ ಆಧ್ಯಾತ್ಮಿಕ ನಾಯಕನೆಂದು ಗೌರವಿಸುತ್ತಿದ್ದ ದಿ॥ ಪಾನಕ್ಕಾಡ್ ಸೈಯದ್ ಮಹಮ್ಮದಲಿ ಶಿಹಾಬ್ ತಂಗಳ್ ಕೇರಳದ ಮುಸ್ಲಿಂ ಲೀಗಿನ ಸಾರಥ್ಯ ವಹಿಸಿದ್ದ.

ಆ ಕಾಲದಲ್ಲಿ ಅವರು ಮುಸ್ಲಿಮರು ಶಾಂತಿ ಮತ್ತು ಸಹನೆಯನ್ನು ಪಾಲಿಸಬೇಕೆಂದು ಕರೆ ನೀಡಿದ್ದರು. ಕೇರಳದಲ್ಲಿ ಕಾಲೇಜು ಉಪನ್ಯಾಸಕರೊಬ್ಬರು ಧರ್ಮನಿಂದನೆ ಎಸಗಿದರೆಂದು ಕೆಲವು ಅವಿವೇಕಿ ಮುಸ್ಲಿಂ ಮತಾಂಧರು ಅವರ ಕೈಕಡಿದಾಗ ಇಡೀ ಮುಸ್ಲಿಂ ಉಲಮಾ ಪಂಡಿತವರ್ಗ ಮತ್ತು ಮುಸ್ಲಿಮರು ಅದನ್ನು ಉಗ್ರವಾಗಿ ಖಂಡಿಸಿ ಇದು ಪ್ರವಾದಿಯವರ ಸಹಿಷ್ಣುತೆ ಮತ್ತು ಮಾನವ ಪ್ರೇಮದ ಮೌಲ್ಯಗಳಿಗೆ ವಿರುದ್ಧವಾದ ಪೈಶಾಚಿಕ ಕೃತ್ಯವೆಂದು ಘೋಷಿಸಿದ್ದರು. ದೇಶದಲ್ಲಿ



ಭಯೋತ್ಪಾದನಾ ದಾಳಿಗಳು ನಡೆದಾಗ ಅವುಗಳನ್ನು ಖಂಡಿಸಿ ದಾರುಲ್ ಉಲೂಂ ನಂತಹ ಮುಸ್ಲಿಂ ಸೆಮಿನರಿಗಳು ಫತ್ವಾ ಹೊರಡಿಸಿ, (ನ ಕಫನ್, ನ ದಫನ್) ಈ ದುರುಳರಿಗೆ ಕಫನ್ ಬಟ್ಟೆ ಮತ್ತು ಧಫನ್ ಮಾಡಲು ಮುಸ್ಲಿಂ ಪ್ರದೇಶಗಳಲ್ಲಿ ಅವಕಾಶ ನೀಡಬಾರದೆಂದು ಹೇಳಿದ್ದನ್ನು ಸ್ಮರಿಸಬಹುದು.

ಒಂದು ಸಮಾನ ವಾಙ್ಮಯದ ಸುತ್ತ ನಡೆಯುವ ಮುಸ್ಲಿಂ ರಾಜಕೀಯ ಏಕೀಕರಣಕ್ಕೆ ಮೂಲ ಪ್ರೇರಣೆಯನ್ನು ಒದಗಿಸುವ ಅಂಶವೆಂದರೆ ನಿರಂತರವಾಗಿ ಕೋಮು ದಂಗೆಗಳು ನಡೆಯುವುದು ಮತ್ತು ಅವರ ವಿರುದ್ಧ ತಾರತಮ್ಯ ನೀತಿ ಅನುಸರಿಸಲಾಗುತ್ತದೆಂಬ ಭಾವನೆಗಳು ದಟ್ಟವಾಗತೊಡಗುವುದು. ಕೋಮು ದಂಗೆಯ ಸಮಾನ ನೋವುಗಳು ಮುಸ್ಲಿಮರನ್ನು ಒಗ್ಗೂಡಿಸಿದರೆ ಆರ್ಥಿಕ ಅಸಮಾನತೆ ಮತ್ತು ಅಸ್ಪೃಶ್ಯತೆ ಆದಿವಾಸಿಗಳ ಮತ್ತು ದಲಿತರನ್ನು ಒಂದುಗೂಡಿಸುತ್ತದೆ.

ಭಾರತೀಯ ಮುಸ್ಲಿಮರನ್ನು ದೇಶದಲ್ಲಿ ಅನ್ಯಗೊಳಿಸುವುದು, ಮುಸ್ಲಿಂ ಬ್ರಾಂಡ್‌ನಲ್ಲಿ ನಡೆಸುವ ಭಯೋತ್ಪಾದನೆ ಹಾಗೂ ಇನ್ನಿತರ ಕ್ರಿಮಿನಲ್ ಕೃತ್ಯಗಳಿಗಾಗಿ ಇಡೀ ಸಮುದಾಯವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ, ದೇಶದ್ರೋಹಿಗಳೆಂದು ಹಣೆಪಟ್ಟಿ ಕಟ್ಟಿ ಅವರ ಸಂವಿಧಾನಾತ್ಮಕ ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ಕಸಿದುಕೊಳ್ಳುವ ಪ್ರಯತ್ನಗಳ ವಿರುದ್ಧ ತೀವ್ರವಾದ ಪ್ರಜಾಸತ್ತಾತ್ಮಕ ಪ್ರಜ್ಞೆಯನ್ನು ಜಾಗೃತಗೊಳಿಸುವ ಸಾಧ್ಯತೆಗಳು ನಿಚ್ಚಳವಾಗಬೇಕಿದೆ. ಇದು ಪೌರ ರಾಜಕೀಯವನ್ನು ಪ್ರತಿನಿಧಿಸಲು ನಾಂದಿಯಾಗುತ್ತದೆ. ಇದು ಮೂರು ಪ್ರಮುಖ ಮೌಲ್ಯಗಳನ್ನು ಒಳಗೊಳ್ಳುತ್ತದೆ. ಸಮಾನತೆ, ಹಕ್ಕುಗಳಿಗೆ ಮಾನ್ಯತೆ, ವಸತಿ, ಶಿಕ್ಷಣ, ಆರೋಗ್ಯ ಉದ್ಯೋಗ ಮತ್ತು ಆದಾಯಗಳಿಗಾಗಿ ಬೇಡಿಕೆಗಳು ಮುಸ್ಲಿಂ ರಾಜಕಾರಣದ ಮುಂಚೂಣಿಯಲ್ಲಿರಬೇಕಾದ ಮತ್ತು ನಮ್ಮ ದೈನಂದಿನ ಬದುಕಿನ ಪ್ರಶ್ನೆಗಳಾಗಿವೆ.

19ನೇ ಶತಮಾನದಲ್ಲಿ ಯುರೋಪಿನಲ್ಲಿ ಇಂತಹ ಬೆಳವಣಿಗೆಗಳು ರಾಜಕೀಯದ ಏಕೀಕರಣದಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದವು. ಈ ನಿಟ್ಟಿನಲ್ಲಿ ಸಾಚಾರ್ ಕಮಿಟಿಯ ವರದಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಮುಸ್ಲಿಮರು ಎಲ್ಲಾ ಬಗೆಯಿಂದಲೂ ವಂಚಿತರಾಗಿರುವುದಕ್ಕೆ ಮತ್ತು ಬಡತನಕ್ಕೆ ಸರಕಾರವನ್ನು ಸಂಪೂರ್ಣವಾಗಿ ದೂಷಿಸುವಂತಿಲ್ಲ. ಯಾಕೆಂದರೆ ಆದಿವಾಸಿ ಮತ್ತು ಬುಡಕಟ್ಟು ಸಮುದಾಯಗಳನ್ನು ಒಕ್ಕಲೆಬ್ಬಿಸುವ ಕಾರಣದಿಂದ ಅವರು ತೀವ್ರವಾದ ಬಡತನಕ್ಕೆ ತುತ್ತಾಗುತ್ತಾರೆ. ಮುಸ್ಲಿಮರೂ ಸೇರಿದಂತೆ ಭಾರತದಲ್ಲಿರುವ ಬಡತನ, ಊಳಿಗಮಾನ್ಯ ಪದ್ಧತಿ ಮತ್ತು ವಸಾಹತುಶಾಹಿಗೆ ಸಂಬಂಧಿಸಿದ ಸಂಕೀರ್ಣ ಅಂಶಗಳ ಸೃಷ್ಟಿಯಾಗಿದೆ. ಚಾರಿತ್ರಿಕವಾಗಿ ಮುಸ್ಲಿಂ ಶ್ರೀಮಂತರು ಮತ್ತು ಆಡಳಿತವರ್ಗ ಸಾಮಾನ್ಯ ಮುಸ್ಲಿಮರನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳಲಿಲ್ಲ. ಮುಸ್ಲಿಂ ಆಳ್ವಿಕೆಯಿದ್ದ ರಾಜ್ಯಗಳಲ್ಲೂ ಸಾಮಾನ್ಯ ಬಡ ಮುಸ್ಲಿಂ ರೈತಾಪಿ ವರ್ಗ ಯಾವುದೇ ಉತ್ತಮ ಸ್ಥಿತಿಗತಿಗಳನ್ನು ಹೊಂದಿರಲಿಲ್ಲ. ಉದಾಹರಣೆಗೆ ತೆಲಂಗಾಣ ಪ್ರದೇಶವನ್ನೇ ತೆಗೆದುಕೊಂಡರೆ 1948ರವರೆಗೆ ನಿಜಾಮರು ಆ ಪ್ರದೇಶವನ್ನು ಆಳಿದ್ದರು. ಆದರೆ ಮುಸ್ಲಿಂ ರೈತಾಪಿ ವರ್ಗದ ಸ್ಥಿತಿ ಬೇರೆ ಭಾಗಗಳಿಗೆ ಹೋಲಿಸಿದರೆ ತೀರಾ ದಯನೀಯವಾಗಿತ್ತು. ಮರಾಠವಾಡದಲ್ಲಿ ನಿಜಾಮರ ಆಳ್ವಿಕೆಯಿದ್ದು, ಅಲ್ಲಿನ ಸ್ಥಿತಿಯೂ ಸಹ ಇದಕ್ಕಿಂತ ಭಿನ್ನವಾಗಿರಲಿಲ್ಲ. ಉತ್ತರ ಪ್ರದೇಶ, ಬಿಹಾರದಲ್ಲಿ ಊಳಿಗಮಾನ್ಯ ಸ್ಥಿರಾಸ್ತಿಗಳು ಮುಸ್ಲಿಂ ಭೂಮಾಲೀಕರ ಕೈಯಲ್ಲಿತ್ತು. ಆದರೆ ಹಿಂದೂ ಭೂ ಮಾಲೀಕರ ಕೈ ಕೆಳಗಿದ್ದ ಮುಸ್ಲಿಂ ರೈತರ ಸ್ಥಿತಿಗಿಂತ ಅವರ ಸ್ಥಿತಿಗತಿಗಳೇನೂ ಚೆನ್ನಾಗಿರಲಿಲ್ಲ.

ಇಂಗ್ಲೆಂಡಿನಲ್ಲಿ ಕೈಗಾರಿಕಾ ಕ್ರಾಂತಿಯ ಫಲವಾಗಿ ಭಾರತದಲ್ಲಿ ಅದರ ತೀಕ್ಷ್ಣ ಪ್ರತ್ಯಾಘಾತಗಳು ಗೋಚರಿಸತೊಡಗಿದವು. ಭಾರತದಲ್ಲಿ ಆಧುನಿಕಪೂರ್ವ ಉತ್ಪಾದನಾ ಘಟಕಗಳಿದ್ದವು. ಮೊಗಲ್ ದೊರೆ ಅಕ್ಬರ್ ಮಕಾಮ್ ಎ-ಕಾರ್ಖಾನಾ (ಕಾರ್ಖಾನೆಗಳ ಇಲಾಖೆಗಳು) ಎಂಬ ಇಲಾಖೆಯನ್ನು ಸ್ಥಾಪಿಸಿದ್ದನು. ಇಲ್ಲಿ ಬಹಳಷ್ಟು ಸಮೃದ್ಧವಾದ ಬಟ್ಟೆ ಗಿರಣಿಗಳಿದ್ದವು. ಹೆಚ್ಚಿನ ಪ್ರಮಾಣದಲ್ಲಿ ಬಂದೂಕು ಮತ್ತು ಶಸ್ತ್ರಾಸ್ತ್ರಗಳ ಉತ್ಪಾದನೆ ನಡೆಯುತ್ತಿತ್ತು. ಒಟ್ಟಿನಲ್ಲಿ ಇವೆಲ್ಲವೂ ಬ್ರಿಟಿಷ್ ಕೈಗಾರಿಕಾ ಉತ್ಪನ್ನಗಳ ಬಲವಂತದ ಆಮದಿನಿಂದ ನಾಶವಾದವು. ಮುಸ್ಲಿಮರು ಸೇರಿದಂತೆ ವಿವಿಧ ಬಗೆಯ ಪರಿಣತರಾದ ವಿಭಿನ್ನ ಸಮುದಾಯಗಳು ಇದರಿಂದ ಸಾಕಷ್ಟು ಬವಣೆಗೊಳಗಾದರು. ಆದರೆ ಈ ಉತ್ಪಾದನಾ ಕ್ಷೇತ್ರಗಳಲ್ಲಿ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗವನ್ನು ಪಡೆದಿರಲಿಲ್ಲ. ಈ ಹಿನ್ನಲೆಯಲ್ಲಿ ಬಡತನದ ಸಂರಚನೆ ಹೇಗೆ ಆಗಿದೆ ಎಂಬುದಕ್ಕೆ ನಾವು ಹೆಚ್ಚಿನ ಗಮನ ನೀಡಬೇಕಾಗಿದೆ. ಈ ಮಟ್ಟದಲ್ಲಿ ಆಗುತ್ತಿರುವ ಚಲನಾತ್ಮಕತೆಗಳಿಗೆ ಹೆಚ್ಚು ಆಳವಾಗಿ ಹೋಗುತ್ತಾ, ಪರಿಹಾರೋಪಾಯಗಳು, ಕಾರ್ಯತಂತ್ರಗಳು ಮತ್ತು ರಚನೆಯಿಂದ ಹೊರಹೊಮ್ಮುವ ಶಕ್ತಿಗಳನ್ನು ಬದಲಾಯಿಸುವ ಪ್ರಯತ್ನಗಳು ನಡೆಯಬೇಕಿದೆ.

ಈ ಸಮಸ್ಯೆಗಳನ್ನು ಅಧ್ಯಯನ ಮಾಡುವಾಗ ಒಂದು ಸಮುದಾಯದ ಏಕೀಕೃತ ನಿಲುವು ಎಂಬ ವಿಚಾರವೇ ಅಪ್ರಸ್ತುತವಾಗಿ ಒಂದೇ ಸಮುದಾಯದೊಳಗೆ ಬರುವ ಪ್ರಾದೇಶಿಕ, ಸಾಮಾಜಿಕ, ಸಾಂಸ್ಕೃತಿಕ ಭಾಷಾ ವೈವಿಧ್ಯತೆಗಳಿಗೆ ಹೆಚ್ಚು ಒತ್ತು ಕೊಡಬೇಕಾಗುತ್ತದೆ. ಈ ಬಗೆಯ ವಿಚಾರಗಳನ್ನು ಒಳಗೊಳ್ಳುವ ಒಂದು ರಾಜಕೀಯ ಮತ್ತು ಅದು ಮುಂದಿಡುವ ಸಾಮುದಾಯಿಕ ಕಾಳಜಿಗಳು ಕೋಮುವಾದದ ಸ್ವರೂಪ ಪಡೆಯದಂತೆ ತಡೆಯಬೇಕು. ದೇಶ ವಿಭಜನೆಗೆ ಮುನ್ನ ಅಂದಿನ ಮುಸ್ಲಿಂಲೀಗ್ ಮತ್ತು ಈಗಿನ ಹಿಂದುತ್ವ ಒಂದು ಸಮುದಾಯದ ಯಜಮಾನಿಕೆಯ ಶಕ್ತಿಗಳಾಗಿ ರಾಜಕಾರಣವನ್ನು ನಿಯಂತ್ರಿಸುವ ಸಾಂಕೇತಿಕ ನಾಮಧೇಯಗಳಾಗಿವೆ. ಸಾಚಾರ್ ವರದಿಯಿಂದ ರಾಜಕೀಯ ಲಾಭಗಿಟ್ಟಿಸಲು ಕೋಮುವಾದಿ ನಾಯಕರು ಆರೋಪಿಸುವಂತೆ ಮುಸ್ಲಿಮರ ಬಡತನಕ್ಕೆ ಸರಕಾರಗಳೊಂದೇ ಹೊಣೆಯಲ್ಲ. ಆದರೆ ಸಾಮಾನ್ಯವಾಗಿ ಬಡತನವನ್ನು ನೋಡುತ್ತಿರುವ ರೀತಿ ಮತ್ತು ವಿಶೇಷವಾಗಿ ಸಾರ್ವಜನಿಕ ಸಂಸ್ಥೆ ಮತ್ತು ಸೇವೆಗಳಲ್ಲಿ ಮುಸ್ಲಿಮರ ಪ್ರಾತಿನಿಧ್ಯತೆಯ ಕೊರತೆಯ ಬಗ್ಗೆ ಸಂವೇದನಾರಹಿತ ಕುರುಡು ನೀತಿಗೆ ಸರಕಾರಗಳೇ ಹೊಣೆಯೆಂದರೆ ತಪ್ಪಿಲ್ಲ.

ಮುಸ್ಲಿಮರು ತಮ್ಮ ಅಭ್ಯುದಯಕ್ಕಾಗಿ ಸರಕಾರವನ್ನೇ ಹೆಚ್ಚಾಗಿ ಅವಲಂಬಿಸಿ ತೆಪ್ಪಗಿರುವ ಜಾಯಮಾನವನ್ನು ಬೆಳೆಸಿಕೊಂಡಿರುವುದು ಸಮಸ್ಯೆ ಇನ್ನಷ್ಟು ಬೆಳೆಯಲು ಶುರುವಾಯಿತು. ಸೃಜನಶೀಲ ಕ್ಷೇತ್ರಗಳಾದ ಕಲೆ, ಸಾಹಿತ್ಯ, ಸಂಗೀತ ಮತ್ತು ಸಂಸ್ಕೃತಿಯಲ್ಲಿ ಮುಸ್ಲಿಮರು ಮುಂಚೂಣಿಯಲ್ಲಿದ್ದಾರೆ. ವೃತ್ತಿಪರ ಕ್ಷೇತ್ರ ಕ್ರೀಡೆ ಇತ್ಯಾದಿಗಳಲ್ಲಿ ಮುಸ್ಲಿಮರ ಪಾತ್ರಗಳು ಗಣನೀಯವಾಗಿದೆ.

ಮುಸ್ಲಿಮರ ರಾಜಕೀಯ ಬೇಡಿಕೆಗಳ ಸ್ವರೂಪ ಸ್ವಾತಂತ್ರ್ಯಪೂರ್ವದಲ್ಲಿ ಅವರು ಮುಂದಿಟ್ಟಿರುವ ಬೇಡಿಕೆಗಳಿಗಿಂತ ವಿಶಿಷ್ಟವಾಗಿವೆ. ಕಳೆದ ಕೆಲವು ದಶಕಗಳಿಂದ ಮುಸ್ಲಿಮರ ರಾಜಕೀಯ ಬೇಡಿಕೆಯನ್ನು ಗಮನಿಸುವುದಾದರೆ ಅದು ಸ್ಪಷ್ಟವಾಗಿ ಸಮಾನತೆ ಮತ್ತು ಹಕ್ಕುಗಳನ್ನು ಆಧರಿಸಿರುವ ಪೌರತ್ವ ರಾಜಕೀಯವಾಗಿದೆ. ಮುಸ್ಲಿಮರು ಭಾರತದ ರಾಜಕೀಯ ಜೀವನದ ಮುಖ್ಯವಾಹಿನಿಗೆ ಸಂಬಂಧಿಸಿದಂತೆ ತಮ್ಮನ್ನು ಗುರುತಿಸಿಕೊಳ್ಳಲು ಪ್ರಾರಂಭಿಸಿರುವುದು ಅದ್ಭುತವಾದ ಬದಲಾವಣೆಗಳಿಗೆ ನಾಂದಿಹಾಡುತ್ತದೆ ಎನ್ನಬಹುದು.

ಮುಸ್ಲಿಮರು ಸಬಲೀಕರಣ, ಸಮಾನತೆ ಮತ್ತು ಪ್ರಜಾಪ್ರಭುತ್ವದ ನೆಲೆಗಳನ್ನು ಭದ್ರಗೊಳಿಸುವ ಪ್ರಕ್ರಿಯೆಯಲ್ಲಿ ಇತರ ದಮನಿತ ಸಮುದಾಯಗಳ ಜೊತೆಗೆ ಮೈತ್ರಿಯನ್ನು ಸಾಧಿಸುವ ಪ್ರಯತ್ನಗಳು ಹೆಚ್ಚು ಆಶಾದಾಯಕ ಮತ್ತು ಅನಿವಾರ್ಯ. ಅಲ್ಪಸಂಖ್ಯಾತ ಮತ್ತು ದಮನಿತ ವರ್ಗಗಳ ಪ್ರಜಾತಾಂತ್ರಿಕ ಮೈತ್ರಿ ಭಾರತದ ಪ್ರಜಾಪ್ರಭುತ್ವಕ್ಕೆ ಹೊಸ ಆಯಾಮವನ್ನು ನೀಡುವಲ್ಲಿ ಯಶಸ್ವಿಯಾಗುತ್ತದೆ. 'ರಾಜಕೀಯ ಇಸ್ಲಾಂ' ಅಥವಾ 'ಮುಸ್ಲಿಂ ಜನಾಂಗೀಯ' ಪ್ರೇರಿತ ರಾಜಕಾರಣಕ್ಕೆ ಭಾರತದಲ್ಲಿ ಭವಿಷ್ಯವಿಲ್ಲ. ಒಂದು ವೇಳೆ ಅದನ್ನು ಸ್ಥಾಪಿಸಲು ಪ್ರಯತ್ನಿಸುವುದಾದರೆ ಅವರು ಮುಸ್ಲಿಂ ಸಮುದಾಯದ ನಿಜವಾದ ಹಿತವನ್ನು ಬಯಸುತ್ತಿಲ್ಲವೆಂದೇ ಹೇಳಬೇಕಾಗುತ್ತದೆ. ಯಾವುದೇ ಬಗೆಯ ಧರ್ಮಾಧಾರಿತ ಅಧಿಪತ್ಯವನ್ನು ಬಲಪಡಿಸುವುದೆಂದರೆ ಅದು ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸಿದಂತೆ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವುದು ಮುಸ್ಲಿಮರು ಸೇರಿದಂತೆ ಜನಸಾಮಾನ್ಯರ ಹಿತದೃಷ್ಟಿಯಿಂದ ಮಾರಕವೆನಿಸುವ ಅತ್ಯಂತ ಅಪಾಯಕಾರಿ ಬೆಳವಣಿಗೆಯಾಗಿದೆ. ■

ಹೊಸ ಪುಸ್ತಕ

ಆಯದಾನ
ಮೂಲ: ಉರ್ಮಿಳಾ ಪವಾರ
ಕನ್ನಡಕ್ಕೆ: ಚಂದ್ರಕಾಂತ ಪೋಕಳೆ
ಬೆಲೆ: ರೂ. 180/-

ಉರ್ಮಿಳಾ ಪವಾರ ಅವರ ಆತ್ಮಕತೆಯಾದ 'ಆಯದಾನ' ಮರಾಠಿ ಸಾಹಿತ್ಯ ವಲಯದಲ್ಲಿ ಸಾಕಷ್ಟು ಚರ್ಚೆಗೊಳಗಾಗುತ್ತಿರುವ ಕೃತಿ. ಇದು ದಲಿತ ಮಹಿಳೆಯ ಮಹತ್ವದ ಕೃತಿಯೂ ಆಗಿದ್ದು, ಮುಖ್ಯವಾಗಿ ದಲಿತ ಹೆಣ್ಣಿನ ಶೋಷಣೆಯ, ದೌರ್ಜನ್ಯದ ಒಳನೋಟಗಳನ್ನೂ ಇಲ್ಲಿ ಪ್ರಸ್ತಾಪಿಸಲಾಗಿದೆ. ಜಾತಿ ಪ್ರಶ್ನೆ, ಗ್ರಾಮೀಣ ಸಮಾಜ, ಮಹಿಳೆಯರ ಪ್ರಶ್ನೆ, ಸಾಮಾಜಿಕ ವಾಸ್ತವ, ದಲಿತ ಸ್ತ್ರೀ-ಪುರುಷ ಭೇದ ಮುಂತಾದ ಹಲವಾರು ಪಶ್ನೆಗಳನ್ನು ಚರ್ಚಿಸಲಾಗಿದೆ. ಇಂತಹ ಮಹತ್ವದ ಕೃತಿಯನ್ನು ಕನ್ನಡಕ್ಕೆ ತಂದ ಲೇಖಕರ ಪ್ರಯತ್ನ ಸ್ವಾಗತಾರ್ಹ.

ಪ್ರ: **ದಾಮಿನಿ ಸಾಹಿತ್ಯ, ಬೆಂಗಳೂರು.**





ಇದು ಮುಂಗಾರು
ಲೇ: ಚಿದಂಬರ ಬೈಕಂಪಾಡಿ
ಬೆಲೆ: ರೂ. 70/-

ಕರಾವಳಿ ಪ್ರದೇಶದಲ್ಲಿ ಹೊಸ ಸಂಚಲನ ಮೂಡಿಸಿದ್ದ 'ಮುಂಗಾರು' ಪತ್ರಿಕೆಯ ಆರಂಭದಿಂದ ಹಿಡಿದು ಪ್ರಕಟಣೆ ನಿಲ್ಲಿಸುವವರೆಗಿನ ಘಟನೆಗಳನ್ನು ದಾಖಲಿಸಿದ ಕೃತಿ ಇದು. ಮುಂಗಾರು ಭರವಸೆಯನ್ನು ಬಿತ್ತಿದ್ದು, ಕುಸಿದದ್ದು, ಕೈ ಬದಲಾದದ್ದು, ಮುಚ್ಚಿಹೋದದ್ದರ ಚಿತ್ರಣವಿದೆ. ಈ ಪತ್ರಿಕೆ ಸಂಪಾದಕರಾಗಿದ್ದ ವಡ್ಡರ್ಸೆ ರಘುರಾಮ ಶೆಟ್ಟರು ಪತ್ರಿಕೆ ಉಳಿಸಿಕೊಳ್ಳಲು ಮುಲಾಜಿಗೆ ಒಳಗಾದದ್ದು; ಸಿದ್ಧಾಂತಗಳ ತಾಕಲಾಟ, ಸ್ವಾಭಿಮಾನದ ಪ್ರಶ್ನೆ ಎದುರಾದಾಗ ರಾಜಿಯಾಗಲು ಒಪ್ಪದ ವೃತ್ತಿಬದ್ಧತೆಯುಳ್ಳ ಪತ್ರಕರ್ತ ತಂಡ ಇವರ ವಿರುದ್ಧ ತಿರುಗಿಬಿದ್ದದ್ದು, ಹೀಗೆ ಲೇಖಕರು ತಮ್ಮ ಅನುಭವಕ್ಕೆ ನಿಲುಕಿದಷ್ಟನ್ನು ದಾಖಲಿಸುವ ಪ್ರಯತ್ನ ಮಾಡಿದ್ದಾರೆ.

ಪ್ರ: **ಅಂಕಿತ ಪುಸ್ತಕ, ಬೆಂಗಳೂರು.**

ಮಾಯಕಾರತಿ
ಲೇ: ಶರಣಪ್ಪ ವಡಿಗೇರಿ
ಬೆಲೆ: ರೂ. 50/-

ನಗರೀಕರಣವನ್ನು ದೇನಿಸುವ ಈ ಹೊತ್ತಿನಲ್ಲಿ ಗ್ರಾಮೀಣ ಜನಸಂಸ್ಕೃತಿಯನ್ನು ಕಟ್ಟಿಕೊಡುವ ಈ ಕೃತಿಯಲ್ಲಿನ ಕಥೆಗಳು ಗಮನ ಸೆಳೆಯುತ್ತವೆ. ಬಯಲುಸೀಮೆಯ ರಣಬಿಸಿಲು, ಗುಳೆಹೋಗುವ ಒಡಲ ಸಂಕಟಗಳು, ಜಾತಿ ವ್ಯವಸ್ಥೆಯ ಅವಮಾನಗಳು, ಯಜಮಾನಿಕೆ ಸಂಸ್ಕೃತಿಯ ಕ್ರೌರ್ಯಗಳನ್ನು ತಮ್ಮ ಕಥೆಗಳಲ್ಲಿ ಬಿಚ್ಚಿಡುವ ಲೇಖಕರು ಅದೋಲೋಕದ ತಲ್ಲಣಗಳನ್ನು ತಣ್ಣನೆಯ ದನಿಯಲ್ಲಿ ಅನಾವಣಗೊಳಿಸಿರುವ ರೀತಿಯಲ್ಲಿ ಸಹಜತೆಯಿದೆ. ಲೇಖಕರು ಸ್ವತಃ ಹಾಡುಗಾರರಾದ್ದರಿಂದ ಹಾಡಲು ಊರು-ಕೇರಿಗಳನ್ನು ಸುತ್ತಿದ ಅವರ ಅನುಭವಗಳು ಕಥೆಗಳಾಗಿ ಆಕಾರ ತಳೆದಿವೆ.

ಪ್ರ: **ಲಡಾಯಿ ಪ್ರಕಾಶನ, ಗದಗ.**



ವಿದ್ಯಮಾನ
ಲೇ: ಡಾ. ಶಿವಮೂರ್ತಿ ಮುರುಘಾ ಶರಣರು
ಬೆಲೆ: ರೂ. 150/-

ಸಮಕಾಲೀನ ಸಂದರ್ಭಗಳಿಂದ ಪ್ರಭಾವಿತರಾದ ಮುರುಘಾ ಶರಣರು ಅಂಥ ಸಂದರ್ಭಗಳನ್ನು ಬರವಣಿಗೆಗೆ ಬಳಸಿಕೊಂಡಿರುವುದು ಸ್ವಾಗತಾರ್ಹವಾದುದು. ಮಠಗಳು ರಾಜಕೀಯ ಚಟುವಟಿಕೆಗಳ ಕೇಂದ್ರವಾಗುತ್ತಿರುವ ಬಗ್ಗೆ, ತಳ ಸಮುದಾಯಗಳವರಿಗೂ ದೀಕ್ಷೆ ನೀಡಿದ್ದಕ್ಕೆ ತಾವು ಎದುರಿಸಿದ ಟೀಕೆಗಳು, ಸಮಾಜ ಸುಧಾರಣೆಯ ಕ್ಲಿಷ್ಟತೆ, ಮಠೀಯ ವ್ಯವಸ್ಥೆಯಲ್ಲಿ ಕರ್ಮಠ ಕಟ್ಟುಪಾಡುಗಳು, ಅವುಗಳನ್ನು ಬದಲಾಯಿಸಲು ಹೊರಟಾಗ ಸಂಭವಿಸುವ ವಿರೋಧಗಳು, ಕಷ್ಟ-ಕಾರ್ಪಣ್ಯಗಳ ಬಗ್ಗೆ ಕನ್ನಡಿ ಹಿಡಿಯುವಂತ ಇಲ್ಲಿನ ಬರಹಗಳೆಲ್ಲವು ಸಾಮಾಜಿಕ ಸಮಾನತೆ ಮತ್ತು ಸರ್ವಜನಾಂಗಗಳ ಪ್ರಗತಿಯತ್ತ ತುಡಿಯುವಂತಹವು.

ಪ್ರ: **ಮುರುಘರಾಜೇಂದ್ರ ಗ್ರಂಥಮಾಲೆ, ಚಿತ್ರದುರ್ಗ.**



ಆಧುನಿಕ ಕನ್ನಡ ಸಾಹಿತ್ಯದ ಮೇಲೆ ಅಂಬೇಡ್ಕರ್ ಪ್ರಭಾವ
ಲೇ: ಡಾ|| ಅನಸೂಯ ಕ. ಕಾಂಬಳೆ
ಬೆಲೆ: ರೂ. 120/-

ಕನ್ನಡ ನಾಡಿನಲ್ಲಿ ಅಂಬೇಡ್ಕರ್ ಪ್ರಭಾವ ದಿಂದಾಗಿ ಬೆಳೆದು ಬಂದ ದಲಿತ ಚಳವಳಿ ಮತ್ತು ಅದು ಕನ್ನಡ ಸಾಹಿತ್ಯದ ಮೇಲೆ ಮಾಡಿದ ಪರಿಣಾಮವನ್ನು ಸಮಗ್ರವಾಗಿ ಅಧ್ಯಯನ ನಡೆಸಿದ ಮಹಾಪ್ರಬಂಧದ ಕೃತಿ ಇದು. ಅಂಬೇಡ್ಕರ್‌ವಾದ, ಅದು ಕನ್ನಡಕ್ಕೆ ಬಂದ ಹಿನ್ನಲೆ, ಕನ್ನಡ ಸಾಹಿತ್ಯ ಹಾಗೂ ಕಾವ್ಯದ ಮೇಲಿನ ಪ್ರಭಾವ, ಕನ್ನಡ ಬರಹಗಾರರಿಗೆ ಅಂಬೇಡ್ಕರ್ ವಿಚಾರವಾದವು ಪರಿವರ್ತನಾಮಾರ್ಗ ಹಾಗೂ ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸುವ ಮಾನವೀಯತೆಯ ಹರಿಕಾರನಾಗಿರುವುದನ್ನು ಸಮರ್ಥವಾಗಿ ವಿವೇಚಿಸಲಾಗಿದೆ.

ಪ್ರ: **ಕನ್ನಡ ಪುಸ್ತಕ ಪ್ರಾಧಿಕಾರ, ಬೆಂ.**



ನುಡಿಸಂಕರ ಸಾಹಿತ್ಯ
ಲೇ: ರಹಮತ್ ತರೀಕೆರೆ
ಬೆಲೆ: ರೂ. 160/-

ಕರ್ನಾಟಕದ ಬಹುಭಾಷಿಕ ರಚನೆಗಳನ್ನು ಆಧಾರವಾಗಿಟ್ಟುಕೊಂಡು ಮಾಡಲಾದ ಸಾಂಸ್ಕೃತಿಕ ವಿಶ್ಲೇಷಣೆಯಲ್ಲಿ ಲೇಖಕರ ತಿರುಗಾಟದ ಶ್ರಮ ಅಪಾರವಾದುದು. ಪ್ರಸ್ತುತ ಕೃತಿಯಲ್ಲಿ ಕನ್ನಡದಲ್ಲಿರುವ ನುಡಿಸಂಕರ ರಚನೆಗಳನ್ನು ಹುಡುಕಿ, ಸಂಕಲಿಸಿ 'ನುಡಿಸಂಕರ' ಎಂಬ ಚೌಕಟ್ಟಿನೊಳಗೆ ವಿಶ್ಲೇಷಿಸುವ ಕೆಲಸ ಮಾಡಿದ್ದಾರೆ. ಈ ಪರಿಕಲ್ಪನೆ ಹೊಸ ಚರ್ಚೆಗಳನ್ನು ಹುಟ್ಟುಹಾಕಬಲ್ಲದು ಮತ್ತು ಕನ್ನಡ ಸಾಹಿತ್ಯ, ಭಾಷೆ ಹಾಗೂ ಕರ್ನಾಟಕ ಸಂಸ್ಕೃತಿಯನ್ನು ವಿಸ್ತರಿಸಬಲ್ಲದು. ಒಟ್ಟಿನಲ್ಲಿ ಮಿಶ್ರಭಾಷಿಕ ರಚನೆಗಳ ಕುರಿತ ಅಧ್ಯಯನದ ಅಪರೂಪದ ಪುಸ್ತಕ ಇದು.

ಪ್ರ: **ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ**



ದೇಶೀವಾದ: ಪರ್ಯಾಯ ಚಿಂತನೆಯ ಸ್ವರೂಪ

■ ಅರುಣ್ ಜೋಳದಕೂಡ್ಲಿಗಿ

'ದೇಶೀವಾದ' ಎನ್ನುವ ಪಾರಿಭಾಷಿಕ ಪದ ಸಂಸ್ಕೃತಿ ಚಿಂತನೆಯಲ್ಲಿ 80ರ ದಶಕದಿಂದೀಚೆಗೆ ಬಳಕೆಯಾಗುತ್ತಿದೆ. ಇದು 90ರ ದಶಕದ ನಂತರ ಬಹುಅರ್ಥಗಳಲ್ಲಿ, ಬಹುರೂಪಗಳಲ್ಲಿ ಬಳಕೆಯಾಗುತ್ತಲೇ ಬಂದಿದೆ. ಕನ್ನಡದ ಚಿಂತನೆಯಲ್ಲಿ ಈ ಪಾರಿಭಾಷಿಕ ಒಂದು ಖಚಿತವಾದ ಅರ್ಥವನ್ನು ಪಡೆದಿಲ್ಲವಾದರೂ, ಅದಕ್ಕೆ ಸಮೀಪದ ಹಲವಾರು ವ್ಯಾಖ್ಯಾನಗಳು 'ದೇಶೀವಾದಕ್ಕೆ' ಲಗತ್ತಾಗುತ್ತಲೇ ಬಂದಿವೆ. 'ದೇಶೀವಾದ'ವು ಇಂಗ್ಲೀಷ್‌ನ 'Nativism' ಪದಕ್ಕೆ ಪರ್ಯಾಯವಾಗಿ ಬಳಸಲಾಗುತ್ತಿದೆ. ಕನ್ನಡದ ಚಿಂತನೆಯಲ್ಲಿ ಹೆಚ್ಚು ಚರ್ಚೆಗೆ ಕಾರಣವಾದ 'ದೇಸಿ' ಎನ್ನುವ ಪಾರಿಭಾಷಿಕ ಪದಕ್ಕಿಂತ ದೇಸಿವಾದ ಬೇರೆಯದೇ ಆದ ಅರ್ಥವನ್ನು ಸ್ಫುರಿಸುವ ಪದವಾಗಿದೆ.

"ದೇಸಿಪದ ಬಳಕೆಯ ಹಿಂದೆ ದೇಶೀವಾದದ ಒಲವು ಕಂಡು ಬರುತ್ತದೆಯಾದರೂ ಅವೆರಡೂ ಒಂದೇ ಅಲ್ಲ. ದೇಶೀವಾದದ ಹರವು ಭಾಷೆಯ ಬಳಕೆಯನ್ನಲ್ಲದೆ ಸಾಹಿತ್ಯದ ವಸ್ತು, ನಿರೂಪಣೆ ಬರಹಗಾರನ ಮೂಲಕಲ್ಪನೆ ಮತ್ತು ಕೃತಿಯ ಒಟ್ಟು ಸಾಂಸ್ಕೃತಿಕ ಸಂದರ್ಭವನ್ನು ಒಳಗೊಳ್ಳುತ್ತದೆ. ಮುಖ್ಯವಾಗಿ ದೇಶೀವಾದವೆಂದರೆ ಸಾಹಿತ್ಯ ಸೃಷ್ಟಿ ಮತ್ತು ವಿಮರ್ಶೆಯ ಧೋರಣೆಗಳನ್ನು ಪ್ರಭಾವಿಸುವ ಒಂದು ಪ್ರವೃತ್ತಿಯಾಗಿದೆ".[1]

ಮುಖ್ಯವಾಗಿ ದೇಶೀವಾದವೆನ್ನುವುದು ಪ್ರಾದೇಶಿಕ ಸತ್ವದಿಂದ ಹುಟ್ಟಿಕೊಳ್ಳುವಂಥದು. ರಾಜೇಂದ್ರ ಚೆನ್ನಿ ಅವರ ಮಾತುಗಳಲ್ಲಿ ಹೇಳುವುದಾದರೆ "ದೇಶೀವಾದವೆಂದರೆ ಒಂದು ಸಾಹಿತ್ಯಕ ಪ್ರಾದೇಶಿಕ ಸತ್ವವನ್ನು ಆ ಸಾಹಿತ್ಯವು ಹುಟ್ಟಿಕೊಳ್ಳುವ ಭಾಷಾ ಸಮುದಾಯದ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಪ್ರದಾಯದ ವಿಶಿಷ್ಟ ಒಲವುಗಳನ್ನು ಆ ಸಮುದಾಯದ ಸಾಂಸ್ಕೃತಿಕ ಅನನ್ಯತೆಯನ್ನು ಮತ್ತು ಆ ಸಾಹಿತ್ಯಕ್ಕಿರುವ ತನ್ನದೇ ಆದ ಸ್ವಾಯತ್ತತೆಯನ್ನು ಗುಣಾತ್ಮಕವೆಂದು ಒಪ್ಪಿಕೊಳ್ಳುವ ಧೋರಣೆ ಅಥವಾ ಸಿದ್ಧಾಂತ".[2]

ಭಾರತದಲ್ಲಿ ಇಂದು ದೇಶೀವಾದವು ಪ್ರಭಾವಶಾಲಿ ವಿಚಾರಧಾರೆಯಾಗುತ್ತ ದಾಪುಗಾಲು ಹಾಕುತ್ತಿದೆ. ದೇಶಿ ವಿಚಾರಧಾರೆಯ ಸ್ಥೂಲ ಲಕ್ಷಣವೆಂದರೆ ಇದು ಆಧುನಿಕತೆಯೊಂದಿಗೆ ಭಿನ್ನಮತ ಹೊಂದಿದ್ದು, ಆಧುನಿಕಪೂರ್ವ ದಿಕ್ಕಿನಲ್ಲಿ ತನ್ನ ಗಮನವನ್ನು ರೂಪಿಸಿಕೊಳ್ಳುತ್ತದೆ. ವಸಾಹಾತುಶಾಹಿ ತಂದ ಆಧುನಿಕತೆಯು ಭಾರತೀಯ ಸಮಾಜದ ವಿಚಾರ ಮತ್ತು ಸಾಮಾಜಿಕ ಸಂಸ್ಥೆಗಳನ್ನು ನಾಶಗೊಳಿಸಿ ಭಾರತೀಯವಲ್ಲದ ಹೊಸ ವಿಚಾರ ಮತ್ತು ಬದಲಾವಣೆಗಳನ್ನು ತಂದು ನೆಟ್ಟಿತು. ಎಂಬ ಪ್ರಮೇಯವು ಸಂಪ್ರದಾಯ ಮತ್ತು ಆಧುನಿಕತೆಗಳನ್ನು ಪರಸ್ಪರ ಸಂಬಂಧವಿಲ್ಲದ ಪರಿಕಲ್ಪನೆಗಳಾಗಿ ಗ್ರಹಿಸುತ್ತದೆ. ವಸಾಹಾತುಪೂರ್ವ ಮತ್ತು ವಸಾಹತೋತ್ತರ ಕಾಲಗಳ ನಡುವೆ ಒಂದು ಕಂದರವನ್ನು ಕಾಣುತ್ತದೆ. ಇದರ ಎಲ್ಲ ಆಯಾಮಗಳನ್ನು ಪರಿಶೀಲಿಸಿದ ನಂತರವೇ ಮತ್ತಷ್ಟು ಖಚಿತವಾಗಿ ಮಾತನಾಡಲು ಸಾಧ್ಯ. ದೇಶೀವಾದ ಇಂದು ಯಜಮಾನಿಕೆ ವಿಚಾರಧಾರೆ ಆಗುತ್ತಿರುವುದರಿಂದ ಹಲವಾರು ಗುಂಪುಗಳು, ವರ್ಗಗಳು ಅದನ್ನು ತಮ್ಮದಾಗಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿವೆ".[3]

ಹೀಗೆ ದೇಶೀವಾದ ಎನ್ನುವುದು ಸಾಹಿತ್ಯ ಸೃಷ್ಟಿ ಮತ್ತು ವಿಮರ್ಶೆಯನ್ನು

ಭಾರತದಲ್ಲಿ ಇಂದು ದೇಶೀವಾದವು ಪ್ರಭಾವಶಾಲಿ ವಿಚಾರಧಾರೆಯಾಗುತ್ತ ದಾಪುಗಾಲು ಹಾಕುತ್ತಿದೆ. ದೇಶಿ ವಿಚಾರಧಾರೆಯ ಸ್ಥೂಲ ಲಕ್ಷಣವೆಂದರೆ ಇದು ಆಧುನಿಕತೆಯೊಂದಿಗೆ ಭಿನ್ನಮತ ಹೊಂದಿದ್ದು, ಆಧುನಿಕಪೂರ್ವ ದಿಕ್ಕಿನಲ್ಲಿ ತನ್ನ ಗಮನವನ್ನು ರೂಪಿಸಿಕೊಳ್ಳುತ್ತದೆ. ವಸಾಹಾತುಶಾಹಿ ತಂದ ಆಧುನಿಕತೆಯು ಭಾರತೀಯ ಸಮಾಜದ ವಿಚಾರ ಮತ್ತು ಸಾಮಾಜಿಕ ಸಂಸ್ಥೆಗಳನ್ನು ನಾಶಗೊಳಿಸಿ ಭಾರತೀಯವಲ್ಲದ ಹೊಸ ವಿಚಾರ ಮತ್ತು ಬದಲಾವಣೆಗಳನ್ನು ತಂದು ನೆಟ್ಟಿತು. ಎಂಬ ಪ್ರಮೇಯವು ಸಂಪ್ರದಾಯ ಮತ್ತು ಆಧುನಿಕತೆಗಳನ್ನು ಪರಸ್ಪರ ಸಂಬಂಧವಿಲ್ಲದ ಪರಿಕಲ್ಪನೆಗಳಾಗಿ ಗ್ರಹಿಸುತ್ತದೆ.

ಪ್ರಭಾವಿಸುವ, ಧೋರಣೆಗಳನ್ನು ಪ್ರಭಾವಿಸುವ ಒಂದು ಪ್ರವೃತ್ತಿಯಾಗಿದೆ. ಬರಹಗಾರರ ಸಂವೇದನೆಯನ್ನು ರೂಪಿಸುತ್ತಿರುವ ಆ ಮೂಲಕ ಆಲೋಚನ ವಿನ್ಯಾಸಗಳನ್ನು ಪ್ರಭಾವಿಸುವ ಒಂದು ತಿಳುವಳಿಕೆಯ ಕ್ರಮವಾಗಿಯೂ ದೇಶೀವಾದ ತನ್ನ ಹರವನ್ನು ವಿಸ್ತರಿಸಿಕೊಳ್ಳುತ್ತಿದೆ.

ಅನ್ಯ ಪ್ರಭಾವಗಳ ಮೀರುವಿಕೆ

ವಾಸ್ತವವಾಗಿ ಅನ್ಯಪ್ರಭಾವಗಳ ಸ್ಪರ್ಶವಿಲ್ಲದೆ ಒಂದು ಚಿಂತನೆಯಾಗಲಿ, ಒಬ್ಬ ವ್ಯಕ್ತಿಯಾಗಲಿ, ಒಂದು ಸಮಾಜವಾಗಲಿ ಇರುವುದನ್ನು ಕಲ್ಪಿಸಿಕೊಳ್ಳುವುದು ಕಷ್ಟ. ಹಾಗೆಂದಾಗ ದೇಶೀವಾದ ಅನ್ಯ ಪ್ರಭಾವಗಳ ಮೀರುವಿಕೆಯನ್ನು ಹೇಳುತ್ತದೆ ಎಂದರೆ ಇದೂ ಸಹ ಕಲ್ಪಿತವೆ ಎಂಬ ಪ್ರಶ್ನೆಯೊಂದು ಎದುರಾಗುತ್ತದೆ. ಆದರೆ ಇಲ್ಲಿ ಅನ್ಯ ಪ್ರಭಾವವನ್ನು ಮೀರುವುದೆಂದರೆ, ಸ್ವಂತಿಕೆಯ ಮೂಲದ ಚೈತನ್ಯವನ್ನು ಮರಳಿ ಪಡೆಯುವುದೆಂದೇ ಅರ್ಥ. "ಪಂಪ 'ದೇಸಿ'ಪದವನ್ನು ಬಳಸಿದ್ದು ಇದೇ ಅರ್ಥದಲ್ಲಿ. ಪಂಪನಲ್ಲಿ 'ದೇಸಿ' ಎಂಬುದು ಕೇವಲ ಭಾಷಿಕ ರೂಪಕವಲ್ಲ. ಅದೊಂದು ಸಾಂಸ್ಕೃತಿಕ ಒತ್ತಡವೇ. ಆದರೂ ಅದೊಂದು ಭಾಷಾ ವಿನ್ಯಾಸಕ್ಕೆ ಸಂಬಂಧಪಟ್ಟಿದ್ದು ಎಂದು ಎಣಿಸಿದರೂ ಅದನ್ನು ಅಂದಿನ ಚಾರಿತ್ರಿಕ ಮಿತಿಯಲ್ಲೇ ನೋಡಬೇಕಾಗುತ್ತದೆ"4 ಎನ್ನುವ ಆರ್.ವಿ.ಭಂಡಾರಿ ಅವರ ಮಾತುಗಳು ಸಂಸ್ಕೃತದ ಪ್ರಭಾವದಿಂದ ಬಿಡಿಸಿಕೊಳ್ಳಲು ಪಂಪನಿಗಿದ್ದ ಚಾರಿತ್ರಿಕ ಒತ್ತಡದ ಸೂಕ್ಷ್ಮತೆಯನ್ನು ಹೇಳುತ್ತವೆ.

ಕನ್ನಡ ಸಾಹಿತ್ಯದಲ್ಲಿ ದೇಶೀಯತೆಯ ಹುಡುಕಾಟವೆಂದರೆ, ಕನ್ನಡದ ಕವಿಗಳು, ಲಾಕ್ಷಣಿಕರು ಸಂಸ್ಕೃತದ ಪ್ರಭಾವದಿಂದ ಎಷ್ಟು ಪ್ರಮಾಣದಲ್ಲಿ ಬಿಡಿಸಿಕೊಂಡು ಕನ್ನಡತನವನ್ನು ಮೆರೆದಿದ್ದಾರೆ ಎನ್ನುವುದೇ ಆಗಿದೆ. ಆಧುನಿಕ ಕನ್ನಡ ವಿಮರ್ಶೆಯ ಸಂದರ್ಭದಲ್ಲಿ ಪಶ್ಚಿಮದ ವಿಮರ್ಶಾ ಪ್ರಸ್ತಾನಗಳ ಪ್ರಭಾವವನ್ನು ವಿವರಿಸ ಹೊರಡುವುದು ಈ ನೆಲೆಯ ದೇಶೀವಾದದ ಪ್ರಭಾವವೆ. ಹಾಗಾಗಿಯೇ ಕೆ.ವಿ.ನಾರಾಯಣ ಅವರು 'ಇನ್ನು ಕನ್ನಡಿಗಳು ಸಾಕು' ಎನ್ನುವ ನಿಲುವಿಗೆ ಬರುವುದು. ಇನ್ನು ಜಾನಪದ ಅಧ್ಯಯನಗಳಲ್ಲಿ ಅನ್ಯ ಪ್ರಭಾವಗಳನ್ನು ಮೀರುವಿಕೆಯೆಂದರೆ, ಪಶ್ಚಿಮದ ಜಾನಪದ ಸಿದ್ಧಾಂತಗಳ ಪ್ರಭಾವದಿಂದ ಬಿಡಿಸಿಕೊಂಡು, ಕನ್ನಡದ್ದೇ ಜಾನಪದ ಸಂವೇದನೆಯ ಮುಖೇನ ಇಲ್ಲಿನ ಜನಪದ ಲೋಕವನ್ನು ಅರ್ಥ ಮಾಡಿಕೊಳ್ಳಬೇಕಿದೆ ಎನ್ನುವುದು. ರಹಮತ್ ತರೀಕೆರೆಯವರ ಪ್ರತಿಸಂಸ್ಕೃತಿ ಚಿಂತನೆ, ಡಿ.ಆರ್.ನಾಗರಾಜ ಅವರ ವಿಸ್ಮೃತಿ ಚಿಂತನೆಗಳು ಸಾಧ್ಯವಾದದ್ದೂ ಸಹ ಅನ್ಯ ಪ್ರಭಾವಗಳನ್ನು ಮೀರುವಿಕೆಯ ಮತ್ತು ಸ್ವಂತದ ಹುಡುಕಾಟದ ಹಂಬಲದಿಂದ.

ಮುಖ್ಯವಾಗಿ ಜನಪದ ಅಧ್ಯಯನಗಳನ್ನು ಗಮನದಲ್ಲಿರಿಸಿಕೊಂಡು ಹೇಳುವುದಾದರೆ, ಅನ್ಯ ಪ್ರಭಾವ ಎಂದರೆ ಪಶ್ಚಿಮದ ಜಾನಪದದ ತಿಳುವಳಿಕೆಯ ಪ್ರಭಾವವೇ ಆಗಿದೆ. 1994ರಲ್ಲಿ ಮಂಗಳೂರು ವಿ.ವಿ.ಯಲ್ಲಿ ಪಾಶ್ಚಾತ್ಯ ಜಾನಪದ ಸಿದ್ಧಾಂತಗಳು ಮತ್ತು ಪ್ರತಿಸಿದ್ಧಾಂತ ಎಂಬ ಉಪನ್ಯಾಸ ಕಾರ್ಯಕ್ರಮ ನಡೆಯಿತು. ಇಲ್ಲಿನ ಒಟ್ಟು ಚರ್ಚೆಯ ಸ್ವರೂಪವೇ ಅನ್ಯ ಪ್ರಭಾವಗಳನ್ನು ಮೀರುವಿಕೆಯ ದಾರಿ ಹುಡುಕುವುದು. ವಿಪರ್ಯಾಸವೆಂದರೆ ಇಲ್ಲಿಯೂ ಮಂಡನೆಯಾದದ್ದೂ ಬಹುಪಾಲು ಪಶ್ಚಿಮದ ಸಿದ್ಧಾಂತಗಳ ಮೇಲಿನ ಮೋಹದ ವಿಶ್ಲೇಷಣೆಯೇ ಆಗಿತ್ತು. ಅಂಬಳಿಕೆ ಹಿರಿಯಣ್ಣನವರು ದೇಶೀವಾದದ ಪರಿಕಲ್ಪನೆ ಮಾನವನಿಷ್ಠ ಜ್ಞಾನ ಕ್ಷೇತ್ರವಾದ ಜಾನಪದದ ವ್ಯಾಪ್ತಿಯನ್ನು ಕಿರಿದುಗೊಳಿಸುತ್ತದೆ. ಅದನ್ನು ತಪ್ಪಿಸಲು ನಾವು ನಮ್ಮ ಜಾನಪದ ಸಾಮಗ್ರಿಯನ್ನು ಜಾಗತಿಕ ನೆಲೆಯಲ್ಲಿ ರೂಪುಗೊಂಡ ಸಿದ್ಧಾಂತಗಳ ಒರೆಗಲ್ಲಿಗೆ ಒಡ್ಡಿ ಇಲ್ಲಿನ ಆಶಯಗಳಿಗನು ಗುಣವಾದ ಹೊಳಹುಗಳನ್ನು ಕಂಡುಕೊಳ್ಳಲು ಮೊದಲು ಶಕ್ತರಾಗಬೇಕಾಗಿದೆ5 ಎನ್ನುತ್ತಾರೆ. ಇವರು ಪಶ್ಚಿಮದ ಸಿದ್ಧಾಂತಗಳಿಲ್ಲದೆ ಜಾನಪದ ಅಧ್ಯಯನಗಳನ್ನು ಕಲ್ಪಿಸಿಕೊಳ್ಳುವುದು ಕಷ್ಟ ಎನ್ನುವಂತೆ ವಿವರಿಸುತ್ತಾರೆ. ಅವರ ಒಟ್ಟು ಜಾನಪದ ಅಧ್ಯಯನಗಳಲ್ಲೂ ಈ ಧೋರಣೆ ಕೆಲಸ ಮಾಡಿದೆ.

ಹಾಗೆಂದಾಗ ಕನ್ನಡ ಜಾನಪದ ಅಧ್ಯಯನಗಳಲ್ಲಿ ಅನ್ಯಪ್ರಭಾವಗಳ ಮೀರುವಿಕೆಯೇ ಇಲ್ಲವೆಂತಲ್ಲ. ಬಹಳಷ್ಟು ಅಧ್ಯಯನಗಳು ಇದರಿಂದ ಬಿಡಿಸಿಕೊಳ್ಳಲು ಪ್ರಯತ್ನಿಸಿವೆ. ಇವುಗಳು ಅನ್ಯಪ್ರಭಾವವನ್ನು ಮೀರುವ ಕಾರಣಕ್ಕೆ ಹುಟ್ಟಿಕೊಂಡವುಗಳು. "ದೇಶೀವಾದದ ಮೂಲಕ ದೇಶೀಯ ಸಂಸ್ಕೃತಿಯ ಸತ್ವ ಶೀಲತೆಯ ಬಗ್ಗೆ ಹೆಚ್ಚು ತೀವ್ರವಾದ ಆಸಕ್ತಿ ಹುಟ್ಟುವುದು ಅನ್ಯಪ್ರಭಾವಗಳ ಹಿಡಿತದಿಂದಾಗಿ, ಆ ಸತ್ವಶೀಲತೆಗೆ ಕುಂದು ಬಂದಿದೆಯೆನ್ನುವ ಅಸುರಕ್ಷತೆಯ ಭಾವನೆ ಬೆಳೆದಾಗ"6 ಎನ್ನುವುದನ್ನು ಗಮನಿಸಬೇಕು.

ಕನ್ನಡದಲ್ಲಿ ಚಂದ್ರಶೇಖರ ಕಂಬಾರ ಮತ್ತು ಟಿ.ಎಸ್. ಸತ್ಯನಾಥ್ ಜನಪದವನ್ನು 'ಮಂಡಲಾಕಾರದ' ಲೋಕದೃಷ್ಟಿಯ ಮೂಲಕ ವಿವರಿಸುತ್ತಾರೆ. ವೀರಣ್ಣದಂಡೆಯವರು ಸಹಜ ವಿಮರ್ಶೆಯ ಪ್ರಯೋಗದಲ್ಲಿ ಜನಪದದ ಕುರಿತ ಅಭಿವ್ಯಕ್ತಿಯ ಭಿನ್ನ ಸಾಧ್ಯತೆಗಳನ್ನು ಮಂಡಿಸಿದ್ದಾರೆ. ದೇವೇಂದ್ರಕುಮಾರ ಹಕಾರಿಯವರು ಜನಪದದ ಮೂಲಭೂತ ತತ್ವಗಳಲ್ಲಿ ಭೌಗೋಳಿಕ ಪ್ರಾದೇಶಿಕ ತತ್ವ, ಜನಾಂಗಿಕ ಕ್ರಿಯಾತತ್ವ, ಭಾಷಾ ಸಾಹಿತ್ಯ ತತ್ವ, ಶ್ರವ್ಯ ಕಲಾತತ್ವ, ಧರ್ಮಕಲಾತತ್ವ, ಸಂಸ್ಕೃತಿ ಸಂವಹನ ತತ್ವ ಎಂದು ಐದು ವಿಭಾಗಗಳನ್ನಾಗಿ ವಿಭಾಗಿಸಿಕೊಂಡು ದೇಸಿಯ ನೆಲೆಯಲ್ಲಿ ಜನಪದವನ್ನು ವಿವರಿಸಿಕೊಳ್ಳುತ್ತಾರೆ. ಮೊಗಳ್ಳಿ ಗಣೇಶ್ ಅವರು ದಲಿತ ಜಾನಪದ ಪರಿಕಲ್ಪನೆಯನೆಯನ್ನು ದಲಿತತ್ವದ ನೆಲೆಯಲ್ಲಿ ಶೋಧಿಸಿದ್ದಾರೆ. ಪುರುಷೋತ್ತಮ ಬಿಳಿಮಲೆಯವರು ಕನ್ನಡದ ಜನಪದ ಲೋಕದೃಷ್ಟಿಯ ವಿಭಿನ್ನ ಒಳನೋಟಗಳನ್ನು ನೀಡಿದ್ದಾರೆ. ಹಿ.ಶಿ.ರಾಮಚಂದ್ರೇಗೌಡ 'ನಮ್ಮ ಹಣತೆಗಳೇಕೆ ಉರಿಯುತ್ತಿಲ್ಲ' ಎನ್ನುತ್ತಾ ಅನ್ಯವನ್ನು ಮೀರುವ ಸ್ವಂತಿಕೆಯನ್ನು ಸ್ಥಾಪಿಸುವ ನೆಲೆಯಲ್ಲಿ ಆಲೋಚಿಸಿದ್ದಾರೆ. ಹೀಗೆ ಕನ್ನಡದಲ್ಲಿ ದೇಶಿವಾದವು ಅನ್ಯಪ್ರಭಾವಗಳ ಮೀರುವ ನೆಲೆಯಲ್ಲಿಯೂ ಮಹತ್ವದ ಕೆಲಸ ಮಾಡಿದೆ.

ಪ್ರಾದೇಶಿಕ ಸತ್ವದ ಮರುಸ್ಥಾಪನೆ

ದೇಶೀವಾದವು ಮುಖ್ಯವಾಗಿ ಪ್ರಾದೇಶಿಕ ಸತ್ವವನ್ನು ಮರುಸ್ಥಾಪಿಸುವಲ್ಲಿ ಹೆಚ್ಚು ಪ್ರಜ್ಞಾಪೂರ್ವಕವಾಗಿ ಕೆಲಸ ಮಾಡುತ್ತದೆ. ಹಾಗೆಂದು ದೇಶೀವಾದವನ್ನು 'ಪ್ರಾದೇಶಿಕ ವಾದ' ಎಂದು ಸರಳೀಕರಿಸುವಂತಿಲ್ಲ. ಪ್ರಾದೇಶಿಕ ಸತ್ವವನ್ನು ಸಾಹಿತ್ಯದಲ್ಲಿ ರೂಢಿಸಿಕೊಳ್ಳುವುದು, ಪ್ರಾದೇಶಿಕವಾದ ಭಿನ್ನತೆಗಳನ್ನು ಏಕೀಕೃತ ಮಾದರಿಗಳಿಗೆ ಪರ್ಯಾಯವಾಗಿಸುವುದು. ಆಲೋಚನ ಕ್ರಮದಲ್ಲಿ, ಬದುಕನ್ನು ಗ್ರಹಿಸುವಲ್ಲಿ ಪ್ರಾದೇಶಿಕ ಜ್ಞಾನ ಪರಂಪರೆಗಳ ನೆರವು ಪಡೆಯುವುದು, ಆ ಮೂಲಕ ಪ್ರತಿಚಿಂತನೆಯನ್ನು ಹುಟ್ಟಿಸುವುದು ಅಂತೆಲ್ಲ ವಿವರಿಸಬಹುದು.

ಕನ್ನಡ ಜಾನಪದ ಅಧ್ಯಯನವು ಪ್ರಾದೇಶಿಕ ಸತ್ವವನ್ನು ಭಿನ್ನವಾಗಿ ಪರಿಚಯಿಸಿದೆ. ನಡಿಕೇರಿಯಂಡ ಚಿನ್ನಪ್ಪ ಅವರ 'ಪಟ್ಟೋಲೆ ಪಳಮೆ' ಕೃತಿಯಿಂದ ಇಂದಿನವರೆಗೂ ಪ್ರಾದೇಶಿಕ ಅಧ್ಯಯನಗಳಾಗಿವೆ. ಒಂದು ಹಳ್ಳಿಯನ್ನು ಕುರಿತ ಸಮಗ್ರ ಅಧ್ಯಯನಗಳಾಗಿವೆ. ಹಾಗೆಯೇ ಪ್ರಾದೇಶಿಕತೆಯು ಹಳ್ಳಿಯಿಂದ, ತಾಲೂಕು, ಜಿಲ್ಲಾ, ಪ್ರಾದೇಶಿಕ ವಿಭಾಗ ಹೀಗೆ ಇದರ ಹಲವು ಎಳೆಗಳನ್ನು ನೋಡಬಹುದು. ಇಲ್ಲಿ ಪ್ರಾದೇಶಿಕ ವಿವರಗಳ ಮೂಲಕ ಜಾನಪದ ಚಿಂತನೆ ರೂಪುಗೊಂಡಿದೆ. ಇಲ್ಲಿಯ ಒಂದು ಪ್ರಾದೇಶಿಕ ಭಿನ್ನತೆಯನ್ನು ಸಾರ್ವತ್ರಿಕವಾಗಿ ಅನ್ವಯಿಸಿ ನೋಡಲಾಗದು. ಒಂದು ಗ್ರಾಮದ ಅಧ್ಯಯನದ ಫಲಿತಗಳು ಎಲ್ಲಾ ಗ್ರಾಮಗಳನ್ನು ಪ್ರತಿನಿಧಿಸಲಾರವು, ಹಾಗೆ ಪ್ರತಿನಿಧಿಸುತ್ತವೆ ಎಂದು ಆಲೋಚಿಸಿದರೆ ಪ್ರಾದೇಶಿಕ ಸತ್ವದ ಮರುಸ್ಥಾಪನೆ ತನ್ನ ಸೂಕ್ಷ್ಮತೆಯನ್ನು ಕಳೆದುಕೊಳ್ಳುತ್ತದೆ.

ಪ್ರಾದೇಶಿಕ ಸತ್ವವೆನ್ನುವುದು ಏಕೀಕೃತ ಚಿಂತನೆಯಲ್ಲ. ಅಲ್ಲಿಯೂ ಅನೇಕ ಒಳಸುಳಿವುಗಳಿರುವುದನ್ನು ಗುರುತಿಸಲು ಸಾಧ್ಯವಿದೆ. ಕನ್ನಡ ಜಾನಪದ ಅಧ್ಯಯನಗಳಲ್ಲಿ ಪ್ರಾದೇಶಿಕತೆಯನ್ನು ಏಕೀಕೃತ ಚಿಂತನೆಯೆಂಬಂತೆ ಬಿಂಬಿಸುವ ಆಲೋಚನೆ ಪ್ರಮಾಣ ಹೆಚ್ಚಾಗಿದೆ. ಇದು ತೊಡಕಾಗಿಯೂ ಪರಿಣಮಿಸಿದೆ. ಇಂತಹ ತೊಡಕನ್ನು ನಿವಾರಿಸಿಕೊಳ್ಳುವ ನೆಲೆಯಲ್ಲಿ ಪ್ರಾದೇಶಿಕ ಸತ್ವವನ್ನು ಮರುಸ್ಥಾಪಿಸಬೇಕಿದೆ.

ಕಿರುಪರಂಪರೆಗಳ ಶೋಧ

ದೇಶೀಯತೆಯನ್ನು 'ವಿದೇಶ'ವನ್ನು ಎದುರಿಗಿಟ್ಟುಕೊಂಡು ನಿರ್ವಚಿಸುವುದಕ್ಕಿಂತ, ದೇಶಿಯ ಆಂತರಿಕ ರಚನೆಯನ್ನು ಗಮನಿಸಿ ವಿದ್ವಾಂಸರು ಮಹಾಪರಂಪರೆ, ಕಿರುಪರಂಪರೆ ಎಂಬ ಪರಿಕಲ್ಪನೆಗಳನ್ನು ಬಳಸಿದ್ದಾರೆ. ಇದನ್ನು ಎ.ಕೆ.ರಾಮಾನುಜನ್ ವ್ಯಾಪಕವಾಗಿ ಚರ್ಚಿಸಿದ್ದಾರೆ. ಮಾರ್ಗ, ದೇಶಿ, ಶಿಷ್ಟ, ಜಾನಪದ, ಮುಂತಾದ ವೈರುಧ್ಯಗಳನ್ನು ಇದರ ಜೊತೆ ಸಮೀಕರಿಸುವುದೂ ಇದೆ. "ಮಹಾಪರಂಪರೆಯೆಂದರೆ

ಪ್ರಾದೇಶಿಕ ಸತ್ವವೆನ್ನುವುದು ಏಕೀಕೃತ ಚಿಂತನೆಯಲ್ಲ. ಅಲ್ಲಿಯೂ ಅನೇಕ ಒಳಸುಳಿವುಗಳಿರುವುದನ್ನು ಗುರುತಿಸಲು ಸಾಧ್ಯವಿದೆ. ಕನ್ನಡ ಜಾನಪದ ಅಧ್ಯಯನಗಳಲ್ಲಿ ಪ್ರಾದೇಶಿಕತೆಯನ್ನು ಏಕೀಕೃತ ಚಿಂತನೆಯೆಂಬಂತೆ ಬಿಂಬಿಸುವ ಆಲೋಚನೆ ಪ್ರಮಾಣ ಹೆಚ್ಚಾಗಿದೆ. ಇದು ತೊಡಕಾಗಿಯೂ ಪರಿಣಮಿಸಿದೆ. ಇಂತಹ ತೊಡಕನ್ನು ನಿವಾರಿಸಿಕೊಳ್ಳುವ ನೆಲೆಯಲ್ಲಿ ಪ್ರಾದೇಶಿಕ ಸತ್ವವನ್ನು ಮರುಸ್ಥಾಪಿಸಬೇಕಿದೆ.

ಅಂತರ್ ಪ್ರಾದೇಶಿಕವಾದ ಅಖಿಲ ಭಾರತೀಯ ಪರಂಪರೆ. ಇದರ ಮಾಧ್ಯಮ ಸಂಸ್ಕೃತವಾಗಿತ್ತು. ಕಿರುಪರಂಪರೆಯೆಂದರೆ, ಪ್ರಾದೇಶಿಕ ಭಾಷೆಯೊಂದು ಮಾಧ್ಯಮವಾಗಿರುವ ಪ್ರಾದೇಶಿಕ ಪರಂಪರೆ. ಈ ಎರಡೂ ಪರಂಪರೆಗಳಿಗೂ ತಮ್ಮದೇ ಆದ ಸಾಮಾಜಿಕ ರಚನೆ, ಧಾರ್ಮಿಕ, ಸಾಹಿತ್ಯಕ, ವಿಧಿಗಳು, ಆಚರಣೆಗಳು, ನಂಬಿಕೆ ನಡವಳಿಕೆಗಳು ಇರುತ್ತವೆ. ಉದಾಹರಣೆಗೆ ಮಹಾಪರಂಪರೆ ವರ್ಣಾಶ್ರಮವನ್ನು ಅದರ ಶ್ರೇಣೀಕೃತ ರೂಪದಲ್ಲಿ ಸಮಾಜ ರಚನೆಯ ತಳಹದಿಯೆಂದು ಗುರುತಿಸಿಕೊಂಡರೆ, ಕಿರುಪರಂಪರೆ ಜಾತಿ ಮತ್ತು ಉಪಜಾತಿಗಳ ರಚನೆಯನ್ನು ಗಮನಿಸುತ್ತದೆ".7

ಹೀಗೆ ಮಹಾಪರಂಪರೆ ಕಿರುಪರಂಪರೆಗಳು ಭಿನ್ನತೆಯನ್ನು ಹೊಂದಿವೆ. ಹಾಗೆ ಈ ಎರಡನ್ನೂ ಗೆರೆ ಕೊರೆದು ವಿಭಾಗಿಸಿ ನೋಡುವಲ್ಲಿಯೂ ತೊಡಕಿದೆ. ಕಾಲಾನಂತರದಲ್ಲಿ ಈ ಎರಡೂ ಪರಂಪರೆಗಳು ವಿಚಿತ್ರ ರೀತಿಯ ಕೊಡುಕೊಳೆಯನ್ನು ಮಾಡಿವೆ. ಒಂದರೊಳಗೊಂದು ಬೆರೆತಿವೆ. ಇವುಗಳ ಸೂಕ್ಷ್ಮವನ್ನು ವಿವರಿಸುವಲ್ಲಿ ಈ ಪರಿಕಲ್ಪನೆಗೆ ಹೆಚ್ಚು ತೂಕ ಬರುತ್ತದೆ. ಕನ್ನಡದಲ್ಲಿ ಉಪಸಂಸ್ಕೃತಿ ಮಾಲೆಯಡಿ ಬಂದ ಸಾಮುದಾಯಿಕ ಅಧ್ಯಯನಗಳು, ಬುಡಕಟ್ಟುಗಳ ಅಧ್ಯಯನಗಳು, ಈ ಬಗೆಯ ಕಿರುಪರಂಪರೆಯ ಶೋಧಗಳೇ ಆಗಿವೆ. ಕನ್ನಡದ ಒಟ್ಟು ಆಲೋಚನೆಯಲ್ಲಿ ಈ ಬಗೆಯ ಕಿರುಪರಂಪರೆಯ ಶೋಧಕ್ಕೆ ಹಲವು ಒಳ ಹರಿವುಗಳಿವೆ. ಚಂದ್ರಶೇಖರ ಕಂಬಾರ, ಗಿರೀಶ್ ಕಾರ್ನಾಡ್, ಬೇಂದ್ರೆ ಮುಂತಾದವರು ಜಾನಪದವನ್ನು ತಮ್ಮ ಅಭಿವ್ಯಕ್ತಿಯ ಭಾಷೆಯಾಗಿ ದುಡಿಸಿಕೊಂಡದ್ದು ಒಂದು ನೆಲೆಯಲ್ಲಿ ಕಿರುಪರಂಪರೆಗಳ ಶೋಧವೇ ಆಗಿದೆ. ಹೀಗೆ

ಕಿರುಪರಂಪರೆಗಳ ಶೋಧವು ದೇಶೀವಾದದ ಹುಡುಕಾಟದ ಬಹುಮುಖ್ಯ ಹಂಬಲವೂ ಆಗಿದೆ.

ದೇಶೀವಾದದ ವಿಭಿನ್ನ ಎಳೆಗಳು

ದೇಶೀವಾದವು ಒಂದು ಯಾಜಮಾನಿಕೆ ಪರಿಭಾಷೆಯಾಗಿ ವಿಮರ್ಶೆ ಮತ್ತು ಸಂಸ್ಕೃತಿ ಚಿಂತನೆಯಲ್ಲಿ ರೂಪುಗೊಳ್ಳುತ್ತಿದೆ. ಆ ಕಾರಣಕ್ಕೇನೆ, ಅನೇಕ ಜ್ಞಾನ ಶಿಸ್ತಿನ ಚಿಂತಕರು ದೇಶೀವಾದವನ್ನು ತಮ್ಮದಾಗಿಸಿಕೊಳ್ಳಲು ಮುಂದೆ ಬರುತ್ತಿದ್ದಾರೆ. ದೇಶಿವಾದವು ಒಂದು ಆಗಿರದೆ ಅದು ಹಲವು ಆಯಾಮಗಳಲ್ಲಿ ಪ್ರಕಟವಾಗುತ್ತಿದೆ. ಅದೊಂದು ಆಲೋಚನ ಪ್ರವೃತ್ತಿ, ಧೋರಣೆಯನ್ನು ರೂಪಿಸುವ ಸಂವೇದನೆಯಾಗಿರುವುದರಿಂದ ಆಯಾ ವಿಷಯವಾರು ದೇಶೀವಾದದ ಹಲವು ಶಾಖೆಗಳು ತೆರೆದುಕೊಳ್ಳುತ್ತಿವೆ. ದೇಶೀವಾದದಲ್ಲಿ ಹಲವಾರು ವಿಭಿನ್ನ ಎಳೆಗಳಿವೆ. ಪ್ರತಿ ಎಳೆಯ ರಾಜಕಾರಣ ಸಹ ವಿಭಿನ್ನ ಇಲ್ಲವೇ ಪ್ರಬಲ ಎಳೆಗೆ ಪೂರಕ ಆಗಿರಬಹುದು. ಇಂದು ದೇಶೀವಾದದಲ್ಲಿ ಮೂಡುತ್ತಿರುವ ಹೊಸ ಹೊಸ ಎಳೆಗಳನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಪ್ರಮುಖ ಎಳೆಯ ಅಖಿಲ ಭಾರತ ವ್ಯಾಪ್ತಿ ಹೊಂದಿರುವ ಗಾಂಧಿಯ ಹಿಂದ್ ಸ್ವರಾಜ್ ಆಧರಿಸಿರುವಂಥದ್ದು. ಆಧುನಿಕತೆಯ ವಿವಿಧ ಮುಖಗಳಾದ ವಿಜ್ಞಾನ, ತಂತ್ರಜ್ಞಾನ, ಆಲೋಚನೆ, ಔಷಧಿ, ಇಂಗ್ಲಿಷ್ ಭಾಷೆಯನ್ನೇ ತಿರಸ್ಕರಿಸುವಂಥದ್ದು. ಇದಲ್ಲದೆ ಇತ್ತೀಚೆಗೆ ಎಡದೇಶಿ, ಬಲದೇಶಿ, ದಲಿತ ದೇಶಿ, ಹಿಂದುಳಿದ ವರ್ಗಗಳ ದೇಶಿ ಎನ್ನುವ ಮಾತುಗಳು ಕೇಳಿಬರುತ್ತಿವೆ. ಈ ಎಳೆಗಳು ವಿವಿಧ ರಾಜಕೀಯ ಗುಂಪುಗಳಿಂದ ಪ್ರೇರಿತವಾದುವು".8

ಕನ್ನಡದಲ್ಲೂ ದೇಶೀವಾದದ ವಿಭಿನ್ನ ಎಳೆಗಳು ಸಾಧ್ಯವಾಗಿವೆ. ರಹಮತ್ ತರೀಕೆರೆ ಅವರು ಕನ್ನಡದ ದೇಸೀ ಚಿಂತನೆಗಳನ್ನು ಗ್ರಹಿಸಿ ಐದು ಬಗೆಯ ಎಳೆಗಳನ್ನು ಗುರುತಿಸಿದ್ದಾರೆ.9 ಕನ್ನಡದಲ್ಲಿ ದೇಶೀವಾದ ಹುಟ್ಟಿಕೊಂಡದ್ದು 'ಸಂಸ್ಕೃತ' ಮತ್ತು 'ಬ್ರಾಹ್ಮಣ,' ಚಿಂತನೆಯ ನೆಲೆಯಲ್ಲಿ. ಈ ಬಗೆಯ ಧೋರಣೆಯನ್ನು 'ಬ್ರಾಹ್ಮಣ ದೇಶೀವಾದ' ಎಂದು ಕರೆಯಬಹುದು. ಹಾಗೆ ನೋಡಿದರೆ ದೇವುಡು ಮೊದಲ ದೇಶೀವಾದಿ ಚಿಂತಕ. ಬ್ರಾಹ್ಮಣ ನೆಲೆಯ ಸಂಸ್ಕಾರವನ್ನೇ ಭಾರತದ ಸಂಸ್ಕೃತಿ ಎಂಬರ್ಥದ ವಿವರಣೆ ನೀಡಿ ಬ್ರಾಹ್ಮಣ ದೇಶೀವಾದಕ್ಕೆ ಚಾಲನೆ ಒದಗಿಸಿದರು. ಇದನ್ನೇ ತೀರಾ ಭಿನ್ನವಾಗಿ ಅಡಿಗ, ಅನಂತಮೂರ್ತಿಯವರು ವಿವರಿಸಿದರು. ಅಡಿಗರು ವೈದಿಕ ಬ್ರಾಹ್ಮಣ ಪರಂಪರೆಯ ಮೂಲಕ ಗತದ ಶೋಧನೆ ಮಾಡಬೇಕೆಂದು ಚಿಂತಿಸಿದರೆ, ಅನಂತಮೂರ್ತಿಯವರು 'ಇಂಗ್ಲಿಷ್ ಬ್ರಾಹ್ಮಣ ಕನ್ನಡ ಶೂದ್ರ' ಕಲ್ಪನೆಯನ್ನು ಪ್ರತಿಪಾದಿಸಿದರು. ಕನ್ನಡದಲ್ಲಿ ದಲಿತ ಚಿಂತಕರು ನಡೆಸಿದ ದಲಿತ ಸಂಸ್ಕೃತಿಯ ಹುಡುಕಾಟದ ನೆಲೆಗಳನ್ನು ನೋಡಿದರೆ 'ದಲಿತ ದೇಶೀವಾದ' ಎಂತಲೇ ಗುರುತಿಸಬಹುದು. ಬಿ.ಕೃಷ್ಣಪ್ಪ, ದೇವಯ್ಯ ಹರವೆ ಇದಕ್ಕೆ ಅಡಿಪಾಯ ಹಾಕಿದರು.

ನಂತರ ಇದನ್ನು ದೇವನೂರು ಮಹಾದೇವ, ಅರವಿಂದ ಮಾಲಗತ್ತಿ, ಮ.ನ.ಜವರಯ್ಯ, ಕೆ.ರಾಮಯ್ಯ, ಮೊಗಳ್ಳಿ ಗಣೇಶ್, ಬಿ.ಎಂ.ಪುಟ್ಟಯ್ಯ ಮುಂತಾದವರು ಮುಂದುವರೆಸಿದರು. ಎಸ್.ಎಸ್.ಹಿರೇಮಠ ಅವರ ದಲಿತ ಚಿಂತನೆಗಳು, ಇದಕ್ಕೊಂದು ಭಿನ್ನ ಆಯಾಮವನ್ನು ಕಲ್ಪಿಸಿವೆ. ಜನಾಂಗವನ್ನು ಉಳಿಸುವ ಬೆಳೆಸುವ ಚಿಂತನೆಯಲ್ಲಿ, ಜಾತೀಯತೆಯನ್ನು ಉಳಿಸಿ ಬೆಳೆಸುವ ಶೋಷಕ ನೆಲೆ ಇರುವ ಆಯಾಮವನ್ನು ದಲಿತ ದೇಶೀವಾದ ಗುರುತಿಸುತ್ತದೆ. ಆ ಕಾರಣಕ್ಕೆ ಜನಪದವನ್ನು ಮೋಹಿಸುವುದಕ್ಕಿಂತ, ಅದರೊಳಗಿನ ದಲಿತರ ಶೋಷಕ ನೆಲೆಗಳನ್ನು ಶೋಧಿಸುವ ಕೆಲಸ ನಡೆದಿದೆ. ಈಗಲೂ ನಡೆಯುತ್ತಿದೆ. ಈ ಚಿಂತನೆಯಲ್ಲಿ ಕೆಲವು ತಾತ್ವಿಕ ಸಮಸ್ಯೆಗಳು ಇಲ್ಲದಿಲ್ಲ. ಎನ್.ಆರ್. ನಾಯಕ ಅವರು ಮುಕ್ರಿಗಳು ಮತ್ತು ಹೊಲೆಯರ ಪದಗಳನ್ನು ಸಂಗ್ರಹಿಸಿ ಮೊದಲ ಮಾತಲ್ಲಿ ಜಾನಪದದ ಮೂಲವಿರುವುದೇ ದಲಿತರಲ್ಲಿ ಎನ್ನುತ್ತಾರೆ. ಎಚ್.ಎಲ್. ನಾಗೇಗೌಡರು ತಮ್ಮ ಆತ್ಮಕಥನದಲ್ಲಿ ಜಾನಪದದ ಜೀವನಾಡಿ ಮಿಡಿಯುವುದು ದಲಿತರಲ್ಲಿ ಎನ್ನುವ ನಿರ್ವಚನಗಳೂ ಇವೆ. ಆದರೆ ಇವು ಬಹುಪಾಲು ಅಸೂಕ್ಷ್ಮ ವಿವರಣೆಯಲ್ಲಿ ನಿಲ್ಲುತ್ತವೆ.

"ಜಾನಪದವನ್ನು ಸಾಮಾಜಿಕ ನ್ಯಾಯದಲ್ಲಿ ಮಂಡಿಸುವ ಕಾರಣಕ್ಕೆ 'ಹಿಂದುಳಿದ ಜಾತಿಗಳ ದೇಶೀವಾದ'ವು ಕನ್ನಡದಲ್ಲಿ ಮೈದಾಳಿದೆ. ಹಿ.ಶಿ.ರಾಮಚಂದ್ರೇಗೌಡ ಅವರು ಜಾನಪದವನ್ನು ಶೂದ್ರ, ದಲಿತ, ದೇಶಿ, ಕನ್ನಡ ಸಂಸ್ಕೃತಿಗಳ ನೆಲೆಯಲ್ಲಿ ವಿಶ್ಲೇಷಣೆ ಮಾಡುವ ವಿದ್ವಾಂಸರಲ್ಲಿ ಒಬ್ಬರು. ಅವರು ಎಷ್ಟೇ ಪ್ರಾದೇಶಿಕ, ದೇಶಿ ಸಂಸ್ಕೃತಿಯ ಬಗ್ಗೆ ಮಾತನಾಡಿದರೂ ಅದರಲ್ಲಿ ಸಾಮಾಜಿಕ ಸಮಾನತೆಯ ಪ್ರಶ್ನೆಯನ್ನು ಕೈಬಿಡುವುದಿಲ್ಲ. ಕೆಲವರಲ್ಲಿ ಸಾಂಸ್ಕೃತಿಕ ಪರಿಭಾಷೆಯು ಸಾಮಾಜಿಕ, ರಾಜಕೀಯ, ಆರ್ಥಿಕ ಪ್ರಶ್ನೆಗಳನ್ನು ಎತ್ತಲು ಒಂದು ದೊಡ್ಡ ತೊಡಕಾಗಿದೆ. ಸಾಮಾಜಿಕ ನ್ಯಾಯದ ಪ್ರಶ್ನೆ ಬಂದಾಗ ವೈದಿಕ ಸಂಸ್ಕೃತಿ ವಿರುದ್ಧ ಕಿಡಿ ಕಾರುವ ಅಧ್ಯಯನಕಾರರು, ವರ್ಗದ ಪ್ರಶ್ನೆಯನ್ನು ಎತ್ತುವುದಿಲ್ಲ.10 ಇಂತಹ ತೊಡಕು ಹಿಂದುಳಿದ ಜಾತಿಗಳ ದೇಶೀವಾದಿ ಚಿಂತನೆಯಲ್ಲೂ ಇದೆ. ಈಗೀಗ ಹಿಂದುಳಿದ ವರ್ಗಗಳ ಜಾತಿ ಸಮುದಾಯದ, ಒಳಪಂಗಡಗಳ ಅಧ್ಯಯನಗಳು ಹೆಚ್ಚಾಗುತ್ತಿವೆ. ಆ ಮೂಲಕ ಒಂದು ಜಾತಿ ಸಮುದಾಯದ ಮುಖೇನ ಜಾನಪದವನ್ನು ವಿಶ್ಲೇಷಿಸುವ ಮಾದರಿಯೊಂದು ಸೃಷ್ಟಿಯಾಗುತ್ತಿದೆ. ಕನ್ನಡದಲ್ಲಿ ಕುರುಬ ಮತ್ತು ಬೇಡ ಸಮುದಾಯದ ಅಧ್ಯಯನಗಳನ್ನು ಈ ನೆಲೆಯಲ್ಲಿ ನೋಡಲು ಸಾಧ್ಯವಿದೆ. ಇವುಗಳ ತೊಡಕೆಂದರೆ ವಿಶ್ಲೇಷಣೆಯಲ್ಲಿ ಜಾತಿ ಮೂಲಭೂತವಾದವು ಅಡಗಿರುವುದು.

ಶ್ರೇಷ್ಠವಾದುದು ಜಾನಪದದಲ್ಲಿದೆ ಅದರ ಮೂಲಕ ನಮ್ಮ ವರ್ತಮಾನವನ್ನು ಕಟ್ಟಿಕೊಳ್ಳಬೇಕು, ನಮ್ಮ ಜಾನಪದ ಪರಂಪರೆಯನ್ನು ಶೋಧಿಸುವ ಮೂಲಕ ನಮ್ಮ ದೇಶೀವಾದವನ್ನು ಕಟ್ಟಬೇಕು ಎನ್ನುವ ಚಿಂತನೆಗಳನ್ನು 'ಜಾನಪದ ದೇಶೀವಾದ' ಎಂದು ಕರೆಯಬಹುದು. ಈ ವಿವರಗಳು ಜಾನಪದವನ್ನು ತುಂಬಾ ರಮ್ಯಭಾವದಲ್ಲಿ ವಿವರಿಸಿಕೊಳ್ಳುತ್ತವೆ. ಇಲ್ಲಿ ದೇಸಿ ಅಂದರೆ ಜಾನಪದ, ಜಾನಪದವೆಲ್ಲಮೂ ದೇಶೀ ವಾದದ ಸರಕು ಎಂಬಂತಹ ವಿಶ್ಲೇಷಣೆಗಳೂ ನಡೆದಿವೆ. ಹಾಗೆ ವಿವರಿಸ ಹೊರಡುತ್ತಲೂ ದೇಶೀವಾದವು ತನ್ನ ಸೂಕ್ಷ್ಮತೆಯನ್ನು ಕಳೆದುಕೊಳ್ಳುತ್ತದೆ. ಅನೇಕ ಪ್ರಶ್ನೆಗಳು ದೇಶೀವಾದಕ್ಕೆ ಎದುರಾಗುತ್ತವೆ.

ಈಗ ಹೆಚ್ಚು ಚರ್ಚೆಗೊಳಗಾಗುತ್ತಿರುವುದು ವಸಾಹತೋತ್ತರವಾದಿ ದೇಶೀವಾದ. ವಸಾಹತೋತ್ತರ ಚಿಂತಕರಾದ ಎಡ್ವರ್ಡ್ ಸೈದ್, ಅಶೀಶ್‌ನಂದಿ, ಗಣೇಶ್ ಎನ್.ದೇವಿ, ರೋಮಿಲಾ ಥಾಪರ್ ಮುಂತಾದವರು ಈ ಚಿಂತನೆಯನ್ನು ಭಿನ್ನವಾಗಿ ವಿಸ್ತರಿಸಿದ್ದಾರೆ. ಕನ್ನಡದಲ್ಲಿ ಡಿ.ಆರ್.ನಾಗರಾಜ್ ಅವರು ಈ ಬಗೆಯ ದೇಶೀವಾದಿ ಚಿಂತನೆಗೆ ಒಂದು ಆಯಾಮವನ್ನು ಕಲ್ಪಿಸಿದವರು. ಇಲ್ಲಿ ಪಾಶ್ಚಾತ್ಯ ಸಂಸ್ಕೃತಿಯನ್ನು ವಿರೋಧಿಸಿದರೂ, ಅದನ್ನು ಏಕರೂಪಿ ಎಂದು ಗ್ರಹಿಸುವುದಿಲ್ಲ. ಹೀಗೆ ದೇಶೀವಾದವು ಭಿನ್ನ ಎಳೆಗಳನ್ನು ಪಡೆಯುತ್ತಿದೆ. ತನ್ನ ಅರ್ಥದ ಸ್ವರೂಪವನ್ನು ಹಿಗ್ಗಿಸಿಕೊಳ್ಳುತ್ತಿದೆ. ಜಾನಪದ ಅಧ್ಯಯನಗಳ ಒಂದು ಭಿನ್ನ ಹೊರಳುನೋಟವಾಗಿ ದೇಶೀಯತೆ ಜಾಗತಿಕವಾದ ಚರ್ಚೆಯಾಗಿ ಮಾರ್ಪಟ್ಟಿದೆ. ಕನ್ನಡದ ಜಾನಪದ ಅಧ್ಯಯನ ಗಳಲ್ಲಿನ್ನೂ ದೇಶೀಯತೆಯನ್ನು ಆಧರಿಸಿದ ಸಾಂಸ್ಕೃತಿಕ ಚಿಂತನೆಗಳು ಸಾಧ್ಯ ವಾಗಬೇಕಿದೆ.

ಕೊನೆ ಟಿಪ್ಪಣಿಗಳು:

1. ರಾಜೇಂದ್ರ ಚೆನ್ನಿ, ದೇಶೀವಾದ, ಪು: 2.
2. ಅದೇ ಪು: 3.
3. ತಾರಕೇಶ್ವರ್, ಕನ್ನಡ ಅಧ್ಯಯನ, ಮಾರ್ಚ್–1999, ಪು: 103.
4. ಆರ್.ವಿ.ಭಂಡಾರಿ, ಕನ್ನಡ ಸಾಹಿತ್ಯದಲ್ಲಿ ದೇಸೀಯತೆ, ಪು: 3.
5. ಅಂಬಳಿಕೆ ಹಿರಿಯಣ್ಣ, ಜಾನಪದ ಸೈದ್ಧಾಂತಿಕ ಪ್ರಜ್ಞೆ ಮತ್ತು ದೇಸೀವಾದ, ಪು:33
6. ರಾಜೇಂದ್ರ ಚೆನ್ನಿ, ದೇಶೀವಾದ, ಪು: 3೦.
7. ಅದೇ, ಪು: 20.
8. ತಾರಕೇಶ್ವರ್, ಕನ್ನಡ ಅಧ್ಯಯನ, ಮಾರ್ಚ್–1999, ಪು: 103.
9. ರಹಮತ್ ತರೀಕೆರೆ, ಸಾಂಸ್ಕೃತಿಕ ಅಧ್ಯಯನ, ಪು: 80–84.
10. ಆದೇ., ಪು: 82.

■

ಮುಂದಿನ ಸಂಚಿಕೆಯಲ್ಲಿ:
ದೇಶಿಯತೆ; ಸ್ವಂತಿಕೆಯ ಹುಡುಕಾಟ



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು
ಪ್ರಕಟಿತ ಕೃತಿಯ ೨ ಪ್ರತಿಗಳನ್ನು
ಕಳುಹಿಸಿಕೊಡಬೇಕಾಗಿ
ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು–560 091
ದೂರವಾಣಿ : 080-23480278, 9448048306

ದೀಪಾವಳಿ ಬೆಳಕಿನ ಹಬ್ಬವೇ?

ಸುಭಾಶ ಜಿ.ಶೀಲವಂತ

ಬೆಳಕಿನ ಹಬ್ಬ ದೀಪಾವಳಿ ಎಂದು ಹೇಳುತ್ತೇವಲ್ಲಾ ಇದು ನೀಜವೇ?ನಾವು ಎಷ್ಟೋ ಸಲ ನಮಗೆ ಗೋತ್ತಿರದ ಎಷ್ಟೋ ವಿಷಯಗಳನ್ನು ಸುಮ್ಮನೆ ಕಣ್ಣು ಮುಚ್ಚಿಕೊಂಡು ಒಪ್ಪಿ ಬಿಡುತ್ತೇವೆ. ಇದು ಎಷ್ಟೋ ಸಲ ವಿದ್ಯಾವಂತರು ಅನಕ್ಷರಸ್ಥರಿಗೆ ಮಾಡುವ ಅಕ್ಷರದ್ರೋಹವೆಂತಲೂ, ಅರ್ಥೈಸಬೇಕಾಗುತ್ತದೆ. ನಮ್ಮ ಕೆಲವು ರಾಷ್ಟ್ರ ನಾಯಕರು ತಮ್ಮ ವೈಯಕ್ತಿಕ ಜೀವನ ಚರಿತ್ರೆಯನ್ನು ದೇಶದ ಇತಿಹಾಸವೆಂದು ಬಿಂಬಿಸಿದ್ದಾರಲ್ಲ? ವಿದ್ಯಾವಂತರೆನಿಸಿಕೊಂಡವರು ನಾವು ಕಣ್ಣು ಮುಚ್ಚಿಕೊಂಡು ಒಪ್ಪಿಕೊಂಡಿದ್ದೆವಲ್ಲ ಇಂಥದ್ದೆಲ್ಲವನ್ನು ಮರು ವ್ಯಾಖ್ಯಾನಿಸುವ ನಿಜ ಅರ್ಥೈಸುವ ಅಗತ್ಯವಿದೆ.

ನಾವು ಆಚರಿಸುವ ಅದೆಷ್ಟೋ ಹಬ್ಬಹರಿದಿನಗಳು ಉತ್ಸವಗಳು ಅದರ ನೈಜತೆಯನ್ನು ಮಹತ್ವವನ್ನು ಮರೆತು ಇತಿಹಾಸವನ್ನು ಮುಚ್ಚಿಡುವ ಸತತ ಪ್ರಯತ್ನ ಮುಂದುವರೆದಿದೆ. ದೀಪಾವಳಿ ಹಬ್ಬವೂಕೂಡ ಇದಕ್ಕೆ ಹೊರತಾಗಿಲ್ಲ. ಭಾರತ ದೇಶಕ್ಕೆ ಜಂಬೂ ದ್ವೀಪ, ಭರತ ಖಂಡವೆಂತಲೂ ಕರೆಯುತ್ತಿದ್ದರು. ಮೂಲನಿವಾಸಿ ಅನಾರ್ಯ ರಾಜರು ಎಲ್ಲಾಕಡೆ ರಾಜ್ಯಭಾರ ಮಾಡುತ್ತಿದ್ದರು. ಅಂಥಹದೊಂದು ಪ್ರಾಂತದಲ್ಲಿ ಬಲಿರಾಜಾ ಆಳುತ್ತಿದ್ದು. ಅವನು ಪರಾಕ್ರಮಿಯೂ, ಶೂರನೂ, ಧೀರ ಚಕ್ರವರ್ತಿ ರಾಜನಿದ್ದ ಅವನು ಮೂಲನಿವಾಸಿ ಅನಾರ್ಯರಾಜನಿದ್ದ (ಶೂದ್ರ) ಎಲ್ಲಾ ಆರ್ಯರು ಬಲಿರಾಜನ ಆಧೀನದಲ್ಲಿದ್ದರು. ವಿಷ್ಣು, ಬ್ರಹ್ಮ, ಇಂದ್ರ, ರುದ್ರ, ವರುಣ, ಮುಂತಾದವರು ಬಲಿ ಚಕ್ರವರ್ತಿಯ ಆದೀನದಲ್ಲಿದ್ದರು.

ವಿಷ್ಣು ಕಪಟ ಬ್ರಾಹ್ಮಣ ವೇಷ ಧರಿಸಿಕೊಂಡು ಮೋಸದಿಂದ ಬಲಿ ಚಕ್ರವರ್ತಿಯನ್ನು ಕೊಲೆ ಮಾಡಿ ಬಲಿರಾಜನ ರಾಜ್ಯಭಾರವನ್ನು ಕಸಿದುಕೊಂಡು ದಿವಾಳಿ ಮಾಡಿ ಆ ನಗರದಲ್ಲಿ ಖುಷಿ ಆಚರಣೆ ಮಾಡುವದಕ್ಕಾಗಿ ನಾಲ್ಕು ಕಡೆ ತುಪ್ಪದ ದೀಪ ಹಚ್ಚಿ ಸಂತೋಷ ಆಚರಣೆ ಮಾಡಿದರು. ಅದು ಇವತ್ತಿಗೂ ಜೀವಂತವಿಡುವದಕ್ಕಾಗಿ ಸತ್ಯವನ್ನು ಮುಚ್ಚಿಟ್ಟು ಅಸತ್ಯದ ಘೋರ ಅನ್ಯಾಯವನ್ನು ಮುಚ್ಚಿಡುವದಕ್ಕಾಗಿ ದೀಪಹಚ್ಚಿ ದೀಪಾವಳಿ ಆಚರಿಸುತ್ತಾರೆ.

ಈ ಮೋಸದ ಷಡ್ಯಂತ್ರ ಅರಿಯದ ಮುಗ್ದ ಜನ ಬಲಿರಾಜನನ್ನು ಹುಡಕಲು ಪ್ರಾರಂಭಿಸಿದರು ಆಗ ಬ್ರಾಹ್ಮಣರು ಹೀಗೆ ಹೇಳುತ್ತಾರೆ. ಯಾವ ಪ್ರಕಾರ ಸಂತ ತುಕಾರಾಮನ ಹತ್ಯೆ ಮಾಡಿ ನಂತರ ಇವರೇ ಹೀಗೆ ಹೇಳಲು ಪ್ರಾರಂಭಿಸಿದರು.ಇಂದ್ರನ ಪುಷ್ಪಕ ವಿಮಾನ ಬಂತು ಅದರಲ್ಲಿಯೇ ಸಂತ ತುಕಾರಾಮ ವೈಕುಂಠಕ್ಕೆ ಹೋದ, ಅದೇ ರೀತಿಯಾಗಿ ಬಲಿರಾಜನಿಗೆ ಕೊಲೆ ಮಾಡಿ ಹೀಗೆ ಸುಳ್ಳು ಹೇಳಲು ಪ್ರಾರಂಭಿಸಿದರು.

ಬಲಿರಾಜಾ ಪಾತಾಳದಲ್ಲಿ ಪ್ರಾಣಬಿಟ್ಟು ಸ್ವರ್ಗಕ್ಕೆ ಹೋಗಿದ್ದಾನೆ. ಯಾವ ದಿನ ಹೋಗಿದ್ದಾನೆಯೋಅದೇ ದಿನ ಮತ್ತೆ ಬರುತ್ತಾನೆ. (ಪ್ರತಿ ದೀಪಾವಳಿ)ಅದಕ್ಕಾಗಿ ನೀವು ನಿಮ್ಮ ಮನೆ ಶುಭ್ರಮಾಡಿ ಬಗೆ ಬಗೆಯ ತಿಂಡಿ ತಿನಿಸುಗಳನ್ನು ಮಾಡಿ ಹೊಸ ಹೊಸ ಬಟ್ಟೆಹಾಕಿಕೊಂಡಿರಬೇಕು. ಬಲಿರಾಜಾ ಬಂದು ನಿಮ್ಮನ್ನು ನೋಡಿ ದುಃಖಿಸಬಾರದು ಎಂದು ಕಥೆಕಟ್ಟುತ್ತಾರೆ. ನಿಜವಾಗಿಯೂ ದೀಪಾವಳಿ ಆರ್ಯ ಅನಾರ್ಯರ ನಡುವಿನ ಸಂಘರ್ಷದ ಸ್ಮೃತಿಯ ದಿನ ಇದು ಸನಾತನ ವೈದಿಕ, ಬ್ರಾಹ್ಮಣರಿಗೆ ಸಂತೋಷದ ದಿನ ಆದರೆ ದೀನರಿಗೆ ದರಿದ್ರರಿಗೆ ಅನಾರ್ಯರಿಗೆ ಈ ದೇಶದ ಮೂಲ ನಿವಾಸಿ ಬಹುಜನರಿಗೆ ದುಃಖದ ದಿನ ಆದರೆ ವಿಚಿತ್ರವೆಂದರೆ ಬಹುಜನರು ತಮ್ಮ ಪೂರ್ವಜರ ವಿನಾಶವನ್ನು ಮರೆತು ದುಃಖದ ದಿನ ಆಚರಿಸುವ ಬದಲು ಬೆಳಕಿನ ಹಬ್ಬ ದೀಪಾವಳಿ ಆಚರಿಸುತ್ತಿರುವದು ಶೋಚನೀಯ!.

ದಸರಾ–ವಿಜಯದಶಮಿ:

ಈ ದಿನವನ್ನು ಭಗವಾನ್ ರಾಮನು ರಾವಣನ ಜೊತೆ ಲಂಕಾದಲ್ಲಿ ಯುದ್ಧ ಮಾಡಿ ಅವನನ್ನು ಸೋಲಿಸಿ ಕೊಲೆ ಮಾಡಲಾಗಿದೆ. ರಾಮನ ಈ ಕೃತ್ಯವನ್ನು ಅಧರ್ಮವನ್ನು ಧರ್ಮದ ವಿಜಯವೆಂದು ಮತ್ತು ನ್ಯಾಯದ ಪ್ರತೀಕವೆಂದು ತಿಳಿಯುತ್ತಾರೆ. ದಿಲ್ಲಿಯಲ್ಲಿ ರಾವಣನ ದಹನವಾಗಿದ್ದ ಆ ಸ್ಥಳಕ್ಕೆ ರಾಮಲೀಲಾ ಮೈದಾನವೆಂದು ಕರೆಯುತ್ತಾರೆ ಇದರ ಜೊತೆ ಜೊತೆಗೆ ಮೇಘನಾದ ಮತ್ತು ಕುಂಭಕರ್ಣನ ಮೂರ್ತಿಕೂಡಾ ಸುಡುತ್ತಾರೆ. ಇದರಲ್ಲಿ ದೇಶವಾಸಿಗಳು ಯಾವ ಅರ್ಥವೂ ಇಲ್ಲ ರಾವಣನಿಗೆ ಹತ್ತು ತಲೆ ಯಾಕೆ ಮಾಡಿದಾರೆನ್ನವದೇ ಗೊತ್ತಿಲ್ಲ. ಮನುಷ್ಯನಿಗೆ ತಲೆ ಮಾತ್ರ ಒಂದೇ ಇರುತ್ತದೆ. ಆರ್ಯ ಬ್ರಾಹ್ಮಣರು ರಾವಣನಿಗೆ ರಾಕ್ಷಸನನ್ನಾಗಿ ಮಾಡಿದ್ದಾರೆ. ರಾಕ್ಷಸನಿಗೂ ಹತ್ತು ತಲೆಗಳಿರುವುದಿಲ್ಲ. ಹಾಗಾದರೆ ಈ ಹತ್ತು ತಲೆ ಯಜನಯಾರು? ಇವರು ಎಲ್ಲಿಂದ ಬಂದರು. ಈ ಪ್ರಶ್ನೆಗೆ ಯಾರ ಹತ್ತಿರ ಉತ್ತರವಿದೆ. ಜನರಿಗೆ ಅಂಜಿಸುವ ಸಲುವಾಗಿ ಉದ್ದೂದ್ದ ಹಲ್ಲು, ಉದ್ದ ಕೊಂಬು, ಭೀಕರ ರೂಪ ಕೊಟ್ಟು ರಾಕ್ಷಸನ ರೂಪದಲ್ಲಿ ತೋರಿಸುತ್ತಾರೆ. ಆದರೆ ಇದು ಕೇವಲ ಷಡ್ಯಂತ್ರ, ಇದು ಸನಾತನವಾದಿಗಳ ಕಮಲ–ಕಮಾಲದ ಪರಿಣಾಮ.

ಸಂತೋಷದ ಸಂಭ್ರಮದ ದೀಪಾವಳಿ ಹಬ್ಬದ ಹಿಂದಿರುವ ರಹಸ್ಯ. ಮೂಲನಿವಾಸಿ ರಾಜರ ಮತ್ತು ಕ್ರೂರ ಆರ್ಯರ ಹಾಗೂ ರಾಕ್ಷಸ ರಕ್ಷಕ ಅರಸರ ನಡುವಿನ ಷ್ಯಡಂತ್ರದ ಯುದ್ದವಿದೆ. ಇಂಥ ಕೃತ್ಯವನ್ನು ಭಜನೆ, ಕೀರ್ತನೆ, ಪ್ರವಚನ, ಪುರಾಣ, ಲೇಖನ ಸಾಹಿತ್ಯದ ಮೂಲಕ ಈ ನೀಚ ಸಂಸ್ಕೃತಿಯನ್ನು ಗಟ್ಟಿಯಾಗಿಡುವುದಕ್ಕಾಗಿ ಇತಿಹಾಸ ಜೀವಂತವಿಡುತ್ತಿದ್ದಾರೆ.

ಮೂಲನಿವಾಸಿಗಳ ದಸರಾ

ಪ್ರಿಯದರ್ಶಿ ಬೌದ್ಧ ಸಾಮ್ರಾಟ ಅಶೋಕ ಕಳಿಂಗ ಯುದ್ಧದಲ್ಲಿ ವಿಜಯಿಯಾದ ಮೇಲೆ ಅವನ ಯುದ್ಧ ಕ್ಷೇತ್ರದಲ್ಲಿ ಸಾವಿರಾರು ಜನ ಸೈನಿಕರು ಮಡಿದರು. ರಕ್ತದ ಕಾಲುವೆಯೇ ಹರಿಯಿತು. ಅನೇಕ ಜನ ಅನಾಥರಾದರು. ಮಹಿಳೆಯರು ವಿಧವೆಯರಾದರು. ಅನೇಕ ಜನ ಅಂಗವಿಕಲರಾದರು. ಅದನ್ನು ನೋಡಿದ ಅಶೋಕನ ಮನ ಕರಗಿತು. ಹೃದಯ ಪರಿವರ್ತನೆಯಾಯಿತು. ಇನ್ನು ಮುಂದೆ ನಾನು ಯುದ್ಧ ಮಾಡುವುದಿಲ್ಲವೆಂದು ಖಡ್ಗ ಕೆಳಗಿಟ್ಟು ಪ್ರಮಾಣ ಮಾಡಿದ. ಹಿಂಸೆಯ ಮಾರ್ಗ ತ್ಯಾಗ ಮಾಡಿದ. ಅದೇ ದಿನ ಬೌದ್ಧ ಧಮ್ಮ ಗ್ರಹಣ ಮಾಡಿದ. ಅವತ್ತು ಕಾರ್ತಿಕ ದಶಮಿಯ ದಿನವಾಗಿತ್ತು. ಆ ದಿನವನ್ನು "ಧಮ್ಮ ವಿಜಯದಿವಸ " "ಅಶೋಕ ವಿಜಯದಶಮಿ" ಎಂದು ಆಚರಿಸಲು ಪ್ರಾರಂಭಿಸಿದರು. ಆದರೆ ಆರ್ಯ ಬ್ರಾಹ್ಮಣರು ಇದೇ ದಿನವನ್ನು ಮಹತ್ವದ ದಿನವನ್ನಾಗಿ ಬೌದ್ಧ ಮೌರ್ಯ ಸಾಮ್ರಾಟ ಅಶೋಕನ ಸಂಬಂಧ ಬ್ರಾಹ್ಮಣ ಸೇನಾಪತಿ ಪುಷ್ಯಮಿತ್ರ ಶೃಂಗ ತನ್ನ ಗುರು ಪತಂಜಲಿಯ ನಿರ್ದೇಶನದ ಮೇರೆಗೆ ರಾಜಾ ಬೃಹದ್ರಥನನ್ನು ಕೊಲೆ ಮಾಡಲಾಯಿತು.

ಇದೇ ಕಾರಣಕ್ಕಾಗಿ ಅಹಿಂಸೆಯ ವಿರೋಧ ಇದೇ ದಿನವನ್ನು ಆ-ಯುಧ ಪೂಜೆ ಪ್ರಾರಂಭ ಮಾಡಿ ದಶ+ಹರ=ದಶಹರಾ ಅಂದರೆ ಹತ್ತು ತಲೆಯ ರಾವಣನಿಗೆ ಸೋಲಿಸಲಾಗಿದೆ. ಇದೇ ದಿನವನ್ನು ಸತ್ಯದ ಮೇಲೆ ಅಸತ್ಯದ ಸಾಹಿತ್ಯ ರಚನೆ ಮಾಡಿ ಅದೇ ದಿನವನ್ನು ರಾವಣನನ್ನು ಸುಡಲಾಗಿದೆ. ಬ್ರಾಹ್ಮಣರು ನಿರಪರಾಧಿ ಗೋವುಗಳನ್ನು ಯಜ್ಞದಲ್ಲಿ ಜೀವಂತ ಸುಡುವದನ್ನು ಬಲಿರಾಜಾ ವಿರೋಧಿಸುತ್ತಿದ್ದ ಅದಕ್ಕಾಗಿ ರಾಮನನ್ನು ರಾಮಾಯಣದ ನಾಯಕನ್ನಾಗಿ ಮಾಡಿ ರಾವಣನ ಚರಿತ್ರೆಯನ್ನು ವಿಕಾರ ಮಾಡಲಾಗಿದೆ.

ಈ ರೀತಿಯ ಘಟನೆಗಳು ಇಗಲೂ ಘಟಿಸುತ್ತಿವೆ. ದೇಶದಲ್ಲಿ ಲೋಕಶಾಹಿ ಬದಲು ಬ್ರಾಹ್ಮಣಶಾಹಿ ಅಸ್ತಿತ್ವದಲ್ಲಿದೆ. ಲೋಕತಂತ್ರವನ್ನು ಗಾಳಿಗೆ ತೂರುವದಕ್ಕಾಗಿ ಸಂವಿಧಾನದ ನಿರ್ಮಾತೃ ಬೌದ್ಧಧಮ್ಮದ ಪುನರುಜ್ಜೀನ ಮಾಡಿರುವ ಬಾಬಾ ಸಾಹೇಬ ಡಾ॥ ಅಂಬೇಡ್ಕರರವರಿಗೆ ಅವಮಾನ ಮಾಡುವದಕ್ಕಾಗಿಯೇ ಷಡ್ಯಂತ್ರಕಾರಿಗಳು 6ನೇ ಡಿಸೆಂಬರ್ 1992ರಲ್ಲಿ ಬಾಬಾ ಸಾಹೇಬ ಡಾ॥ ಅಂಬೇಡ್ಕರವರ ಮಹಾಪರಿನಿರ್ವಾಣ ಹೊಂದಿದ ದಿನದಂದು ಬಾಬರಿ ಮಸೀದಿಯನ್ನು ಕೆಡವಲಾಯಿತು. ಮೊದಲು ಬಾಬರಿ ಮಸೀದಿ ಬೌದ್ಧ ಕೇಂದ್ರವಾಗಿತ್ತು ಅಲ್ಲಿ "ಬಾವರಿ" ಎಂಬ ಬೌದ್ಧ ಭಿಕ್ಷು ಇರುತ್ತಿದ್ದಾನೆಂದು ಚರಿತ್ರೆ ಇದೆ. ಇದು ಮುಂದೆ ಬರಬರುತ್ತಾ ಬಾವರಿ ಬದಲು ಬಾಬರಿ ಎಂದಾಗಿರಬಹುದೆಂದು ಊಹಿಸಲಾಗಿದೆ.

ಬಾಬಾ ಸಾಹೇಬರು ಕೂಡ ಅವರ ಧಮ್ಮ ಕ್ರಾಂತಿಗಾಗಿ ಅಶೋಕ ವಿಜಯದಶಮಿಯ ದಿನ ಆರಿಸಿಕೊಂಡಿದ್ದರು. ಅಶೋಕ ವಿಜಯದಶಮಿ ಮತ್ತು ದಸರಾಗೆ ಆಕಾಶ ಭೂಮಿಯಷ್ಟು ಅಂತರವಿದೆ. ಒಂದು ಬ್ರಮಣ ಸಂಸ್ಕೃತಿಯ ಪ್ರಭಾವ ಮತ್ತೊಂದು ಬ್ರಾಹ್ಮಣ ಸಂಸ್ಕೃತಿಯ ಪ್ರತೀಕ ದಸರಾ ರಾಮನ ಜೊತೆಗೆ ಸಂಬಂಧವಿಲ್ಲ. ಸಾಮ್ರಾಟ ಅಶೋಕನ ಇತಿಹಾಸದ ಜೊತೆಗೆ ಸಂಬಂಧವಿದೆ. ಜಗತ್‌ಪ್ರಸಿದ್ಧ ಮೈಸೂರು ದಸರಾ ರಾಮಾಯಣದ ರಾಮನ ಜೊತೆಗೆ ಸಂಬಂಧವಿಲ್ಲ ಸಾಮ್ರಾಟ್ ಅಶೋಕನ ಜೊತೆ ಸಂಬಂಧವಿದೆ.

ಸಾಮ್ರಾಟ್ ಅಶೋಕ ಬೌದ್ಧಧಮ್ಮ ದೀಕ್ಷಾ ತೆಗೆದುಕೊಂಡ ನಂತರ ಹತ್ತು ದಿನಗಳವರೆಗೆ ಧಮ್ಮ ಉತ್ಸವ ಆಚರಣೆ ಮಾಡಿದ ಅದರ ನೆನಪಿಗಾಗಿ ದಸರಾ ಆಚರಿಸುವದು ಬಳಕೆಗೆ ಬಂತು. ಅಶೋಕನ ಸಾಮ್ರಾಜ್ಯ ವಿಶಾಲ ಭಾರತದಲ್ಲಿ ರಾಜ್ಯಾಧಿಕಾರವಿತ್ತು. ಇಷ್ಟು ದೊಡ್ಡ ರಾಜ್ಯಾಧಿಕಾರ ಯಾವ ರಾಜನದ್ದೂ ಇರಲಿಲ್ಲ. ಈ ಹಬ್ಬವನ್ನು ರೈತರು ಮತ್ತು ಆದಿವಾಸಿಗಳು ಮೊದಲಿನಿಂದಲೂ ಆಚರಿಸುತ್ತಿದ್ದರು. ಹಾಗೇಯೇ ನಂತರದ ದಿನಗಳಲ್ಲಿ ಬಾಬಾ ಸಾಹೇಬ ಡಾ॥ ಅಂಬೇಡ್ಕರವರು 1956 ಅಕ್ಟೋಬರ್ 14ರಂದು ತಮ್ಮ 5 ಲಕ್ಷ ಅನುಯಾಯಿಗಳೊಂದಿಗೆ ನಾಗಪುರದಲ್ಲಿ ಅಶೋಕ ವಿಜಯದಶಮಿ ಹಬ್ಬದಂದು ಧಮ್ಮ ದೀಕ್ಷೆ ತೆಗೆದುಕೊಂಡಿದ್ದು ಇತಿಹಾಸ.

ಹೋಳಿ ಹಬ್ಬ:

ಜಂಬೂ ದ್ವೀಪದ ಭರತ ಖಂಡದ ಪ್ರದೇಶವೊಂದರಲ್ಲಿ ಸಾವಿರಾರು ಸಣ್ಣ ಸಣ್ಣ ರಾಜ ಮಹಾರಾಜರು ಗಣರಾಜ್ಯವನ್ನು ಗಣಮಾನ್ಯ ರಾಜರಾಣಿ ಅರ್ಥಾತ್ ಗಣಪತಿ ಇವರೇ ಆಗಿನ ಕಾಲದ ಶಾಸಕ ವರ್ಗ ಇದ್ದರು, ಇದರಲ್ಲಿ ಪ್ರಮುಖರು ಶಾಸನಕರ್ತ ರಕ್ಷಕ ರಾಜರಿದ್ದರು. ಅಂಥವರಲ್ಲಿ ಹಿರಣ್ಯಕಶ್ಯಪ ರಾಜ ಮತ್ತು ಅವನ ಸಹೋದರ ಹಿರಣ್ಯಾಕ್ಷ ಹಾಗೂ ಅವರ ಸಹೋದರಿ ಹೋಲಿಕಾ ರಾಣಿ ಅಪ್ರತಿಮ ಶೂರ ರಾಜರಿದ್ದರು.



ಯಾವ ರೀತಿ ಸಿಂಧ್ ಪ್ರಾಂತ್ಯದ ರಾಜಾಶಂಕರ ಮೂಲ ನಿವಾಸಿ ರಾಜಾ ಮತ್ತಿತರರು ರಾಜರಿದ್ದರು. ಇದೇ ಸಿಂಧ್ ಕಣಿವೆಯಲ್ಲಿ ಹೋಳಿ ಹಬ್ಬದ ಹೆಸರಿನಲ್ಲಿ ನಾಲ್ಕು ಮೂಲ ನಿವಾಸಿ ಮಹಾಪುರುಷ ರಾಜರ ಬರ್ಬರ ಹತ್ಯಾಕಾಂಡದ ದುರಂತ ಕಥೆ ಇದೆ.

ಮೂಲ ನಿವಾಸಿ ರಕ್ಷಕ ರಾಜ್ಯಭಾರವನ್ನು ಮೋಸದಿಂದ ಕಸಿದುಕೊಂಡು ವಿದೇಶಿ ಆರ್ಯ ಬ್ರಾಹ್ಮಣರು ಸಂಪೂರ್ಣ ಭಾರತದಲ್ಲಿ ಹರಡಿದ್ದರು. ಉತ್ತರ ಭಾರತದಲ್ಲಿ ಹಿರಣ್ಯಾಕ್ಷ ರಾಜನ ಹತ್ಯೆಯಾಗಿದೆ. ಈ ದುರಂತಮಯ ಹತ್ಯಾಕಾಂಡವನ್ನು ಅರಿತ ಅವನ ಸಹೋದರ ಕ್ರೂರ ಆರ್ಯರಿಗೆ ಶಿಕ್ಷೆ ಕೊಡಲು ಪ್ರಾರಂಭಿಸಿದ.

ನರಸಿಂಹ ಎನ್ನುವ ಆರ್ಯ ಬ್ರಾಹ್ಮಣ ಹುಲಿಯ ಮುಖವಾಡ ಹಾಕಿಕೊಂಡು ಷಡ್ಯಂತ್ರದಿಂದ ಹಿರಣ್ಯಕಶ್ಯಪನ ಹತ್ಯೆಮಾಡಲಾಗಿದೆ. ಆಗ ಹಿರಣ್ಯಕಶ್ಯಪನ ರಾಣಿ ಗರ್ಭವತಿ ಇದ್ದಳು. ಅವಳಿಗೆ ಪ್ರಹಲ್ಲಾದನೆಂಬ ಮಗ ಜನಿಸಿದ ಅವನು ವೈದಿಕ ಆರ್ಯರ ಆಶ್ರಯದಲ್ಲಿ ಬೆಳೆದ ಅವನು ಆರ್ಯ ಪ್ರಮುಖ ಇಂದ್ರ ವಿಷ್ಣುರವರಿಗೆ ಹೊಗಳುತ್ತಿದ್ದ.

ರಾಜ್ಯಭಾರ ಮಾಡುವ ಇಬ್ಬರು ರಾಜರು ಹಿರಣ್ಯಾಕ್ಷ ಮತ್ತು ಹಿರಣ್ಯಕಶ್ಯಪ ಇವರಿಬ್ಬರ ಹತ್ಯೆಯ ನಂತರ ಸಹೋದರಿ ಹೋಲಿಕಾ ರಾಜ್ಯಭಾರ ನಿರ್ವಹಿಸುತ್ತಿದ್ದಳು. ಆರ್ಯರು ಇನ್ನೊಂದು ನಾಟಕವಾಡಿ ಪ್ರಹಲ್ಲಾದನನ್ನು ಉಪಯೋಗಿಸಿಕೊಂಡು ಕ್ರೂರ ಆರ್ಯ ಬ್ರಾಹ್ಮಣರು ಮಾತೋಶ್ರೀ ಹೋಲಿಕಾ ವೀರಯೋಧ ರಾಣಿಗೆ ಕುತಂತ್ರದಿಂದ ಜೀವಂತ ದಹನ (ಸಜೀವದಹನ) ಮಾಡಿದರು. ಅವಳ ಜೊತೆಯಲ್ಲಿ ಅವಳ ವೀರ ಸೈನಿಕನಿಗೆ ಕೈಕಟ್ಟಿ ಹಾಕಿ ಮುಖಕ್ಕೆ ಬೂದಿ (ಕಪ್ಪು ಬಣ್ಣ) ಹಚ್ಚಿದರು. ನಂತರ ಮಹಿಳೆಯರ ಮೇಲೆ ಅತ್ಯಾಚಾರ ಮಾಡಿ ಅಲ್ಲಿಯ ಸಂಪತ್ತು ಲೂಟಿ ಮಾಡಿದರು.

ಪ್ರತಿವರ್ಷ ಇಬ್ಬರು ಮೂಲ ನಿವಾಸಿ ಮಹಾರಾಜರ ಮತ್ತು ಹೋಲಿಕಾ ರಾಣಿಯ ಹತ್ಯೆಯ ಷಡ್ಯಂತ್ರದ ದಿನವನ್ನು ಮುಚ್ಚಿಡುವ ಸಲುವಾಗಿ ಆರ್ಯ ಬ್ರಾಹ್ಮಣರು ಮೂಲ ನಿವಾಸಿ ಬಹುಜನ ಸಮಾಜದವರ ಓಣಿಗೆ ಹೋಗಿ ಅಲ್ಲಿಯ ಹುಡುಗರಿಗೆ ಮತ್ತು ಹುಡುಗಿಯರ ಮುಖಕ್ಕೆ ಬಣ್ಣ ಹಚ್ಚಿ ಸಂಭ್ರಮಿಸುತ್ತಾರೆ, ಇನ್ನು ಕೆಲವು ಜನ ಕತ್ತೆಯ ಮೇಲೆ ಕುಳಿತು ಸಂತೋಷದಿಂದ ಮೆರವಣಿಗೆ ಮಾಡುತ್ತಾರೆ.

ಸಾವಿರಾರು ವರ್ಷಗಳಿಂದ ಮೂಲ ನಿವಾಸಿ ರಾಜರ ಮೋಸದ ಬರ್ಬರ ಹತ್ಯಾಕಾಂಡದ ದಿನವನ್ನು ಸಂತೋಷದ ದಿನವನ್ನಾಗಿ ಆಚರಿಸುತ್ತಿದ್ದೇವೆ. ಹೀಗೆ ಐತಿಹಾಸಿಕ ಸತ್ಯವನ್ನು ಮುಚ್ಚಿಟ್ಟು ಮೂಲನಿವಾಸಿ ಬಹುಜನರಿಗೆ ವಿದೇಶಿ ಆರ್ಯರು ತಮ್ಮ ಮೋಸದ ಕುತಂತ್ರದ ಸಂಸ್ಕೃತಿ ಪರಂಪರೆಯಿಂದ ಬಹುಜನರ ಬೇಟೆಯಾಡುತ್ತಿದ್ದಾರೆ.

ಈ ರೀತಿ ಹೋಲಿಕಾ ರಾಣಿಯ ಸಜೀವದಹನ ಸುದ್ದಿ ಪ್ರಹ್ಲಾದದನವರೆಗೂ ಹೋದ ನಂತರ ಅವನಿಗೂ ಮೋಸದಿಂದ ಹತ್ಯೆ ಮಾಡಲಾಯಿತು. ಇದೊಂದು ವಾಸ್ತವಿಕವಾದ ರಹಸ್ಯ. ಈ ಸಂತೋಷದ ಸಂಭ್ರಮದ ಹಬ್ಬದ ಹಿಂದಿರುವ ರಹಸ್ಯ. ಮೂಲನಿವಾಸಿ ರಾಜರ ಮತ್ತು ಕ್ರೂರ ಆರ್ಯರ ಹಾಗೂ ರಾಕ್ಷಸ ರಕ್ಷಕ ಅರಸರ ನಡುವಿನ ಷ್ಯಡಂತ್ರದ ಯುದ್ಧವಿದೆ. ಇಂಥ ಕೃತ್ಯವನ್ನು ಭಜನೆ, ಕೀರ್ತನೆ, ಪ್ರವಚನ, ಪುರಾಣ, ಲೇಖನ ಸಾಹಿತ್ಯದ ಮೂಲಕ ಈ ನೀಚ ಸಂಸ್ಕೃತಿಯನ್ನು ಗಟ್ಟಿಯಾಗಿಡುವುದಕ್ಕಾಗಿ ಇತಿಹಾಸ ಜೀವಂತವಿಡುತ್ತಿದ್ದಾರೆ.

ಸಂಪೂರ್ಣ ಜಂಬೂದ್ವೀಪ ಭಾರತದಲ್ಲಿ ವೈದಿಕ ಕ್ರೂರ ಆರ್ಯ ಬ್ರಾಹ್ಮಣರು ತಮ್ಮ ವರ್ಚಸ್ಸು ಸ್ಥಾಪಿಸಿದ್ದಾರೆ. ಈ ಕಾರಣಕ್ಕಾಗಿ ಮೂಲನಿವಾಸಿ ಬಹುಜನ ಕೆಲವು ಮಧ್ಯವರ್ತಿಗಳು ಕಲಾಕಾರರು ಆರ್ಯರಾಜರ ದರ್ಬಾರದಲ್ಲಿ ಆರ್ಯರ ಸ್ತುತಿ ಮಾಡುವ ಕಲೆ ಪ್ರದರ್ಶಿಸುತ್ತಾರೆ. ಕ್ರೂರ ಆರ್ಯರ ದೇವ-ದೇವಿಯರು ಸ್ವರ್ಗಲೋಕದಿಂದ ಭೂಲೋಕಕ್ಕೆ ಆಗಮಿಸುತ್ತಾರೆಂದು ಕಥೆ ಹೆಣೆಯುತ್ತಾರೆ. ಭಾರತದ ಅಸಲಿ ವಂಶದ ರಕ್ಷಕ ವೀರಯೋಧರಿಗೆ ರಕ್ಕಸ, ಅಸುರ, ದಾನವ, ದೈತ್ಯ, ದಸ್ಸು, ದುರ್ಜನ, ಭೂತ, ಪಿಶಾಚಿ, ನರಕ, ಸ್ವರ್ಗ, ಪಾತಾಳ ಎಂದು ಈ ಪ್ರಕಾರ ಸದಾ ಅಪಪ್ರಚಾರ ಮಾಡುತ್ತಿರುವುದರಿಂದ ಇವತ್ತಿಗೂ ಮೂಲನಿವಾಸಿ ಬಹುಜನರ ಅಸಲಿ ಇತಿಹಾಸ ತಿಳಿದುಕೊಳಳು ಸಾಧ್ಯವಾಗುತ್ತಿಲ್ಲದಿರುವುದು ಶೋಚನೀಯವೇ ಸರಿ!

ಕುರಿಯನ್ ನೆನಪಿನಲ್ಲಿ...

— ಡಿ. ಈರೇಶ್ ನಗರ್ಲೆ

ಸಮಾಜ ಪರಿವರ್ತನೆ ಹರಿಕಾರರಾದ ಕುರಿಯನ್ ಕ್ಷೀರಕ್ರಾಂತಿಯ ಮೂಲಕ ಜಾತಿ-ವಿನಾಶದ ಸಮಾನತೆ ಸಮಾಜದ ಕನಸನ್ನು ಕಂಡಿದ್ದರು. ಪ್ರತಿನಿತ್ಯ ಮುಂಜಾನೆ ಹಾಲು ಉತ್ಪಾದಕರ ಸಂಘಗಳ ಮುಂದೆ ಹಿಂದು-ಮುಸ್ಲಿಂ, ಹರಿಜನ, ಬ್ರಾಹ್ಮಣ, ಕುರುಬಗೌಡ, ಒಕ್ಕಲಿಗ, ಲಿಂಗಾಯಿತ ಎನ್ನದೆ ಒಂದೇ ಸರತಿ ಸಾಲಿನಲ್ಲಿ ನಿಂತು ತಮ್ಮ ತಮ್ಮ ಮನೆಗಳಿಂದ ತಂದಂತಹ ಹಾಲನ್ನು ಡೈರಿಯ ಒಂದು ಹಾಲಿನ ಕ್ಯಾನಿನೊಳಗೆ ಸುರಿಯುವುದು ಹಾಗೂ ಶೇಖರಣೆಗೊಂಡ ಹಾಲಿನಿಂದಲೇ ಪುನಃ ತಮ್ಮ ತಮ್ಮ ಮನೆಗಳಿಗೆ ಬೇಕಾಗುವಷ್ಟು ಹಾಲನ್ನು ಖರೀದಿಸುವುದು ಜಾತಿ ವಿನಾಶದ ಸಂಕೇತವಲ್ಲದೆ ಮತ್ತೇನು

"ನಾನೊಂದು ಬೆಕ್ಕಿನಂತೆ, ನನ್ನನ್ನು ಎಲ್ಲಿ ಬೇಕಾದರು ಎಸೆಯಿರಿ, ಅಲ್ಲಿ ನಾನು ಕಾಲೂರಬಲ್ಲೆ"

-ವರ್ಗೀಸ್ ಕುರಿಯನ್

ಎಂದೂ ಹಾಲು ಕುಡಿಯದ ಹುಡುಗ, ಹಾಲಿನ ಹೊಳೆಯನ್ನು ಹರಿಸಿದ ಇತಿಹಾಸ ಬರೆದ ಕಥೆಯಿದು. ಅಮೇರಿಕದ ದಾರ್ಶನಿಕ ಎಮರ್ಸನ್ ಹೇಳಿದ- "ವಸ್ತುವನ್ನು ಬದಲಾಯಿಸುವವನು ಶ್ರೇಷ್ಠ ವ್ಯಕ್ತಿಯಲ್ಲ, ನನ್ನ ಮನಸ್ಸಿನ ಸ್ಥಿತಿಯನ್ನು ಬದಲಾಯಿಸುವವನೇ ಶ್ರೇಷ್ಠ ವ್ಯಕ್ತಿ" ಈ ಮಾತು ವರ್ಗೀಸ್ ಕುರಿಯನ್ ಅವರು ಭಾರತದ ಕ್ಷೀರ ಕ್ರಾಂತಿಯನ್ನುಂಟು ಮಾಡಿದ ಹೈನು ಉದ್ಯಮದ ಸಾಧನೆ-ಪ್ರಗತಿಗೆ ಅಕ್ಷರಶಃ ಒಪ್ಪುತ್ತದೆ. ಗ್ರಾಮೀಣ ಭಾರತದ ಜನತೆಯ ಮನಸ್ಸನ್ನು ಬದಲಾಯಿಸಿ, ಗ್ರಾಮೀಣ ಭಾರತದ ಆರ್ಥಿಕ ಸಬಲೀಕರಣಕ್ಕೆ ಪ್ರಬಲ ಅಸ್ತ್ರವಾಗಿ ಹೈನುಗಾರಿಕೆ ನಿಲ್ಲಲು ಅವರು ಆರಿಸಿಕೊಂಡದ್ದು 'ಸಹಕಾರ ತತ್ವ'ದ ಹಾದಿಯನ್ನು. ಈ ಹಾದಿಯನ್ನು ಮೊದಲೇ ಸಿದ್ಧಪಡಿಸಿಕೊಟ್ಟವರು ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭ ಬಾಯಿ ಪಟೇಲ್, ಗುಜರಾತಿನ ರೈತನಾಯಕ ತ್ರಿಭುವನದಾಸರು. ಇವರಿಬ್ಬರ ಕನಸಿನ ಕೂಸು ಗುಜರಾತಿನ ಕೈರಾ ಜಿಲ್ಲಾ ಹಾಲು ಉತ್ಪಾದಕರ ಸಂಘ. ಈ ಸಂಘದ ನೇತೃತ್ವ ವಹಿಸಿದ್ದವರು ತ್ರಿಭುವನದಾಸರು. ಇಂಜಿನಿಯರ್ ಪದವೀಧರ ಯುವಕ ಕುರಿಯನ್‌ರವರು ವಲ್ಲಭ ಬಾಯಿ ಪಟೇಲ್‌ರ ದೂರದೃಷ್ಟಿ, ತ್ರಿಭುವನದಾಸರ ನಾಯಕತ್ವಕ್ಕೆ ಮನಸೋತರು.



ಇತ್ತ 1952-57ರ ಅವಧಿಯಲ್ಲಿ ನೆಹರು ಸರ್ಕಾರದಲ್ಲಿ ಆಹಾರ ಮತ್ತು ಕೃಷಿ ಇಲಾಖೆಯ ಉಪ ಸಚಿವರಾಗಿದ್ದ ಕೋಲಾರ ಜಿಲ್ಲೆಯ ಎಂ.ವಿ.ಕೃಷ್ಣಪ್ಪನವರು ದೇಶದ ಕ್ಷೀರಕ್ರಾಂತಿಗೆ ನೀಲಿ ನಕ್ಷೆಯನ್ನು ಸಿದ್ಧತೆ ಮಾಡಿದರು. ಅದರ ಅಧ್ಯಯನಕ್ಕಾಗಿ ಡೆನ್ಮಾರ್ಕ್ ಮತ್ತು ಜರ್ಮನಿಗೆ ಭೇಟಿ ನೀಡಿ ಹೈನುಗಾರಿಕೆ ಬಗ್ಗೆ ಮಾಹಿತಿಯನ್ನು ಪಡೆಯಲಾಯಿತು. ಗ್ರಾಮೀಣ ಭಾರತ ಹಾಗೂ ಮಹಿಳಾ ಸಬಲೀಕರಣಕ್ಕೆ ಹೈನುಗಾರಿಕೆಯೇ ಪ್ರಮುಖ ಅಸ್ತ್ರ ಎಂದು ತಿಳಿದ ನೆಹರು ಹೈನುಗಾರಿಕೆ ಸುಧಾರಣೆಯ ಜವಾಬ್ದಾರಿಯನ್ನು ಕೃಷ್ಣಪ್ಪನವರಿಗೆ ನೀಡಿದರು. ಕೃಷ್ಣಪ್ಪನವರ ಕನಸನ್ನು ಕೃತಿಗೆ ಇಳಿಸುವ ಮೂಲಕ ಕ್ಷೀರಕ್ರಾಂತಿ ಮಾಡಿದ ಖ್ಯಾತಿಗೆ ಕುರಿಯನ್ ಪಾತ್ರರಾದರು.

'ಆನಂದ್' ಎಂಬ ಪಾಳುಬಿದ್ದ ಗ್ರಾಮದಲ್ಲಿದ್ದ ಡೈರಿ ಘಟಕಕ್ಕೆ 1949ರಲ್ಲಿ ಪ್ರವೇಶಿಸಿದ ಕುರಿಯನ್‌ರವರು ಛಲಬಿಡದ ತ್ರಿವಿಕ್ರಮನಂತೆ ದುಡಿದು 1955ರ ಅಕ್ಟೋಬರ್ 31ರಂದು 'ಆನಂದ್' ಹೆಸರಿನ ಹೊಸ ಹಾಲಿನ ಪುಡಿ ಉತ್ಪಾದಕ ಘಟಕವನ್ನು ಅಂದಿನ ಪ್ರಧಾನಿ ಜವಾಹರಲಾಲರಿಂದ ಉದ್ಘಾಟನೆ ಮಾಡಿಸಿದರು.

ಜೈ ಜವಾನ್, ಜೈ ಕಿಸಾನ್ ಮಂತ್ರಘೋಷಣೆಯ ರೈತ ನಾಯಕ

ಮಾಜಿ ಪ್ರಧಾನಿ ಲಾಲ್‌ಬಹದ್ದೂರ್‌ಶಾಸ್ತ್ರಿ ಯವರು ಹೈನುಗಾರಿಕೆಗೆ ಮತ್ತಷ್ಟು ಒತ್ತಾಸೆ ನೀಡಿ, 1965ರಲ್ಲಿ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ (ಎನ್‌ಡಿಡಿಬಿ) ಸ್ಥಾಪಿಸಿದರು. ಎಂ.ವಿ. ಕೃಷ್ಣಪ್ಪ ಅವರ ಅಧಿಕಾರಾವಧಿ ಮುಗಿದ ನಂತರ ಕುರಿಯನ್ ಎನ್‌ಡಿಡಿಬಿ ಅಧ್ಯಕ್ಷರಾದರು. ಅವರು 1965–98ರವರೆಗೆ ಅಂದರೆ ಮೂರು ದಶಕಗಳ ಕಾಲ ಅಧ್ಯಕ್ಷರಾಗಿ ಕ್ಷೀರ ಕ್ರಾಂತಿ ಮಾಡಿ ಜಗತ್ತಿನ ಭೂಪಟದಲ್ಲಿ ಹಾಲಿನ ಉತ್ಪಾದನೆಯಲ್ಲಿ ಭಾರತವು 2ನೇ ಸ್ಥಾನದಲ್ಲಿ ಬರಲು ಕಾರಣಕರ್ತರಾದರು. ಇಂತಹ ಸಾಧನೆಯನ್ನು ಮಾಡಿದ್ದು ಹಸುವಿನ ಹಾಲಿನಿಂದಲ್ಲ, ಎಮ್ಮೆ ಹಾಲಿನಿಂದ ಎಂಬುದು ಅವರ ಸಂಶೋಧನೆಗೆ ಹಿಡಿದ ಕನ್ನಡಿಯಾಗಿದೆ.

ಕೇರಳದ ಕಲ್ಲಿಕೋಟೆ ಕೋಯಿಕೋಡ್ ಪುತೆನ್ ಪರಾಕ್ಕಲ್ ಕುರಿಯನ್ ದಂಪತಿಗೆ 3ನೇ ಮಗನಾಗಿ ಜನಿಸಿದರು. ಅವರ ತಂದೆ ಸಿವಿಲ್ ಸರ್ಜನ್ ಆಗಿದ್ದರು. ತಾಯಿ ಅಕ್ಷರವಂತೆ, ಕುರಿಯನ್ ಮದರಾಸಿನ ಲಯೋಲ ಕಾಲೇಜಿನಲ್ಲಿ ವಿಜ್ಞಾನ ಪದವಿ ಮುಗಿಸಿದರು. ನಂತರ ಹಿಂಡಿ ಕಾಲೇಜ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಎಂಜಿನಿಯರಿಂಗ್ ಪದವಿ ಪಡೆದರು. 1944ರಲ್ಲಿ ಅವರು ಗ್ರಾಜ್ಯುಯೇಟ್ ಅಪ್ರೆಂಟಿಸ್ ಆಗಿ ಟಾಟಾ ಐರನ್ ಅಂಡ್ ಸ್ಟೀಲ್ ಕಂಪನಿ ಸೇರಿದರು. ಕೆಲ ದಿನಗಳ ನಂತರ ಅವರಿಗೆ ಬ್ರಿಟನ್ ಸರ್ಕಾರದಿಂದ ಉನ್ನತ ವ್ಯಾಸಂಗಕ್ಕೆ ಸ್ಕಾಲರ್‌ಷಿಪ್ ದೊರೆಯಿತು. ಆಗ ಅವರು ಟಿಸ್ಕೋ ಕಂಪನಿಯ ಕೆಲಸಕ್ಕೆ ರಾಜೀನಾಮೆ ನೀಡಿದರು. ಅದು ವರ್ಗೀಸ್ ಕುರಿಯನ್ನರ ಬದುಕಿನ ದಿಕ್ಕನ್ನೇ ಬದಲಾಯಿಸಿತು. 1948ರಲ್ಲಿ ಮಿಚಿಗನ್ ವಿ.ವಿ.ಯಿಂದ ಡೈರಿ ಇಂಜಿನಿಯರಿಂಗ್ ಪದವಿ ಪಡೆದರು. ನಂತರ ಬೆಂಗಳೂರಿನ ಇಂಪೀರಿಯಲ್ ಇನ್‌ಸ್ಟಿಟ್ಯೂಟ್ ಆಫ್ ಅನಿಮಲ್ ಹಸ್‌ಬ್ಯಾಂಡರಿ ಆ್ಯಂಡ್ ಡೇಯಿಂಗ್‌ನಲ್ಲಿ ತರಬೇತಿ ಪಡೆದರು. ಕುರಿಯನ್‌ರವರು ವಿದೇಶ ವಿದ್ಯಾಭ್ಯಾಸದ ನಂತರ ಬೆಂಗಳೂರಿನ ಇಂಪೀರಿಯಲ್ ಡೈರಿ ರಿಸರ್ಚ್ ಸಂಸ್ಥೆಯಲ್ಲಿ ಕೆಲಸ ಮಾಡುವ ಕನಸು ಕಂಡಿದ್ದರು. ಆದರೆ ಸರ್ಕಾರದ ಆದೇಶ ಅವರಿಗೆ ದಿಗಿಲು ಮೂಡಿಸುವಂತಿತ್ತು. ಏಕೆಂದರೆ ಗುಜರಾತಿನ ಕೈರಾ ಜಿಲ್ಲೆಯ ಕುಗ್ರಾಮವಾದ 'ಆನಂದ್'ನಲ್ಲಿ ಕೆಲಸವನ್ನು ನಿರ್ವಹಿಸುವಂತೆ ಸೂಚಿಸಲಾಗಿತ್ತು. ಕುರಿಯನ್ ಒಲ್ಲದ ಮನಸ್ಸಿನಿಂದ 'ಆನಂದ್'ಗೆ ಕಾಲಿಟ್ಟರು. ಇಂದು ವಿಶ್ವದಲ್ಲೇ ಅತಿ ವಿಸ್ತಾರವಾದ ಹಾಲಿನ ಡೈರಿ ವಿಸ್ತರಣ ಯೋಜನೆಯನ್ನು ಅವಿಷ್ಕಾರ ಮಾಡುವ ಮೂಲಕ ಹಾಲಿನ ಹೊಳೆಯನ್ನು ಹರಿಸಿರುವುದರ ಜೊತೆಗೆ ದೇಶದಲ್ಲೇ ಪೌಷ್ಟಿಕ ಅಮೂಲ್ ಮಾದರಿ ಡೈರಿ ಉತ್ಪನ್ನಗಳನ್ನು ಪರಿಚಯಿಸುವ ಮೂಲಕ ಹಾಲಿನ ಮನುಷ್ಯರಾಗಿದ್ದಾರೆ.

ಮೊಬೈಲ್ ಕ್ರಾಂತಿ ಹರಿಕಾರ ಸ್ಯಾಮ್ ಪಿಟ್ರೋಡಾರವರು – "ಯಾವುದಾದರೂ ಕೆಲಸವನ್ನು ಸಾಧಿಸಬೇಕಾದರೆ ನಾವು ಸ್ವಲ್ಪ ಹುಚ್ಚರಾಗಿರಬೇಕು, ಕುರಿಯನ್ ಅಂತಹ ಒಬ್ಬ ಹುಚ್ಚ. ಅವರ ಹುಚ್ಚು–ಕೆಚ್ಚು ಎಂತಹ ಸಾಧನೆಗೆ ದಾರಿಯಾಗಿದೆ ಎಂಬುದು ನಮಗೆಲ್ಲ ದಾರಿದೀಪವಾಗಿದೆ" ಎಂದು ಕುರಿಯನ್‌ರವರ ಸಾಧನೆಯನ್ನು ಕುರಿತು ಶ್ಲಾಘಿಸಿದ್ದಾರೆ.

ಕುರಿಯನ್‌ರವರು ಹೈನು ಉದ್ದಿಮೆಯಲ್ಲಿ ಮಾಡಿದ ಅವಿಷ್ಕಾರ, ಸಾಧನೆ–ಪ್ರಗತಿಗಾಗಿ ಅಂತರಾಷ್ಟ್ರೀಯ, ರಾಷ್ಟ್ರೀಯ ಪ್ರಶಸ್ತಿಗಳು ಅವರನ್ನು ಹುಡುಕಿಕೊಂಡು ಬಂದಿವೆ. ಸಮುದಾಯ ನಾಯಕತ್ವಕ್ಕಾಗಿ ಪ್ರಶಸ್ತಿ(1963), ಪದ್ಮಶ್ರೀ ಪ್ರಶಸ್ತಿ (1965), ಪದ್ಮಭೂಷಣ ಪ್ರಶಸ್ತಿ (1966), ಡಚ್‌ಶಾರ್ನಿಗಿ ಫೌಂಡೇಷನ್‌ನಿಂದ ಕೃಷಿ ರತ್ನ ಪ್ರಶಸ್ತಿ, ವಾಟಲರ್ ಶಾಂತಿ ಪುರಸ್ಕೃತ (1986) ವಿಶ್ವ ಆಹಾರ ಪ್ರಶಸ್ತಿ (1989), ಅಮೆರಿಕನ್ಸ್‌ನ ಡೈರಿ ಸಂಘಟಕರ ಮೇಳದಿಂದ ಅಂತರಾಷ್ಟ್ರೀಯ ವರ್ಷದ ವ್ಯಕ್ತಿ ಪ್ರಶಸ್ತಿ(1989) ಗಾಡ್ರಿ ಸಂಸ್ಥೆಯಿಂದ ಬ್ರೇವರಿ ಪ್ರಶಸ್ತಿ, ರಾವೇನ್ ಮ್ಯಾಗ್ಸೆಸೆ ಪ್ರಶಸ್ತಿ (1999), ಕರ್ಮವೀರ ಪುರಸ್ಕಾರ(2007) ಸೇರಿದಂತೆ ನಾನಾ ಪ್ರಶಸ್ತಿ ಮತ್ತು ಗೌರವಗಳು ಸಂದಿವೆ.

ಜಾತಿ ವಿನಾಶ–ಕ್ಷೀರಕ್ರಾಂತಿ

ಸಮಾಜ ಪರಿವರ್ತನೆ ಹರಿಕಾರರಾದ ಕುರಿಯನ್ ಕ್ಷೀರಕ್ರಾಂತಿಯ ಮೂಲಕ ಜಾತಿ–ವಿನಾಶದ ಸಮಾನತೆ ಸಮಾಜದ ಕನಸನ್ನು ಕಂಡಿದ್ದರು. ಪ್ರತಿನಿತ್ಯ ಮುಂಜಾನೆ ಹಾಲು ಉತ್ಪಾದಕರ ಸಂಘಗಳ ಮುಂದೆ ಹಿಂದು–ಮುಸ್ಲಿಂ, ಹರಿಜನ, ಬ್ರಾಹ್ಮಣ, ಕುರುಬಗೌಡ, ಒಕ್ಕಲಿಗ, ಲಿಂಗಾಯಿತ ಎನ್ನದೆ ಒಂದೇ ಸರತಿ ಸಾಲಿನಲ್ಲಿ ನಿಂತು ತಮ್ಮ ತಮ್ಮ ಮನೆಗಳಿಂದ ತಂದಂತಹ ಹಾಲನ್ನು ಡೈರಿಯ ಒಂದು ಹಾಲಿನ ಕ್ಯಾನಿನೊಳಗೆ ಸುರಿಯುವುದು ಹಾಗೂ ಶೇಖರಣೆಗೊಂಡ ಹಾಲಿನಿಂದಲೇ ಪುನಃ ತಮ್ಮ ತಮ್ಮ ಮನೆಗಳಿಗೆ ಬೇಕಾಗುವಷ್ಟು ಹಾಲನ್ನು ಖರೀದಿಸುವುದು ಜಾತಿ ವಿನಾಶದ ಸಂಕೇತವಲ್ಲದೆ ಮತ್ತೇನು ಎಂದು ಕುರಿಯನ್ ಪ್ರಶ್ನಿಸುತ್ತಿದ್ದರು.

ವಿದೇಶಿ ನೇರ ಬಂಡವಾಳ ಮತ್ತು ಸಹಕಾರ ತತ್ವ

ಕೇಂದ್ರ ಸರ್ಕಾರವು ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಅವಕಾಶ ನೀಡಿರುವುದಕ್ಕೆ ಪರ–ವಿರೋಧ ಚರ್ಚೆ ಸಂವಾದಗಳು ನಡೆಯುತ್ತಿವೆ. ಸುಮಾರು 30 ಲಕ್ಷ ರೈತರಿಂದ ದಿನಂಪ್ರತಿ ಹಾಲು ಸಂಗ್ರಹಿಸಿ, ಹಾಲನ್ನು ಶೈತ್ಯ ಪೆಟ್ಟಿಗೆಗಳಲ್ಲಿಟ್ಟು ವ್ಯವಸ್ಥಿತವಾಗಿ ಟ್ರಕ್‌ಗಳಲ್ಲಿ ಸಾಗಿಸಿ, ನಂತರ ಸಿದ್ದ ಉತ್ಪನ್ನಗಳನ್ನು ಮಾಡಿ ಮಾರುವ ದೊಡ್ಡ ಜಾಲವಿದೆ. 'ಅದಕ್ಕೋಸ್ಕರ ವಿದೇಶಿ ಬಂಡವಾಳವಾಗಲಿ, ತಂತ್ರಜ್ಞಾನವಾಗಲಿ ಅಗತ್ಯವಿಲ್ಲವೆಂದು ಇದು ಸಾರಿದೆ. ಉತ್ಪಾದನೆ ಸ್ಥಾನದಲ್ಲಿರುವ ರೈತರು ಈ ಜಾಲದಲ್ಲಿ ಮಾಲೀಕರಾಗಿದ್ದಾರೆ. ಇದರಲ್ಲಿ ರೈತರಿಗೆ, ಮಾರಾಟಗಾರರಿಗೆ, ಗ್ರಾಹಕರಿಗೆ ಎಲ್ಲರಿಗೂ ಲಾಭವಿದೆ. ಇದೇ ಮಾದರಿಯನ್ನು ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿಪಡಿಸಿದರೆ ಎಲ್ಲರಿಗೂ ನೆಮ್ಮದಿ ವಾತಾವರಣ ಲಭಿಸುತ್ತದೆ. "ಸಹಕಾರಿ ತತ್ವದಲ್ಲಿ ಎಂತಹ ದೊಡ್ಡ ಉದ್ದಿಮೆಯನ್ನು ಕಟ್ಟಬಹುದೆಂದು" ಡಾ: ಕುರಿಯನ್ ನಿರೂಪಿಸಿದ್ದಾರೆ.

ಡಾ: ಕುರಿಯನ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಬೆಂಗಳೂರಿನ ವಸಂತ ಪ್ರಕಾಶನ ಹೊರತಂದಿರುವ ಕೆ.ಎನ್. ಪರಾಂಜಪೆ ಅವರು ಬರೆದಿರುವ ವರ್ಗೀಸ್ ಕುರಿಯನ್ ಎಂಬ ವ್ಯಕ್ತಿ ಚಿತ್ರದ ಕೃತಿಯನ್ನು ಓದಬಹುದಾಗಿದೆ.

(ಸೆಪ್ಟಂಬರ್ 10ರಂದು ನಿಧನರಾದ ವರ್ಗೀಸ್ ಕುರಿಯನ್‌ರವರ ಸ್ಮರಣೆ ನಿಮಿತ್ತ ಲೇಖನ) ■

ಲೇಖಕರಿಗೆ ಸೂಚನೆ

ಲೇಖಕರು ತಮ್ಮ ಲೇಖನದ ಮೂಲ ಪ್ರತಿಯನ್ನು ಮಾತ್ರ ಕಳುಹಿಸಬೇಕು. ಈ ಹಿಂದೆಯೇ ತಿಳಿಸಿದ್ದರೂ ಕೆಲ ಲೇಖಕರು ಝೆರಾಕ್ಸ್ ಪ್ರತಿಗಳನ್ನು ಈಗಲೂ ಕಳುಹಿಸುತ್ತಿದ್ದಾರೆ. ಅವುಗಳನ್ನು ಪರಿಗಣಿಸುವುದಿಲ್ಲ. ಬೇರೆ ಪತ್ರಿಕೆಗಳಿಗೆ ಕಳುಹಿಸಿದ ಲೇಖನವನ್ನು 'ಸಂವಾದ'ಕ್ಕೂ ಕಳುಹಿಸಿದ್ದಲ್ಲಿ ಆ ಬಗ್ಗೆ ತಿಳಿಸಬೇಕು. 'ಸಂಪಾದಕರೊಂದಿಗೆ ಸಂವಾದ'ಕ್ಕೆ ಬರೆಯುವ ಬರಹಗಳು ಕನಿಷ್ಠ ಒಂದು ಸಾವಿರ ಪದಗಳ ಮಿತಿಯಲ್ಲಿರಬೇಕು. ಉಳಿದ ಲೇಖನಗಳು ಎರಡು ಸಾವಿರ ಪದಗಳ ಆಸುಪಾಸಿನಲ್ಲಿರಬೇಕು. ದೀರ್ಘವಾದ ಲೇಖನಗಳನ್ನು ಯಾವ ಕಾರಣಕ್ಕೂ ಪ್ರಕಟಿಸುವುದಿಲ್ಲ. ಲೇಖನಗಳನ್ನು ಇ–ಮೈಲ್ ಮೂಲಕ ಕಳುಹಿಸುವವರು 'ನುಡಿ' ತಂತ್ರಾಂಶದಲ್ಲಿ ಟೈಪ್ ಮಾಡಿಸಿ **Page Maker** ಅಥವಾ **Word File** ನಲ್ಲಿ ಮಾತ್ರ ಇ–ಮೈಲ್ ಮಾಡಬೇಕು ಹಾಗೂ ಲೇಖನದೊಂದಿಗೇ ತಮ್ಮ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿ ಕಳುಹಿಸಬೇಕು.–ಸಂ.

ರಾಷ್ಟ್ರಾದ್ಯಂತ ವ್ಯಾಪಿಸಿರುವ

ಕೋಮು ವಿಷವನ್ನು ತೊಡೆದುಹಾಕಬೇಕಿದೆ

ನಿ. ನ್ಯಾ. ಮಾರ್ಕಂಡೇಯ ಖಟ್ಜು
ಕನ್ನಡಕ್ಕೆ: ಸುರೇಶ್ ಭಟ್ ಬಾಕ್ರಬೈಲು

ಭಾರತದ ಅನೇಕ ಹಿಂದೂಗಳು ಹಾಗೂ ಮುಸಲ್ಮಾನರು ಇಂದು ಕೋಮುವಾದವೆಂಬ ಸೋಂಕುರೋಗಕ್ಕೆ ತುತ್ತಾಗಿದ್ದಾರೆ. ಆದರೆ 1857ನೆ ಇಸವಿಗೆ ಮುನ್ನ ಬಹುತೇಕ ಭಾರತೀಯರಲ್ಲಿ ಕೋಮುವಾದಿ ಭಾವನೆಗಳು ಇರಲೇ ಇಲ್ಲ. ಅಂದು ಹಿಂದೂ ಮುಸ್ಲಿಮರ ನಡುವೆ ಕೆಲವು ಅಭಿಪ್ರಾಯಭೇದಗಳಿದ್ದವು ಎಂಬುದರ ಬಗ್ಗೆ ಸಂದೇಹವಿಲ್ಲ; ಆದರೆ ಅವರು ಬದ್ಧವೈರಿಗಳಾಗಿರಲಿಲ್ಲ. ಮುಸ್ಲಿಮರ ಈದ್ ಹಬ್ಬದಲ್ಲಿ ಹಿಂದೂಗಳು ಪಾಲ್ಗೊಳ್ಳುತ್ತಿದ್ದರು. ಹೋಳಿ, ದೀಪಾವಳಿ ಹಬ್ಬಗಳನ್ನು ಹಿಂದೂ ಮುಸ್ಲಿಮರು ಜೊತೆಯಾಗಿ ಆಚರಿಸುತ್ತಿದ್ದರು. ಹಿಂದೂ ಮುಸ್ಲಿಮರು ಅಣ್ಣತಮ್ಮಂದಿರಂತೆ ಬಾಳುತ್ತಿದ್ದ ಕಾಲವದು.

ಹಾಗಾದರೆ ಈಗ, ಸುಮಾರು 150 ವರ್ಷಗಳ ನಂತರ, ಈ ಉಪಭೂಖಂಡದ ಎರಡು ಅತಿ ದೊಡ್ಡ ಧಾರ್ಮಿಕ ಸಮುದಾಯಗಳ ನಡುವೆ ಬೆಳೆದಿರುವ ಅನುಮಾನ ಮತ್ತು ದ್ವೇಷದ ಭಾವನೆಗಳಿಗೆ ಕಾರಣವೇನು? ಭಾರತದಲ್ಲಿಂದು ಮುಸ್ಲಿಮರಿಗೆ ಹಿಂದೂಗಳ ಮನೆಗಳು ಬಾಡಿಗೆಗೆ ಸಿಗುವುದೆ ಕಠಿಣವಾಗಿದೆ. ದೇಶದಲ್ಲೆಲ್ಲಾದರೂ ಬಾಂಬ್ ಸ್ಫೋಟದಂತಹ ದುಷ್ಕೃತ್ಯ ನಡೆದಾಗ ಪೊಲೀಸರು ಅದನ್ನು 'ಭೇದಿಸುವ' ಪರಿಯೆಂದರೆ ಐದಾರು ಮುಸ್ಲಿಮರನ್ನು ಬಂಧಿಸುವುದು. ಇದು ಯಾಕೆ ಹೀಗೆ? ಯಾಕೆಂದರೆ ವೈಜ್ಞಾನಿಕ ತನಿಖಾ ವಿಧಾನಗಳ ಬಗ್ಗೆ ತರಬೇತಿ ಪಡೆದಿರದ ನಮ್ಮ ಪೊಲೀಸರಲ್ಲಿ ನೈಜ

ಅಪರಾಧಿಗಳನ್ನು ಪತ್ತೆಹಚ್ಚುವ ಸಾಮರ್ಥ್ಯ ಇಲ್ಲ. ಹೀಗೆ ಬಂಧಿತರಾಗುವ ಮಂದಿಯನ್ನು ವರ್ಷಗಟ್ಟಲೆ ಜೈಲುಗಳಲ್ಲಿ ಕೂಡಿಹಾಕಲಾಗುತ್ತದೆ. ಅಂತಿಮವಾಗಿ ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದಾಗ ಅವರಲ್ಲಿ ಹೆಚ್ಚಿನವರು ನಿರಪರಾಧಿಗಳೆಂಬ ತೀರ್ಪು ಬರುತ್ತದೆ.

ಇದರ ಪರಿಣಾಮವಾಗಿ ಭಾರತದ ಮುಸ್ಲಿಮರಲ್ಲಿ ಬಹಳ ಭೀಕರವಾದ ಒಂದು ಪ್ರತ್ಯೇಕತೆಯ ಭಾವನೆ ನಿರ್ಮಾಣವಾಗಿದೆ. ಪಾಕಿಸ್ತಾನದಲ್ಲಂತೂ ಅಲ್ಪಸಂಖ್ಯಾತರ ಪಾಡು ಇನ್ನಷ್ಟು ಕೆಟ್ಟದಾಗಿದೆ. ಹೆಚ್ಚಿನ ವೇಳೆ ತೀವ್ರವಾದಿಗಳ ಹಾಗೂ ಮತಾಂಧರ ಭಯದಲ್ಲಿ ಬದುಕುತ್ತಿರುವ ಅವರ ಪರಿಸ್ಥಿತಿ ಅತ್ಯಂತ ಆತಂಕಕಾರಿಯಾಗಿದೆ.

ಸಂಧಿಕಾಲ

ಭಾರತದ ಕೋಮುವಾರು ಇತಿಹಾಸದಲ್ಲಿ 1857 ಒಂದು ಸಂಧಿಕಾಲ. ಯಾಕೆಂದರೆ 1857ಕ್ಕೂ ಮೊದಲು ಭಾರತದಲ್ಲಿ ಕೋಮು ಸಮಸ್ಯೆಗಳಿರಲಿಲ್ಲ, ಕೋಮು ದಂಗೆಗಳೂ ಇರಲಿಲ್ಲ. ಹಿಂದೂ ಮುಸ್ಲಿಮರ ಮಧ್ಯೆ ಕೆಲವು ಭಿನ್ನಾಭಿಪ್ರಾಯಗಳಿದ್ದುದು ನಿಜ. ಹಾಗೆ ನೋಡಿದರೆ ಒಂದೇ ತಂದೆಗೆ ಹುಟ್ಟಿದ ಗಂಡು ಅಥವಾ ಹೆಣ್ಣು ಮಕ್ಕಳ ನಡುವೆಯೂ ಅಭಿಪ್ರಾಯಭೇದಗಳಿರುವುದಿಲ್ಲವೇ? ಅಂದು ಹಿಂದೂ ಮುಸ್ಲಿಮರು ಶಾಂತಿಯುತವಾಗಿ ಬಾಳುತ್ತಿದ್ದರಲ್ಲದೆ ಕಷ್ಟಕಾಲಗಳಲ್ಲಿ ಪರಸ್ಪರರಿಗೆ ನೆರವಾಗುತ್ತಿದ್ದರು.

ಭಾರತದ ಮೇಲೆ ದಂಡೆತ್ತಿಬಂದ ಮುಸಲ್ಮಾನರು ಅನೇಕ ಮಂದಿರಗಳನ್ನು ನಾಶಪಡಿಸಿರುವ ವಿಚಾರ ಸಂಶಯಾತೀತ. ಇವರ ವಂಶಸ್ಥರೆ ನಂತರದ ದಿನಗಳಲ್ಲಿ ಸ್ಥಳೀಯ ಮುಸ್ಲಿಂ ಅರಸರಾದರು. ಗಮನಾರ್ಹ ವಿಷಯವೆಂದರೆ ಈ ಸ್ಥಳೀಯ ಮುಸ್ಲಿಂ ಅರಸರಲ್ಲಿ ಹೆಚ್ಚುಕಮ್ಮಿ ಎಲ್ಲರೂ ಕೋಮು ಸೌಹಾರ್ದತೆಯನ್ನು ಪೋಷಿಸಿ ಬೆಳೆಸಿದರು. ಇದನ್ನವರು ಮಾಡಿದ್ದು ಸ್ವಹಿತಾಸಕ್ತಿಗಾಗಿ ಯಾಕೆಂದರೆ ಅವರ ಪ್ರಜೆಗಳ ಪೈಕಿ ಗರಿಷ್ಠ ಸಂಖ್ಯೆಯ ಜನ ಹಿಂದೂಗಳಾಗಿದ್ದರು. ತಾವು ಹಿಂದೂ ದೇವಾಲಯಗಳನ್ನು ಕೆಡವಿಹಾಕಿದರೆ ಗಲಭೆ ಹಾಗೂ ದಂಗೆಗಳನ್ನು ಎದುರಿಸಬೇಕಾಗುತ್ತದೆ ಎಂಬ ಪರಿಜ್ಞಾನ ಅಂದಿನ ಮುಸ್ಲಿಂ ಅರಸರಲ್ಲಿತ್ತು. ಯಾವ ಅರಸನಿಗೂ ಗಲಭೆ, ದಂಗೆಗಳು ಬೇಕಾಗಿಲ್ಲ. ಹಾಗಾಗಿ ಮೊಘಲರು, ಅವಧ್, ಮುರ್ಷಿದಾಬಾದ್ ಅಥವಾ ಆರ್ಕಾಟ್‌ನ ನವಾಬರು, ಟಿಪ್ಪು ಸುಲ್ತಾನ ಅಥವಾ ಹೈದರಾಬಾದ್‌ನ ನಿಜ಼ಾಮರನ್ನು ಒಳಗೊಂಡಂತೆ ಭಾರತದ ಹೆಚ್ಚುಕಮ್ಮಿ ಎಲ್ಲಾ ಮುಸಲ್ಮಾನ ಅರಸರು ಕೋಮು ಸೌಹಾರ್ದತೆಗೆ ಒತ್ತಾಸೆ ನೀಡಿದರು.

1857ರಲ್ಲಿ ನಡೆದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹಿಂದೂ ಮುಸಲ್ಮಾನರು ಒಟ್ಟಾಗಿ ಬ್ರಿಟಿಷರ ವಿರುದ್ಧ ಹೋರಾಡಿದ್ದರು. ಆ ಹೋರಾಟವನ್ನು ಹತ್ತಿಕ್ಕಿದ ಬ್ರಿಟಿಷರು ಇನ್ನು ಮುಂದೆ ಭಾರತವನ್ನು ಅಂಕೆಯಲ್ಲಿಟ್ಟುಕೊಳ್ಳುವ ಏಕೈಕ ವಿಧಾನವೆ ಒಡೆದಾಳುವ ನೀತಿ ಎಂಬ ನಿರ್ಧಾರಕ್ಕೆ ಬಂದರು. 1862ನೆ ಇಸವಿಯಲ್ಲಿ ಅಂದು ಭಾರತದ ಪ್ರಧಾನ ಕಾರ್ಯದರ್ಶಿಯಾಗಿದ್ದ ಸರ್ ಚಾರ್ಲ್ಸ್ ವುಡ್ ಎಂಬಾತ ವೈಸರಾಯ್ ಎಲ್ಗಿನ್‌ಗೆ ಒಂದು ಪತ್ರ ಬರೆಯುತ್ತಾನೆ. ಅದರ ಒಕ್ಕಣೆ ಹೀಗಿದೆ: "ನಾವು ಭಾರತದಲ್ಲಿ ನಮ್ಮ ಅಧಿಕಾರವನ್ನು ಉಳಿಸಿಕೊಂಡಿರುವುದೆ ಒಂದು ಸಮುದಾಯವನ್ನು ಇನ್ನೊಂದರ ವಿರುದ್ಧ ಎತ್ತಿಕಟ್ಟುವ ಮೂಲಕ. ಅದನ್ನು ನಾವು ಮುಂದುವರಿಸಲೇಬೇಕು. ಆದುದರಿಂದ ಎಲ್ಲರಲ್ಲೂ ಒಂದೇ ತೆರನಾದ ಭಾವನೆಗಳು ಮೂಡದಂತಾಗಲು ನಿಮ್ಮಿಂದ ಸಾಧ್ಯವಾದುದನ್ನೆಲ್ಲ ಮಾಡಿ."

ಒಡೆದಾಳುವ ನೀತಿ

1887ರಲ್ಲಿ ಅಂದಿನ ಪ್ರಧಾನ ಕಾರ್ಯದರ್ಶಿ ವೈಕೌಂಟ್ ಕ್ರಾಸ್ ಎಂಬಾತ ಭಾರತದ ಗವರ್ನರ್ ಜನರಲ್ ಆಗಿದ್ದ ಡಫ್ರಿನ್‌ರಿಗೆ ಬರೆದ ಜನವರಿ 14ರ ಪತ್ರವೊಂದರಲ್ಲಿ, "ಧಾರ್ಮಿಕ ಭಾವನೆಗಳ ಮಧ್ಯೆ ಮೂಡಿರುವ ಈ ಒಡಕುಗಳು ನಮಗೆ ಭಾರಿ ಪ್ರಯೋಜನ ತಂದುಕೊಡಲಿವೆ. ನೀವು ಭಾರತದ ಶಿಕ್ಷಣ ವ್ಯವಸ್ಥೆ ಮತ್ತು ಶೈಕ್ಷಣಿಕ ಪುಸ್ತಕಗಳ ಬಗ್ಗೆ ಹಮ್ಮಿಕೊಂಡಿರುವ ತನಿಖಾ ಸಮಿತಿ ಒಂದಷ್ಟು ಒಳ್ಳೆಯದನ್ನು ಮಾಡುವುದೆಂದು ನನ್ನ ನಿರೀಕ್ಷೆ" ಎನ್ನುತ್ತಾನೆ.

ಜಾರ್ಜ್ ಹ್ಯಾಮಿಲ್ಟನ್ ಎಂಬ ಮತ್ತೊಬ್ಬ ಪ್ರಧಾನ ಕಾರ್ಯದರ್ಶಿ ಆಗ ಭಾರತದ ಗವರ್ನರ್ ಜನರಲ್ ಆಗಿದ್ದ ಕರ್ಜನ್‌ಗೆ ಹೀಗೆ ಬರೆದ: "ನನ್ನ ಅಭಿಪ್ರಾಯದಲ್ಲಿ ಭಾರತದಲ್ಲಿ ನಮ್ಮ ಆಳ್ವಿಕೆಗೆ ನೈಜ ಅಪಾಯವಿರುವುದು... ಇಲ್ಲಿ ನಿಧಾನವಾಗಿ ಆಗಲಿರುವ ಪಾಶ್ಚಿಮಾತ್ಯ ಚಿಂತನೆಗಳ ಅಳವಡಿಕೆ ಮತ್ತು ಅವುಗಳ ಮುಂದುವರಿಕೆಗಳಿಂದ... ಮತ್ತು ನಾವು ಸುಶಿಕ್ಷಿತ ಭಾರತೀಯರನ್ನು [ಹಿಂದೂ ಮತ್ತು ಮುಸ್ಲಿಂ ಎಂಬ] ಎರಡು ಗುಂಪುಗಳಾಗಿ ಒಡೆಯಲು ಸಾಧ್ಯವಾದರೆ... ಹೆಚ್ಚೆಚ್ಚು ಜನ ವಿದ್ಯಾವಂತರಾದಂತೆ ನಮ್ಮ ಆಡಳಿತ ವ್ಯವಸ್ಥೆ ಮೇಲೆ ಆಗಿಯೇ ಆಗಲಿರುವ ಸೂಕ್ಷ್ಮ ಹಾಗೂ ನಿರಂತರ ದಾಳಿಯ ವಿರುದ್ಧ ನಮ್ಮ ನೆಲೆಯನ್ನು ಗಟ್ಟಿಗೊಳಿಸಬೇಕಿರುವುದು ಅಂತಹ ವಿಭಜನೆಯ ಮೂಲಕ. ನಾವು ಪಠ್ಯಪುಸ್ತಕಗಳನ್ನು ರಚಿಸುವಾಗ ಅವುಗಳನ್ನು ಹೇಗೆ ಯೋಜಿಸಬೇಕೆಂದರೆ ಆ ಎರಡು ಸಮುದಾಯಗಳ ನಡುವಿನ ಮತಭೇದಗಳು ಇನ್ನಷ್ಟು ಹೆಚ್ಚಬೇಕು."

1857ರ ನಂತರ ಹಿಂದೂ ಮುಸ್ಲಿಮರ ನಡುವೆ ದ್ವೇಷ ಮೂಡಿಸುವ ಉದ್ದೇಶಪೂರ್ವಕ ನೀತಿಗೆ ಬ್ರಿಟಿಷರು ಚಾಲನೆ ನೀಡಿದ್ದು ಹೀಗೆ. ಇದನ್ನು ಅನೇಕ

ಇಂದು ನಮ್ಮ ಅನೇಕ ಸುದ್ದಿ ವಾಹಿನಿಗಳು ಒಂದು ಬಾಂಬ್ ಸ್ಫೋಟ ನಡೆದ ಮರುಕ್ಷಣದಲ್ಲಿ ಏನು ಮಾಡುತ್ತವೆ? ಇಂಡಿಯನ್ ಮುಜಾಹಿದೀನ್ ಅಥವಾ ಜೈಶ್-ಎ-ಮಹಮ್ಮದ್ ಅಥವಾ ಹರ್ಕತ್-ಉಲ್-ಜಿಹಾದ್-ಅಲ್-ಇಸ್ಲಾಮಿಯಾ ಎಂಬ ಸಂಘಟನೆಯಿಂದ ಸ್ಫೋಟ ನಡೆಸಿದ್ದು ತಾವೆಂದು ಹೇಳುವ ಈಮೇಲ್ ಯಾ ಎಸ್ಸೆಮ್ಮೆಸ್ ಬಂದಿದೆ ಎಂದು ಬಿತ್ತರಿಸಲಾರಂಭಿಸುತ್ತವೆ. ಇಂತಹ ಈಮೇಲ್, ಎಸ್ಸೆಮ್ಮೆಸ್‌ಗಳನ್ನು ಯಾವನೇ ಒಬ್ಬ ಕಿಡಿಗೇಡಿ ಕೂಡ ಕಳುಹಿಸಬಹುದಾಗಿದೆ. ಆದರೆ ಇಂತಹ ಸುದ್ದಿಗಳನ್ನು ಅದೇ ದಿನ ಟಿವಿ ಪರದೆಗಳಲ್ಲಿ ತೋರಿಸಲಾಗುತ್ತದೆ; ಮರುದಿನದ ಪತ್ರಿಕೆಗಳಲ್ಲಿ ಮುದ್ರಿಸಲಾಗುತ್ತದೆ. ಆ ಮೂಲಕ ಹಿಂದೂಗಳ ಮನಸ್ಸಿನಲ್ಲಿ ಮುಸ್ಲಿಮರೆಲ್ಲರೂ ಬಾಂಬ್ ಹಾಕುವ ಉಗ್ರರು ಎಂಬ ಭಾವನೆಯೊಂದನ್ನು ಮೂಡಿಸಲಾಗುತ್ತದೆ.

ವಿಧಗಳಲ್ಲಿ ಮಾಡಲಾಯಿತು.

1. ಧಾರ್ಮಿಕ ನಾಯಕರಿಗೆ ಲಂಚ

ಬ್ರಿಟಿಷ್ ಜಿಲ್ಲಾಧಿಕಾರಿ ಹಿಂದೂ ಪುರೋಹಿತರನ್ನು ಗುಟ್ಟಾಗಿ ಕರೆಯಿಸಿಕೊಂಡು ಆತನಿಗೆ ದುಡ್ಡು ಕೊಟ್ಟು ಮುಸಲ್ಮಾನರ ವಿರುದ್ಧ ಮಾತನಾಡುವಂತೆ ಹೇಳುತ್ತಿದ್ದ. ಅದೇ ರೀತಿ ಮುಲ್ಲಾಗಳು ಹಿಂದೂಗಳ ವಿರುದ್ಧ ಮಾತನಾಡುವಂತೆ ಮಾಡುತ್ತಿದ್ದ.

2. ಇತಿಹಾಸ ಪುಸ್ತಕಗಳ ವಿಕೃತೀಕರಣ

ಇತಿಹಾಸವನ್ನು ತಿರುಚುವ ಮೂಲಕ ಕೋಮು ದ್ವೇಷವನ್ನು ಹುಟ್ಟಿಸಲಾಯಿತು.

ಈಗಾಗಲೆ ಹೇಳಿರುವಂತೆ ಆರಂಭದ ಮುಸ್ಲಿಂ ದಾಳಿಕೋರರು ಅನೇಕ ಮಂದಿರಗಳನ್ನು ನಾಶಪಡಿಸಿದ್ದಾರೆ. ಆದರೆ ಅವರ ವಂಶಜರೆ ಆದ ಸ್ಥಳೀಯ ಮುಸ್ಲಿಂ ಅರಸರು (ಉದಾ: ಅಕ್ಬರ್ ಚಕ್ರವರ್ತಿ ದಾಳಿಕೋರ ಬಾಬರನ ವಂಶಜ) ಹಾಗೆ ಮಾಡಿಲ್ಲ. ಬದಲಿಗೆ ಅವರು ಹಿಂದೂ ದೇವಸ್ಥಾನಗಳಿಗೆ ನಿಯಮಿತವಾಗಿ ದತ್ತಿ ನೀಡುತ್ತಿದ್ದರು; ರಾಮ ಲೀಲಾ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದರು; (ಅವಧ್, ಮುರ್ಷಿದಾಬಾದ್ ಮತ್ತು ಆರ್ಕಾಟ್‌ನ ನವಾಬರಂತೆ) ಹೋಳಿ ಮತ್ತು ದೀಪಾವಳಿ ಹಬ್ಬಗಳಲ್ಲಿ ಭಾಗವಹಿಸುತ್ತಿದ್ದರು. ಹೀಗೆ ದಾಳಿಕೋರ ಮುಸಲ್ಮಾನರ ವಂಶಜರ ಪೈಕಿ ಹೆಚ್ಚುಕಮ್ಮಿ ಎಲ್ಲರೂ ಕೋಮು ಸೌಹಾರ್ದತೆಗೆ ಪ್ರೋತ್ಸಾಹ ನೀಡಿರುವುದು ನಮ್ಮ ಚರಿತ್ರೆಯ ಎರಡನೆ ಭಾಗ. ಆದರೆ ಇದನ್ನು ಮಾತ್ರ ನಮ್ಮ ಇತಿಹಾಸ ಪುಸ್ತಕಗಳಿಂದ ಸಂಪೂರ್ಣವಾಗಿ ಹೊರಗಿಡಲಾಗಿದೆ. ನಮ್ಮ ಮಕ್ಕಳಿಗೆ ಕಲಿಸುತ್ತಿರುವುದೇನು? ಘಜನಿ ಮಹಮೂದನು ಸೋಮನಾಥ ದೇವಾಲಯವನ್ನು ನಾಶಮಾಡಿದ ಎಂಬ ವಿಷಯವನ್ನು ಮಾತ್ರ. ಆದರೆ ಮೊಘಲ್ ಚಕ್ರವರ್ತಿಗಳು, ಟಿಪ್ಪೂ ಸುಲ್ತಾನ ಮುಂತಾದವರು ಹಿಂದೂ ದೇವಾಲಯಗಳಿಗೆ ದತ್ತಿ ನೀಡುತ್ತಿದ್ದ ವಿಷಯವನ್ನೂ ಹಿಂದೂ ಹಬ್ಬಹರಿದಿನಗಳನ್ನು ಆಚರಿಸುತ್ತಿದ್ದ ವಿಷಯವನ್ನೂ ನಮ್ಮ ಮಕ್ಕಳಿಗೆ ಕಲಿಸಲಾಗುತ್ತಿಲ್ಲ. (ಅಂತರ್ಜಾಲದಲ್ಲಿ ನೋಡಿ: ಬಿ.ಎನ್. ಪಾಂಡೆಯವರ 'History in the Service of Imperialism')

3. ಉದ್ದೇಶಪೂರ್ವಕ ಕೋಮು ಗಲಭೆಗಳು

ಎಲ್ಲಾ ಕೋಮು ಗಲಭೆಗಳು ಆರಂಭವಾದದ್ದೆ 1857ರ ನಂತರ. ಅದಕ್ಕೂ ಮುನ್ನ ಒಂದಾದರೂ ಕೋಮು ಗಲಭೆ ನಡೆದಿಲ್ಲ. ಸರ್ಕಾರದಿಂದ ನಿಯೋಜಿಸಲ್ಪಟ್ಟ ಚಿತಾವಣೆಗಾರರು ಉದ್ದೇಶಪೂರ್ವಕವಾಗಿ ಕೋಮು ದ್ವೇಷವನ್ನು ಪ್ರಚೋದಿಸುತ್ತಿದ್ದರು. ಅದನ್ನು ವಿವಿಧ ಬಗೆಗಳಲ್ಲಿ ಮಾಡುತ್ತಿದ್ದರು. ಉದಾ: ನಮಾಜು ಮಾಡುವ ಕಾಲದಲ್ಲಿ ಮಸೀದಿಗಳ ಎದುರು ದೊಡ್ಡದಾಗಿ ಸಂಗೀತ ಬಾರಿಸುವುದು ಅಥವಾ ಹಿಂದೂ ದೇವತಾಮೂರ್ತಿಗಳನ್ನು ಒಡೆದುಹಾಕುವುದು ಇತ್ಯಾದಿ, ಇತ್ಯಾದಿ.

ಬ್ರಿಟಿಷ್ ಆಡಳಿತಗಾರರು ಈ ರೀತಿ ವರ್ಷಗಳ, ದಶಕಗಳ ಕಾಲ ನಮ್ಮ ದೇಶದ ಜನತೆಯಲ್ಲಿ ಇಂಥಾ ಕೋಮು ವಿಷವನ್ನು ವ್ಯವಸ್ಥಿತವಾಗಿ ಬಿತ್ತಿದ್ದರ ಪರಿಣಾಮವೇ 1947ರಲ್ಲಿ ಆದ ದೇಶ ವಿಭಜನೆ. ಧಾರ್ಮಿಕ ದ್ವೇಷವನ್ನು ಉತ್ತೇಜಿಸುತ್ತಾ ಅದರಲ್ಲೇ ಹಸನಾಗಿ ಬೆಳೆಯುವ ಮಹಾಪಾತಕಿಗಳು ಇಂದಿಗೂ ಇದ್ದಾರೆ.

ಇಂದು ನಮ್ಮ ಅನೇಕ ಸುದ್ದಿ ವಾಹಿನಿಗಳು ಒಂದು ಬಾಂಬ್ ಸ್ಫೋಟ ನಡೆದ ಮರುಕ್ಷಣದಲ್ಲಿ ಏನು ಮಾಡುತ್ತವೆ? ಇಂಡಿಯನ್ ಮುಜಾಹಿದೀನ್ ಅಥವಾ ಜೈಶ್-ಎ-ಮಹಮ್ಮದ್ ಅಥವಾ ಹರ್ಕತ್-ಉಲ್-ಜಿಹಾದ್-ಅಲ್-ಇಸ್ಲಾಮಿಯಾ ಎಂಬ ಸಂಘಟನೆಯಿಂದ ಸ್ಫೋಟ ನಡೆಸಿದ್ದು ತಾವೆಂದು ಹೇಳುವ ಈಮೇಲ್ ಯಾ ಎಸ್ಸೆಮ್ಮೆಸ್ ಬಂದಿದೆ ಎಂದು ಬಿತ್ತರಿಸಲಾರಂಭಿಸುತ್ತವೆ. ಇಂತಹ ಈಮೇಲ್, ಎಸ್ಸೆಮ್ಮೆಸ್‌ಗಳನ್ನು ಯಾವನೇ ಒಬ್ಬ ಕಿಡಿಗೇಡಿ ಕೂಡ ಕಳುಹಿಸಬಹುದಾಗಿದೆ. ಆದರೆ ಇಂತಹ ಸುದ್ದಿಗಳನ್ನು ಅದೇ ದಿನ ಟಿವಿ ಪರದೆಗಳಲ್ಲಿ ತೋರಿಸಲಾಗುತ್ತದೆ; ಮರುದಿನದ ಪತ್ರಿಕೆಗಳಲ್ಲಿ ಮುದ್ರಿಸಲಾಗುತ್ತದೆ. ಆ ಮೂಲಕ ಹಿಂದೂಗಳ ಮನಸ್ಸಿನಲ್ಲಿ ಮುಸ್ಲಿಮರೆಲ್ಲರೂ ಬಾಂಬ್ ಹಾಕುವ ಉಗ್ರರು ಎಂಬ ನವಿರಾದ ಭಾವನೆಯೊಂದನ್ನು ಮೂಡಿಸಲಾಗುತ್ತದೆ. (ಆದರೆ ಸತ್ಯಸಂಗತಿ ಏನೆಂದರೆ ಎಲ್ಲಾ ಸಮುದಾಯಗಳಲ್ಲಿ ಶೇಕಡಾ 99ರಷ್ಟು ಜನ ಶಾಂತಿಪ್ರಿಯರು ಮತ್ತು ಒಳ್ಳೆಯವರು).

ಬಾಬರಿ ಮಸೀದಿ ರಾಮಜನ್ಮಭೂಮಿ ಚಳವಳಿಯ ಕಾಲದಲ್ಲಿ ಮಾಧ್ಯಮಗಳ ಒಂದು ವಿಭಾಗ (ನಿರ್ದಿಷ್ಟವಾಗಿ ಹಿಂದಿ ಮುದ್ರಣ ಮಾಧ್ಯಮಗಳು) ಕರಸೇವಕರಾಗಿ ಬದಲಾಗಿತ್ತು.

ಬೆಂಗಳೂರಲ್ಲಿ ಗಾಬರಿಯ ವಾತಾವರಣ

ಬೆಂಗಳೂರು ಮತ್ತಿತರ ನಗರಗಳಲ್ಲಿ ವಾಸವಿರುವ ಈಶಾನ್ಯ ಭಾರತೀಯರ ಮೊಬೈಲುಗಳಿಗೆ ಇತ್ತೀಚೆಗೆ ಒಂದು ಎಸ್ಸೆಮ್ಮೆಸ್ ಬಂದಿತ್ತು: ಅವರು ಅಸ್ಸಾಂನಲ್ಲಿ ಮುಸ್ಲಿಮರನ್ನು ಕೊಂದಿರುವುದರಿಂದ ಬೆಂಗಳೂರು ಬಿಟ್ಟುಹೋಗದಿದ್ದಲ್ಲಿ ಅವರೆಲ್ಲರನ್ನೂ ಸಾಮೂಹಿಕವಾಗಿ ಹತ್ಯೆ ಮಾಡಲಾಗುವುದು. ಈಶಾನ್ಯ ಭಾರತೀಯರಿಗೆ ದಿಗಿಲೋ ದಿಗಿಲು. ಈ ವಿಚಾರ ಬೆಂಗಳೂರಿನ ಮುಸ್ಲಿಮರಿಗೆ ತಿಳಿದಾಕ್ಷಣ ಅವರು ಈಶಾನ್ಯ ಭಾರತೀಯರಿಗಾಗಿ ಹಬ್ಬದೂಟ ಏರ್ಪಡಿಸಿದರು. ಮುಸ್ಲಿಮರಿಗೆ ಈಶಾನ್ಯ ಭಾರತೀಯರ ವಿರುದ್ಧ ಯಾವುದೇ ಹಗೆತನವಿಲ್ಲ; ಇದು ಯಾರೋ ಕಿಡಿಗೇಡಿಗಳು ಮಾಡಿದ ಕೆಲಸವೆಂದು ತಿಳಿಸಿದರು.

ಇದೆಲ್ಲವೂ ಕೆಲವು ನಿರ್ದಿಷ್ಟ ಸ್ಥಾಪಿತ ಹಿತಾಸಕ್ತಿಗಳ ಒಂದು ಅತಿದುಷ್ಟ ಆಟ ಎಂಬುದನ್ನು ಭಾರತೀಯರೀಗ ತಿಳಿದುಕೊಳ್ಳಬೇಕಾಗಿದೆ. ಭಾರತ ಅಪಾರ ವೈವಿಧ್ಯತೆಗಳ ನಾಡು. ಹಾಗಾಗಿ ಐಕ್ಯತೆ ಮತ್ತು ಏಳಿಗೆಯನ್ನು ಸಾಧಿಸುವ ಏಕೈಕ ವಿಧಾನವೆಂದರೆ ಸಮಾಜದ ಎಲ್ಲಾ ವರ್ಗಗಳಿಗೆ ಮತ್ತು ಎಲ್ಲಾ ಸಮುದಾಯಗಳಿಗೆ ಸಮಾನ ಗೌರವ ನೀಡುವುದು. ನಮ್ಮ ವಿಖ್ಯಾತ ಚಕ್ರವರ್ತಿ ಅಕ್ಬರ್ (ಅಕ್ಬರ್ ಮತ್ತು ಅಶೋಕ ನಮ್ಮ ಜಗತ್ತಿನ ಅತ್ಯಂತ ಶ್ರೇಷ್ಠ ಅರಸರೆಂದು ನನ್ನ ಅಭಿಪ್ರಾಯ) ತೋರಿಸಿಕೊಟ್ಟ ದಾರಿಯಿದು. (ಅಂತರ್ಜಾಲದಲ್ಲಿ ನೋಡಿ: ಹಿಂಸಾ ವಿರೋಧಕ್ ಸಂಘ್ Vs. ಮಿರ್ಜಾಪುರ್ ಮೋತಿ ಕುರೇಶ್ ಜಮಾತ್ ಪ್ರಕರಣದಲ್ಲಿ ನನ್ನ ತೀರ್ಪು).

1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆತಾಗ ಧಾರ್ಮಿಕ ಭಾವನೆಗಳನ್ನು ಬಡಿದೆಬ್ಬಿಸಲಾಯಿತು. ಆಗ ಪಾಕಿಸ್ತಾನ ತನ್ನನ್ನೊಂದು ಇಸ್ಲಾಮಿಕ್ ರಾಷ್ಟ್ರವೆಂದು ಘೋಷಿಸಿದ ಕಾರಣಕ್ಕಾಗಿ ಭಾರತವನ್ನು ಒಂದು ಹಿಂದೂ ರಾಷ್ಟ್ರ ಎಂಬುದಾಗಿ ಘೋಷಿಸಬೇಕೆಂಬ ಭಾರಿ ಒತ್ತಡಕ್ಕೆ ಸಿಲುಕಿರಬೇಕು ನಮ್ಮ ಅಂದಿನ ನಾಯಕರಾದ ಪಂಡಿತ್ ನೆಹರೂ ಮತ್ತು ಅವರ ಸಹೋದ್ಯೋಗಿಗಳು. ಆದರೆ ಅವರ್ಯಾರೂ ಸಹನೆ ಕಳೆದುಕೊಳ್ಳಲಿಲ್ಲ. ಅವರ 'ಭಾರತ ಹಿಂದೂ ರಾಷ್ಟ್ರ ಆಗಲಾರದು; ಅದೊಂದು ಜಾತ್ಯತೀತ (ಧರ್ಮನಿರಪೇಕ್ಷ) ರಾಷ್ಟ್ರ ಆಗಲಿದೆ' ಎಂಬ ಹೇಳಿಕೆ ಅವರ ಹಿರಿಮೆಗೆ ಸಾಕ್ಷಿ. ತುಲನಾತ್ಮಕವಾಗಿ ನೋಡಿದರೆ ನಾವು ನಮ್ಮ ನೆರೆಹೊರೆಯ ದೇಶಕ್ಕಿಂತಲೂ ಉತ್ತಮ ಪರಿಸ್ಥಿತಿಯಲ್ಲಿ ಇರುವುದೆ ನಾವು ಜಾತ್ಯತೀತ ರಾಷ್ಟ್ರವಾದ ಕಾರಣಕ್ಕೆ.

ಜಾತ್ಯತೀತತೆಯ ಅರ್ಥ ವ್ಯಕ್ತಿಯೊಬ್ಬ ತನ್ನ ಧರ್ಮವನ್ನು ಅನುಸರಿಸಬಾರದು ಎಂದಲ್ಲ. ಧರ್ಮ ಒಂದು ಖಾಸಗಿ ವ್ಯವಹಾರ; ಅದಕ್ಕೂ, ಯಾವುದೇ ನಿರ್ದಿಷ್ಟ ಧರ್ಮವಿರದ ಸರ್ಕಾರಕ್ಕೂ ಸಂಬಂಧ ಇಲ್ಲ ಎಂದೇ ಅದರರ್ಥ. ನನ್ನ ಅಭಿಪ್ರಾಯದಲ್ಲಿ ನಮ್ಮ ದೇಶದ ಒಗ್ಗಟ್ಟನ್ನು ಕಾಪಾಡಿಕೊಂಡು ಅದನ್ನು ಸಮೃದ್ಧಿಯ ಪಥದಲ್ಲಿ ಒಯ್ಯಬಲ್ಲ ಏಕೈಕ ನೀತಿಯೆಂದರೆ ಜಾತ್ಯತೀತತೆ ಮಾತ್ರ.

ಕೃಪೆ: 'ದ ಹಿಂದೂ' 11.10.2012 ■

ಕನ್ನಡ ಕಲಿಕೆ: ಮಕ್ಕಳ ಅನ್ನದಲ್ಲಿ ಕಲ್ಲು ಮಣ್ಣು

■ ಆರ್. ಚಲಪತಿ

1. ಕಲಿಕೆಯೆಂಬುದು

ಪಠ್ಯ ಇದು ಸಂಸ್ಕೃತಭಾಷೆಯ ಪಾಠ್ಯ ಪದದ ಸಂಕುಚಿತ ರೂಪ. ಪಠಿಸಲ್ಪಡುವುದು-ಪಠನ-ಯಾವುದೋ ಅದು ಪಾಠ್ಯ-ಪಠ್ಯ ಎಂದಾಗಿದೆ. ಹೀಗಾಗಿಯೇ ಕಲಿಯಲು ನಿಯಮಿಸಿರುವ ಎಲ್ಲಾ ಪಠ್ಯಗಳನ್ನು 'ಪಾಠ'ಗಳು ಎಂದೇ ಗುರುತಿಸಿಕೊಳ್ಳಲಾಗಿದೆ. ವೇದಗಳ ಓದಿನಲ್ಲಿ 'ಘನಪಾಠ, ಜಠಪಾಠ, ಕ್ರಮಪಾಠ, ಪದಪಾಠ' ಮೊದಲಾದ ಓರಣ(ಕ್ರಮ)ಗಳ ಮೂಲಕ ಮಂತ್ರಪಠನಗಳನ್ನು ಇಂದಿಗೂ ಹೇಗೆ ಅಭ್ಯಾಸ ಮಾಡಿಸಲಾಗುತ್ತಿದೆಯೋ ಅದೇ ತಾತ್ವಿಕ ತಿಳುವಳಿಕೆಯ ಅಡಿಪಾಯವನ್ನಿರಿಸಿಕೊಂಡು ಹೊಸಕಾಲದ ಕಲಿಕೆಯನ್ನೂ 'ಪಾಠ'ಗಳ ಮೂಲಕ ಕಟ್ಟು ಮಾಡಲಾಗಿದೆ. 19ನೇ ಶತಮಾನದ ಕೊನೆಯಿಂದಲೂ ಕಟ್ಟಲ್ಪಟ್ಟ ಇಂತಹ ಒಂದು ಪರಿಕಲ್ಪನೆಯಿಂದಾಗಿ ಪಠ್ಯಗಳನ್ನು ಪಠಿಸುವ ರೂಢಿ ಮಾಡುವುದನ್ನು ಕಲಿಕೆ ಎಂದು ಗ್ರಹಿಸಲಾಗಿದೆ, ಇಲ್ಲವೇ ಹಾಗೆ ಕಲಿಯುವವರನ್ನು ಮರುಳು ಮಾಡಲಾಗುತ್ತದೆ. ಕಲಿಯಲು ಶಾಲೆಗೆ ಬರುವ ಮಗುವಿಗೆ ಸಿಗುವ ಕಲಿಕೆಯ ಮೊದಲ ಅರಿವು ಇದೇ ಆಗಿರುತ್ತದೆ. ಹೀಗೇ ಮುಂದುವರಿಯುವುದನ್ನೇ ಕಲಿಕೆ-ತಿಳುವಳಿಕೆ-ಅರಿವು-ನಾಲೆಡ್ಜ್ ಎಂದು ಕಲಿಯುವವರು ತಿಳಿಯುವಂತೆ ಪ್ರಾಕ್ಟೀಸ್ ಮಾಡಿಸಲು 'ಅಭ್ಯಾಸ' ಪಾಠಗಳನ್ನು ನಿರ್ದಿಷ್ಟ ಪಠ್ಯಗಳ ಮೂಲಕ ರೂಪಿಸಿಕೊಡಲಾಗಿರುತ್ತದೆ.

ಕಲಿಕೆಯ ಮೊದಲಿಂದಲೇ; 'ಸ್ಪಷ್ಟ'ವಾದ ಉಚ್ಚಾರಣೆ, 'ಸ್ಫುಟ'ವಾದ ಬರವಣಿಗೆ, 'ಶುದ್ಧ'ವಾದ ನುಡಿಬಳಕೆ ಅಂತಾ ಕಲಿಸುವ ನಾಜೂಕುತನವನ್ನು ಕೊಚ್ಚಿಕೊಳ್ಳಲಾಗುತ್ತದೆ. ಇಂತಹ ಮರುಳುತನಗಳನ್ನು ತಾತ್ವಿಕ ನೆಲೆಯಾಗಿ ಇರಿಸಿಕೊಳ್ಳಲಾಗಿದ್ದು ಇವು ಒಂದಕ್ಕೊಂದು ನಂಟುಳ್ಳವಾಗಿವೆಯೆಂಬ ವಯ್ದಿಕ ತಿಳುವಳಿಕೆ(ಸಂಸ್ಕೃತ ಪರಂಪರೆ)ಯನ್ನು ಜಾರಿಮಾಡಲಾಗುತ್ತದೆ. ಈ ಮೂಲಕ ವೈದಿಕ ತಿಳುವಳಿಕೆಯ ಮಂತ್ರಪಠನದ ಕಲಿಕೆಯ 'ನೆನಪಿ'ನ ಮಾದರಿಯನ್ನೇ ಅರಿವು-ನಾಲೆಡ್ಜ್‌ನ ರಾಜಕಾರಣವನ್ನಾಗಿ ಮಾಡಿಕೊಳ್ಳಲಾಗಿದೆ ಎನ್ನುವುದನ್ನು ಗಮನಿಸಿಕೊಳ್ಳಬೇಕಾಗುತ್ತದೆ. ಇದನ್ನು 'ರಾಷ್ಟ್ರಮಟ್ಟ'ದಲ್ಲಿ ಬಳಸುತ್ತಿರುವ ಕಲಿಕೆಯ ದಾರಿ ಎಂದೇ ಹೇಳಲಾಗುತ್ತದೆ. ಇದಕ್ಕಾಗಿ, 'ರಾಷ್ಟ್ರಮಟ್ಟದಲ್ಲಿ ನೀಡಲಾದ ಕಲಿಕೆಯ ಕನಿಷ್ಠ ಮಟ್ಟಗಳನ್ನು ನಾವು ಸಾಕಷ್ಟು ಅವಲಂಬಿಸಿದ್ದೇವೆ, ರಾಷ್ಟ್ರೀಯ ಮಾದರಿಯ ಮಾನವೀಯ ಮೌಲ್ಯಗಳನ್ನು ಆಧಾರವಾಗಿಟ್ಟುಕೊಂಡಿದ್ದೇವೆ'(ಕನ್ನಡ ಕಲಿ-ನಲಿ, 2002) ಎಂಬ ಹಸಿಹಸಿ ಸುಳ್ಳುಗಳನ್ನೂ ಪಠ್ಯಪುಸ್ತಕಗಳ ಮೊದಲ ಮಾತುಗಳಲ್ಲಿ ಹೇಳಿಕೊಳ್ಳಲಾಗಿದೆ.

ನಿಜಸಂಗತಿಯೆಂದರೆ, ನಮ್ಮ ಎಲ್ಲಾ ಕಲಿಕೆಯು, ಈಗಾಗಲೇ ನಮಗೆ ಮಾತನಾಡಲು, ಗ್ರಹಿಸಲು ತಿಳಿದಿರುವ ನುಡಿಯ ಕಲಿಕೆಯಿಂದಲೇ ಶುರುವಾಗುತ್ತದೆ. ಆದರೆ ಮಗು ಹಾಗೆ ತಿಳಿದಿರುವ ಆಡುಮಾತಿನ ನುಡಿಯು ನಾಗರಿಕ ಜಗತ್ತಿಗೆ ಬೇಕಾದಂತೆ ಇರುವುದಿಲ್ಲ ಎಂಬ ತಪ್ಪು ತಿಳುವಳಿಕೆಯಿಂದಲೇ ನುಡಿಕಲಿಕೆಯ ಯೋಜನೆಯೊಂದು ಜಾರಿಯಲ್ಲಿ ಇದೆ. ಆದ್ದರಿಂದಾಗಿ ಮಗು ಬಳಸುವ ನುಡಿಯನ್ನು ಶುದ್ಧಗೊಳಿಸುವ ಕೆಲಸವೊಂದನ್ನು ಚಾಚು ತಪ್ಪದೇ(ವೈದಿಕ ಕರ್ಮಠರಂತೆ) ಮಾಡಿಕೊಂಡು ಹೋಗಬೇಕೆಂಬ ಇರಾದೆಯೂ ಕಾಣುತ್ತದೆ. ಆದ್ದರಿಂದಾಗಿ ಆಡುವನುಡಿ ಶುದ್ಧಗೊಳ್ಳುವ ಹಾಗೆ ಮೊದಲ ಕ್ಲಾಸುಗಳಲ್ಲೇ ರೂಢಿ ಮಾಡಿಕೊಳ್ಳುವಂತೆ ಒತ್ತಾಯ ಮಾಡಿ ಹೇಳಿಸಲಾಗುತ್ತದೆ. ಈ ಮೂಲಕ ತಾವು ಈಗಾಗಲೇ ಆಡುತ್ತಿರುವ ನುಡಿಯ ಬಗ್ಗೆ 'ಇದು ಸರಿಯಾದುದಲ್ಲ' ಎನ್ನುವ ನಿರ್ಧಾರಕ್ಕೆ ಮಕ್ಕಳು ಏಕಾಏಕಿ ಬಂದುಬಿಡುವಂತೆ ಮಾಡಲಾಗುತ್ತದೆ. ಹೀಗೆ ಮಗುವಿಗೆ ಗೊತ್ತಿರುವ ಆಡುನುಡಿಯ ಬಗ್ಗೆ ಕೀಳರಿಮೆಯನ್ನು ಬರುವಂತೆ ಮಾಡುವುದು ಕಲಿಕೆಯ ಯೋಜನೆಯಲ್ಲಿರುವ ಹಿಡನ್ ಅಜೆಂಡಾ ಅನಿಸಿಬಿಡುತ್ತದೆ. ಇದು ಕಲಿಯುವವರ ಪಠ್ಯಪುಸ್ತಕದ ಉದ್ದಕ್ಕೂ ಕಾಣಸಿಗುತ್ತದೆ. ಇದು ಓದು ಮತ್ತು ಬರಹವನ್ನು ನೆಪವಾಗಿಸಿಕೊಂಡು ನಡೆಸುವ ಮನೆಹಾಳುತನದ ಕೆಲಸವಲ್ಲದೆ ಬೇರೇನೂ ಅಲ್ಲ. ಮುಂದೆ ಇದರ ಅನುಕರಣೆಯ ನಿರಂತರತೆಯೇ ನಡೆದು-ನೆನಪು, ಪರೀಕ್ಷೆ-ಯನ್ನು ಕಾಪಾಡಿಕೊಳ್ಳುವುದೇ ಸರಿಯಾದ ಕಲಿಕೆ, ಶಿಕ್ಷಣ(ಶಿಕ್ಷಿಸುವುದೇ ಶಿಕ್ಷಣ)ಎಂದು ತಿಳಿದು ಬೆಂಚುಗಳು, ಬೋರ್ಡುಗಳಿರುವ ಕೋಣೆ ಮತ್ತು ತಿಳಿವು ತಪ್ಪಿದ ಮೇಸ್ಟ್ರುಗಳನ್ನೇ ನಂಬುವಂತೆ ಮಾಡಲಾಗುತ್ತದೆ. ಇದನ್ನೇ ಸಾಮಾಜಿಕ ಹೊಣೆಗಾರಿಕೆಯ ನೆಪದಲ್ಲಿ 'ಆಯಾ ಹೊತ್ತಿನ ಸಾಮಾಜಿಕ ಸನ್ನಿವೇಶದಲ್ಲಿ ನಿರ್ಧರಿಸಿ ಬೆಳೆಸಿಕೊಂಡಿರುವ

ನೈತಿಕ ಮೌಲ್ಯಗಳು ಮತ್ತು ಸಮಸ್ತರ ನಂಬಿಕೆಗಳಿಗೆ ನೀಡುವ ಧ್ವನಿ' ಎಂದು ಕಲಿಕೆಯನ್ನು ಕುರಿತು ಡಂಗುರಮಾಡಿ ಸಾರಲಾಗಿದೆ. ಇದು, ಸಾಮಾಜೀಕರಣದ ದಾರಿಯಲ್ಲಿ ಮುಖ್ಯವಾಗಿರುವ ಕಲಿಕೆಯ ಕೆಲಸ. 'ಅನುಕರಿಸುವ-ಅನುಸರಿಸುವ' ಪ್ರಾಕ್ಟಿಸಿನ ಕೆಲಸ.

ಕೆಳಜಾತಿಗಳು ಮೇಲುಜಾತಿಗಳನ್ನು ಅನುಸರಿಸುತ್ತವೆ ಅಂತಾ ಪಾರಂಪರಿಕ ಸಮಾಜಶಾಸ್ತ್ರ ವಿವರಿಸುತ್ತದೆ. ಕಲಿಯುವ ದಾರಿಯಲ್ಲಿಯಂತೂ ಬೋಧಿಸುವ-ಉಪದೇಶಿಸುವ ದಾರಿಯ ಬುದ್ದಿವಂತರು ಎಂದು ಇವತ್ತಿಗೂ ಮೇಲುಜಾತಿಯಾದ ಬ್ರಾಹ್ಮಣರ ಕಡೆಗೆ ಕಯ್ಮರವನ್ನು ನಿಲ್ಲಿಸಲಾಗಿದ್ದು, ಇದನ್ನೇ ಬಂಡವಾಳ ಮಾಡಿಕೊಂಡಿರುವ ಇವತ್ತಿನ ಹೊಸಹೊಸ ಮಾದರಿಯ ಅಂತಾರಾಶ್ಟ್ರೀಯ ಹೆಸರಿನ ಶಾಲೆಗಳು ಗುರುಕುಲ ಮಾದರಿಯ ರೆಸಾರ್‍ಟುಗಳಾಗಿವೆ. ಸಂಸ್ಕೃತದ ತಮ್ಮನೋ ಅಣ್ಣನಂತೆಯೋ ಅಂತರಾಶ್ಟ್ರೀಯವಾಗಿ ಪವಿತ್ರವಾಗಿರುವ ಇಂಗ್ಲಿಶನ್ನೂ ಸಂಸ್ಕೃತದ ಮಾದರಿಯಲ್ಲಿ ಕಲಿಸುತ್ತೇವೆ ಅಂತಾ ವಾಲಗ ಬಾರಿಸುತ್ತವೆ. ಏನೆ ಆಗಲಿ ವಯ್ದಿಕ ದೇಹಕ್ಕೆ ಜಾಗತಿಕ ನಾಲೆಡ್ಜಿನ ಟಯ್ಕಿ-ಬೂಟು ತೊಟ್ಟಿರುವ ಸಂಸ್ಕೃತ, ಇಂಗ್ಲಿಶುಗಳ ಎದುರು ಕನ್ನಡ ಮಕ್ಕಳು ಬಡಪಾಯಿಗಳು. ಕನ್ನಡನುಡಿ ಇಂಗ್ಲಿಶ್, ಸಂಸ್ಕೃತ ಕಲಿಯದವರ ಬಡಪಾಯಿ ನುಡಿ. ಅಯ್ಯೋ ಪಾಪ ಅಂತಾ ಕಳೆದ ನೂರಕ್ಕೂ ಹೆಚ್ಚು ವರುಶಗಳಿಂದ ಕನ್ನಡವನ್ನು ನಡೆಸಿಕೊಂಡು ಬರುತ್ತಿದ್ದೇವೆ ಅಂತ ಸಂಸ್ಕೃತ, ಇಂಗ್ಲಿಶ್ ಬಲ್ಲವರು ತಿಳಿದಿದ್ದಾರೆ. ಸಂಸ್ಕೃತ ಮತ್ತು ಇಂಗ್ಲಿಶ್ ಆಕಡೆ ಈಕಡೆ ಆಸರೆಯಾಗಿ ಕನ್ನಡವನ್ನು ಕಯ್ ಹಿಡಿದು ನಡೆಸುತ್ತಿರುವ ದೊಡ್ಡವರ ಹಾಗೆ ಇಲ್ಲದ ಮೀಸೆ ತಿರುವಿಕೊಂಡಿದ್ದಾರೆ. ಕನ್ನಡ ಓದುವವರನ್ನು, ಬರೆಯುವವರನ್ನು ಸಂಸ್ಕೃತ ಇಲ್ಲದೆ ಕನ್ನಡಕ್ಕೆ ಬಲ ಇಲ್ಲ. ಇಂಗ್ಲಿಶ್ ಇಲ್ಲದೆ ಉಳಿಗಾಲವಿಲ್ಲ ಅಂತ ನಂಬಿಸಿಕೊಂಡಿದ್ದಾರೆ.

ಇಂತಹ ಸನ್ನಿವೇಶವೊಂದು ಕನ್ನಡ ನೆಲದ ಮೇಲೆ ಬೇರು ಬಿಟ್ಟಿದ್ದಾದರೂ ಹೇಗೆ? ಹೀಗೆ ಬೆಳೆಸಿಕೊಂಡು ಬಂದ ದಾರಿಗಳಾದರೂ ಯಾವುವು? ಗಂಟಲಿಗೆ ಗಾಳ ಹಾಕಿದಂತೆ ವರ್ತಿಸುವ ಇಂತಹ ಹಿಡನ್ ನಡವಳಿಕೆಗಳೊಳಗಿರುವ ಕುತಂತ್ರಗಳು ಎಂತವು? ಇವತ್ತಿನ ಹಿಂದುತ್ವದ ಅಜೆಂಡಾಗಳಿಗೆ ಹೊಂದಿಸಿಕೊಂಡು ನಿಜಬದುಕಿನ ಬೇರುಗಳನ್ನು ಕತ್ತರಿಸಿಕೊಳ್ಳಲು ಇವು ಹೇಗೆ ನೆರವಾಗಿವೆ? ಕನ್ನಡದ ಮಕ್ಕಳು ನಿಜಕ್ಕೂ ಕನ್ನಡವನ್ನು ಕಲಿಯುವ ಸನ್ನಿವೇಶವಿದೆಯೆ? ಇದ್ದರೆ ಅದು ಯಾವ ಮತ್ತು ಯಾರ ಚಹರೆಯಲ್ಲಿದೆ? ಈ ನಿಟ್ಟಿನಲ್ಲಿ ನಾವೆಲ್ಲಾ ಕಲಿತ ಕನ್ನಡ ನಮ್ಮದಲ್ಲ ಹೇಗೆ? ನಮ್ಮ ಮಕ್ಕಳು ಕಲಿಯುತ್ತಿರುವುದು ಏನು? ಈವರೆಗೆ ತಲೆಮೇಲೆ ಹೊತ್ತುಕೊಂಡು ಕಲಿಯುತ್ತಿರುವ ಕನ್ನಡದ ದಾರಿ ನಿಜಕ್ಕೂ ಏನಾಗಿದೆ? ಎನ್ನುವುದನ್ನು ನಾವು ಮೊದಲು ಸರಿಯಾಗಿ ತಿಳಿಯಬೇಕಾಗುತ್ತದೆ. ಸಂಸ್ಕೃತವನ್ನು ಕಲಿಯುವ ಕಟ್ಟುಗಳು, ಇಂಗ್ಲಿಶನ್ನು ಓದುವ ನಿಲುವುಗಳು ಕನ್ನಡ ಕಲಿಯುವ ಮಕ್ಕಳ ತಿಳಿವು ಕನ್ನಡದಲ್ಲಿ ಬೆಳೆಯದಂತೆ ಕಟ್ಟಿಹಾಕಿಲ್ಲವೆ?. ಅದನ್ನೇ ಅನುಸರಿಸುವಂತೆ ಮಾಡಿವೆಯಲ್ಲವೆ?

ನಮ್ಮ ಎಲ್ಲಾ ಕಲಿಕೆಯು, ಈಗಾಗಲೇ ನಮಗೆ ಮಾತನಾಡಲು, ಗ್ರಹಿಸಲು ತಿಳಿದಿರುವ ನುಡಿಯ ಕಲಿಕೆಯಿಂದಲೇ ಶುರುವಾಗುತ್ತದೆ. ಆದರೆ ಮಗು ಹಾಗೆ ತಿಳಿದಿರುವ ಆಡುಮಾತಿನ ನುಡಿಯು ನಾಗರಿಕ ಜಗತ್ತಿಗೆ ಬೇಕಾದಂತೆ ಇರುವುದಿಲ್ಲ ಎಂಬ ತಪ್ಪು ತಿಳುವಳಿಕೆಯಿಂದಲೇ ನುಡಿಕಲಿಕೆಯ ಯೋಜನೆಯೊಂದು ಜಾರಿಯಲ್ಲಿ ಇದೆ. ಆದ್ದರಿಂದಾಗಿ ಆಡುವನುಡಿ ಶುದ್ಧಗೊಳ್ಳುವ ಹಾಗೆ ಮೊದಲ ಕ್ಲಾಸುಗಳಲ್ಲೇ ರೂಡಿ ಮಾಡಿಕೊಳ್ಳುವಂತೆ ಒತ್ತಾಯ ಮಾಡಿ ಹೇಳಿಸಲಾಗುತ್ತದೆ. ಈ ಮೂಲಕ ತಾವು ಈಗಾಗಲೇ ಆಡುತ್ತಿರುವ ನುಡಿಯ ಬಗ್ಗೆ 'ಇದು ಸರಿಯಾದುದಲ್ಲ' ಎನ್ನುವ ನಿರ್ದಾರಕ್ಕೆ ಮಕ್ಕಳು ಏಕಾಏಕಿ ಬಂದುಬಿಡುವಂತೆ ಮಾಡಲಾಗುತ್ತದೆ. ಹೀಗೆ ಮಗುವಿಗೆ ಗೊತ್ತಿರುವ ಆಡುನುಡಿಯ ಬಗ್ಗೆ ಕೀಳರಿಮೆಯನ್ನು ಬರುವಂತೆ ಮಾಡುವುದು ಕಲಿಕೆಯ ಯೋಜನೆಯಲ್ಲಿರುವ ಹಿಡನ್ ಅಜೆಂಡಾ ಅನಿಸಿಬಿಡುತ್ತದೆ. ಇದು ಕಲಿಯುವವರ ಪಠ್ಯಪುಸ್ತಕದ ಉದ್ದಕ್ಕೂ ಕಾಣಸಿಗುತ್ತದೆ. ಇದು ಓದು ಮತ್ತು ಬರಹವನ್ನು ನೆಪವಾಗಿಸಿಕೊಂಡು ನಡೆಸುವ ಮನೆಹಾಳುತನದ ಕೆಲಸವಲ್ಲದೆ ಬೇರೇನೂ ಅಲ್ಲ.

ಇದನ್ನು ತಿಳಿಯಲು ಕನ್ನಡ ಕಲಿಕೆಯ ಪಠ್ಯಪುಸ್ತಕಗಳೊಳಗಿನ ಸಂಗತಿಗಳನ್ನು ಗಮನಿಸಬೇಕಾಗುತ್ತದೆ. ಇಂತಹ ಕೇಳ್ವಿಗಳನ್ನು ಕೇಳಿಕೊಂಡು ಇದಕ್ಕೆ ಉತ್ತರವನ್ನು ನಮ್ಮ ಕಲಿಕೆಯ ಸನ್ನಿವೇಶದಲ್ಲಿ ಹುಡುಕಿಕೊಳ್ಳಬೇಕಾದ ಅಗತ್ಯವಿದೆ. ಆ ಮೂಲಕ ಜಗತ್ತಿನ ತಿಳುವಳಿಕೆಯನ್ನು ಕನ್ನಡದಲ್ಲಿ ತಿಳಿಯಲು ಆಗುವುದಿಲ್ಲ ಎನ್ನುವ ಸುಳ್ಳು ಗ್ರಹಿಕೆಗಳು ಯಾಕೆ ಹರಡಿಕೊಳ್ಳುತ್ತವೆ ಎನ್ನುವ ಕೇಳ್ವಿಗೂ ಉತ್ತರವನ್ನು ಕಂಡುಕೊಳ್ಳಬಹುದಾಗಿದೆ.

ಅಂದರೆ, ಕಲಿಯುವ ಪುಸ್ತಕಗಳಲ್ಲಿ ಕನ್ನಡ ಬದುಕುಗಳ ಸಂಗತಿಗಳು ಎಶ್ಟಿವೆ? ಕನ್ನಡ ಬದುಕಿನಿಂದ ಹುಟ್ಟಿದ ಪದಗಳು, ಆ ಪದಗಳನ್ನು ಕೂಡಿಸಿ ಮಾಡಿದ ಸೊಲ್ಲುಗಳು, ಕನ್ನಡ ಸೊಲ್ಲುಗಳನ್ನು ಅರಿಯಲು, ಕಟ್ಟಲು ಬೇಕಾದ ಪದಸಂಗತಿಗಳು ಇವೆಯೇ? ಕನ್ನಡದ ಜಾಯಮಾನವನ್ನು ಒಳಗೊಂಡಂತೆ ಸರಿಯಾಗಿವೆಯೇ? ಕಲಿಯುವ ಮಕ್ಕಳ ತಿಳಿವಿಗೆ ಎಟುಕುವಂತೆ ಅವರಿಗೆ ಪರಿಚಿತವಿರುವ ಸನ್ನಿವೇಶದ ಸಂಗತಿಗಳನ್ನು ಇವು ಎಶ್ಟರಮಟ್ಟಿಗೆ ಅವರ ಎದುರಿಗೆ ತರುತ್ತವೆ ಅಂತೆಲ್ಲಾ ಆಲೋಚನೆ ಮಾಡಬೇಕಾಗುತ್ತದೆ. ಇದಕ್ಕಿರುವ ದಾರಿಯೆಂದರೆ ಕನ್ನಡದ ತಿಳುವಳಿಕೆಯನ್ನು ಕಲಿಸುವ ಪಠ್ಯಪುಸ್ತಕಗಳನ್ನು ಎದುರಿಗಿರಿಸಿಕೊಂಡು ಈ ಒಂದೊಂದೇ ಸಂಗತಿಗಳನ್ನು ಬಿಡಿಸಿ ನೋಡುವುದು.

ಹಾಗಾದರೆ, ಒಂದನೇ ಕ್ಲಾಸಿನ 'ಕನ್ನಡ ಕಲಿ-ನಲಿ' ಪುಸ್ತಕವನ್ನು ನೀವೂ ಕಯ್ಗೆತ್ತಿಕೊಳ್ಳಿ. ಏನಿದೆಯೋ ನೋಡಿ ನಲಿಯೋಣ(?)



2. ಮೊದಲ ಹೆಜ್ಜೆಯಲ್ಲೇ ಮನಸ್ಸಿಗೂ ತೊಡಿಸಿದ ಬೇಡಿ

ಕಲಿಕೆಯಲ್ಲಿ ಮೊದಲ ಹೆಜ್ಜೆಯ ತೊಡಕುಗಳನ್ನು ಮನವರಿಕೆ ಮಾಡಿಕೊಳ್ಳುವ ಸಲುವಾಗಿ ಮೊದಲ ತರಗತಿಯ 'ಕನ್ನಡ ಕಲಿ-ನಲಿ' ಎಂಬ 'ಅಭ್ಯಾಸ ಸಹಿತ ಪಠ್ಯಪುಸ್ತಕ'ವನ್ನು ಎದುರಿಗಿರಿಸಿಕೊಂಡಿದ್ದೇನೆ. ಈ ಪುಸ್ತಕದಲ್ಲಿ ಕೇವಲ ಸಂಸ್ಕೃತ ಪದಗಳೇ ತುಂಬಿಹೋಗಿರುವುದು ಕಾಣುತ್ತಿದೆ:

ವನ, ಉದರ, ಉದಯ, ಉರಗ, ಉಗಮ, ಪವನ, ನಯನ, ಇನ, ತನಯ, ಕದನ. ಸದನ. ಹಯ. ಶರ. ಶತಕ. ಋಣ. ಋತ. ಛಲ. ಧನ. ಭಟ ಕಥನ. ಮಥನ. ಅಭಯ. ಆಭರಣ. ರಥ. ಭವನ. ಶಪಥ. ಘಟ. ಫಲ. ಝಳ. ಖಗ. ಫಲ. ಫಲಕ. ಸಖ. ಘನರವ. ಸಫಲ. ಹರ. ಅಂತಃಕರಣ. ಅಂತಃಕಲಹ. ಅಪರ. ಅಮರ. ಥಳಥಳ. ವರ್ಣಮಾಲಾ. ಅನುಸ್ವಾರ ವಿಸರ್ಗ. ವ್ಯಂಜನಾಕ್ಷರ. ವರ್ಗೀಯ. ಅವರ್ಗೀಯ. ಆಲಯ. ಚರಣ. ಖನಿಜ. ಲವಣ. ಶಯನ. ಷಹರ. ಧ್ವನಿ. ದಿನಾಚರಣೆ. ಆವರಣ. ಭಾಷಣ. ಅನುಕರಣ. ಸಜ್ಜೆ. ಕೆನ್ನಾಲಿಗೆ. ಮುಮ್ಮಾನ. ನಿಧಾನ. ಅರುಣೋದಯ. ಸಮವಸ್ತ್ರ. ಅತಿಥಿ. ಸಭಾಪತಿ. ವೈಭವ. ಅಧ್ಯಕ್ಷ. ಪಾರಿತೋಷಕ. ಅಕ್ಷರ. ಸ್ವರಾಕ್ಷರ. ಐರಾವತ. ಅಂತಃಪುರ. ಆಯುಧ. ಮೇಲ್ಭಾಗ. ಸೌಂದರ್ಯ. ವಾತ್ಸಲ್ಯ. ವಿಸ್ತಾರ. ಬಹು. ಅಭ್ಯಾಗತ. ಭೀತಿ.

ಧೈರ್ಯ, ಅಧ್ಯಯನ, ಅಭ್ಯಾಸ, ಶಾಶ್ವತ, ಚಿರಂಜೀವಿ, ಶೃಂಗರಿಸು, ಗಜ, ಸ್ವಸ್ಥ, ಸೌಖ್ಯ, ಆಶ್ರಯ, ಗೃಹ, ಮಧುರ, ಪತಿ, ವರ್ಗ, ಆರಂಭ, ಗರ್ಭ, ಸುಲಭ, ಸಾಧನ, ಅಶನ, ಭೋಜನ, ರಿಣ, ಸತ್ಯ, ಪ್ರಾಮಾಣಿಕ, ದ್ವೇಷ, ಕುಬೇರ, ಐಕ್ಯಮತ್ಯ, ಆಚಾರ್ಯ, ಓಜಸ್ಸು, ಭಂಗಿ, ಶಿಸ್ತು, ರಾಜಸಭೆ, ದರ್ಬಾರು, ಭೋಜನ, ಔತಣ, ಬಂಧಿಸು, ಅಕ್ಷಿ, ನೇತ್ರ, ನಿರೂಪಣೆ, ಜಲಚರ, ಮಂಡೂಕ, ಧಾನ್ಯ, ನರ್ತಿಸು, ಅಶ್ವ, ತುರಗ, ಹಯ, ರಕ್ತವರ್ಣ, ಸಂರಕ್ಷಣೆ, ಭದ್ರಗೋಡೆ, ದುರ್ಗ, ಷರ, ಪಚನ, ಷಟ್, ಷಡಂಗ, ಸಾಮೂಹಿಕ,

ಇವಕ್ಕೇನು ತಿರುಳು ಎಂದು ಕಲಿಸುವವರಿಗೂ ತಿಳಿಯದ ಪದಬಳಕೆಯ ತೊಡಕು

ಶಶಕ, ಔಜಸ, ಐದಳ, ಭಗ, ಐಲ, ಏರಂಡ, ಏವ, ಔರಸ, ಖರ, ಜಲಿಜಲಿ, ಲಗಡ, ಊಷರ, ಊರ, ಏಡ, ಸಳ, ಔಜಸ, ಛದ, ಒಡತನ(ಸ್ನೇಹ), ಛದ, ಐಲ, ಘನರವ, ಝಳಪ, ಶಶಕ, ಠಕಣ, ಮುರಾ, ನ್ಯಗ್ರೋಧ, ವಾಯಸ, ಚಮರ,

ಯಾವ ಅಗ್ರಹಾರದಲ್ಲಿ ಕುಳಿತು ಪಾಠ ಹೇಳಿಕೊಡುತ್ತಿರುವವರು ಕನ್ನಡ ಕಲಿಸುವ ಈ ಪಠ್ಯಪುಸ್ತಕವನ್ನು ತಯಾರಿಸಿದರು? ಅದಕ್ಕಾಗಿ ಎಷ್ಟು ದಿನ ತಪಸ್ಸು ಮಾಡಿದರು? ಅವರ ದೇಹದಲ್ಲಿ ಕನ್ನಡದ್ದೇ ನರಗಳು ನಿಜಕ್ಕೂ ಕೆಲಸ ಮಾಡುತ್ತಾ ಇದಾವ? ಈ ನೆಲದ ಅನ್ನ ಉಣ್ಣುತ್ತಿರುವ ಮಯ್ಯಿ, ಈ ನೆಲದ ಮೇಲೆಯೇ ಮಲಗಿ ಕನಸು ಕಾಣುತ್ತಿರುವ ಮನಸು ಅವರಿಗೆ ಇದೆಯಾ ಅಂತಾ ಕೇಳಬೇಕು ಅನಿಸುತ್ತದೆ. ಯಾಕೆಂದರೆ, ಕೊಡುವ ಕೊಡ ನೀರಿಗಿಂತ ಇಂತಹ ಎಂಜಲನ್ನೇ ಬಳಿಯಲು ಎಶ್ಟೆಲ್ಲಾ ಟೀಚರುಗಳು ಟೊಂಕಕಟ್ಟಿ ನಿಲ್ಲಬೇಕು? ಕಲಿಸುವ ನೆಪದಲ್ಲಿ ಕಲಿಯುವವರ ಬದುಕಿನ ಬೇರುಗಳನ್ನು ಹೀಗೆ ಕತ್ತರಿಸಿ ಹಾಕಲು ಇಂತವರಿಗೆ ಹಕ್ಕು ಕೊಟ್ಟವರು ಯಾರು? ಇಲ್ಲಿ ಗುರುತಿಸಿರುವ ಒಂದನೇ ಪುಸ್ತಕದ ಯಾವುದೇ ಪದಗಳು ತನ್ನದು ಎನ್ನುವ ತಿಳಿವನ್ನು ತರಲಾರವು ಎನ್ನುವುದು ಕನ್ನಡವನ್ನು ಬಲ್ಲ ಯಾರಿಗಾದರೂ ಅನಿಸುತ್ತದೆ.

ಯಾಕೆಂದರೆ, ಮಗು ಶಾಲೆಗೆ ಹೋಗುವ ಮೊದಲಿಗೆ ತಾನು ಹುಟ್ಟಿ ಬೆಳೆದ

ಜಾಗದ ಅನೇಕ ಸಂಗತಿಗಳ ಪರಿಚಯವನ್ನು ಪಡೆದಿರುತ್ತದೆ. ಅದನ್ನು ತಾನಾಡುವ ನುಡಿಯ ಮೂಲಕ ಗುರುತಿಸಿ ಹೇಳುವ ಕಸುವು ಆ ಮಗುವಿಗಿರುತ್ತದೆ. ಮತ್ತು ಯಾವಾಗ, ಯಾಕೆ ಮತ್ತು ಹೇಗೆ ಹೇಳಬೇಕೆಂಬ ಚಳಕಗಳನ್ನೂ ರೂಡಿಸಿಕೊಳ್ಳುವ ದಾರಿಯನ್ನೂ ಹಿಡಿದಿರುತ್ತದೆ. ಇದೆಲ್ಲವನ್ನೂ ಆ ಪರಿಸರದಲ್ಲಿ ಬದುಕುತ್ತಿರುವ ಇತರರು ಹೇಗೆ ಗುರುತಿಸಿ ನುಡಿಯಬಲ್ಲರೋ, ಅರಿಯಬಲ್ಲರೋ ಅಂತೆಯೇ ಮಗುವಿನ ನುಡಿಯರಿವು ಬೆಳೆಯುತ್ತಿರುತ್ತದೆ.

ಶಾಲೆಗೆ ಬರುವ ಮಗುವಿಗೆ ತಾನು ಕಲಿಯಬೇಕಾದ ಬರವಣಿಗೆ ಮತ್ತು ಇತರೆ ಸಂಗತಿಗಳು ತಾನು ಆಡುತ್ತಿರುವ ಮಾತಿಗೆ, ತಾನು ಬೆಳೆಯುತ್ತಿರುವ ಸುತ್ತಮುತ್ತಲಿನ ಜಾಗ, ಜನಕ್ಕೆ ಹತ್ತಿರವಿರುವಂತಹದ್ದು ಎನಿಸಬೇಕಾಗಿರುವುದು ಸಹಜವೂ ಅಗತ್ಯವೂ ಆಗಿದೆ. ಹೀಗಾದಾಗ ತಾನಾಡುವ ನುಡಿಯ ಬೇರೆಬೇರೆ ಬಳಕೆಯ ಚಳಕಗಳನ್ನು ತಿಳಿಯುವುದು ಸಲೀಸೆನಿಸುತ್ತದೆ. ಶಬ್ದಗಳನ್ನು ನುಡಿಯುವುದು, ಪದಗಳನ್ನು ಕಟ್ಟುವುದು, ಪದಗಳನ್ನು ಕೂಡಿಸಿ ಸೊಲ್ಲನ್ನು ಹುಟ್ಟಿಸುವುದು ಮತ್ತು ಅವುಗಳನ್ನು ಸಂಗತಿಗಳೊಂದಿಗೆ ಜೋಡಿಸಿ ಕಲಿಯುವುದು ತನ್ನ ಬದುಕಿನ ಸುತ್ತಮುತ್ತಣ ಪರಿಚಿತ ಸಂಗತಿಗಳನ್ನು ಅನುಸರಿಸಿದಾಗ ಸುಲಬವೂ ಆಗುತ್ತದೆ. ಹಾಗೆ ಕಲಿಯುತ್ತಿರುವುದು, ತನ್ನದು, ತಾನು ಬದುಕುತ್ತಿರುವ ಸನ್ನಿವೇಶದ್ದು, ತನಗೆ ಬೇಕಾದದ್ದು ಅನಿಸುತ್ತದೆ.

ಹಾಗಿದ್ದರೆ ಕನ್ನಡ ಕಲಿಯುವ ಪುಸ್ತಕದಲ್ಲಿ ಸರಿಯಾಗಿ ಕನ್ನಡ ಯಾಕಿಲ್ಲ, ಪ್ರಯ್ಮರಿ ಸ್ಕೂಲಿನ ಮೊದಲ ಹೆಜ್ಜೆಯ ಈ ಕಲಿಕೆಯನ್ನು ಹೀಗೆ ವಿವರಿಸಿಕೊಳ್ಳಲಾಗಿದೆ. 'ಭಾಷಾ ಕಲಿಕೆ ಮತ್ತು ಕಲಿತದ್ದರ ಬಳಕೆ ಸಾಂಸ್ಕೃತಿಕ, ಸಾಹಿತ್ಯಕ, ಐತಿಹಾಸಿಕ ಮತ್ತು ಸಾಂಪ್ರದಾಯಕ ಬದುಕಿನ ನಿಚ್ಚ ಪ್ರತೀಕ' ಅಂತ. ಆದ್ದರಿಂದಾಗಿ 'ಶೈಕ್ಷಣಿಕ ಕ್ಷೇತ್ರದಲ್ಲಿ ಸೂಕ್ತ ರೀತಿಯ ಭಾಷಾ ಬೋಧನೆ-ಕಲಿಕೆ ಅನಿವಾರ್ಯ' ಅಂತ. ನುಡಿಯ ಕಲಿಕೆಯೆಂದರೆ 'ನಾಡಿನ ಒಗ್ಗಟ್ಟು, ಪರಂಪರೆಯ ಜೀವಂತಿಕೆ, ಸಮುದಾಯದ ಮೇಲ್ಮೆ, ಪ್ರಾಂತೀಯ ಮಹತ್ವ, ಚಾರಿತ್ರಿಕ ಮೌಲ್ಯ ಮತ್ತು ಸಾಹಿತ್ಯಕ ಶಿಷ್ಟತೆಯನ್ನು ಉಳಿಸಿ ಬೆಳೆಸಿ ಪೋಷಿಸಿ ಕಾಪಾಡುವುದು'. ಇದಕ್ಕಾಗಿ ಮತ್ತು ಈ ಮೂಲಕ 'ವಿವಿಧ ಭಾಷಾ ಸಾಮರ್ಥ್ಯಗಳನ್ನು ಪರಿಣಾಮಕಾರಿಯಾಗಿ ಬೆಳೆಸುವುದು' ಅಂತ. ಇದರಿಂದಾಗಿ ಕಲಿಯುವವರ 'ಮನೋವೈಜ್ಞಾನಿಕ ಬೆಳವಣಿಗೆ' ಆಗುತ್ತದೆ. 'ಕಲಿಕೆಯ ಗುರಿ ಈಡೇರುವುದು. ಶಿಕ್ಷಣ ಧರ್ಮ ಸಿದ್ಧಿಸುವುದು. ಮಕ್ಕಳ ಶೈಕ್ಷಣಿಕ ಜೀವನ ಹಸನಾಗುವುದು' ಎಂದು ಡಂಗುರಪಡಿಸಲಾಗಿದೆ. ಇದನ್ನೇ 'ಸಾಂಸ್ಕೃತಿಕ ಭವ್ಯತೆ, ಭಾಷಿಕ ಮೌಲ್ಯ, ಮತ್ತು ಜನಪರ ನಂಬಿಕೆಗಳಿಗೆ ಮೂರ್ತರೂಪ ನೀಡುವುದು' ಎಂದೂ ದೊಡ್ಡದೊಡ್ಡ ಮಾತುಗಳಲ್ಲಿ ಕೊಚ್ಚಿಕೊಳ್ಳಲಾಗಿದೆ.

ಹೀಗೆ ಕೊಚ್ಚಿಕೊಳ್ಳುವ ಸಂಗತಿಗಳು ಕಲಿಯುವ ಪುಸ್ತಕದಲ್ಲಿ ಯಾಕಿಲ್ಲ? ಈ ಮೇಲಿನ ಪದಗಳಲ್ಲಿ ಕಾಣುವುದು ಯಾವ ಮತ್ತು ಯಾರ ಬದುಕಿನ ಸಂಗತಿಗಳು? ಯಾರ ಸಂಪ್ರದಾಯ? ಈ ಪದಗಳನ್ನು ಬಳಸಿ ಕಲಿತವರು ಯಾವ ಸಂಗತಿಗಳನ್ನು ಕುರಿತು ಮಾತನಾಡಬೇಕು? ದಿನದ ಬದುಕಿನ ನಂಟಿನಲ್ಲಿ ಏನನ್ನು ತಾನೇ ಮಾತನಾಡಲು ಬರುತ್ತದೆ ಎನ್ನುವ ಕಬರು ಇದೆಯಾ? ಕನ್ನಡ ಕಲಿಕೆಯಲ್ಲಿ 'ಸೂಕ್ತ ರೀತಿ' ಅಂದರೆ ಇದೇನಾ?

ಇದೆಲ್ಲವನ್ನೂ ಆಲಿಸುವ, ಮಾತನಾಡುವ, ಓದುವ ಮತ್ತು ಬರೆಯುವ ನುಡಿಚಳಕಗಳ ಕಸುವಿನ ಮೂಲಕ ಆಗುಮಾಡಲು ಬರುತ್ತದೆ ಎನ್ನುವುದು ರೂಡಿಯಂತೆ ಹೇಳಿಕೊಂಡು ಬಂದಿರುವ ಚಾಳಿಯಾಗಿ ಕಾಣುತ್ತದೆಯೇ ಹೊರತು ಬೇರೇನೂ ಅಲ್ಲ. ನಿಜವಾದ ಹೊಣೆಯಿಂದ ತಪ್ಪಿಸಿಕೊಳ್ಳಲು ಹೆಣೆಯುತ್ತಿರುವ ಸುಳ್ಳುಗಳು. ಪ್ರತಿ ಮಗುವಿಗೆ ಆಲಿಸುವುದನ್ನು, ಮಾತನಾಡುವುದನ್ನು ಕಲಿಸುವುದು ಎಂದರೇನು, ಹೇಗೆ ಎಂದು ಇದುವರೆಗೂ ಕಂಡುಕೊಳ್ಳಲು ಆಗಿಲ್ಲ ಯಾಕೆ? ಕಲಿಸುವವರಿಗೆ(ಬೋದಕರಿಗೆ) ನೀಡುವ ಯಾವ ತರಬೇತಿಯಲ್ಲಿಯೂ ಈವರೆಗೂ ಇದರ ಸುಳಿವು ಕೂಡ ಇಲ್ಲ. ಹೀಗಾಗಿ 'ಸೂಕ್ತ ರೀತಿ' ಎನ್ನುವುದು ಮತ್ತೊಂದು ಮರುಳುತನದ ಮಾತಲ್ಲದೆ ಮತ್ತೇನು?

3. ಒಡಲನುಡಿಯ ನೆಪದಲ್ಲಿ ಕಲಿಯಬೇಕೆ ಹೀಗೆ

ನುಡಿಬಳಕೆಯ ತಿಳುವಳಿಕೆಯನ್ನು ಕಲಿಸಲು-ಕಲಿಯಲು ತೋರಿಸಿರುವ ದಾರಿ ಹೀಗಿದೆ; 1.ನಲಿ-ಕಲಿ ಪದ್ಧತಿ-ಆಡಾಡುತ್ತಾ ಕಲಿಯುವುದು 2.ರೂಪಸಾಮ್ಯ ಪದ್ಧತಿ-ಚಿತ್ರವನ್ನು ನೋಡಿ ಕಲಿಯುವುದು 3.ಧ್ವನಿಸಾಮ್ಯ ಪದರಚನಾ ಪದ್ಧತಿ-ಹೊರಡಿಸುವ ಶಬ್ದಗಳ ಮೂಲಕ ಕಲಿಯುವುದು 4.ಓದಿ ತಿಳಿಯುವುದು, 5.ನೆನಪಿನಂಗಳ-ಪದಗಳನ್ನು, ಪದಕಂತೆಗಳನ್ನು, ವಾಕ್ಯಗಳನ್ನು ನೆನಪಿಸಿಕೊಂಡು ಬರೆಯುವುದು ಮೊದಲಾಗಿ. ಇವು ಹೊಸಕಾಲದ ಕಲಿಯುವಿಕೆಯ ಪದ್ಧತಿಯನ್ನು ಹೇಳುತ್ತಿವೆ ಅನ್ನುವುದು ನಿಜ. ಆದರೆ ಕಲಿಯಲು ಈ ಮಾದರಿಯಲ್ಲಿ ಸಂಗತಿಗಳನ್ನು ಪಾಠಗಳಲ್ಲಿ ಜೋಡಿಸಿಕೊಡುವಲ್ಲಿ ಸೋತಿರುವುದು 'ಕನ್ನಡ ಕಲಿ-ನಲಿ' ಪುಸ್ತಕ ತೆರೆದ ಕೂಡಲೇ ಕಾಣುತ್ತದೆ. ಇಲ್ಲಿನ ಸಂಗತಿಗಳು ಪಠ್ಯಗಳ ನಿರ್ದಿಷ್ಟ 'ಅಭ್ಯಾಸ'ಗಳ ಸನ್ನಿವೇಶದಲ್ಲಿ ಬೇರೆಬೇರೆ ರೂಪಗಳ ಆಗುವಿಕೆಯನ್ನು ನಿರಾಕರಿಸುತ್ತವೆ. ಹೀಗೆ ಕಲಿಯಬೇಕೆಂಬ ಇಂತಹ ಕಟ್ಟಿನ ರೂಡಿಗಳು ಕಲಿಯುವವರಿಗೆ ಈಗಾಗಲೇ ಸಹಜವಾಗಿ ಇರುವ ನುಡಿಬಳಕೆಯ ಕಸುವಿನ ಬಗ್ಗೆ ಕೀಳರಿಮೆಯನ್ನೂ ಉಂಟುಮಾಡುತ್ತದೆ. ಅವರಿಗಿರುವ ಆ ಚಳಕಗಳನ್ನು ನಿರಾಕರಿಸಲಶ್ಟೇ ಅನುವು ಮಾಡಿಬಿಡುತ್ತದೆ. ಈ ಸಂಗತಿಗಳನ್ನು ಗಮನಿಸಿ;

ತಿರುಳನ್ನು ಹೇಳಲೂ ಸಂಸ್ಕೃತ ಪದಗಳದೆ ತೊಡಕು

1.ವನ-ಅರಣ್ಯ, ಕಾನನ, 2.ಬಕ-ಒಂದು ಜಾತಿಯ ಜಲಚರ ಪಕ್ಷಿ 3.ಒಗ್ಗಟ್ಟು-ಐಕಮತ್ಯ 4.ಸುದ್ದಿ-ಸಮಾಚಾರ 6.ಅತಿಥಿ-ಅಭ್ಯಾಗತ 7.ಆಲ-ನ್ಯಗ್ರೋದ 8.ಉದರ-ಗರ್ಭ 9.ಹಗರಣ-ಪ್ರಕರಣ, ಘಟನೆ 10.ಸಭಾಪತಿ-ಸಭಾಧ್ಯಕ್ಷ 11.ಸಫಲ-ಯಶಸ್ಸು, ಸಾರ್ಥಕ 12.ಸಗರ-ಸೂರ್ಯವಂಶದ ಅರಸು 13.ಷರ-ವಿಮರ್ಶೆಯ ನುಡಿ, ಅಭಿಪ್ರಾಯ

ಇಂತಹ ಅನೇಕ ಎತ್ತುಗೆಗಳನ್ನು ಒಂದನೇ ತರಗತಿಯ ಕನ್ನಡ ಪುಸ್ತಕದಲ್ಲಿ ನೋಡಬಹುದು.

ತಿರುಳಿನ ಗ್ರಹಿಕೆಯಲ್ಲಿಯೂ ತೊಡಕು

1. ಬಕ-ಕೊಕ್ಕರೆ, ಒಂದು ಜಾತಿಯ ಜಲಚರ ಪಕ್ಷಿ,
2. ಧಪಾ ಧಪಾ ಧಪ್ ಧಪಾ- ಆನೆ ಹೆಜ್ಜೆ ಸಪ್ಪಳ,
3. ಘಂಟೆ-ಬಾರಿಸುವ ಸಾಧನ, ಗಂಟೆ,
4. ಚಂದ-ಛಂದ,
5. ಶಯನ-ನಿದ್ದೆ
6. ಒಗ್ಗಟ್ಟು-ಐಕಮತ್ಯ,

7. ಕಂಕಣ– ಮದುವೆಯಲ್ಲಿ ವಧು ವರರ ಮುಂಗೈಗೆ ಕಟ್ಟುವ ರಕ್ಷಾಸೂತ್ರ(ಒಂದು ಕಡೆ)
8. ಕಂಕಣ–ಕಡಗ, ಬಳೆ(ಇನ್ನೊಂದು ಕಡೆ)
9. ಲಂಗ–ಹೆಣ್ಣುಮಕ್ಕಳ ಉಡುಪು
10. ಭರತ–ಒಬ್ಬ ಮುನಿ, ದಶರಥನ ಮಗ, ದುಶ್ಯಂತನ ಮಗ

ಇಲ್ಲಿನ ಪದಗಳಿಗೆ ಕೊಟ್ಟಿರುವ ತಿರುಳನ್ನು ಗಮನಿಸಿಕೊಂಡಾಗ ಒಂದು ಅಂಶವಂತೂ ನಿಕರವಾಗುತ್ತದೆ. ಅದೇನೆಂದರೆ ಮಕ್ಕಳಿಗೆ ಈ ಬಗ್ಗೆ ತಿಳಿದಿರಬಹುದಾದ ಅನೇಕ ಸಂಗತಿಗಳನ್ನು ಮರೆವಿಗೆ ತಳ್ಳಿ, ಇದೊಂದೇ ತಿರುಳು ಇದಕ್ಕಿರುವುದು ಎನ್ನುವಂತೆಯೂ ಮತ್ತು ತಪ್ಪು ತಪ್ಪಾದ ತಿರುಳುಗಳನ್ನು ಸರಿ ಎನ್ನುವಂತೆಯೂ ಕಲಿಯುವಂತೆ ಮಾಡಲಾಗಿರುವುದು.

ಪದ ಪದ ಹೊಂದಾಣಿಕೆಯಲ್ಲಿನ ಗ್ರಹಿಕೆಯ ತೊಡಕನ್ನು ಗಮನಿಸಿ;

ಅ	ಆ
ನಿಂತಿತು	ಧಪ್ಪೆಂದು
ಎತ್ತಿತು	ಮೆಲ್ಲನೆ
ಗದರು	ಮಾವುತ
ಒದರು	ಕಿವಿ
ಜಲಿಜಲಿ	ತುಪ್ಪ
ಕರಕರ	ಕಪ್ಪೆ
ರಾಜ	ಬಹುಮಾನ
ಮರ	ಹಣ್ಣು

ಒಂದು ಪದದ ಎದುರು ಇನ್ನೊಂದು ಪದವನ್ನು ಹೀಗೆ ಜೋಡಿಸಬೇಕು ಎಂದು ಇದೇ ಪುಸ್ತಕದ ಪಾಠಗಳ ಸನ್ನಿವೇಶದಲ್ಲಿ ಹೇಳಲಾಗಿದೆ. ಅದರೆ, ಇದನ್ನು ಗಮನಿಸುವ ಯಾರಿಗೇ ಆದರೂ ಎದುರಾಗುವ ಕೇಳ್ವಿಯೆಂದರೆ, ಇವು ಆಯಾ ಪಾಠದ್ದೇ ಎಂದು ಕಲಿಯುವ ಮಕ್ಕಳು ನೆನೆಪಿಟ್ಟುಕೊಳ್ಳಬೇಕು ಯಾಕೆ? ನುಡಿ ಕಲಿಕೆಗೆ ಇದರಿಂದ ಯಾವ ಬಗೆಯ ಕಸುವು ಬರುತ್ತದೆ? ಆ ಪಾಠದ ಸನ್ನಿವೇಶದಿಂದ ಈ ಪದಗಳನ್ನು ತೆಗೆದು ನೋಡಿದಲ್ಲಿ ಒಂದು ಇನ್ನೊಂದಕ್ಕೆ ಹೊಂದಿಕೆಯಾಗದೆಯೇ ಇರುವಂತೆ ಇವೆಯಲ್ಲ. ಇನ್ನಾವುದೋ ಹೊಂದಿಕೆಯಾಗಬಹುದಲ್ಲ? ಹಾಗೆ ಇವು ಅದಲಿಬದಲಿಯಾದರೆ ಏನಾಗುತ್ತದೆ? ಅನೇಕ ಬಗೆಯಲ್ಲಿ ಗ್ರಹಿಸುವ ಕಸುವು ಮಕ್ಕಳಿಗಿದೆ ಎನ್ನುವುದರ ಹಿನ್ನೆಲೆಯಲ್ಲಿ ಇಂತಹ ಕೇಳ್ವಿಗಳು ಮುಖ್ಯವಾಗುತ್ತವೆ. ಈ ನಿಟ್ಟಿನಲ್ಲಿ ಪಠ್ಯರಚನಕಾರರು ದಾರಿ ತಪ್ಪಿರುವುದು ನಿಚ್ಚಳವಾಗುತ್ತದೆ.

ಚಿತ್ರಸಮೇತ ಹೇಳುವ ಪದಗಳು ಒಡ್ಡುವ ಗ್ರಹಿಕೆಯ ತೊಡಕೂ ಇಂತಹುದೇ ಇನ್ನೊಂದು

ದಸರ–ಅಂಬಾರಿ ಚಿತ್ರ
ನಗರ–ಕಟ್ಟಡಗಳು, ರಸ್ತೆಯ ಚಿತ್ರ
ದರಗ–ಮಸೀದಿ ಚಿತ್ರ
ಅರಸ–ಪೇಟದ ವ್ಯಕ್ತಿಯ ಚಿತ್ರ
ಚಮರ–ಚಮರೀ ಮೃಗದ ಚಿತ್ರ
ಕಲರವ–ಹಕ್ಕಿಗಳ ಚಿತ್ರ
ಐದಳ– ದಾಸವಾಳದ ಚಿತ್ರ
ಭಗ–ಆಡಿನ ಚಿತ್ರ
ಡಣಡಣ–ಬೆಲ್ ಪ್ಲೇಟ್/ಬೆಲ್ ಒಡೆಯುವ ಕಡ್ಡಿ ಚಿತ್ರ
ಫಲ–ಹಣ್ಣುಗಳ ಚಿತ್ರ
ಹಾಲು ಕುಡಿದಳು–ಏನನ್ನೋ ಕುಡಿಯುತ್ತಿರುವವಳ ಚಿತ್ರ
ತಿಂಡಿ ತಿನ್ನುವಳು–ಏನನ್ನೋ ತಿನ್ನುತ್ತಿರುವವಳ ಚಿತ್ರ

ಕೆಲವು ಚಿತ್ರಗಳನ್ನು ಕೊಟ್ಟು ಇವು ಇಂತಹುದನ್ನೆ ಸೂಚಿಸುತ್ತವೆ ಎನ್ನುವುದಿಲ್ಲಿ ದಿಕ್ಕು ತಪ್ಪಿದಂತಿದೆ. ಒಂದು ಚಿತ್ರವನ್ನು ನೋಡುವ ಹತ್ತಾರು ಮಕ್ಕಳ ಗ್ರಹಿಕೆಗಳು ಹತ್ತೆಂಟು ಬಗೆಯಲ್ಲಿರುತ್ತವೆ ಎನ್ನುವುದು ಮೊದಲು ನಾವು ನಂಬಬೇಕಾದ ನಿಜ. ಆದರೆ, ಹಕ್ಕಿಗಳ ಚಿತ್ರವನ್ನು ಕೊಟ್ಟು 'ಕಲರವ' ಎಂಬ ಪದವನ್ನು ತಿಳಿಯಿರಿ ಎಂತಲೋ, ದಾಸವಾಳದ ಹೂವಿನ ಚಿತ್ರವನ್ನು ಕೊಟ್ಟು 'ಐದು' ಪದವನ್ನು ತಿಳಿಯಿರಿ ಎಂತಲೋ ಕಟ್ಟು ಮಾಡಲು ಬರುತ್ತದೆಯೇ? ಹೀಗೆ ಕಲಿಯುವ ಮಕ್ಕಳು ಒಪ್ಪಿಬಿಡುತ್ತಾರೆ, ಒಪ್ಪಿಕೊಳ್ಳಬೇಕು ಎಂಬ ಹಠ ಯಾಕಿದೆ ಎನ್ನುವುದನ್ನು ಯೋಚಿಸಿದಾಗ ಇದರ ಹಿಂದಿನ ಕಲ್ಚರಲ್ ಅಜೆಂಡಾನೆ ಬೇರೆಯಾಗಿ ಕಾಣಿಸುತ್ತದೆ. ಹಾಗಾಗಿಯೇ ಕನ್ನಡ ಪದಗಳನ್ನು ಕಲಿಯಲು ಕೊಡಲಾಗದ ಪರಿಸ್ಥಿತಿ ಪಠ್ಯ ಮಾಡುವವರಿಗೆ ಬಂದಂತಿದೆ.

ಇಂತಹುದೇ ಇನ್ನೊಂದು ತೊಡಕೂ ಸಹ, ಆನೆ ಗೀಳಿಡುವುದುನ್ನು,, ಹುಲಿ, ನಾಯಿ, ಹಂದಿ, ಕತ್ತೆ ಗುಬ್ಬಿ, ಕಾಗೆ, ಕೋಗಿಲೆ ಇತರೆ ಪ್ರಾಣಿ–ಪಕ್ಷಿಗಳ ಕೂಗನ್ನು ಹೇಳಿಸುವುದರಲ್ಲೂ ಇದೆ. ಇಲ್ಲಿ ಇಂತಹುದೇ ಕೂಗು ಎಂದು ಬೊಮ್ಮಡಿ ಬಜಾಯಿಸುವುದರಿಂದ ಕಲಿಸುವ ನಿರ್ದಿಷ್ಟ ಗುರಿಯನ್ನು(ಈ ಮೊದಲೇ ಹೇಳಿರುವಂತೆ) ತಲುಪಿದಂತೆ ಆಗುವುದಿಲ್ಲ. ಯಾಕೆಂದರೆ, ಆ ಮೂಲಕ ಮಕ್ಕಳು ಇಂತಹುದೇ ಪದಸಂಪತ್ತನ್ನು ಪಡೆಯಬಲ್ಲರು ಎಂದು ಖಚಿತವಾಗಿ ಹೇಳಲು ಬರುವುದಿಲ್ಲ. ಕೇವಲ ಅನುಕರಣೆಯೊಂದನ್ನು ಗ್ರಹಿಸಲು ಅವಕಾಶ ಒದಗಬಹುದು ಅಷ್ಟೆ.

ಸ್ಪಷ್ಟವಾಗಿ ಹೇಳಿಸಬೇಕೆನ್ನುವ–ಹಕ್ಕಿ, ಛಲ, ಭಾರ, ಧನ, ಫಲ, ಹಣ ಮೊದಲಾದ ಸನ್ನಿವೇಶಗಳೂ ಅಷ್ಟೆ. ಇವು ಕೇವಲ ಮೇಲ್ನೋಟಕ್ಕೆ ಕಾಣಸಿಗುವ ಕೆಲವು ಸಂಗತಿಗಳು ಮಾತ್ರ. ಹೀಗೆ ನೂರಾರು ಪದಗಳು, ಸಂಗತಿಗಳು ಈ ಪುಸ್ತಕದಲ್ಲಿವೆ. ಕನ್ನಡದ ನೆಪದಲ್ಲಿ ಸಂಸ್ಕೃತ ಪದಗಳನ್ನು ಹೇರುತ್ತಾ, ಗೊತ್ತಿರುವ ಕನ್ನಡ ಪದಗಳನ್ನು ಮರೆಯುವಂತೆ, ಮಕ್ಕಳ ನೆನಪಿನಿಂದ ಇಲ್ಲವಾಗುವಂತೆ ಮಾಡುವ ಕೆಲಸವೇ ಈ ಪುಸ್ತಕದಲ್ಲಿದೆ.

4. ಮೊದಲ ಹೆಜ್ಜೆಯಲ್ಲಿಯೇ..

ಕಲಿಕೆಯ ಉದ್ದೇಶವನ್ನು ವಿವರಿಸಿಕೊಳ್ಳುವಾಗ ನಾವು, ಕಲಿತದ್ದು ಕಲಿಯುವವರಿಗೆ ಸವಲತ್ತಾಗಿ ಒದಗಿ ಬರುವಹಾಗೆ ಮಾಡಿಕೊಂಡಿದ್ದೇವೆಯೇ ಎನ್ನುವ ಕೇಳ್ವಿಯನ್ನು ಕಲಿಕೆಯ ಪಠ್ಯಗಳೊಟ್ಟಿಗಿಟ್ಟು ಕೇಳಿಕೊಳ್ಳುವುದು ಮುಖ್ಯ. ಯಾಕೆಂದರೆ ಪಠ್ಯ ರಚನೆಕಾರರು, ಅದನ್ನು ನೋಡಿಮಾಡಿ ಸರಿಮಾಡಿ ಕಟ್ಟಕೊಡುವವರು ಮತ್ತು ಇದರ ಉಸ್ತುವಾರಿಯನ್ನು ನಿಭಾಯಿಸುವವರ ಮಾತುಗಳಲ್ಲಿ 'ಸಮಷ್ಟಿಯ ಸರ್ವಾಂಗೀಣ ವಿಕಾಸ, ಸಾಮಾಜಿಕರೆಲ್ಲರ ಅಭ್ಯುದಯ, ಕಾಲಧರ್ಮಕ್ಕೆ ಹೊಂದಿಕೊಂಡ ವೈಜ್ಞಾನಿಕ ಶೈಕ್ಷಣಿಕ ಕ್ರಮ, ವ್ಯಕ್ತಿತ್ವ ವಿಕಸನ, ಜ್ಞಾನಕ್ರಾಂತಿಯ ಸಿದ್ಧಿಸಾಫಲ್ಯ, ಸುಸಂಸ್ಕೃತ ಜೀವನದ ಸೋಪಾನ'(ಕನ್ನಡ ಕಲಿ–ನಲಿ, 2002) ಎಂಬ ಸತುವಿರದ ಮಾತುಗಳನ್ನು ಕಾರಿಕೊಂಡ ಕೂಡಲೇ ಒಂದು ಪಠ್ಯಕ್ಕೆ ಗವ್ರವ ಬಂದುಬಿಡುವುದಿಲ್ಲ. ಕಲಿಸುವವರಿಗೆ, ಕಲಿಯುವವರಿಗೆ ಏನೇನೋ ತಿಳಿಯುತ್ತದೆ ಎಂದಾಗುವುದಿಲ್ಲ. ಇದು ಕೇವಲ ಬಾಯಿಬಡುಕುತನವಾಗಿ ಮಾತ್ರವೇ ಕಾಣಿಸುತ್ತದೆಯಷ್ಟೆ. ಮತ್ತೆ ಇವು ಸತುವಿರದ ಮಾತುಗಳು ಯಾಕೆಂದರೆ, ಹೀಗೆ ಆಡುವವರಿಗೂ ಈ ಮಾತುಗಳ ತಿರುಳನ್ನು ಕಂಡುಕೊಳ್ಳಲಾಗದಿರುವುದರಿಂದ. ಹಾಗೆ ಕಂಡುಕೊಂಡಿದ್ದರೆ ಆ ತಿರುಳನ್ನೇ ಕಲಿಸುವವರಿಗೂ, ಕಲಿಯುವ ಮಕ್ಕಳಿಗೂ ತಿಳಿಯುವಂತೆ ಬರೆದುಕೊಳ್ಳುತ್ತಿದ್ದರಲ್ಲದೆ ತಮ್ಮದಲ್ಲದ್ದನ್ನು ಹೀಗೆ ಅನುಕರಿಸಿ ಕುರುಡು ಕುರುಡಾಗಿ ಹೇಳಿ ದೊಡ್ಡಜನ ಎನಿಸಿಕೊಳ್ಳುವ ಅಗತ್ಯ ಕಾಣುತ್ತಿರಲಿಲ್ಲ ಅನಿಸುತ್ತದೆ. ಇಲ್ಲೊಂದು(ಕನ್ನಡ ಕಲಿ–ನಲಿ 1) 'ಅರ್ಥಸಹಿತ ಪದಕೋಶ'ಯಿದೆ. ಇದನ್ನು ನೋಡಿಕೊಂಡು ಮುಂದುವರಿಯೋಣ;

ಈ ಪದಕೋಶಿಯಲ್ಲಿ ಅ ಯಿಂದ ಹ ತನಕ ಒಟ್ಟು ಸುಮಾರು 300 ಪದಗಳಿವೆ. ಇವುಗಳಲ್ಲಿ 212 ಕನ್ನಡದ್ದೇ ಪದಗಳಿದ್ದು, ಸುಮಾರು 90 ಸಂಸ್ಕೃತ ಪದಗಳಿವೆ. ಆದರೆ ಇಲ್ಲಿ ಮೊದಲಿಗೇ ಗಮನಕ್ಕೆ ಬರುವ ಸಂಗತಿಯೆಂದರೆ,

ಒಂದು; ಸಾಮಾನ್ಯವಾಗಿ ಶಾಲೆಗೆ ಬರುವ ಮೊದಲೇ ಮಕ್ಕಳಿಗೆ ಗೊತ್ತಿರುವ ಪದಗಳನ್ನೂ ತಿರುಳನ್ನು ತಿಳಿಯಬೇಕಾದ 'ಕಠಿಣ' ಪದಗಳು ಎಂದು ಕೊಟ್ಟಿರುವುದು. ಎತ್ತುಗೆಗೆ–ಅಗಲ, ಅಂದ, ಆಳ, ಇಬ್ಬರು, ಇವತ್ತು, ಇಣುಕಿ, ಊಟ, ಊರು, ಎಡಬಲ, ಒಣಮರ, ಒಳ, ಕಣ್ಣು, ಕಾಗೆ, ಕಾಲು, ಕುಣಿ, ಕೆಂಪು, ಕೋಲು, ಗದರು, ಗಿಡ, ಗುಂಪು, ಜಗಳ, ಜನ, ಜಾಣ, ಜೋರಾಗಿ, ತಟ್ಟು, ತಲೆ, ದಾರಿ, ಪಕ್ಕ, ಬಯಲು, ಬಳಪ, ಮಗ, ಮಗಳು, ಹಸಿವು ಮೊದಲಾಗಿ....

ಎರಡು; ಹೀಗೆ ಗೊತ್ತಿರುವ ಪದಗಳಿಗೆ ತಿರುಳನ್ನು ಹೇಳಲು ಹೋಗಿ ಬಹುಮಟ್ಟಿಗೆ ತಿಳಿಯಲು ಕಷ್ಟವೆನಿಸುವ ಸಂಸ್ಕೃತ ಪದಗಳನ್ನು ತಿರುಳಾಗಿ ಕೊಟ್ಟಿರುವುದು. ಇಲ್ಲವೇ ತದ್ಭವಗಳನ್ನು ಹೇಳಿರುವುದು. ಎತ್ತುಗೆಗೆ; ಅತಿಥಿ–ಅಭ್ಯಾಗತ, ಅಲಂಕರಿಸು–ಶೃಂಗರಿಸು, ಆನೆ–ಗಜ, ಕರಿ, ಆರೋಗ್ಯ–ಸ್ವಸ್ಥ, ಆಲ–ನ್ಯಗ್ರೋದ, ಆಳ–ಅಗಾಧ, ಊಟ–ಅಶನ, ಆಹಾರ, ಋಣ–ರಿಣ, ಋತ–ರಿತ, ಕಣ್ಣು–ಅಕ್ಷಿ, ನೇತ್ರ, ಕಲರವ–ಧ್ವನಿ, ಕಾಳು–ಧಾನ್ಯ, ಮಗ–ಪುತ್ರ,

ಮೂರು; ಹೀಗೆ ತಿರುಳಾಗಿ(ಕನ್ನಡ ಪದಗಳನ್ನು ತಿಳಿಯುವ ನೆಪದಲ್ಲಿ) ಕೊಟ್ಟಿರುವ ಪದಗಳಲ್ಲಿ ಸಂಸ್ಕೃತ ಪದಗಳೇ ಸುಮಾರು 300ಕ್ಕೂ ಹೆಚ್ಚಾಗಿವೆ.

ನಾಲ್ಕು; ಪರಿಚಯಿಸಬೇಕಾದ ವ್ಯಕ್ತಿ, ಪ್ರಾಣಿ ಹೆಸರುಗಳನ್ನು ತಿರುಳಿನ ನೆಪದಲ್ಲಿ ಕೊಟ್ಟಿರುವುದು. ಎತ್ತುಗೆಗೆ; ಆನೆ–ಗಜ, ಕರಿ, ಕಪ್ಪೆ–ಜಲಚರ ಜೀವಿ, ಮಂಡೂಕ, ಕಾಗೆ–

(49ನೇ ಪುಟಕ್ಕೆ)

ಇನ್ನಷ್ಟು ಕನ್ನಡ: ಮತ್ತಷ್ಟು ಗೊಂದಲ

— ನಾಗಣ್ಣ ಕಿಲಾರಿ

1

ಕಳೆದ ಒಂದು ಶತಮಾನದ ಈಚೆಗೆ ಭಾಷಾವಿಜ್ಞಾನ ಕ್ಷೇತ್ರದಲ್ಲಿ ಹಲವು ಮಹತ್ವದ ಬದಲಾವಣೆಗಳು, ಸಂಚಲನಗಳು ನಡೆದಿವೆ. ಹಿಂದಿನಿಂದಲೂ ಭಾಷಾಧ್ಯಯನವು ನಡೆದು ಬಂದ ಮಾರ್ಗದಲ್ಲಿ ಅಥವಾ ದಾರಿಯಲ್ಲಿ ಮಾತ್ರ ಏಕೆ ಹೆಜ್ಜೆಹಾಕಬೇಕು, ಒಳದಾರಿಗಳ ಮೂಲಕವೂ ನಡೆಯಬಹುದಲ್ಲವೇ ಎಂದು ಪ್ರಶ್ನಿಸಿಕೊಂಡು ಆಲೋಚಿಸಿದ್ದೂ ಇದೆ. ನಮ್ಮ ನಮ್ಮ ಮನೆಗೆ ಹೋಗುವಾಗ ದೇವಸ್ಥಾನಕ್ಕೆ ಹೋಗಿಯೇ ನಡೆಯಬೇಕೆಂಬ ಬಳಸು ದಾರಿಗಿಂತ ನೇರವಾಗಿ ನಮ್ಮ ಮನೆಗೆ ಹೋಗುವುದು ಒಳದಾರಿ ಮತ್ತು ಸಮೀಪದ ದಾರಿ ಎಂಬುದನ್ನು ತೋರಿಸಿಕೊಟ್ಟದ್ದು ಇದೆ. ಅಲ್ಲದೆ ಇಂತಹ ಸರಳ ದಾರಿಗಳನ್ನು ಕುರಿತು ಆಲೋಚಿಸುವುದೇ ಚರಿತ್ರೆ, ಸಂಸ್ಕೃತಿಗೆ ಬಗೆಯುವ ದ್ರೋಹವೆಂದು ಚಲಿಸುತ್ತಿರುವುದು ಈವರೆಗಿನ ವ್ಯಾಕರಣ ಅಥವಾ ಶಾಸ್ತ್ರೀಯವಾದ ಪರಂಪರೆಯ ಮಾದರಿಯ ಮಿತಿಗಳು ಕಾಣತೊಡಗಿದವು.

ಎಲ್ಲರ ಕನ್ನಡವನ್ನು ಕುರಿತು ಆಲೋಚಿಸುವ, ವಿಶ್ಲೇಷಿಸುವ, ವಿವರಿಸುವ ಕಾರ್ಯಕ್ಕೆ ಮುಂದಾಗದ ಬಗೆಯನ್ನು ಮೀರಿ 'ಕನ್ನಡಂಗಳ್' ಒಳಗಿನಿಂದ 'ಕನ್ನಡದ್ದೇ ಮಾದರಿ'ಯನ್ನು ಕಂಡುಕೊಳ್ಳುವ ಪ್ರಯತ್ನ ನಡೆಯಿತು. ಡಿ.ಎನ್.ಶಂಕರಭಟ್, ಕೆ.ವಿ.ನಾರಾಯಣ ಮುಂತಾದವರು 'ಕನ್ನಡದ್ದೇ' ಆದ ಭಾಷಾಧ್ಯಯನ, 'ಕನ್ನಡಕ್ಕೆ ಕನ್ನಡದ್ದೇ ಆದ ವ್ಯಾಕರಣ' ಕಟ್ಟಿಕೊಳ್ಳುವ ಪ್ರಯತ್ನದಲ್ಲಿ ತೊಡಗಿದ್ದಾರೆ. ಬರಹದ ಚರಿತ್ರೆಯನ್ನು ಗಮನಿಸಿದಾಗ ಭಾಷಾಧ್ಯಯನವನ್ನು ಕುರಿತು ನಡೆದದ್ದು ಕಡಿಮೆಯೇ. ನಡೆದ ಅಧ್ಯಯನಗಳು ಬರಹಕ್ಕೆ ಮತ್ತು ಆರಂಭವಾದ ಸಂಸ್ಕೃತ ನಿಷ್ಪತ್ತಿ ನೆಲೆಯಿಂದ ಬಿಡಿಸಿಕೊಂಡು ಬಂದ ಬರಹವಂತೂ ಇನ್ನೂ ಕಡಿಮೆಯೇ. ಅದೇನೆ ಇರಲಿ ಭಾಷಾಧ್ಯಯನದಲ್ಲಿ ಒಂದಷ್ಟು ಆಸಕ್ತಿಯನ್ನು ತಳೆದು ಬರಹದ ಬೇರೆ ಪ್ರಕಾರದ ಕಡೆ ನಡೆದ ವಿದ್ವಾಂಸರ ಸನ್ನಿವೇಶದಲ್ಲಿ ಕೆ.ವಿ.ತಿರುಮಲೇಶ್ ಅವರು ಭಾಷೆಯನ್ನು ಕುರಿತು ಚಿಂತಿಸುತ್ತಿರುವುದು ಸಂತಸದ ಸಂಗತಿ. 'ನಮ್ಮ ಕನ್ನಡ', 'ಇನ್ನಷ್ಟು ಕನ್ನಡ' ತಿರುಮಲೇಶ್ ಅವರ ಇತ್ತೀಚಿನ ಕೃತಿಯಾಗಿವೆ.



ಪುಸ್ತಕ ಅವಲೋಕನ

ಇನ್ನಷ್ಟು ಕನ್ನಡ
ಲೇ: ಕೆ.ವಿ.ತಿರುಮಲೇಶ್
ಬೆಲೆ: 125/-
ಮೊದಲ ಮುದ್ರಣ: 2012
ಅಭಿನವ ಪ್ರಕಾಶನ
ವಿಜಯನಗರ, ಬೆಂಗಳೂರು.

2

ಕನ್ನಡ ಭಾಷಾಧ್ಯಯನ ಮತ್ತು ಸಮಾಜವನ್ನು ಗಮನಿಸಿದಾಗ ಚರಿತ್ರೆ ಮತ್ತು ಪೌರಾಣಿಕ ಅಥವಾ ಬರಹ ಪರಂಪರೆಯ ಜಗತ್ತಿನಲ್ಲಿ ಏಕಲವ್ಯ ಶಂಭೂಕ ಮುಂತಾದವರನ್ನು ಕಂಡ ಬಗೆಯೇ ನಮ್ಮೆದುರು ಇದೆ. ಮಹಾಪುರುಷನ ಪಾದದಿಂದ ಜನಿಸಿದ ಶೂದ್ರರಿಗೆ ಅಸ್ತಿತ್ವ ಇಲ್ಲವೇ? ಅವರ ಐಡೆಂಟಿಟಿಯ ಭಾಷೆ, ಒಂದು ಭಾಷೆಯೇ ಅಲ್ಲವೇ? ಯಾಕೆ ಈಗಲೂ ಅಸ್ಪೃಶ್ಯತೆಯ ರೋಗದಿಂದ ಬಿಡಿಸಿಕೊಂಡು ನೋಡಲಾಗುವುದಿಲ್ಲವೇ. ಹಲವು ಸಮುದಾಯಗಳ ಕನ್ನಡ ಭಾಷೆ ಏಕೆ ಕನ್ನಡವೆಂದು ಪರಿಗಣಿಸಲಾಗದ ನೆಲೆಯಲ್ಲಿಯೇ ಇರಿಸಲಾಗಿದೆ. ಆದರೆ ಹಲವು ಸಮುದಾಯಗಳ ಕನ್ನಡದ ಅಂತಸ್ಥ ರಚನೆಯಲ್ಲಿ ಭಿನ್ನತೆಗಳೇನು ಇಲ್ಲ. ಆದರೆ ಬಳಕೆಯಲ್ಲಿ ವೈವಿಧ್ಯತೆ ಇದೆ. ಇದು ಬಟ್ಟೆಯ ಹೆಣಿಗೆಯ ಬಗೆಯದ್ದಾದರೂ ಹಲವು ಬಣ್ಣಗಳ ಸ್ವರೂಪದ್ದು. ಹಾಗಾಗಿ ನನಗಿಷ್ಟವಾದ ಬಣ್ಣದ ಬಟ್ಟೆ ತೊಡುತ್ತೇನೆ. ಈ ವೈವಿಧ್ಯತೆಯನ್ನೇ ನಿಷ್ಕ್ರಿಯಗೊಳಿಸುತ್ತ ಬಂದ ಪರಂಪರೆಗೆ ಇನ್ನು ಮುಗಿಯದ ದಾಹವೇ. ಇದೊಂದು ಹಲವು ಸಮುದಾಯಗಳನ್ನು ಸಾಮೂಹಿಕವಾಗಿ ಮುಗಿಸುವ ಕಗ್ಗೊಲೆಯಾಗಿದೆ.

'ಇನ್ನಷ್ಟು ಕನ್ನಡ' ಪುಸ್ತಕದಲ್ಲಿ ಒಟ್ಟು ಇಪ್ಪತ್ತು ಲೇಖನಗಳಿವೆ. ಇವೆಲ್ಲವುಗಳಲ್ಲಿ ಒಂದು ರೂಪಿತಗೊಂಡ ನೆಲೆಯನ್ನು ಮೊದಲೇ ಹೊಂದಲಾಗಿದೆ. ಹಾಗೆ ಇದ್ದರೆ ಅದು ಮಾತ್ರ ಕನ್ನಡ. ಹೀಗೆ ಇರಬೇಕು, ಇದು ಮಾತ್ರ ವ್ಯಾಕರಣ ಮಾದರಿಗೆ ಯೋಗ್ಯವಾದದ್ದು, ಬರಹ ಭಾಷೆಯೇ ಶ್ರೇಷ್ಟ. ಬರಹದಲ್ಲಿ ಮುಖ್ಯವಾಗಿ ಈ ಹಿಂದಿನಿಂದಲೂ ಬಂದ ಪರಂಪರೆಯ ಮಾದರಿ ಇದೆಯಲ್ಲ ಅದು ಮಾತ್ರ ಅಂದರೆ ವೇದ, ಶಾಸ್ತ್ರ, ಪುರಾಣ, ರಾಮಾಯಣ, ಮಹಾಭಾರತಗಳಿಂದ ಜನಿಸಿ ಹರಿದುಬಂದ ಕನ್ನಡ. ಸಂಸ್ಕೃತದಿಂದ ವಿಕೃತಗೊಂಡ ಕನ್ನಡ ಮಾತ್ರ ಶ್ರೇಷ್ಠ. ಇಂತಹ ತಿಳಿವಳಿಕೆ ನಮ್ಮಲ್ಲಿ ಅಕ್ಷರ ಚರಿತ್ರೆಯ ಆರಂಭದಿಂದಲೂ ಇದೆ. ಈಗಲೂ ಮುಂದುವರೆಸುವುದರಲ್ಲಿ ಸುಖ ಕಾಣಲಾಗುತ್ತಿದೆ. ಅಂತಹದ್ದರಲ್ಲಿ 'ಇನ್ನಷ್ಟು ಕನ್ನಡ'.

3

ಕನ್ನಡ ಭಾಷೆ, ಛಂದಸ್ಸು, ವ್ಯಾಕರಣ ಮೀಮಾಂಸೆಯನ್ನು ಕುರಿತು ಆಲೋಚಿಸುವವರೆಲ್ಲರೂ ಯೋಚಿಸುತ್ತಿದ್ದುದು ಕನ್ನಡವನ್ನಲ್ಲ. ಭಾರತೀಯವೆನ್ನಿಸಿದ ಸಂಸ್ಕೃತವನ್ನು ಕುರಿತು. ಮತ್ತು ಸಂಸ್ಕೃತವನ್ನು ಅನುಸರಿಸಿ, ಸಂಸ್ಕೃತಕ್ಕೆ ಅನುಯಾಯಿಯಾಗಿ ನಡೆಯುವುದು ಮಾತ್ರ ಸೂಕ್ತವಾದದ್ದು ಎಂದು ಭಾವಿಸಲಾಗಿತ್ತು. ಸಾಹಿತ್ಯ ಮೀಮಾಂಸೆಯಲ್ಲಿ ಕೂಡ ಇಂತಹ ತಿಳಿವಳಿಕೆ ಬಲವಾಗಿಯೇ ಇದೆ ಭಾರತೀಯ ಕಾವ್ಯಮೀಮಾಂಸೆಯನ್ನು ಕುರಿತು ಆಲೋಚಿಸಿದರೆ, ಭಾರತದಲ್ಲಿ ಇರುವ ಇತರ ಎಲ್ಲಾ ಭಾಷೆಗಳನ್ನು ಕುರಿತ ಮೀಮಾಂಸೆಯನ್ನು ಚಿಂತಿಸಿದಂತೆಯೇ. ಯಾಕೆಂದರೆ ಇದಕ್ಕಿಂತ ಭಿನ್ನವಾಗಿರಲು ಸಾಧ್ಯವೇ ಇಲ್ಲ. ಅಂದರೆ ಸಾಹಿತ್ಯ ಮತ್ತು ಕಾವ್ಯಮೀಮಾಂಸೆ ಹೇಗೆ ಭಾರತೀಯವಾದದ್ದೋ ಅಥವಾ ಸಂಸ್ಕೃತವನ್ನು ಭಾರತೀಯವಾಗಿಸಿ ಉಳಿದ ಭಾಷೆಗಳ, ಮೀಮಾಂಸೆಗಳ, ಸಾಹಿತ್ಯದ ಅಸ್ಮಿತೆಯ ಪ್ರಶ್ನೆ ಮೂಡದಂತೆ ನಯವಾಗಿ ಬಿಂಬಿಸಿ ಒಂದು ರಿಮೋಟ್ ವ್ಯವಸ್ಥೆಯನ್ನು ರೂಪಿಸಿದ್ದೂ ಇದೆ.

ಒಳದಾರಿ ಅಥವಾ ಒಂದು ಭಾಷೆಯ ಚಿಂತನೆಯನ್ನು ಅದೇ ಭಾಷೆಯ ಒಳಗಿನಿಂದಲೇ ರೂಪಿಸಿಕೊಂಡು ಜಗತ್ತಿನೊಂದಿಗೆ ಮುಖಾಮುಖಿಯಾಗುವ ಚಿಂತನೆ ಕಳೆದ ಮೂವತ್ತು ವರ್ಷಗಳ ಈಚೆಗೆ ಬಲವಾಗಿ ಕೇಳಿಬರುತ್ತಿದೆ. ಕನ್ನಡ ವ್ಯಾಕರಣವನ್ನು, ಕನ್ನಡ ಭಾಷೆಯನ್ನು ಅಭ್ಯಸಿಸಿ ಕಂಡುಕೊಳ್ಳಬೇಕು ಎಂದಾಗ ಈಗ ಇರುವ ಕನ್ನಡ ಅಥವಾ ಹಿಂದಿನಿಂದ ಬಂದ ಕನ್ನಡದ ಪ್ರೀತಿಯುಳ್ಳವರಿಗೆ ಸಹಿಸಲಸದಳವಾದ ವೇದನೆಯಾಗಿ ಕಂಡಿದೆ. ಅಂದರೆ ಇಲ್ಲಿ ಮುಖ್ಯವಾಗಿ ಎರಡು ದಾರಿಗಳು ಎದುರಿಗಿವೆ. ಪಾರಂಪರಿಕ ಒಪ್ಪಿತ ನೆಲೆ ಮತ್ತು ಎಲ್ಲರ ಕನ್ನಡವಾಗಬೇಕಿರುವ 'ಕನ್ನಡದ್ದೇ ಮಾದರಿ'.

ಪಾರಂಪರಿಕ ನೆಲೆಯಲ್ಲಿ ಬಂದ ಭಾಷಾಧ್ಯಯನ ಮಾದರಿಯನ್ನು ಕಂಡುಕೊಳ್ಳಲು ಯತ್ನಿಸಿದ ಮತ್ತು ಆಧುನಿಕ ಕನ್ನಡ ಭಾಷೆಯ ಮೇಲೆ ಬೆಳಕು ಚೆಲ್ಲಿದ ಕ್ರೈಸ್ತ ಮಿಶನರಿಗಳು, ತೀ.ನಂ.ಶ್ರೀ, ಕೆ. ಕೆಂಪೇಗೌಡ, ಜಿ.ಎಸ್.ಕುಳ್ಳಿ, ರಾಜೇಶ್ವರಿ ಮಹೇಶ್ವರಯ್ಯ, ಸಂಗಮೇಶ್ ಸವದತ್ತಿಮಠ, ಕೆ. ಕುಶಾಲಪ್ಪಗೌಡ ಮುಂತಾದವರು ಈ ಹಿಂದಿನಿಂದ ಬಂದ ಭಾಷಾ ಚಿಂತನೆಯ ಮಾದರಿಗೆ ಅತ್ಯುಪಯುಕ್ತವಾದ ಕಾಣಿಕೆಯನ್ನು ಕೊಟ್ಟಿದ್ದಾರೆ. ಆದರೆ ಈ ಮಾದರಿ ನಡೆದ ದಾರಿಯಲ್ಲೇ ನಡೆದ ನಡಿಗೆಯಾಗಿ ಚಲಿಸಿದೆ. ಇವತ್ತು ಶಿಕ್ಷಣ ಎಲ್ಲಾ ಸಮುದಾಯಗಳ ಅಗತ್ಯವಾಗಿರುವುದರಿಂದ ಭಾಷೆಯಲ್ಲಿ ಹಲವು - ಹತ್ತು ಸಮುದಾಯದ ಧ್ವನಿ, ಎಲ್ಲೆಲ್ಲೋ ಬಿದ್ದ ಮಳೆಯ ಹನಿಯೂ ಒಟ್ಟುಗೂಡಿ

ರೂಪಿಸಿಕೊಂಡು ಬಂದದ್ದು ಇದೆ. ಸಂಸ್ಕೃತ ಭಾರತದ ಉಳಿದ ಎಲ್ಲಾ ಭಾಷೆಗಳಲ್ಲಿ ಶ್ರೇಷ್ಠವಾದದ್ದು. ಅದು ದೇವಭ್ಹಾಷೆ, ಕೊಡುವ ಭಾಷೆ ಎಂದು ಒಪ್ಪಿಸಲಾಯಿತು. ಈ ಒಪ್ಪುವ ಮತ್ತು ಒಪ್ಪಿಸುವ ಹಿಂದೆ ದೊಡ್ಡ ರಾಜಕಾರಣವೇ ಇದೆ. "ಭಾರತೀಯ ಕಾವ್ಯಮೀಮಾಂಸೆ" ಎಂಬ ಆಚಾರ್ಯ ಕೃತಿಯನ್ನು ಬರೆದಿರುವ ತೀ.ನಂ.ಶ್ರೀ. ಸಂಸ್ಕೃತ ಕಾವ್ಯಗಳನ್ನೇ ನಿದರ್ಶನವಾಗಿ ಕಟ್ಟಿದ ಕೃತಿಯಾಗಿದೆ. ಈ ಕೃತಿಯ ಅರಿಕೆಯಲ್ಲಿ ಅವರು ಭಾರತೀಯ ಎಲ್ಲ ಭಾಷೆಗಳಿಗೂ ಅನ್ವಯಿಸುವುದು ಎಂದು ಫರಮಾನು ಹೊರಡಿಸುತ್ತಾರೆ. "ನಮ್ಮ ಎಲ್ಲ ದೇಶ ಭಾಷೆಗಳಿಗೆ ಕನ್ನಡಕ್ಕೆ ಹೇಗೋ ಹಾಗೆಯೇ –ಸಂಸ್ಕೃತವೇ ಮೂಲವಸ್ತುವನ್ನು ರೂಪ ರೇಖೆಗಳನ್ನೂ ಒದಗಿಸಿದೆ ಎಂದು ನಂಬಬಹುದು. ಆ ಮಟ್ಟಿಗಾದರೂ ಸಂಸ್ಕೃತ ಗ್ರಂಥಗಳಲ್ಲಿ ಕಾಣಬರುವ ಕಾವ್ಯಮೀಮಾಂಸೆ ನಿಸ್ಸಂದೇಹವಾಗಿ ಭಾರತೀಯ ಕಾವ್ಯಮೀಮಾಂಸೆಯೇ ಆಗುತ್ತದೆ" ಎನ್ನುತ್ತಾರೆ. ಇಂತಹ ಸಂಸ್ಕೃತ ನೀಡಿದ ಬಣ್ಣದ ಕನ್ನಡಕ ಧರಿಸಿ ನೋಡುತ್ತ ಬಂದಿರುವ ಕನ್ನಡವಿದ್ವಾಂಸರು ಕನ್ನಡ ಸಾಹಿತ್ಯ, ಕಾವ್ಯಮೀಮಾಂಸೆ, ಭಾಷೆ, ಛಂದಸ್ಸು, ವ್ಯಾಕರಣ ಮುಂತಾದವು ಕನ್ನಡಕ್ಕಿಂತ ಸಂಸ್ಕೃತಮಯವಾಗಿ ಕಂಡದ್ದು ತಪ್ಪೇನು ಅಲ್ಲ. ಕನ್ನಡ ಭಾಷಾಶಾಸ್ತ್ರವನ್ನೂ ಇಂತಹ ಸಂಸ್ಕೃತದ ಸನ್ನಿಯಲ್ಲಿ ಬೆಳೆಸಿಕೊಂಡು ಬರಲಾಗಿದೆ.

ಒಂದು ಪ್ರದೇಶದಲ್ಲಿ ಬದುಕುವಾಗ ನೆರೆ–ಹೊರೆಯವರು, ಅಂಗಡಿ, ರಸ್ತೆ, ಗಿಡ–ಮರ, ಎಲ್ಲಿಂದಲೋ ಬೀಸಿಬರುವ ಗಾಳಿ– ಹೀಗೆ ಮುಂತಾದವುಗಳ ಸಂಗಾಟ ಮನುಷ್ಯ ಬದುಕುತ್ತಾನೆ. ಭಾಷೆ ಕೂಡ ಹಾಗೆಯೇ ಲೋಕದಲ್ಲಿ ಬದುಕುತ್ತದೆ. ಅಂದರೆ ಸಂಸ್ಕೃತ ಸೇರಿದಂತೆ ಹತ್ತಾರು ಭಾಷೆಗಳೊಂದಿಗೆ ಸಖ್ಯ ಹೊಂದಿದಷ್ಟು ಭಾಷೆ ಬಲಿಷ್ಠವಾಗುತ್ತದೆ. ಆದರೆ ಎಲ್ಲ ಸಂಬಂಧ ಮತ್ತು ಸಖ್ಯಕ್ಕೂ ಒಂದು ಆರೋಗ್ಯಯುತವಾದ, ಚೈತನ್ಯದಾಯಕವಾದ ಅಂತರವಿರುತ್ತದೆ. ಮನೆಯಲ್ಲಿ ವಸ್ತುಗಳನ್ನು ಜೋಡಿಸುವ ಬಗೆ. ಅಡಿಗೆಮನೆಯಲ್ಲಿ ಅಡಿಗೆಯ ವಸ್ತುಗಳ ಬದಲಾಗಿ ಬಟ್ಟೆಗಳನ್ನು ಇಡಲಾಗದು. ಚಪ್ಪಲಿಯನ್ನು ಹೊರಗೆ ಬಿಡುತ್ತೇವೆ ದೇವರಕೋಣೆಗೆ ಹಾಕಿಕೊಂಡು ಹೋಗುವುದಿಲ್ಲ. ಯಾವುದೇ ಒಂದು ಭಾಷೆ ಯಾವ ಭಾಷೆಯೊಂದಿಗೇ ಬೆರೆತಾಗಲೂ ತನ್ನ ಚೈತನ್ಯವನ್ನು ರೂಪಿಸಿಕೊಳ್ಳುವಂತಿರಬೇಕು. (ಆದರೆ ಯಾವ ನೆಲವೂ ಕನಿಷ್ಠವಲ್ಲ, ಕೆಲವು ಮನಸ್ಸುಗಳು ಮಾತ್ರ ಅಂತಹದೊಂದು ನಿಯಮವನ್ನು ರೂಪಿಸುವುದರ ಮೂಲಕ ಸಮಾಜವನ್ನು ರಿಮೋಟ್‌ಮಾಡುತ್ತ ಬಂದಿದೆ. ಭಾಷೆಯೂ ಅಷ್ಟೆ, ಶ್ರೇಷ್ಠ–ಕನಿಷ್ಠವೆಂತೇನು ಇಲ್ಲ, ಆಯಾ ಭಾಷಿಕರಿಗೆ ಸಹಜಭಾಷಿಕ ಬೆಳಕನ್ನು ನೀಡುತ್ತದೆ) ಆದರೆ ಸಂಸ್ಕೃತಭಾಷೆಯ ವಿಚಾರದಲ್ಲಿ ಈ ನಿಯಮ ಮೀರಲಾಗಿದೆ. ಕನ್ನಡವರ್ಣಮಾಲೆಯಲ್ಲಿಯೇ ಬೇರೆ ಯಾವ ಭಾಷೆಯ ವರ್ಣಗಳು ಪ್ರವೇಶಿಸದೇ ಸಂಸ್ಕೃತದ ವರ್ಣಗಳು ಕನ್ನಡಕ್ಕೆ ಬೇಕು–ಬೇಡವೆಂದು ಯೋಚಿಸುವ ಪ್ರಮೇಯವೇ ಇಲ್ಲದಂತೆ ಇರಿಸಲಾಗಿದೆ.

ಭಾಷೆ ಸಾಮಾನ್ಯವಾಗಿ ಎರಡು ನೆಲೆಯಲ್ಲಿ ಬಳಕೆಗೆ ಇದೆ. ಒಂದು ಮಾತು (ಮೌಖಿಕ, ಕಿವಿ ಪ್ರಧಾನ), ಎರಡು ಬರಹ (ಲಿಖಿತ, ಕಣ್ಣು ಪ್ರಧಾನ)ರೂಪದಲ್ಲಿ. ನಮ್ಮ ಚರಿತ್ರೆ ನಿರ್ಮಾಣವಾಗಿರುವುದು ಈ ಎರಡನೆಯ ನೆಲೆಯನ್ನು ಪ್ರಧಾನವಾಗಿಟ್ಟುಕೊಂಡು. ಬರಹ ಎಲ್ಲರ ಸ್ವತ್ತಾಗಿಲ್ಲ. ಇವತ್ತು ಅವಕಾಶವಿದೆ. ಆದರೂ ಎಲ್ಲರೂ ಬರೆಯುವಷ್ಟರಮಟ್ಟಿಗೆ ಇನ್ನೂ ತಲುಪಿಲ್ಲ. ಬರಹ ಸಹಜವಾಗಿಯೇ ಎಲ್ಲರ ಸ್ವತ್ತು ಅಲ್ಲ. ಬರಹವನ್ನು ಕಲಿಯಬೇಕು ಪ್ರಯತ್ನಪೂರ್ವಕವಾಗಿ, ಆದರೆ ಮಾತು ಸಹಜವಾಗಿಯೇ ಎಲ್ಲರ ಸ್ವತ್ತಾಗಿ ದೊರಕುವಂತಹದ್ದಾಗಿದೆ. ಆದರೆ ಹಾಗೆಯೇ ಯಾವುದೇ ಒಂದು ಭಾಷೆಯ ಜೀವಂತ ಲಕ್ಷಣಗಳನ್ನ ಗುರುತಿಸುವುದು ಜನಬಳಕೆಯಲ್ಲಿ ಎಷ್ಟು ಸಹಜ ಮತ್ತು ಸಮರ್ಥವಾಗಿದೆ ಎನ್ನುವುದರ ಮೂಲಕ. ಜಗತ್ತಿನಲ್ಲಿ ಇರುವ ಎಲ್ಲಾ ಭಾಷೆಗಳಿಗೆ ಬರಹ ಇಲ್ಲ. ಆದರೆ ಬಳಕೆಯಲ್ಲಿ ಇದೆ. ಬಳಕೆಯಲ್ಲಿ ಇರುವುದರ ಆಧಾರದ ಮೇಲೆಯೇ ಆ ಭಾಷೆಯ ವ್ಯಾಕರಣವನ್ನು ಕಂಡುಕೊಂಡಾಗ ಮಾತ್ರ ಅದು ಆ ಭಾಷೆಯ ವ್ಯಾಕರಣವಾಗುತ್ತದೆ. ಆದರೆ ಕನ್ನಡ ವ್ಯಾಕರಣ ರಚನೆಯಾಗಿರುವುದು ಬರವನ್ನು ಅವಲಂಬಿಸಿ ಕನ್ನಡ ಬರವಣಿಗೆ ಸಂಸ್ಕೃತದ ಅನುಸರಣೆಯಲ್ಲಿ ಅನುಗ್ರಹದತ್ತವೇ ಹೆಚ್ಚು ಹತ್ತಿರವಾಗುತ್ತ ಬಂದದ್ದಾಗಿದೆ. ಪಂಪ, ರನ್ನ, ಕೇಶಿರಾಜ, ಭಟ್ಟಾಕಳಂಕ, ನಾಗವರ್ಮ, ಜನ್ನ ಮುಂತಾದವರ ಬರಹ ಮತ್ತು ಅವರ ಹೇಳಿಕೆಗಳೇ ನಮ್ಮ ಮುಂದೆ ಇವೆ. ಸಂಸ್ಕೃತ ಮೂಲದಿಂದ ಕನ್ನಡ ಬೆಳೆದುಬಂದದ್ದು ಎಂಬ ನಂಬಿಕೆ ಬಹು ದೀರ್ಘಕಾಲ ಇತ್ತು. ಇಂತಹ ಬರಹ ಮತ್ತು ನಂಬಿಕೆಗಳನ್ನು ನಂಬಿ ರಚಿಸಲ್ಪಟ್ಟ ವ್ಯಾಕರಣವು ಕನ್ನಡದಲ್ಲಿ, ಕನ್ನಡದ ನೆಪದಲ್ಲಿ ರಚಿಸಲ್ಪಟ್ಟ ಸಂಸ್ಕೃತ ವ್ಯಾಕರಣವಾಗಿದೆ. ಈ ಕುರಿತು ಡಾ. ಡಿ.ಎನ್.ಶಂಕರಭಟ್ ಅವರು ಸಾಕಷ್ಟು ವಿವರಿಸಿದ್ದಾರೆ. ವ್ಯಾಕರಣ ಭಾಷೆಯನ್ನು ಕುರಿತು ಚಿಂತಿಸುವುದೆಂದರೆ ಕೆ.ವಿ.ತಿರುಮಲೇಶ್ ಅವರು ಮೊದಲು 'ಇತಿಹಾಸವನ್ನು ಅಭ್ಯಾಸಮಾಡಬೇಕು. ಅದರಿಂದ ಪಾಠ ಕಲಿಯಬೇಕು' ಎನ್ನುತ್ತಾರೆ. ಕನ್ನಡಭಾಷೆಯ ಬಳಕೆಯನ್ನು ಸೂಕ್ಷ್ಮವಾಗಿ ಅಭ್ಯಸಿಸಿ ರೂಪಿಸುವ ಎಲ್ಲರ ಕನ್ನಡವನ್ನು ಒಳಗೊಳ್ಳುವ 'ಕನ್ನಡದ್ದೇ' ವ್ಯಾಕರಣವನ್ನು ಸ್ವಾಗತಿಸುತ್ತಾರೆ. ಮರು ಕ್ಷಣ 'ಹಿಂದಿನ ವೈಯಾಕರಣಿಗಳಿಗೆ ಇದು ಗೊತ್ತಿರಲಿಲ್ಲವೇ?' ಎಂದು ಪ್ರಶ್ನಿಸುತ್ತಲೇ ಅಂತಹದೊಂದು ಮಾರ್ಗಕ್ಕೆ ಮುಳ್ಳು ಚೆಲ್ಲುತ್ತಾರೆ. ಈ ನೆಲೆಯಲ್ಲಿರುವ ಅವರ ಚಿಂತನೆಯ ಐಡಿಯಾಗಳನ್ನು ಇನ್ನಷ್ಟು ಗಮನಿಸಬಹುದು.

1. ಯಾವುದು ವ್ಯಾಕರಣ ಸೂತ್ರದ ವಿವರಣೆಗೆ ಸಿಗುತ್ತದೋ ಅದು ಕ್ರಮಬದ್ಧ. (ಪುಟ.10)
2. ಸಂಸ್ಕೃತದ ಪ್ರಭಾವವಿಲ್ಲದ ಕನ್ನಡವನ್ನು ನಾವು ಊಹಿಸಲೂ ಸಾಧ್ಯವಿಲ್ಲ (111)
3. ಅಕ್ಷರ ಸಂಸ್ಕೃತಿ ಎಂದರೆ ಶಿಕ್ಷಣ ಸಂಸ್ಕೃತಿ. ಸಂಸ್ಕೃತದ ಶಿಕ್ಷಣ ಸಂಸ್ಕೃತಿ ಕನ್ನಡ ಶಿಕ್ಷಣಕ್ಕೂ ಮಾರ್ಗದರ್ಶನ ನೀಡಿದ್ದರಲ್ಲಿ ಆಶ್ಚರ್ಯವಿಲ್ಲ. ಸಂಸ್ಕೃತದ ಸಾಂಸ್ಕೃತಿಕ ಸಂಪತ್ತು ದ್ರಾವಿಡಕ್ಕಿಂತ ಮುಂದಿದ್ದುದರಿಂದ ದ್ರಾವಿಡ ವರ್ಗ ಸಂಸ್ಕೃತವನ್ನೊಂದು ಆದರ್ಶವಾಗಿ ಕಂಡಿರಬೇಕು. ಹೀಗೆ ಸಂಸ್ಕೃತದ್ದು ಯಜಮಾನ್ಯ ಸಂಸ್ಕೃತಿ ಎನಿಸಿತು. (111)
4. ಮನೆಮಾತಿಗೂ ಕನ್ನಡ ಕಲಿಕೆಗೂ ಹೆಚ್ಚಿನ ಸಂಬಂಧವಿಲ್ಲ. (110)
5. ನಿಮ್ಮ ಮಕ್ಕಳನ್ನು ಮುಲ್ಲನ ಶಾಲೆಗೆ ಕಳಿಸುವಿರೋ ಅಥವಾ ಆಧುನಿಕ ಶಾಲೆಗೆ ಕಳುಹಿಸುವಿರೋ ಎಂದು ಕೇಳಿದೆ (46)

ವ್ಯಾಕರಣ ಸೂತ್ರಗಳನ್ನು ಬರಹ ರೂಪದಲ್ಲಿ ಹೆಣೆದು ಯಾರು ಇದು ಕನ್ನಡ ವ್ಯಾರಣವೆಂದು ಹೇಳಿದರು. (ಮತ್ತು ಕನ್ನಡ ಹಲವು ಪ್ರದೇಶಗಳ ಹಲವು ವೈವಿಧ್ಯತೆಯ ಬಳಕೆಯ ಕನ್ನಡಕ್ಕೆ ಸೂತ್ರವಿಲ್ಲವೆಂದು ಹೇಗೆ ಹೇಳಾಲಾದೀತು) ಕಿವಿಗೆ ಕೇಳುವ ಭಾಷೆಯನ್ನು ನಂಬದಂತೆ ಮತ್ತು ಬರಹದ ಭಾಷೆಯೇ ಅಂತಿಮ ಎಂದು ನಂಬಿಸುವ ಹಿಂದಿನ ಇಕ್ಕತ್ತು ತಿರುಮಲೇಶರು ಹೇಳಿದಂತೆ ಚರಿತ್ರೆಯನ್ನು ನೋಡಿದರೆ ಮತ್ತಷ್ಟೂ ಸ್ಪಷ್ಟವಾದೀತು. ಬರಹದ ವ್ಯಾಕರಣವನ್ನು ಸೂತ್ರಿಸಿ ಇದು ಕನ್ನಡ ವ್ಯಾಕರಣ ಎಂದು ಹೇಳಲಾಗಿದೆ. ನಿತ್ಯ ಕೇಳುವ ನುಡಿಭಾಷೆಯನ್ನು ಬಿಟ್ಟು ಕೆಲವರ ಅಂತಿಮ ಸ್ವತ್ತಾಗಿ ಹರಿದುಬಂದ ಭಾಷೆಯ ಅಂಶಗಳು ಹೇಗೆ ಎಲ್ಲರ ಕನ್ನಡವನ್ನು ಒಳಗೊಳ್ಳುತ್ತದೆ. ಇದನ್ನು ಮನಗಂಡ ಡಿ. ಎನ್. ಶಂಕರ ಭಟ್, ಕೆ. ವಿ. ನಾರಾಯಣ ಮುಂತಾದವರು 'ಕನ್ನಡದ್ದೇ ವ್ಯಾಕರಣ'ವನ್ನು ಕಟ್ಟಲು ಪ್ರಯತ್ನ ಮಾಡುತ್ತಿದ್ದಾರೆ. ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ, ಕನ್ನಡನುಡಿ ನಡೆದುಬಂದ ಬಗೆ, ನಿಜಕ್ಕೂ ಹಳೆಗನ್ನಡ ವ್ಯಾಕರಣ ಎಂತಹದ್ದು?, ಕನ್ನಡ ಬರಹವನ್ನು ಸರಿಪಡಿಸೋಣ, ಕನ್ನಡ ಸೊಲ್ಲರಿಮೆ–1, 2, ಮಾತು ಮತ್ತು ಬರಹದ ನಡುವಿನ ಗೊಂದಲ, ಕನ್ನಡ ಆಡುನುಡಿಯ ಸೊಲ್ಲರಿಮೆ ಮುಂತಾದ ಪುಸ್ತಕಗಳನ್ನು ಇಲ್ಲಿ ಹೆಸರಿಸಬಹುದಾಗಿದೆ. ಕನ್ನಡ ಆಡುನುಡಿಯ ಒಳಗಿನಿಂದಲೇ ಕನ್ನಡ ಭಾಷೆಯ ರಚನಾ ಸೂತ್ರಗಳನ್ನು ಕಂಡುಕೊಳ್ಳಲಾಗುತ್ತಿದೆ. ಈ ಪ್ರಯತ್ನವನ್ನು ಕೆ. ವಿ. ತಿರುಮಲೇಶ್ ಅವರು ಒಪ್ಪುವುದಿರಲಿ

(49ನೇ ಪುಟಕ್ಕೆ)

'ಇನ್ನಷ್ಟು ಕನ್ನಡ' ಪುಸ್ತಕದಲ್ಲಿ ಒಟ್ಟು ಇಪ್ಪತ್ತು ಲೇಖನಗಳಿವೆ. ಇವೆಲ್ಲವುಗಳಲ್ಲಿ ಒಂದು ರೂಪಿತಗೊಂಡ ನೆಲೆಯನ್ನು ಮೊದಲೇ ಹೊಂದಲಾಗಿದೆ. ಹಾಗೆ ಇದ್ದರೆ ಅದು ಮಾತ್ರ ಕನ್ನಡ. ಹೀಗೆ ಇರಬೇಕು, ಇದು ಮಾತ್ರ ವ್ಯಾಕರಣ ಮಾದರಿಗೆ ಯೋಗ್ಯವಾದದ್ದು, ಬರಹ ಭಾಷೆಯೇ ಶ್ರೇಷ್ಠ. ಬರಹದಲ್ಲಿ ಮುಖ್ಯವಾಗಿ ಈ ಹಿಂದಿನಿಂದಲೂ ಬಂದ ಪರಂಪರೆಯ ಮಾದರಿ ಇದೆಯಲ್ಲ ಅದು ಮಾತ್ರ ಅಂದರೆ ವೇದ, ಶಾಸ್ತ್ರ, ಪುರಾಣ, ರಾಮಾಯಣ, ಮಹಾಭಾರತಗಳಿಂದ ಜನಿಸಿ ಹರಿದುಬಂದ ಕನ್ನಡ. ಸಂಸ್ಕೃತದಿಂದ ವಿಕೃತಗೊಂಡ ಕನ್ನಡ ಮಾತ್ರ ಶ್ರೇಷ್ಠ. ಇಂತಹ ತಿಳಿವಳಿಕೆ ನಮ್ಮಲ್ಲಿ ಅಕ್ಷರ ಚರಿತ್ರೆಯ ಆರಂಭದಿಂದಲೂ ಇದೆ. ಈಗಲೂ ಮುಂದುವರೆಸುವುದರಲ್ಲಿ ಸುಖ ಕಾಣಲಾಗುತ್ತಿದೆ.

ಯುವ ಜನತೆ ಮತ್ತು ಭಾರತದ ಭವಿಷ್ಯ

ಯುವ ಜನತೆಯ ಸ್ವರೂಪ

ಯುವ ಜನತೆ ಒಂದು ನಾಡಿನ ಬಹುದೊಡ್ಡ ಶಕ್ತಿಶಾಲಿ ಸಂಪತ್ತು. ಇದು ಅತ್ಯಂತ ಚಲನಶೀಲವಾದುದು. ದೈಹಿಕ, ಜೈವಿಕ, ಮಾನಸಿಕ ಹಾಗೂ ಭಾವನಾತ್ಮಕವಾಗಿ ಕುತೂಹಲ, ಉತ್ಸಾಹ, ಹುಮ್ಮಸ್ಸು ಹಾಗೂ ಅಸಾಮಾನ್ಯ ಸೃಜನಶೀಲತೆ ನಿರಂತರವಾಗಿ ಕ್ರಿಯಾಶೀಲವಾಗಿರುವ ಒಂದು ಸಾಮಾಜಿಕ ಶಕ್ತಿ. ಅಸಾಮಾನ್ಯವೂ, ಶಕ್ತಿಶಾಲಿಯೂ ಆದ ಕಲ್ಪನೆ, ಭಾವನೆ ಹಾಗೂ ಕನಸುಗಳನ್ನು ಜೈವಿಕ ಮತ್ತು ಸಾಮಾಜಿಕ ಸಂಬಂಧಗಳ ಕಾರಣಕ್ಕೆ ಈ ಸಮೂಹ ಒಳಗೊಂಡಿದೆ. ಈ ಸಮೂಹ ತಾನು ವರ್ತಮಾನದಲ್ಲೂ ಮತ್ತು ಭವಿಷ್ಯದಲ್ಲೂ ಬದುಕುತ್ತಿದೆ; ಭಾವಿಸುತ್ತಿದೆ. ಯುವ ಜನತೆಯ ಬದುಕಿನ ಭೌತಿಕ ಪರಿಸ್ಥಿತಿಯು ಅವರ ಭಾವನಾತ್ಮಕ ಬದುಕನ್ನೂ; ಭಾವನಾತ್ಮಕ ಪರಿಸ್ಥಿತಿಯು ಅವರ ಭೌತಿಕ ಬದುಕನ್ನೂ ಒಟ್ಟೊಟ್ಟಿಗೆ ಸೃಷ್ಟಿ ಮಾಡುತ್ತಿದೆ. ನಿಜಸ್ಥಿತಿಯನ್ನು ಮೀರಿದ ಅಸಾಮಾನ್ಯ ಕನಸುಗಳೂ, ಕನಸುಗಳನ್ನೂ ಮೀರಿದ ಅಸಾಮಾನ್ಯ ನಿಜಸ್ಥಿತಿಯೂ ಯುವ ಜನತೆಯ ಮುಂದೆ ಸೃಷ್ಟಿಯಾಗುತ್ತಿದೆ. ಸಾಮಾಜಿಕ ವಸ್ತುಸ್ಥಿತಿ ಬದಲಾದ ಹಾಗೆ ಯುವ ಜನತೆಯ ಭಾವನೆ, ಆಲೋಚನೆ ಬದಲಾಗುತ್ತಾ ಸಾಗುತ್ತದೆ. ಇದಕ್ಕೆ ಪೂರಕವಾಗಿ ಯುವ ಜನತೆಯ ಭೌತಿಕ ಸ್ವರೂಪದಲ್ಲೂ ನಿರ್ದಿಷ್ಟವಾದ ಮತ್ತು ಆಂಶಿಕವಾದ ಬದಲಾವಣೆಗಳು ನಡೆಯುತ್ತಿವೆ.

ಯುವ ಜನತೆಯ ಸಾಮಾನ್ಯ ಸ್ವಭಾವ

ಯುವ ಸಮೂಹ ಜೈವಿಕ ಹಾಗೂ ಸಾಮಾಜಿಕ ಸಂಬಂಧಗಳ ಕಾರಣಕ್ಕೆ ನಿರಂತರ ಚಲನಶೀಲ ಸ್ವಭಾವವನ್ನು ಹೊಂದಿದೆ. ಭಾವನಾತ್ಮಕ ಹಾಗೂ ಮಾನಸಿಕ ನೆಲೆಯ ಈ ಸ್ವಭಾವವು ತಮ್ಮ ವಿವಿಧ ಬಗೆಯ ಹಿನ್ನೆಲೆಗಳನ್ನು ಸಕಾರಣಕ್ಕೆ ನೆನಪು ಮಾಡಿಕೊಳ್ಳಲು ಬಿಡುವುದಿಲ್ಲ. ಅದೇ ಕಾಲಕ್ಕೆ ತಮ್ಮ ಸ್ವಾವಲಂಬಿ ಭವಿಷ್ಯವನ್ನು ನಿರ್ಮಾಣ ಮಾಡಿಕೊಳ್ಳಲು ಬಿಡುವುದಿಲ್ಲ. ಏನಿದ್ದರೂ ವರ್ತಮಾನ ಮಾತ್ರ ಮುಖ್ಯ ಎಂಬ ಭಾವನೆ ಅತ್ಯಂತ ತೀವ್ರವಾಗಿರುತ್ತದೆ. ಅತೀವವಾದ ಆಸೆಗಳು, ಕನಸುಗಳು, ಅಪೇಕ್ಷೆಗಳು, ಅಭಿರುಚಿಗಳು ಕ್ಷಣಕ್ಕೊಂದರಂತೆ ಮಿಂಚಿ ಮಾಯವಾಗುತ್ತಿರುತ್ತವೆ. ಆಧಾರವಿಲ್ಲದ ಆಸೆಗಳ, ಕನಸುಗಳ ಬೆನ್ನು ಹತ್ತಿ ಕಾಲ ತಳ್ಳುತ್ತಿರುತ್ತದೆ. ಆಧುನಿಕ ಮಾರುಕಟ್ಟೆಯ ಜಗತ್ತಿಗೂ ಮತ್ತು ಯುವ ಸಮೂಹದ ಭಾವನಾತ್ಮಕ ಲೋಕಕ್ಕೂ ನೇರವಾದ ಹಾಗೂ ಪ್ರತ್ಯಕ್ಷವಾದ ಸಂಬಂಧವಿದೆ. ಮಾರುಕಟ್ಟೆಯು ತನಗೆ ಬೇಕಾದ ಆಸೆ, ಅಭಿರುಚಿ ಮತ್ತು ಕನಸುಗಳನ್ನು ಯುವ ಸಮೂಹದಲ್ಲಿ ಪ್ರಚೋದಿಸುತ್ತಿದೆ; ಪ್ರಭಾವಿಸುತ್ತಿದೆ. ಅವುಗಳನ್ನು ಅಷ್ಟೇ ಯಶಸ್ವಿಯಾಗಿ ಮತ್ತು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿದೆ; ಮಾತ್ರವಲ್ಲ ಅವುಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ. ಮಾರುಕಟ್ಟೆಯು ತನ್ನ ವಿಕೃತ ಲಾಭಕೋರತನದ ಅಗತ್ಯಗಳನ್ನು ಯುವ ಜನತೆಯ ಅತ್ಯಗತ್ಯಗಳೆಂದು ಭಾವಿಸುವಂತಹ ವಾತಾವರಣವನ್ನು ನಿರ್ಮಾಣ ಮಾಡಿದೆ. ತನ್ನದಲ್ಲದ ಮಾರುಕಟ್ಟೆಯ ಅಗತ್ಯಗಳನ್ನು ಯುವ ಜನತೆ ತನ್ನದೆಂದೇ ಭಾವಿಸಿದೆ. ಎಲ್ಲಾ ಆಯಾಮಗಳಲ್ಲಿ ಮಾರುಕಟ್ಟೆಯು ಯುವ ಸಮೂಹವನ್ನು ತನ್ನ ನೇರ ತೆಕ್ಕೆಗೆ ತೆಗೆದುಕೊಳ್ಳುತ್ತಿದೆ. ಆಧುನಿಕರಾಗುವುದು ಎಂದರೆ ಬಂಡವಾಳಶಾಹಿ ಮಾರುಕಟ್ಟೆಯ ಗ್ರಾಹಕರಾಗುವುದು ಎಂಬ ಸಾಮಾಜಿಕ ಪ್ರಜ್ಞೆಯನ್ನು ಯುವ ಸಮೂಹ ತನ್ನದಾಗಿಸಿಕೊಂಡಿದೆ. ಮಾರುಕಟ್ಟೆಯ ಎಲ್ಲಾ ಬಗೆಯ ತಂತ್ರ ಹಾಗೂ ಕುತಂತ್ರಗಳಿಗೆ ಯುವ ಜನತೆ ತನ್ನನ್ನು ತಾನು ತೆರೆದುಕೊಂಡಿದೆ. ಇನ್ನೊಂದು ಆಯಾಮದಲ್ಲಿ ಅವುಗಳಿಗೆ ತನ್ನನ್ನು ತಾನು ನೇರವಾಗಿ ಹೊಂದಿಸಿಕೊಂಡಿದೆ.

ಆರ್ಥಿಕ ಮತ್ತು ಸಾಮಾಜಿಕ ಸ್ತರವಿನ್ಯಾಸಗಳಿಗೆ ಸಂಬಂಧಿಸಿ ಯುವ ಜನತೆಯು ವಿವಿಧ ರೂಪದ ಆಸೆ ಮತ್ತು ಕನಸುಗಳನ್ನು ಹೊಂದಿದೆ. ಕುಟುಂಬ, ಸಮುದಾಯ, ಜಾತಿ, ಲಿಂಗ, ವರ್ಗ, ಪ್ರದೇಶ, ವೃತಿ, ದುಡಿಮೆ ಮುಂತಾದುವುಗಳ ಆಧಾರದ ಮೇಲೆ ಯುವ ಜನತೆಯ ಸ್ವಭಾವ ಬೇರೆಬೇರೆಯಾಗುತ್ತಾ ಹೋಗುತ್ತಿದೆ. ಪಾರಂಪರಿಕವಾದ ಸಾಂಪ್ರದಾಯಿಕ ನಂಬಿಕೆಗಳು, ಆಚರಣೆಗಳು, ವಿಧಿನಿಷೇಧಗಳು ಇಂದಿನ ಯುವಜನತೆಗೆ ಹಿಡಿಸುತ್ತಿಲ್ಲ. ಕುಟುಂಬ, ಸಮುದಾಯ, ಜಾತಿ ನೆಲೆಯಲ್ಲಿ ಇವು ಬದಲಾಗುತ್ತಿವೆ. ಹಳೆಯ ತಲೆಮಾರಿಗೂ ಮತ್ತು ಹೊಸತಲೆಮಾರಿಗೂ ಆಸೆ ಮತ್ತು ಅಭಿರುಚಿಗಳಲ್ಲಿ ಬಹಳ ವ್ಯತ್ಯಾಸಗಳು ನಿರ್ಮಾಣವಾಗಿವೆ. ಇದು ಈ ಎರಡು ಸಮೂಹಗಳ ನಡುವೆ ತೆಳುವಾದ ಭಿನ್ನಮತಗಳನ್ನೂ; ಅನೇಕ ಸಲ ಅಸಹನೆಗಳನ್ನೂ ನಿರ್ಮಾಣ ಮಾಡಿದೆ. ಇದು ಎಷ್ಟೋ ಸಲ ಪರಸ್ಪರ ಹೊಂದಾಣಿಕೆಯಾಗದ ಸಂದರ್ಭಗಳನ್ನೂ, ಕಲಹಗಳನ್ನೂ ನಿರ್ಮಾಣ ಮಾಡಿದೆ.

ಯುವ ಜನತೆಯ ಚಲನಶೀಲ ಸ್ವಭಾವಗಳು ಹಿರಿಯ ತಲೆಮಾರಿನವರಿಂದ ಕೆಲವು ಸಲ ಟೀಕೆಗೂ, ಕೆಲವು ಸಲ ಮೌಲ್ಯಮಾಪನಕ್ಕೂ, ಇನ್ನೂ ಕೆಲವು ಸಲ ಅತ್ಯಂತ ತಿರಸ್ಕಾರಕ್ಕೂ ಗುರಿಯಾಗಿವೆ. ಆದ್ದರಿಂದಲೇ 'ಮೀಸೆ ಬರೋನ್ಗೆ ದೇಶ ಕಾಣಲ್ಲ; ಮೊಲೆ ಬರೋಳ್ಗೆ ನೆಲ ಕಾಣಲ್ಲ' ಎಂಬ ಹೇಳಿಕೆಯನ್ನು ಸೃಷ್ಟಿ ಮಾಡಲಾಗಿದೆ. ಈ ಹೇಳಿಕೆಯ ಮೂಲಕ ಯುವ ಜನತೆಯ ಸ್ವಭಾವವನ್ನು ಅಳೆಯಲಾಗುತ್ತಿದೆ. ಅದರಲ್ಲೂ ನಕಾರಾತ್ಮಕವಾಗಿಯೇ ಅಳೆಯಲಾಗುತ್ತಿದೆ. ಒಂದು ವಿಚಿತ್ರವೆಂದರೆ ಯಾರು ಹೀಗೆ ಯುವ ಜನತೆಯನ್ನು ಅಳೆದು ದೂರುತ್ತಿದ್ದಾರೊ, ಅವರೂ ಒಂದು ಕಾಲದಲ್ಲಿ ಇಂತಹ ಸ್ಥಿತಿಯಲ್ಲಿದ್ದರು ಎಂಬುದನ್ನು ಮರೆಯಬಾರದು. ಜೊತೆಗೆ 'ಮೀಸೆ ಬರೋನ್ಗೆ

ಮೀಸೆಯೇ ದೇಶವಾಗಿರುತ್ತೆ. ಅದೇ ರೀತಿ ಎರಡನೆಯದನ್ನೂ ಅರ್ಥೈಸಿಕೊಳ್ಳಬಹುದು. ಮೇಲ್ಕಿನ ಹೇಳಿಕೆಯನ್ನು ಯುವ ಜನತೆಯನ್ನು ಟೀಕಿಸುವ ಸಲುವಾಗಿ ಅರ್ಥೈಸಿಕೊಳ್ಳಲಾಗಿದೆ. ಇದಲ್ಲದೆ ಆ ಹೇಳಿಕೆಯು ಯುವ ಜನತೆಯ ಶಕ್ತಿಶಾಲಿ ಸಾಮರ್ಥ್ಯವನ್ನು ತೋರಿಸುತ್ತಿದೆ ಎಂತಲೂ ಅರ್ಥೈಸಿಕೊಳ್ಳಬಹುದು.

ಡಾ. ಬಿ. ಎಂ. ಪುಟ್ಟಯ್ಯ

11

ಎಲ್ಲವನ್ನೂ ಅತ್ಯಂತ ಕುತೂಹಲ ಮತ್ತು ಆಶ್ಚರ್ಯದಿಂದ ಗಮನಿಸುವ ಆಸಕ್ತಿ ಹಾಗೂ ಮನೋಭಾವ ಯುವ ಜನತೆಯದ್ದು. ಯಾವುದನ್ನೇ ಆಗಲಿ ಸಂದೇಹ ಮತ್ತು ಪ್ರಶ್ನೆಗಳ ಮೂಲಕ ಗ್ರಹಿಸುವ ಅರ್ಥೈಸಿಕೊಳ್ಳುವ ಸ್ವಭಾವ ಯುವ ಜನತೆಯದ್ದು. ಯಾವುದನ್ನೆ ಆಗಲಿ ತನ್ನ ಭಾವನಾತ್ಮಕ ಸ್ವಭಾವಕ್ಕೆ ಅನುಗುಣವಾಗಿ ಅರ್ಥೈಸಿಕೊಳ್ಳುವ ಹಾಗೂ ಅದನ್ನು ಅದಕ್ಕೆ ಪರಿವರ್ತಿಸುವ ಅಪೇಕ್ಷೆ ಮತ್ತು ಆಸಕ್ತಿ ಯುವ ಜನತೆಯದ್ದು. ಅತ್ಯಂತ ಸೂಕ್ಷ್ಮವಾದ ಅವಗಾಹನೆ, ಪರಿಶೀಲನೆ ಮತ್ತು ಮೌಲ್ಯಮಾಪನ ಮಾಡುವುದು ಯುವ ಜನತೆಯ ಸಾಮಾನ್ಯ ಸ್ವಭಾವ. ವಾಸ್ತವ ಎಂಬುದನ್ನು ಕಲ್ಪನೆಯ ಲೋಕಕ್ಕೂ; ಕಲ್ಪನೆ ಎಂಬುದನ್ನು ವಾಸ್ತವ ಲೋಕಕ್ಕೂ ಪರಿವರ್ತಿಸುವ ಮಹಾನ್ ಶಕ್ತಿಶಾಲಿ ಸಾಮರ್ಥ್ಯ ಯುವ ಜನತೆಯದ್ದು.

ಯುವ ಜನತೆಗಿರುವ ಪರಂಪರೆ

ಭಾರತದಲ್ಲಿ ಯುವ ಜನತೆಗೆ ತನ್ನದೇ ಆದ ವಿಶಿಷ್ಟ ಪರಂಪರೆ ಇದೆ. ಆದರೆ ಯುವ ಜನತೆಯ ಪರಂಪರೆಯನ್ನು ನಿರೂಪಿಸುವ ಬರವಣಿಗೆಗಳು ಇಲ್ಲವೆನ್ನುವಷ್ಟು ಕಡಿಮೆ. ಯುವ ಜನತೆಯ ಪರಂಪರೆಯು ಒಂದು ಕಡೆ, ಅಸಂಘಟಿತ ರೂಪದ ಬಿಡಿಬಿಡಿಯಾದ ಘಟನೆಗಳನ್ನು, ಸನ್ನಿವೇಶಗಳನ್ನು ಆಧರಿಸಿದೆ. ಮತ್ತೊಂದು ಕಡೆ ಸಂಘಟನಾತ್ಮಕವಾದ ಸ್ವರೂಪವೂ ಅದಕ್ಕಿದೆ. ಭಾರತದಲ್ಲಿ ವಸಾಹತುಶಾಹಿ ವಿರುದ್ಧ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ಯುವ ಜನತೆ ತನ್ನ ನಿರ್ದಿಷ್ಟ ಬದುಕನ್ನು ಬದಿಗಿಟ್ಟು, ತನ್ನ ಪ್ರಾಣದ ಹಂಗು ತೊರೆದು ಪಾಲ್ಗೊಂಡಿದೆ. ತನ್ನ ಜೈವಿಕ ಹಾಗೂ ದೈಹಿಕವಾದ ಅಸಾಮಾನ್ಯ ಸಾಮರ್ಥ್ಯವನ್ನು ಚಾರಿತ್ರಿಕವಾಗಿ ತೋರ್ಪಡಿಸಿದೆ. ಅದು ತನ್ನ ಹೋರಾಟದ ಮೂಲಕ ಸಮಾಜದ ಉಳಿದ ಸಮೂಹಗಳನ್ನು ಆ ಹೋರಾಟಕ್ಕೆ ಪ್ರಭಾವಿಸಿದೆ; ಆಕರ್ಷಿಸಿದೆ. ಆ ಮೂಲಕ ಒಂದು ಕಡೆ, ಹೋರಾಟದ ಗಾತ್ರವನ್ನು ಅಸಾಮಾನ್ಯವಾಗಿ ವಿಸ್ತರಿಸಿದೆ. ಮತ್ತೊಂದು ಕಡೆ, ಹೋರಾಟದ ಗುಣವನ್ನು ಶಕ್ತಿಶಾಲಿಯಾಗಿ ಹೆಚ್ಚಿಸಿದೆ. ಭಾರತದಲ್ಲಿ ಯುವ ಜನತೆಯ ಹೋರಾಟದ ಪರಂಪರೆಗೆ ಇದು ಖಚಿತವಾದ ಮತ್ತು ಭದ್ರವಾದ ಬುನಾದಿಯನ್ನು ಹಾಕಿದೆ. ಶೋಷಣೆ, ದಮನ, ದಬ್ಬಾಳಿಕೆಗಳಿಗೆ ಹೊಂದಾಣಿಕೆ ಮಾಡಿಕೊಳ್ಳದೆ, ಅದನ್ನು ವಿರೋಧಿಸಿ ಹೋರಾಡುವ ಹೋರಾಟದ ಕೆಚ್ಚಿನ ಕಿಡಿಯನ್ನು ಅದು ಹುಟ್ಟುಹಾಕಿದೆ. ಜೊತೆಗೆ ಅದನ್ನು ಅತ್ಯಂತ ವಿಶಾಲ ಗಾತ್ರದಲ್ಲಿ ಬೆಳೆಸಿದೆ.

ಸ್ವಾತಂತ್ರ್ಯ ಹೋರಾಟವನ್ನು ಹೊರತುಪಡಿಸಿದರೆ, ನಂತರ ನಡೆದ ತೆಲಂಗಾಣ, ತೇಭಾಗ್ ಹಾಗೂ ನಕ್ಸಲ್‌ಬರಿ ಹೋರಾಟಗಳಲ್ಲಿ ಯುವ ಜನತೆ ವೀರಾವೇಶದಿಂದ ರಾಜಿರಹಿತವಾಗಿ ಹೋರಾಡಿದೆ. ಆ ಮೂಲಕ ತನ್ನ ರಾಜಕೀಯ ಬದ್ಧತೆಯನ್ನು ಸ್ಥಾಪಿಸಿದೆ. ತನ್ನ ಸ್ವಾಭಿಮಾನಿ ಕೆಚ್ಚನ್ನು ತೋರ್ಪಡಿಸಿದೆ.

ಊಳಿಗಮಾನ್ಯ ಸಮಾಜದ ಜನವಿರೋಧಿ ಮೌಲ್ಯಗಳು ಹಾಗೂ ನಂಬಿಕೆಗಳನ್ನು ಯುವ ಜನತೆ ಅತ್ಯಂತ ತೀಕ್ಷ್ಣವಾಗಿ ಪ್ರಶ್ನೆ ಮಾಡಿದೆ; ಅದನ್ನು ಪ್ರಬಲವಾಗಿ ವಿರೋಧಿಸಿದೆ. ಅವುಗಳ ವಿರುದ್ಧ ಯುವ ಜನತೆ ಬಿಡಿಬಿಡಿಯಾಗಿ ಹೋರಾಡಿದೆ. ಗ್ರಾಮೀಣ ಪರಿಸರದಲ್ಲಿ ಇದೇ ಊಳಿಗಮಾನ್ಯ ಸಮಾಜದ ಎಲ್ಲಾ ಬಗೆಯ ಜನವಿರೋಧಿ ಹಾಗೂ ಕೆಳಜಾತಿಗಳ ವಿರುದ್ಧದ ಆಚರಣೆ ಹಾಗೂ ನಂಬಿಕೆಗಳ ವಿರುದ್ಧ ಕೆಳಜಾತಿಗಳ ಯುವ ಸಮೂಹ ನಿರಂತರವಾಗಿ ಆಲೋಚಿಸಿದೆ ಮತ್ತು ಪ್ರತಿಭಟಿಸಿದೆ. ಅನೇಕ ಕಡೆ ಅದನ್ನು ಸಂಘಟನಾತ್ಮಕ ಸ್ವರೂಪಕ್ಕೆ ವಿಸ್ತರಿಸಿದೆ.

ತನಗೆ ಇಷ್ಟವಾಗದ ವಸ್ತುವಿಷಯಕ್ಕೆ ತಕ್ಷಣ ಹೊಂದಿಕೊಳ್ಳುವ ಸ್ವಭಾವ ಯುವ ಜನತೆಯದ್ದಲ್ಲ. ಜೈವಿಕವಾಗಿ ಹಾಗೂ ಸಾಮಾಜಿಕವಾಗಿ ನಿರಂತರವಾಗಿ ಬೆಳೆಯುತ್ತಿರುವ ಮತ್ತು ಬದಲಾಗುತ್ತಿರುವ ಸ್ವಭಾವ ಯುವ ಜನತೆಯದ್ದು. ಹಾಗಾಗಿ ಒಂದು ಹಂತದಲ್ಲಿ ಯುವ ಸಮೂಹಕ್ಕೆ ಸಾಮಾಜಿಕ, ರಾಜಕೀಯ ಎಚ್ಚರಿಕೆ ಬಂತೆಂದರೆ, ಅದನ್ನು ತನ್ನ ಪ್ರಜ್ಞೆಯ ಭಾಗವಾಗಿಸಿಕೊಳ್ಳುತ್ತದೆ. ಜೊತೆಗೆ ಅದನ್ನು ತನ್ನ ಆಂತರಿಕ ಶಕ್ತಿಯನ್ನಾಗಿಸಿಕೊಳ್ಳುತ್ತದೆ. ಹಾಗಾಗಿ ಯುವ ಜನತೆಗೆ ಯಾವ ಬಗೆಯ ಸಾಮಾಜಿಕ ಹಾಗೂ ರಾಜಕೀಯ ಎಚ್ಚರಿಕೆ ಕೊಡಬೇಕು ಎಂಬುದು ಬಹಳ ಮುಖ್ಯವಾದ ಸಂಗತಿ. ಅಥವಾ ಅವರನ್ನು ಎಂತಹ ಸಾಮಾಜಿಕ ಪರಿಸ್ಥಿತಿಯಲ್ಲಿಟ್ಟು ತಯಾರು ಮಾಡಬೇಕು ಎಂಬುದು ಅಷ್ಟೇ ಮುಖ್ಯ.

ಯುವ ಜನತೆಯ ಸ್ತರ ವಿನ್ಯಾಸ

ಭಾರತದ ಸಮಾಜವು ಆರ್ಥಿಕ ಮತ್ತು ಸಾಮಾಜಿಕ ಕಾರಣಕ್ಕೆ ಒಡೆದುಹೋಗಿದೆ. ಅಥವಾ ಆರ್ಥಿಕ ಮತ್ತು ಸಾಮಾಜಿಕ ಕಾರಣಗಳು ಭಾರತೀಯ ಸಮಾಜವನ್ನು ಛಿದ್ರಛಿದ್ರವಾಗಿ ಸೀಳಿವೆ. ಅದು ವಿವಿಧ ಸ್ತರವಿನ್ಯಾಸಗಳಲ್ಲಿ ಹಂಚಿಹೋಗಿದೆ. ಆ ಸ್ತರವಿನ್ಯಾಸಗಳು ಶ್ರೇಣೀಕರಣಗಳನ್ನು ಹೊಂದಿವೆ. ಅದಕ್ಕೆ ಅನುಗುಣವಾಗಿ ಯುವ ಜನತೆಯೂ ಕೂಡ ವಿವಿಧ ಸ್ತರಗಳಲ್ಲಿ ಒಡೆದುಹೋಗಿದೆ. ಆರ್ಥಿಕ, ಸಾಮಾಜಿಕ ಅಸಮಾನತೆ ಮತ್ತು ಶ್ರೇಣೀಕರಣಗಳಿಗೆ ಅನುಗುಣವಾಗಿ ಯುವ ಜನತೆಯೂ ಕೂಡ ಸಮಾಜದ ವಿವಿಧ ಶ್ರೇಣೀಕರಣಗಳಲ್ಲಿ ಹಂಚಿಹೋಗಿದೆ. ಭಾರತದಲ್ಲಾಗಲಿ ಇಲ್ಲವೆ ಕರ್ನಾಟಕದಲ್ಲಾಗಲಿ, ಯುವ ಜನತೆಯನ್ನು ಇಡಿಯಾಗಿ ಕಲ್ಪಿಸಿಕೊಳ್ಳಲು ಅಥವಾ ಗ್ರಹಿಸಲು ಸಾಧ್ಯವಿಲ್ಲ. ಆದ್ದರಿಂದ ಯುವ ಜನತೆಯ ಸಾಮಾಜಿಕ ಸ್ವಭಾವ, ಸಾಮಾಜಿಕ ಆಸೆ, ಅಪೇಕ್ಷೆ ಹಾಗೂ ಅಭಿರುಚಿಗಳನ್ನು ಬಿಡಿಬಿಡಿಯಾಗಿ ಅರ್ಥೈಸಿಕೊಳ್ಳಬೇಕಾಗುತ್ತದೆ.

ವರ್ಗ ಶ್ರೇಣೀಕರಣ ಮತ್ತು ಸಾಂಸ್ಕೃತಿಕ ಶ್ರೇಣೀಕರಣಗಳ ವಿನ್ಯಾಸಗಳಿಗೆ ಅನುಗುಣವಾಗಿ ಯುವ ಜನತೆಯ ಸ್ವರೂಪ ಹಾಗೂ ಸ್ವಭಾವ ಹಂಚಿಹೋಗಿದೆ. ಆರ್ಥಿಕ ಮತ್ತು ಸಂಸ್ಕೃತಿ ವಿಶಿಷ್ಟ ವಸ್ತುಸ್ಥಿತಿಗಳು ಯುವ ಜನತೆಯನ್ನು ಬಿಡಿಬಿಡಿಯಾಗಿ ವಿಂಗಡಿಸಿವೆ. ಆರ್ಥಿಕ ಮತ್ತು ಸಂಸ್ಕೃತಿ ವಿಶಿಷ್ಟ ವಸ್ತುಸ್ಥಿತಿಗಳ ಏಣಿಶ್ರೇಣಿಗಳನ್ನು ಗಂಭೀರವಾಗಿ ಲೆಕ್ಕಕ್ಕೆ ತೆಗೆದುಕೊಳ್ಳದಿದ್ದರೆ ಯುವ ಜನತೆಯ ನಿರ್ದಿಷ್ಟ ಹಾಗೂ ವಿಶಿಷ್ಟ ಸಾಮರ್ಥ್ಯ, ಸ್ವಭಾವಗಳು ಕಾಣುವುದಿಲ್ಲ. ಅನೇಕ ಸಲ ಸಾಮಾಜಿಕ ವಸ್ತುಸ್ಥಿತಿಯೂ ಕೂಡ ಯುವ ಜನತೆಯ ಪ್ರಜ್ಞೆ ಹಾಗೂ ಸ್ವಭಾವಗಳನ್ನು ಪ್ರಭಾವಿಸುತ್ತದೆ ಮತ್ತು ನಿಯಂತ್ರಿಸುತ್ತದೆ. ಈ ಹಿನ್ನೆಲೆಯಲ್ಲಿ ಯುವ ಜನತೆಯನ್ನು ಕುರಿತು ಆಲೋಚನೆ ಮಾಡುವಾಗ ಅದನ್ನು ಇಡಿಯಾಗಿ ಪರಿಗಣಿಸದೆ ಅದರ ಆರ್ಥಿಕ ಮತ್ತು ಸಾಮಾಜಿಕ ವಸ್ತುನಿಷ್ಠ ಪರಿಸ್ಥಿತಿಯಲ್ಲೆ ಗ್ರಹಿಸಬೇಕಾಗುತ್ತದೆ.

ಯುವ ಜನತೆಯನ್ನು ಅದರ ಆರ್ಥಿಕ, ಸಾಮಾಜಿಕ ವಸ್ತುನಿಷ್ಠ ಪರಿಸ್ಥಿತಿಯಲ್ಲಿ ಗ್ರಹಿಸುವಾಗ ಮತ್ತೊಂದು ತೊಡಕು ಎದುರಾಗುತ್ತದೆ. ಅದು ಯಾವುದು ಎಂದರೆ, ಶೋಷಿತ ಜಾತಿ, ಶೋಷಿತ ವರ್ಗಗಳ ಯುವ ಜನತೆಯನ್ನು ನೈತಿಕ ನೆಲೆಯಲ್ಲಿ ಮಿತ ಅಂದಾಜು ಮಾಡಿ, ಅವರ ಸ್ವಭಾವವನ್ನು ಕನಿಷ್ಠ ಎಂದು ಕಡೆಗಣಿಸುವುದು ಮತ್ತು ತೆಗಳುವುದು. ಇದಕ್ಕೆ ವಿರುದ್ಧವಾಗಿ ಶೋಷಕ ಜಾತಿ ಮತ್ತು ಶೋಷಕ ವರ್ಗಗಳ ಯುವ ಜನತೆಯನ್ನು ನೈತಿಕ ನೆಲೆಯಲ್ಲಿ ಅತಿ ಅಂದಾಜು ಮಾಡಿ, ಅವರ ಸ್ವಭಾವವನ್ನು ಶ್ರೇಷ್ಠ ಎಂದು ಎತ್ತಿಹಿಡಿಯುವುದು; ವೈಭವೀಕರಿಸುವುದು. ಅದನ್ನು ಆದರ್ಶ ಎಂದು ವೈಭವೀಕರಿಸುವುದು. ಸಮಾಜವನ್ನು ಹೀಗೆ ಯಾಂತ್ರಿಕವಾಗಿ ಶ್ರೇಷ್ಠ ಮತ್ತು ಕನಿಷ್ಠ ಎಂಬ ನಂಬಿಕೆಯ ನೆಲೆಯಲ್ಲಿ ವಿಂಗಿಡಿಸಿ ನೋಡುವ ಜನಪ್ರಿಯ ವಿಧಾನವೊಂದಿದೆ. ಆದರೆ

ಎಲ್ಲವನ್ನೂ ಅತ್ಯಂತ ಕುತೂಹಲ ಮತ್ತು ಆಶ್ಚರ್ಯದಿಂದ ಗಮನಿಸುವ ಆಸಕ್ತಿ ಹಾಗೂ ಮನೋಭಾವ ಯುವ ಜನತೆಯದ್ದು. ಯಾವುದನ್ನೇ ಆಗಲಿ ಸಂದೇಹ ಮತ್ತು ಪ್ರಶ್ನೆಗಳ ಮೂಲಕ ಗ್ರಹಿಸುವ ಅರ್ಥೈಸಿಕೊಳ್ಳುವ ಸ್ವಭಾವ ಯುವ ಜನತೆಯದ್ದು. ಯಾವುದನ್ನೆ ಆಗಲಿ ತನ್ನ ಭಾವನಾತ್ಮಕ ಸ್ವಭಾವಕ್ಕೆ ಅನುಗುಣವಾಗಿ ಅರ್ಥೈಸಿಕೊಳ್ಳುವ ಹಾಗೂ ಅದನ್ನು ಅದಕ್ಕೆ ಪರಿವರ್ತಿಸುವ ಅಪೇಕ್ಷೆ ಮತ್ತು ಆಸಕ್ತಿ ಯುವ ಜನತೆಯದ್ದು. ಅತ್ಯಂತ ಸೂಕ್ಷ್ಮವಾದ ಅವಗಾಹನೆ, ಪರಿಶೀಲನೆ ಮತ್ತು ಮೌಲ್ಯಮಾಪನ ಮಾಡುವುದು ಯುವ ಜನತೆಯ ಸಾಮಾನ್ಯ ಸ್ವಭಾವ.

ದೇಶದ ಭವಿಷ್ಯದ ನಿರ್ಮಾಣ ಎಂದರೆ ಒಂದು ದೇಶದಲ್ಲಿ ಎಂಜಿನಿಯರ್‌ಗಳನ್ನು, ಡಾಕ್ಟರ್‌ಗಳನ್ನು ತಯಾರು ಮಾಡುವುದಲ್ಲ. ಗಗನಚುಂಬಿ ಕಟ್ಟಡಗಳ ಮತ್ತು ಅಗಲವಾದ ರಸ್ತೆಗಳ ನಿರ್ಮಾಣವಲ್ಲ. ದೇಶದ ಭವಿಷ್ಯದ ನಿರ್ಮಾಣ ಎಂಬುದು ಆ ದೇಶದ ಸಂಪತ್ತನ್ನು ಸೃಷ್ಟಿ ಮಾಡುವ ದುಡಿಯುವ ಜನರ ಸಮಗ್ರ ಬದಲಾವಣೆ. ಅದೇ ಕಾಲಕ್ಕೆ ಇವರನ್ನು ನಿರಂತರವಾಗಿ ದಮನ ಮಾಡುವ ಶೋಷಕ ವರ್ಗದ ಸಮಗ್ರ ಬದಲಾವಣೆಯೂ ಹೌದು. ಅಂದರೆ ಒಟ್ಟಾರೆ ವ್ಯವಸ್ಥೆಯ ಸಮಗ್ರ ಬದಲಾವಣೆಯಲ್ಲಿ ಯುವ ಜನತೆಯನ್ನು ಕ್ರಿಯಾಶೀಲವಾಗಿ ತೊಡಗಿಸುವುದು.

ಯುವ ಜನತೆಯನ್ನು ಕುರಿತು ಆಲೋಚಿಸುವಾಗ ಈ ರಿಟೈರ್ಡ್ ನಂಬಿಕೆ ಸಂಪೂರ್ಣ ನಿರುಪಯುಕ್ತ. ಆದರೆ ಇದೇ ಧೋರಣೆ ಯುವ ಜನತೆಯನ್ನು ಕುರಿತ ಚರ್ಚೆ ಸಂವಾದಗಳಲ್ಲಿ ಮೇಲುಗೈ ಸಾಧಿಸಿದೆ.

ಯುವ ಜನತೆಯ ವಸ್ತುಸ್ಥಿತಿ

ಸಮಾಜದ ರಾಜಕೀಯಾರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳು ಯುವ ಜನತೆಯ ಶಕ್ತಿ, ಸಾಮರ್ಥ್ಯಗಳನ್ನು ಪ್ರಭಾವಿಸುತ್ತಿದೆ ಹಾಗೂ ನಿಯಂತ್ರಿಸುತ್ತಿದೆ. ಶ್ರೀಮಂತ ವರ್ಗ ಮತ್ತು ಮೇಲು ಮಧ್ಯಮ ವರ್ಗದ ಯುವ ಜನತೆಯು ತನ್ನ ಹಿರಿಯರ ಆಸ್ತಿ ಹಾಗೂ ಸಂಪತ್ತಿಗೆ ಒಡೆಯರಾಗುತ್ತಾ ಸಾಗಿದೆ. ಅದು ಸಾಮ್ರಾಜ್ಯಶಾಹಿ ಮಾರುಕಟ್ಟೆಯ ಎಲ್ಲಾ ಬಗೆಯ ಶೋಷಣೆಗಳನ್ನು ಬಹಿರಂಗವಾಗಿ ಮತ್ತು ಪ್ರಶ್ನಾತೀತವಾಗಿ ಒಪ್ಪಿಕೊಂಡು ಸಾಗಿದೆ. ಊಳಿಗಮಾನ್ಯಶಾಹಿ ಪಳೆಯುಳಿಕೆಯ ಸಾಮಾಜಿಕ ಸಂಬಂಧಗಳನ್ನು ಹಾಗೂ ಶೋಷಣೆಯ ಮೌಲ್ಯಗಳನ್ನು, ನಂಬಿಕೆಗಳನ್ನು ಒಪ್ಪಿಕೊಂಡು ಗಟ್ಟಿಗೊಳಿಸುತ್ತಿದೆ. ಮಾರುಕಟ್ಟೆಯ ಉಪಭೋಗ ಸಂಸ್ಕೃತಿಗೆ ನೇರವಾಗಿ ಗ್ರಾಹಕರಾಗುವುದರ ಮೂಲಕ ಅದರ ವ್ಯಾಪ್ತಿಯನ್ನು ವಿಸ್ತರಿಸುತ್ತಿದೆ. ಶೋಷಣೆಯ ಹಣದಿಂದ ಮೋಜು ಮಾಡುವುದೇ ಜೀವನ ಎಂಬ ಭಾವನೆಯನ್ನು ಸಮಾಜದಲ್ಲಿ ಹೆಚ್ಚುಹೆಚ್ಚು ಗಟ್ಟಿಗೊಳಿಸುತ್ತಿದೆ. ಗಂಡು ಹೆಣ್ಣುಗಳ ನಡುವಿನ ಪ್ರೀತಿ, ಪ್ರೇಮ, ಪ್ರಣಯ ಮುಂತಾದ ವೈಯಕ್ತಿಕ ಹಾಗೂ ಖಾಸಗಿ ಸಂಗತಿಗಳನ್ನು ನೇರವಾಗಿ ಮಾರುಕಟ್ಟೆಯ ಪ್ರತ್ಯಕ್ಷ ಜಾಲಕ್ಕೆ ತರಲು ಪಣತೊಟ್ಟು ನಿಂತಿದೆ. ಆ ಮೂಲಕ ಆರ್ಥಿಕವಾಗಿ ತನಗಿಂತ ಕೆಳಗಿರುವ ವರ್ಗಗಳ ಯುವ ಸಮೂಹವು ಕೀಳರಿಮೆಯಿಂದ ನರಳುವಂತಹ ಸಾಮಾಜಿಕ ವಾತಾವರಣವನ್ನು ನಯವಾದ ಬಲಾತ್ಕಾರದಿಂದ ನಿರ್ಮಾಣ ಮಾಡಿದೆ. ಸ್ಥಾಪಿತ ಸಾಮಾಜಿಕ ಹಾಗೂ ರಾಜಕೀಯ ಸಂಸ್ಥೆಗಳಿಗೆ ವಾರಸುದಾರರಾಗುವ ಮೂಲಕ ಸಮಾಜದ ಶೋಷಕ ಸಂಬಂಧಗಳನ್ನು ಮುಂದುವರಿಸುತ್ತಿದೆ. ಇಡೀ ಸಮಾಜದಲ್ಲಿ ತಾನೊಂದೇ ನಿಜವಾದ ಮಾದರಿ, ಆದರ್ಶ ಎಂಬಂತಹ ಕಲ್ಪನೆಯ ವಾತಾವರಣವನ್ನು ನಿರ್ಮಾಣ ಮಾಡುತ್ತಿದೆ. ತನ್ನ ಶೋಷಕ ಪ್ರಜ್ಞೆ ಹಾಗೂ ಶೋಷಕ ಸ್ವಭಾವಗಳನ್ನು ಸಮಾಜದ ಉಳಿದ ಯುವ ಸಮೂಹ ಆದರ್ಶವೆಂದು ನಂಬಿ ನಡೆಯಬೇಕು ಎಂದು ಈ ಯುವ ಸಮೂಹ ಅಪೇಕ್ಷಿಸುತ್ತಿದೆ. ಜಾಗತೀಕರಣದ ಮಾರುಕಟ್ಟೆಯ ಎಲ್ಲಾ ಸರಕುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಎಂಜಾಯ್ ಮಾಡಬೇಕು ಎಂಬುದು ಇದರ ಆಸೆ ಹಾಗೂ ಪ್ರವೃತ್ತಿ. ಹಾಗಾಗಿ ಈ ಯುವ ಸಮೂಹದ ಪ್ರಕಾರ 'ಲೈಫ್ ಎಂದರೆ ಎಂಜಾಯ್'. ಎಂಜಾಯ್ ಮಾಡಲು ಏನೆಲ್ಲವನ್ನೂ ಮಾಡಬಹುದು; ಮಾಡಬೇಕು ಎಂಬುದು ಇದರ ಸಾಮಾನ್ಯ ಸ್ವಭಾವ. ಇಡೀ ಸಮಾಜದಲ್ಲಿ ತನ್ನನ್ನು ಎಲ್ಲರೂ ಆದರ್ಶವೆಂಬಂತೆ ನೋಡಬೇಕು ಎಂಬುದು ಇದರ ಅಪೇಕ್ಷೆ.

ಮಧ್ಯಮ ವರ್ಗ ಹಾಗೂ ಕೆಳಮಧ್ಯಮ ವರ್ಗದ ಯುವ ಸಮೂಹ ತನ್ನ ಮೇಲಿರುವ ಯುವ ಸಮೂಹವನ್ನು ನೋಡಿ, ತನಗೆ ತಾನೇ ಒಂದು ಬಗೆಯ ಕೀಳರಿಮೆಯನ್ನು ಹೊಂದಿದೆ. ಅದೇ ಕಾಲಕ್ಕೆ ತನಗಿಂತ ಕೆಳಗಿರುವ ಯುವ ಸಮೂಹವನ್ನು ನೋಡಿ ತನಗೆ ತಾನೆ ಒಂದು ಬಗೆಯ ಮೇಲರಿಮೆಯನ್ನು ಹೊಂದಿದೆ. ಈ ಸಮೂಹದ ಪ್ರಜ್ಞೆಯೊಳಗೆ ಒಂದೇ ಕಾಲಕ್ಕೆ ಒಂದು ಕಡೆ ಕೀಳರಿಮೆಯೂ; ಮತ್ತೊಂದು ಕಡೆ ಮೇಲರಿಮೆಯೂ ಇರುವುದರಿಂದ ಸಮಾಜದ ಶೋಷಕರ ವಿರೋಧಿ ಮೌಲ್ಯಗಳನ್ನು ಗಟ್ಟಿಗೊಳಿಸುತ್ತಿದೆ. ಗ್ರಾಮೀಣ ಪರಿಸರದಲ್ಲಿ ಈ ಯುವ ಸಮೂಹ ಊಳಿಗಮಾನ್ಯ ಸಮಾಜದ ಎಲ್ಲಾ ಬಗೆಯ ಜನ ವಿರೋಧಿ ಮೌಲ್ಯಗಳನ್ನು ಮರುಸ್ಥಾಪನೆ ಮಾಡುತ್ತಿದೆ. ಜಾತಿ ಮತ್ತು ಅಸ್ಪೃಶ್ಯತೆಯ ತುಳಿತ, ದಮನ, ದಬ್ಬಾಳಿಕೆಗಳನ್ನು ಈ ಯುವ ಸಮೂಹ ಪೂರ್ವನಿಯೋಜಿತವಾಗಿ ಸಂಘಟಿಸುತ್ತಿದೆ. ಶೋಷಕ ಜಾತಿಗಳ ಮೇಲೆ ಕಂಡುಕೇಳರಿಯಲಾರದ ಹಿಂಸೆ ಮತ್ತು ಕ್ರೌರ್ಯಗಳನ್ನು ಇದು ನಡೆಸುತ್ತಿದೆ. ಅದೇ ಕಾಲಕ್ಕೆ ತನ್ನ ಈ ಕ್ರೂರ ಸ್ವಭಾವವನ್ನು ಮುಚ್ಚಿಟ್ಟುಕೊಳ್ಳುವ ಸಲುವಾಗಿ ತಾನು 'ಪ್ರಗತಿಪರ' ಎಂಬ ವೇಷವನ್ನು ತೊಟ್ಟಿದೆ. ಬಹುತೇಕ ಸಿನಿಮಾ ರಂಗದಲ್ಲಿ ಈ ಆಯಾಮಕ್ಕೆ ಇತ್ತೀಚಿನ ದಿನಗಳಲ್ಲಿ ಹೆಚ್ಚು ಹೆಚ್ಚು ಬೇಡಿಕೆ ಬರುತ್ತಿದೆ. ಶ್ರೀಮಂತ ಹಾಗೂ ಮಧ್ಯಮ ವರ್ಗದ ಯುವ ಜನತೆಯು ಸಮಾಜದ ಶೋಷಕ ಸಂಬಂಧಗಳನ್ನು ಮತ್ತು ಮೌಲ್ಯಗಳನ್ನು ವಿರೋಧಿಸುವಂತಹ ಸನ್ನಿವೇಶಗಳನ್ನು ಅಲ್ಲಿ ನಿರೂಪಿಸಲಾಗುತ್ತಿದೆ. ಅಷ್ಟು ಮಾತ್ರವಲ್ಲ; ಬೂರ್ಜ್ವಾ ರಾಜಕೀಯದಲ್ಲಿ ಬದಲಾವಣೆ ನಡೆಯುವುದಾದರೆ ಈ ವರ್ಗದ ಯುವ ಜನತೆಯಿಂದ ಎಂಬ ಸಂದೇಶವನ್ನು ಕೊಡುವ ಪ್ರಯತ್ನ ನಡೆಯುತ್ತಿದೆ. ಆದರೆ ವಾಸ್ತವದಲ್ಲಿ ಈ ಯುವ ಸಮೂಹ ಇದಕ್ಕೆ ಸಂಪೂರ್ಣ ತದ್ವಿರುದ್ಧವಾಗಿದೆ. ಶೋಷಿತ ಯುವ ಸಮೂಹದಿಂದ ಭೌತಿಕ ಕಾರಣಗಳಿಗೆ ಹುಟ್ಟಬಹುದಾಗಿದ್ದ ಶಕ್ತಿಶಾಲಿ ವಿರೋಧಗಳ ಅಗತ್ಯವಿಲ್ಲ ಎಂಬ ಸಂದೇಶವನ್ನು ಇದು ಪರೋಕ್ಷವಾಗಿ ಪ್ರತಿಬಿಂಬಿಸಲು ಪ್ರಯತ್ನಿಸುತ್ತಿದೆ.

ಶೋಷಿತ ವಲಯಗಳ ಯುವ ಜನತೆಯು ದಿನದಿಂದ ದಿನಕ್ಕೆ ಶೋಷಣೆ ಹಾಗೂ ನಿರಂತರ ಲೂಟಿಯನ್ನು ಎದುರಿಸುತ್ತಿದೆ. ಈ ವಲಯದ ಯುವ ಮಹಿಳಾ ಲೋಕ ಊಹೆಗೂ ನಿಲುಕದ ಕಷ್ಟ, ಸಂಕಟಗಳನ್ನು ಎದುರಿಸುತ್ತಿದೆ; ಅನುಭವಿಸುತ್ತಿದೆ. ಈ ಸಮೂಹವನ್ನು ಒಂದು ಕಡೆ ಆಳುವ ವರ್ಗದ ರಾಜಕೀಯ ತನ್ನ ಹಿತಾಸಕ್ತಿಗೆ ಅನುಗುಣವಾಗಿ ದುರುಪಯೋಗ ಮಾಡಿಕೊಳ್ಳುತ್ತಿದೆ. ಮತ್ತೊಂದು ಕಡೆ ಎನ್.ಜಿ.ಓ.ಗಳು ನೇರವಾಗಿ ಇವರ ಬದುಕನ್ನು ಬಲಿತೆಗೆದುಕೊಂಡಿವೆ. 'ಮುಕ್ತ ಲೈಂಗಿಕತೆಯ ಕೊರತೆಯೇ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಮೂಲ ಕಾರಣ' ಎಂಬ ಕುಟುಂಬ ವಿರೋಧಿ ಪ್ರಜ್ಞೆಯನ್ನು ಈ ಸಮೂಹದಲ್ಲಿ ಬಲಾತ್ಕಾರವಾಗಿ ಮನೆಮಾಡುವಂತೆ ಪ್ರೇರೇಪಿಸುತ್ತಿವೆ. ಎನ್.ಜಿ.ಓ.ಗಳ ಪ್ರಭಾವಕ್ಕೆ ಒಳಗಾದ ಅದೆಷ್ಟೋ ಯುವ ಸಮೂಹದ ಕುಟುಂಬಗಳ ಸಂಬಂಧಗಳು ಹಾಡುಹಗಲೇ ಒಡೆದುಹೋಗಿವೆ; ಒಡೆದುಹೋಗುತ್ತಿವೆ. ಶೋಷಕ ಸಮಾಜವು ಈ ಸಮೂಹವನ್ನು ಸ್ವಾವಲಂಬನೆಯಿಂದ ಬದುಕಲು ಬಿಡುತ್ತಿಲ್ಲ. ಈ ಸಮೂಹದ ಸ್ವಾಭಿಮಾನವನ್ನು ಕೆಣಕಲಾಗುತ್ತಿದೆ. ತಮ್ಮ ಸ್ವಾಭಿಮಾನಕ್ಕೆ ಧಕ್ಕೆ ಬಂದು, ಅದನ್ನು ವಿರೋಧಿಸಿದಾಗ, ಇವೆ ಮೇಲೆ ನೇರ ದಾಳಿಗಳು, ಕೊಲೆಗಳು ನಡೆಯುತ್ತಿವೆ. ಅನೇಕ ಕೊಳೆಗೇರಿಗಳಲ್ಲಿ ಈ ಸಮೂಹದ ಕೆಲವು ಯುವಕರನ್ನು ಭೂಗತ ಜಗತ್ತು ತನ್ನ ಭೌತಿಕ ಅಗತ್ಯಗಳಿಗೆ ಬಳಸಿಕೊಳ್ಳುತ್ತಿದೆ. ಶಿಕ್ಷಣ, ಸಮೂಹ ಮಧ್ಯಮ; ಸಾರ್ವಜನಿಕ ಚರ್ಚೆ ಸಂವಾದಗಳು ಈ ಯುವ ಜನತೆಯು ಎಲ್ಲಾ ಬಗೆಯ ಅಸಮಾನತೆ ಮತ್ತು ಶೋಷಣೆಗಳಿಗೆ ಹೊಂದಿಕೊಂಡು ಹೋಗುವಂತಹ ಪ್ರಜ್ಞೆಯನ್ನು ಇವರಲ್ಲಿ ಗಟ್ಟಿಯಾಗಿ ಬೆಳೆಸುತ್ತಿವೆ. ಪರಿಣಾಮವಾಗಿ ಇತ್ತೀಚಿನ ದಿನಗಳಲ್ಲಿ ತಮ್ಮ ಮೇಲೆ ನಡೆಸಲಾಗುತ್ತಿರುವ ಅನ್ಯಾಯ ಮತ್ತು ಕ್ರೌರ್ಯಗಳ ವಿರುದ್ಧ ಸಾಂಘಿಕ ಹೋರಾಟ ಮಾಡದಂತಹ ವಾತಾವರಣವನ್ನು ನಿರ್ಮಾಣ ಮಾಡಲಾಗಿದೆ.

ಮತ್ತೊಂದು ಕಡೆ ಅತಿರೇಕವಾದಿ ಸಂಘಟನೆಗಳು ಈ ಯುವ ಸಮೂಹದ ಉತ್ಸಾಹ ಮತ್ತು ಕೆಚ್ಚನ್ನು ತಮ್ಮ ಹಿತಾಸಕ್ತಿಗೆ ಬಳಸಿಕೊಳ್ಳುತ್ತಿವೆ. ಫಲವಾಗಿ ಭೂಗತ ಲೋಕ ಹಾಗೂ ಆಳುವ ವರ್ಗದ ರಾಜಕೀಯ ಲೋಕ ನಡೆಸುತ್ತಿರುವ ಕೊಲೆ, ಸುಲಿಗೆಗಳಲ್ಲಿ ಇವರನ್ನು ಅನಾಮತ್ತಾಗಿ ಬಳಸಿಕೊಳ್ಳಲಾಗುತ್ತಿದೆ. ಇನ್ನೊಂದು ಕಡೆ ಈ ಸಮೂಹದ ಕೆಲವರನ್ನು ಅತಿರೇಕವಾದಿ, ಸಂಕುಚಿತವಾಗಿ ಹಾಗೂ ಮೂಲಭೂತವಾದಿ ರಾಜಕೀಯ ಶಕ್ತಿಗಳು ತಮ್ಮ ಹಿತಾಸಕ್ತಿಗಳಿಗೆ ನೇರವಾಗಿ ಬಲಿಕೊಡುತ್ತಿವೆ. ಶೋಷಕ ಸಮಾಜದ ಶೋಷಕ ಬುಡವನ್ನು ಗಟ್ಟಿಯಾಗಿ

ಅಲ್ಲಾಡಿಸಬಹುದಾಗಿದ್ದ ಈ ಯುವ ಶಕ್ತಿಯನ್ನು ಶೋಷಕ ಸಮಾಜಕ್ಕೆ ಹೊಂದಿಕೊಂಡು ಹೋಗುವಂತೆ ತಯಾರು ಮಾಡಲಾಗುತ್ತಿದೆ. ಅದಕ್ಕಿಂತಲೂ ಹೆಚ್ಚಾಗಿ ಸಮಾಜದಲ್ಲಿ ಏನೇ 'ಅಪರಾಧಗಳು' ನಡೆದರೂ ಕೂಡ ಅದೆಲ್ಲವನ್ನೂ ಇದೇ ಯುವ ಸಮೂಹ ನಡೆಸಿದ್ದು ಎಂಬ ತೀರ್ಮಾನವನ್ನು ಒಪ್ಪಿಕೊಳ್ಳುವಂತಹ ವಾತಾವರಣವನ್ನು ನಿರ್ಮಾಣ ಮಾಡಲಾಗಿದೆ.

ಯುವ ಜನತೆಯನ್ನು ನಿರ್ಮಾಣ ಮಾಡುತ್ತಿರುವ ಬಗೆ

ಔಪಚಾರಿಕ ಶಿಕ್ಷಣವು ಯುವ ಜನತೆಯನ್ನು ವಿವಿಧ ಆಯಾಮಗಳಲ್ಲಿ ತಯಾರು ಮಾಡುತ್ತಿದೆ. 'ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು' ಎಂಬ ಸವಕಲು ಹೇಳಿಕೆಯನ್ನು ಪುನರ್ ಉಚ್ಚಾರ ಮಾಡುತ್ತಿದೆ. ಮಕ್ಕಳನ್ನು ಪ್ರಜೆಗಳನ್ನಾಗಿ ರೂಪಿಸುವುದು ಯಾವುದೇ ಸರಕಾರದ ಸಾಮಾನ್ಯ ಜವಾಬ್ದಾರಿ. ಮಕ್ಕಳನ್ನು ಪ್ರಜೆಗಳನ್ನಾಗಿ ರೂಪಿಸುವಾಗ ಮುಖ್ಯವಾಗಿ ಎರಡು ದಾರಿಗಳು ಸಾಧ್ಯ. ಒಂದು: ಸಮಾಜದ ಅಸಮಾನತೆ, ಅನ್ಯಾಯ ಮತ್ತು ಶೋಷಣೆಗಳ ವಿರುದ್ಧ ಹೋರಾಡುತ್ತಾ, ಹೊಸ ಸಮಾಜವನ್ನು ನಿರ್ಮಾಣ ಮಾಡುವಂತಹ ಪ್ರಜೆಗಳನ್ನು ರೂಪಿಸುವುದು. ಎರಡು: ಸಮಾಜದ ಅಸಮಾನತೆ, ಅನ್ಯಾಯ ಮತ್ತು ಶೋಷಣೆಗಳಿಗೆ ಹೊಂದಿಕೊಂಡು ಹೋಗುವಂತಹ ಪ್ರಜೆಗಳನ್ನು ರೂಪಿಸುವುದು. ಅಂದರೆ ಇರುವ ಸಮಾಜವನ್ನು ಬದಲಾಯಿಸಲು ಅಪೇಕ್ಷೆ ಪಡದ, ಆ ಕಡೆಗೆ ಆಲೋಚನೆ ಮಾಡದಂತಹ ಪ್ರಜೆಗಳನ್ನು ರೂಪಿಸುವುದು. ಪ್ರಪಂಚ ಪ್ರಳಯವೇ ಆಗಲಿ, ತಾನಾಯಿತು; ತನ್ನ ಬದುಕಾಯಿತು. ತನ್ನ ಬದುಕು ನೆಟ್ಟಗಾದರೆ ಉಳಿದೆಲ್ಲವೂ ಸರಿ ಹೋಗುತ್ತವೆ. ಹಾಗಾಗಿ ಮೊದಲು ತನ್ನ ವೈಯಕ್ತಿಕ ಬದುಕಿಗೆ ಮಾತ್ರ ಶ್ರಮಿಸಬೇಕು. ಇನ್ನೊಬ್ಬರ ಕಷ್ಟ ಸಂಕಟಕ್ಕೆ ಮರುಗಿ ಪ್ರಯೋಜನ ಇಲ್ಲ ಎಂಬ ಮನುಷ್ಯ ವಿರೋಧಿ ಪ್ರಜ್ಞೆಯನ್ನು ಮಕ್ಕಳಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷ ವಿಧಾನಗಳಲ್ಲಿ ತುಂಬಲಾಗುತ್ತಿದೆ. ಇದಕ್ಕೆ ಬಹುದೊಡ್ಡ ಉದಾಹರಣೆ ಎಂದರೆ ಔಪಚಾರಿಕ ಶಿಕ್ಷಣವು ನಡೆಸುವ ಪರೀಕ್ಷೆಯ ವಿಧಾನ ಮತ್ತು ಫಲಿತಾಂಶದ ಮಾದರಿ. ಅದು ಒಬ್ಬ ವ್ಯಕ್ತಿಯ ಸಾಮರ್ಥ್ಯವನ್ನು ಮಾತ್ರ ಪ್ರತಿನಿಧಿಸುತ್ತಿದೆ. ಅದರಾಚೆಗೆ ಸಮೂಹ ಸಾಮರ್ಥ್ಯವೊಂದು ಸಾಧ್ಯ ಎಂಬ ಕಲ್ಪನೆಯೂ ಕೂಡ ಔಪಚಾರಿಕ ಶಿಕ್ಷಣಕ್ಕೆ ಬರಲು ಸಾಧ್ಯವಿಲ್ಲ.

ಔಪಚಾರಿಕ ಶಿಕ್ಷಣದಿಂದ ಬಹುತೇಕ ಮಕ್ಕಳು ಹೊರಗೇ ಇದ್ದಾರೆ. ಇವರೆಲ್ಲಾ ಶೋಷಿತ ದುಡಿಯುವ ವರ್ಗದ ಮಕ್ಕಳು. ಇವರು ತಮ್ಮ ಕುಟುಂಬದ ಹೊಟ್ಟೆಬಟ್ಟೆಗೆ ಮಾತ್ರ ತಮ್ಮ ಬದುಕನ್ನು ಸವೆಸುತ್ತಿದ್ದಾರೆ. ಶೋಷಕ ವ್ಯವಸ್ಥೆಯು ಇವರನ್ನು ಸ್ವತಂತ್ರ ಬದುಕನ್ನು ಕಟ್ಟಿಕೊಳ್ಳಲಾರದಂತಹ ಪರಿಸ್ಥಿತಿಯಲ್ಲಿಟ್ಟಿದೆ. ಹಾಗಾಗಿ ಇವರು ಬಹುತೇಕ ಶೋಷಣೆಯ ಸಮಾಜದಲ್ಲಿ ಬದುಕಿ ಉಳಿಯುವುದು ಹೇಗೆ ಎಂಬ ಇಕ್ಕಟ್ಟಿನಲ್ಲಿ ಇರುವುದರಿಂದ ಶೋಷಣೆ ಹಾಗೂ ಅನ್ಯಾಯಗಳಿಗೆ ಹೊಂದಿಕೊಂಡು ಹೋಗುವಂತಹ ರೀತಿಯಲ್ಲೆ ಇವರು ತಯಾರಾಗುತ್ತಿದ್ದಾರೆ. ಬಿಡಿಬಿಡಿಯಾಗಿ ತಮ್ಮ ಮೇಲೆ ನಡೆಯುತ್ತಿರುವುದು ಅನ್ಯಾಯ ಎಂಬುದು ಗೋತ್ತಾದರೂ ಸಹ ಅದನ್ನು ಶಕ್ತಿಶಾಲಿಯಾಗಿ ವಿರೋಧಿಸುವ ಸಾಮರ್ಥ್ಯ ಇವರಲ್ಲಿ ಬೆಳೆಯುತ್ತಿಲ್ಲ. ಯುವ ಜನತೆಯ ಬಹುದೊಡ್ಡ ಸಂಖ್ಯೆ ಈ ವಲಯದಲ್ಲೇ ಇದೆ. ಶೋಷಕ ವ್ಯವಸ್ಥೆಗೆ ಇದೊಂದು ಬಹುದೊಡ್ಡ ವರವಾಗಿದೆ. ಈ ಬಹುದೊಡ್ಡ ಯುವ ಜನತೆಯನ್ನು ಎನ್.ಜಿ.ಓ.ಗಳು ನೇರವಾಗಿ ದುರುಪಯೋಗ ಮಾಡಿಕೊಳ್ಳುತ್ತಿವೆ. ಅನ್ಯಾಯ, ಅಸಮಾನತೆ ಮತ್ತು ಶೋಷಣೆಯ ಸಂಗತಿಗಳನ್ನು ಸಂಪೂರ್ಣವಾಗಿ ಮುಚ್ಚಿಟ್ಟು ತಮ್ಮ ವೈಕ್ತಿಕ ಹಾಗೂ ಖಾಸಗಿ ಬದುಕಿನ



ವಿಷಯಗಳಲ್ಲೇ ಅವರು ಗಿರಕಿ ಹೊಡೆಯುವಂತೆ ತಯಾರು ಮಾಡುತ್ತಿವೆ. ಶೋಷಕ ವರ್ಗಗಳು ಮಾಡಲಾರದಂತಹ ವಿಕೃತ ಪರಿಣಾಮಗಳನ್ನು ಎನ್.ಜಿ.ಓ.ಗಳು ಮಾಡಿವೆ; ಮಾಡುತ್ತಿವೆ. ಈ ವರ್ಗದ ಯುವ ಸಮೂಹವನ್ನು ಎನ್.ಜಿ.ಓ.ಗಳು ಮುಕ್ತ ಲೈಂಗಿಕತೆಗೆ ಪ್ರಚೋದಿಸುತ್ತಿವೆ; ಪ್ರಭಾವಿಸುತ್ತಿವೆ. ದೇಶದ ಸಂಪತ್ತಿನ ಬಹುಭಾಗವನ್ನು ಈ ಸಮೂಹವೇ ಸೃಷ್ಟಿ ಮಾಡುತ್ತಿದೆ. ಆದರೆ ಈ ಪ್ರಜ್ಞೆಯು ಅವರ ತಿಳುವಳಿಕೆ ಆಗದಂತೆ ಅವರನ್ನು ಸಾಮಾಜಿಕ ಜಾಗೃತಿಯಿಂದ ದೂರ ಇಡಲಾಗಿದೆ. ಫಲವಾಗಿ ಪ್ರಧಾನ ಉತ್ಪಾದನ ಶಕ್ತಿಗಳಾದ ಇವರು 'ನಾವೇ ದೇಶದ ಸಂಪತ್ತಿನ ಸೃಷ್ಟಿಕರ್ತರು' ಎಂದು ಭಾವಿಸದಂತೆ ಮಾಡಲಾಗಿದೆ. ನಾವು ಬದುಕುತ್ತಿರುವುದು ಮಾಲೀಕರು ಕೊಡುವ ಕೂಲಿಯಿಂದ ಎಂಬ ಪ್ರಜ್ಞೆಯನ್ನು ಇವರಲ್ಲಿ ಗಟ್ಟಿಯಾಗಿ ಬೇರೂರಿಸಲಾಗಿದೆ.

ಭವಿಷ್ಯದ ನಿರ್ಮಾಣದಲ್ಲಿ ಯುವ ಜನತೆ

ಒಂದು ನಾಡಿನ ಭವಿಷ್ಯವು ಆ ನಾಡಿನ ಯುವ ಜನತೆಯ ಮೇಲಿದೆ ಎಂಬುದು ಒಂದು ಹೇಳಿಕೆ. ಇದು ವಾಸ್ತವವೂ ಹೌದು. ಆದರೆ ಸಮಸ್ಯೆ ಇರುವುದು ಯುವ ಜನತೆಯನ್ನು ಎಂತಹ ಪರಿಸ್ಥಿತಿಯಲ್ಲಿ ಇಡಲಾಗಿದೆ ಎಂಬುದು. ಯಾವುದೇ ನಾಡಿನಲ್ಲಿ ಯುವ ಜನತೆಯು ಅಸಮಾನ ಪರಿಸ್ಥಿತಿಯಲ್ಲಿರುತ್ತದೆ. ಅದೇ ಕಾಲಕ್ಕೆ ಅದಕ್ಕೆ ವಿವಿಧ ಬಗೆಯ ಶಕ್ತಿ ಸಾಮರ್ಥ್ಯಗಳು ಇರುತ್ತವೆ. ಇನ್ನು ಒಂದು ನಾಡಿನ ಇಲ್ಲವೆ ಒಂದು ದೇಶದ ಭವಿಷ್ಯದ ನಿರ್ಮಾಣ ಎಂಬುದು ಆ ದೇಶದ ಸಧ್ಯದ ಪರಿಸ್ಥಿತಿಯನ್ನು ಸಮಗ್ರವಾಗಿ ಬದಲಾಯಿಸುವುದಾಗಿರುತ್ತದೆ. ದೇಶದ ಭವಿಷ್ಯದ ನಿರ್ಮಾಣ ಎಂದರೆ ಒಂದು ದೇಶದಲ್ಲಿ ಎಂಜಿನಿಯರ್‌ಗಳನ್ನು, ಡಾಕ್ಟರ್‌ಗಳನ್ನು ತಯಾರು ಮಾಡುವುದಲ್ಲ. ಗಗನಚುಂಬಿ ಕಟ್ಟಡಗಳ ಮತ್ತು ಅಗಲವಾದ ರಸ್ತೆಗಳ ನಿರ್ಮಾಣವಲ್ಲ. ದೇಶದ ಭವಿಷ್ಯದ ನಿರ್ಮಾಣ ಎಂಬುದು ಆ ದೇಶದ ಸಂಪತ್ತನ್ನು ಸೃಷ್ಟಿ ಮಾಡುವ ದುಡಿಯುವ ಜನರ ಸಮಗ್ರ ಬದಲಾವಣೆ. ಅದೇ ಕಾಲಕ್ಕೆ ಇವರನ್ನು ನಿರಂತರವಾಗಿ ದಮನ ಮಾಡುವ ಶೋಷಕ ವರ್ಗದ ಸಮಗ್ರ ಬದಲಾವಣೆಯೂ ಹೌದು. ಅಂದರೆ ಒಟ್ಟಾರೆ ವ್ಯವಸ್ಥೆಯ ಸಮಗ್ರ ಬದಲಾವಣೆಯಲ್ಲಿ ಯುವ ಜನತೆಯನ್ನು ಕ್ರಿಯಾಶೀಲವಾಗಿ ತೊಡಗಿಸುವುದು.

ಇದು ಮುಖ್ಯವಾಗಿ ಎರಡು ನೆಲೆಗಳಲ್ಲಿ ನಡೆಯುತ್ತದೆ. ಒಂದು: ಯುವ ಜನತೆಯ ಆಲೋಚನ ವಿಧಾನದಲ್ಲಿ. ಎರಡು: ಯುವ ಜನತೆಯ ಆಚರಣೆಯ ವಿಧಾನದಲ್ಲಿ. ಹಾಗೆ ನೋಡಿದರೆ ಇವೆರಡೂ ಒಂದರಿಂದ ಒಂದು ಪ್ರತ್ಯೇಕ ಅಲ್ಲ. ಯುವ ಜನತೆಯಲ್ಲಿ ವ್ಯವಸ್ಥೆಯ ಬಗ್ಗೆ ಯಾವ ಅರಿವನ್ನು ಮೂಡಿಸುತ್ತೇವೊ ಅದಕ್ಕೆ ಅನುಗುಣವಾಗಿ ಅವರು ತಮ್ಮ ಪಾಲಿನ ವೈಯಕ್ತಿಕ ಹಾಗೂ ಸಾಮಾಜಿಕ ಕೆಲಸ ಮಾಡುತ್ತಾರೆ. ಅದೇ ರೀತಿಯಲ್ಲಿ ಯುವ ಜನತೆಯನ್ನು ಯಾವ ಕೆಲಸದಲ್ಲಿ ತೊಡಗಿಸುತ್ತೇವೊ ಅದಕ್ಕೆ ಅನುಗುಣವಾಗಿ ಅವರ ಆಲೋಚನ ವಿಧಾನ ರೂಪುಗೊಳ್ಳುತ್ತದೆ.

ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ, ವಿವಿಧ ಸಮೂಹ ಮಾಧ್ಯಮಗಳು, ವಿವಿಧ ಹೋರಾಟಗಳು, ಚಳವಳಿಗಳು, ಆಳುವ ವರ್ಗದ ರಾಜಕೀಯ ಪಕ್ಷಗಳು, ಧಾರ್ಮಿಕ ಸಂಘ-ಸಂಸ್ಥೆಗಳು ಇವೆಲ್ಲವೂ ಯುವ ಜನತೆಯ ಪ್ರಜ್ಞೆ ಮತ್ತು ಅರಿವನ್ನು ನಿರ್ಮಾಣ ಮಾಡುತ್ತಿವೆ. ಅರಿವನ್ನು ಅನೇಕ ವಿಧಾನಗಳ ಮೂಲಕ ನಿರ್ಮಾಣ ಮಾಡುತ್ತಿರಬಹುದು. ಇಂದಿನ ಮಾಹಿತಿಗಳ ಯುಗದಲ್ಲಿ ಮಾಹಿತಿ ಸಂಗ್ರಹವೇ ಅರಿವು ಎಂಬ ಅಭಿಪ್ರಾಯವನ್ನು ಎಲ್ಲರೂ ಒಪ್ಪುವಂತೆ ಮಾಡಲಾಗಿದೆ. ಆದರೆ ಈ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಮುಖ್ಯ ಅಂಶವೆಂದರೆ ಯುವ ಜನತೆಯ ಪ್ರಜ್ಞೆಯನ್ನು ಯಾವ ಸ್ವರೂಪದಲ್ಲಿ ಮತ್ತು ಯಾವ ಧೋರಣೆಯಲ್ಲಿ ನಿರ್ಮಾಣ ಮಾಡಲಾಗುತ್ತಿದೆ ಎಂಬುದು. ವ್ಯವಸ್ಥೆಯ ಎಲ್ಲಾ ಬಗೆಯ ಕ್ರೌರ್ಯಗಳಿಗೆ ಹೊಂದಿಕೊಂಡು, ಶೋಷಕ ವರ್ಗದ ಪ್ರಜ್ಞೆಯನ್ನು ಅವರಲ್ಲಿ ನಿರ್ಮಾಣ ಮಾಡಬಹುದು. ಇಲ್ಲವೆ ಇವನ್ನು ವಿರೋಧಿಸುವ ಮತ್ತು ಇವನ್ನು ಬದಲಾಯಿಸುವ ಪ್ರಜ್ಞೆಯನ್ನೂ, ಆಸಕ್ತಿಯನ್ನೂ ನಿರ್ಮಾಣ ಮಾಡಬಹುದು. ಇದು ಮಾಡುವ ಕೆಲಸಕ್ಕೆ ಸಂಬಂಧಿಸಿದುದು. ಜೊತೆಗೆ ಅರಿವು ಮತ್ತು ತಿಳುವಳಿಕೆಗೆ ಸಂಬಂಧಿಸಿದುದು. ■

ಮಾವೋವಾದ: ಪುಸ್ತಕವೊಂದರ ನೆಪದಲ್ಲಿ ಹೀಗೇ ಒಂದಿಷ್ಟು...

ಇತ್ತೀಚೆಗೆ ಚಾರು ಪ್ರಕಾಶನ ಹೊರತಂದಿರುವ 'ಭಾರತದ ಕ್ರಾಂತಿ ಮತ್ತು ಮಾವೋವಾದಿ ಚಳವಳಿ–ಒಂದು ವಿಮರ್ಶಾತ್ಮಕ ಒಳನೋಟ' ಎಂಬ ಪುಸ್ತಕ ಬಿಡುಗಡೆಯಾಯಿತು. ಸಕ್ರಿಯವಾಗಿ ಚಳವಳಿಯಲ್ಲಿ ತೊಡಗಿಕೊಂಡಿರುವ ಶ್ರೀಧರ್ ಬರೆದ ಈ ಪುಸ್ತಕದ ಕುರಿತು ನನ್ನ ಅಭಿಪ್ರಾಯಗಳನ್ನು ದಾಖಲಿಸಲು ಇದು ಸಕಾಲವೆನಿಸುತ್ತಿದೆ. ಏಕೆಂದರೆ ಮಾವೋವಾದಿಗಳ ಪ್ರಖರ ಸೈದ್ಧಾಂತಿಕ ಬದ್ಧತೆ, ಹೋರಾಟಗಳನ್ನು ಕಾರ್ಯಸ್ವರೂಪದ ನೆಲೆಯಲ್ಲಿ ಒಪ್ಪಬೇಕೋ ಬೇಡವೋ ಎಂಬ ಗೊಂದಲ ಹಲವರದಾಗಿದೆ. ಮಾವೋವಾದಿ ಮಿತ್ರರ ಜೊತೆ ನಡೆಸಿದ ಸಂವಾದ–ಲಡಾಯಿಗಳ ಬಳಿಕವೂ ಅವರವರು ಅವರವರ ನಿಲುವುಗಳಿಗೇ ಅಂಟಿಕೊಳ್ಳುವುದೂ ಎಂದಿನಿಂದ ಮುಂದುವರೆದಿದೆ. ಪ್ರಗತಿಪರ ಸಮಾನ ಮನಸ್ಕರೆಲ್ಲ ಚೌಕಟ್ಟುಗಳ ಗಡಿದಾಟಿ ಸಮಾನ ಆಶಯಗಳೊಂದಿಗೆ ಒಗ್ಗೂಡಬೇಕಾಗಿರುವುದು ಅನಿವಾರ್ಯವಾಗಿರುವ ಕಾಲದಲ್ಲಿ ಈ ಪುಸ್ತಕ ಕುರಿತು ಚರ್ಚಿಸುವುದು ಅಗತ್ಯವಾಗಿದೆ.

ಜಾತಿ–ವರ್ಗ–ದೇಶಗಳ ಗಡಿ ಮೀರಿ ಪ್ರಭಾವಿಸಿ, ಆಧುನಿಕ ಭಾರತದ ಚಿಂತನೆಗಳನ್ನು ರೂಪಿಸಿದವರಲ್ಲಿ ಗಾಂಧಿ–ಮಾರ್ಕ್ಸ್–ಲೋಹಿಯಾ–ಅಂಬೇಡ್ಕರ್ ಎಂಬ ನಾಲ್ಕು ಪ್ರಮುಖ ಧಾರೆಗಳನ್ನು ಗುರುತಿಸುತ್ತೇವಷ್ಟೇ. ಇವರಲ್ಲಿ ಗಾಂಧಿ ಕುರಿತು ಯಾರಾದರೂ ಮಾತನಾಡಬಹುದು, ಆಡುತ್ತಾರೆ. ಗಾಂಧಿವಾದ ಮತ್ತೆಮತ್ತೆ ಪರಾಮರ್ಶೆಗೊಳಗಾದರೂ ಅದು ಅಲಂಕಾರಿಕ ವಾದವಾಗಿ ಉಳಿದಿದೆಯೇ ಹೊರತು ಜೀವನಕ್ರಮವಾಗಿ ಆಚರಣೆಯಲ್ಲಿಲ್ಲ. ಲೋಹಿಯಾವಾದವೂ ಅಧ್ಯಯನ–ಚರ್ಚೆ–ವಿಮರ್ಶೆಗೆ ಒಳಗಾಗಿದೆ. ಅಂಬೇಡ್ಕರ್ ಇಂದು ಎಲ್ಲರಿಗೂ ಬೇರೆಬೇರೆ ಕಾರಣಗಳಿಗೆ ಬೇಕಾಗಿದ್ದಾರೆ. ಅಂಬೇಡ್ಕರ್‌ವಾದದ ಪರಾಮರ್ಶೆ ಮೇಲಿಂದ ಮೇಲೆ ನಡೆಯುತ್ತಲೇ ಇರುತ್ತದೆ. ಭಾರತದ ರಾಜಕೀಯದಲ್ಲಿ ಅವಕಾಶಹೀನರಿಗಾಗಿಯೇ ಬದ್ಧವಾಗಿರುವ ರಾಜಕೀಯ ಎಳೆ ಎಡಪಂಥ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ ಮಾರ್ಕ್ಸ್‌ವಾದ ಹಾಗೂ ಅದರ ಮುಂದುವರಿದ ಭಾಗವೆಂದು ಹೇಳಲಾಗುವ ಲೆನಿನ್–ಮಾವೋವಾದ ತೆರೆಮರೆಯ ಚಟುವಟಿಕೆಯಾಗೇ ಉಳಿದಿತ್ತು. ಖಾಸಗಿಯಾಗಿ ಯಾವುದೂ ಇರಬಾರದು, ಆಸ್ತಿಯೂ ಸಹಾ ಎನ್ನುವ; ಜನ, ಜನತಾ ಬಗೆಗೆ ಎಲ್ಲರಿಗಿಂತ ಹೆಚ್ಚು ಮಾತನಾಡುವ ಸಿದ್ಧಾಂತವು ಮುಕ್ತ ಚರ್ಚೆ–ಸಂವಾದಕ್ಕೆ ತೆರೆದುಕೊಳ್ಳದೇ ಒಂದು ವಲಯದೊಳಗಿನ ಚರ್ಚೆಗಷ್ಟೇ ಸೀಮಿತವಾಗಿ ಉಳಿದಿತ್ತು. ಹೀಗಿರುವಾಗ ಅಂಥ ಧಾರೆಯಿಂದ ಬಂದ ಮನಸೊಂದು ಸಾರ್ವಜನಿಕ ಚರ್ಚೆಗೆ ಮಾವೋವಾದವನ್ನು ಈ ಪುಸ್ತಕದ ಮೂಲಕ ತೆರೆದಿಟ್ಟಿದೆ.



ಸಾರ್ವಜನಿಕವಾಗಿ ಆತ್ಮವಿಮರ್ಶೆ ಮಾಡಿಕೊಳ್ಳುವ ತುರ್ತು ಮಾವೋವಾದಿ ಚಳವಳಿಕಾರರಿಗೆ ಬರಲು ಕಾರಣ ಅವರಲ್ಲೇ ಒಂದು ಗುಂಪು ಸಮಾನ ಮನಸ್ಕ ವ್ಯಕ್ತಿ–ಸಂಘಟನೆಗಳೊಡನೆ ಹೆಜ್ಜೆ ಹಾಕಬಯಸಿರುವುದು. ವೈಯಕ್ತಿಕ–ತಾತ್ವಿಕ–ಕಾರ್ಯ ಯೋಜನೆ ಕುರಿತ ಭಿನ್ನಾಭಿಪ್ರಾಯಗಳಿಂದ ಕಮ್ಯುನಿಸ್ಟ್ ಚಳವಳಿ ಒಡೆಯುತ್ತಲೇ ಬಂದಿದೆ. ಭಿನ್ನಮತಗಳನ್ನು ಪರಿಹರಿಸಿಕೊಳ್ಳಲು ಮಾವೋವಾದಿ ಗುಂಪಿನೊಳಗೆ ಪ್ರಜಾಸತ್ತಾತ್ಮಕ ಅವಕಾಶ ಹಾಗೂ ಆಂತರಿಕ ಚರ್ಚೆಗೆ ಅವಕಾಶವಿದೆ ಎಂದು ಹೇಳಲಾದರೂ ಅದು ಸತತ ಒಡೆಯುತ್ತಲೇ ಬಂದಿದೆ. ಹೀಗೆ ಭಿನ್ನಮತ ಹೊಂದಿ ಹೊರಬರಲೆತ್ನಿಸಿ, ಚಳವಳಿ ಕುರಿತು ಮಾಡಿದ ವಿಮರ್ಶೆಯೇ ಈ ಪುಸ್ತಕವಾಗಿದೆ ಎನ್ನುವುದು ಲೇಖಕ ಶ್ರೀಧರ್ ಅಭಿಪ್ರಾಯ.

ಬದಲಾವಣೆಗಾಗಿ ತುಡಿಯುವ ಆಕ್ಟಿವಿಸ್ಟ್ ಮನಸೊಂದು ಇದುವರೆಗೆ ಅಜ್ಞಾತವಾಗಿ, ಅನಾಮಿಕನಾಗಿ ಬರೆಯುತ್ತಿದ್ದು ಈಗ ಉತ್ತರದಾಯಿತ್ವದ ಜವಾಬ್ದಾರಿಯಿರುವ ಬರಹಗಾರನಾಗಿ ರೂಪಾಂತರಗೊಂಡಿರುವುದಕ್ಕೆ ಅವರನ್ನು ಅಭಿನಂದಿಸಬೇಕಿದೆ. ಅದೇ ವೇಳೆಗೆ ನನ್ನೊಳಗಿನ ಓದುಗ–ಬರಹಗಾರ್ತಿಗೆ ಅಪ್ರಿಯ ಸತ್ಯಗಳ ಹಲವಾರು ಪ್ರಶ್ನೆಗಳನ್ನು ಹುಟ್ಟಿಸಿದ್ದು ಅವರೊಡನೆ ಸಂವಾದಿಸಬೇಕಾದ ಅಗತ್ಯವನ್ನು ಹುಟ್ಟುಹಾಕಿದೆ.

ಕೆಳ ಮಧ್ಯಮ ವರ್ಗದ ಕುಟುಂಬದಿಂದ ಬಂದ ನೂರ್ ಜುಲ್ಫೀಕರ್ 25 ವರ್ಷ ಕಾಲ ಒಂದು ಸಿದ್ಧಾಂತವನ್ನು ಅರಗಿಸಿಕೊಂಡು, ಅದನ್ನೇ ಜೀವನಕ್ರಮವಾಗಿಸಿಕೊಂಡು ದೊರೆತ ಅನುಭವದಿಂದ ಶ್ರೀಧರ್ ಆದರು. 1985ರಲ್ಲಿ ಇಂಜಿನಿಯರಿಂಗ್ ಓದುತ್ತಿದ್ದ ಹುಡುಗ ಆಂಧ್ರದ ಕ್ರಾಂತಿಕಾರಿ ವಿದ್ಯಾರ್ಥಿ ಸಂಘಟನೆಯ ಸಂಪರ್ಕಕ್ಕೆ ಬಂದು ಹಳ್ಳಿಹಳ್ಳಿಗೆ ತೆರಳಿ ಜನಜಾಗೃತಿಗಾಗಿ ತೆತ್ತುಕೊಂಡಿದ್ದು; ನಂತರ ಕೈಗಾ ವಿರೋಧಿ ಹೋರಾಟದಲ್ಲಿ

ಈ ಪುಸ್ತಕದ ಮುಖಪುಟದಲ್ಲಿ ಕುಳಿತ ಎಳೆಯ ಹುಡುಗ–ಆದಿವಾಸಿ ಪೋರನಂತೆಯೇ ಕಾಣುತ್ತಾನೆ– ಅವನ ಹೆಗಲಿಗೆ ಕೊಟ್ಟ ಬಂದೂಕು ಭಾರವಾಗಿ ಕಾಣುತ್ತದೆ. ಬಂದೂಕಿಲ್ಲದೆ ಅವನಿಗೆ ಪುಸ್ತಕ ಕೊಡಲು ಸಾಧ್ಯವಾಗುವುದಿಲ್ಲವೆ ಎಂಬ ಕಸಿವಿಸಿ ಹುಟ್ಟುತ್ತದೆ. ಜೊತೆಗೇ ಈ ಚಳವಳಿ ಸೆಳೆದುಕೊಳ್ಳುವ ಬುಡಕಟ್ಟು ಹೆಣ್ಣುಗಳ ಬಗೆಗೆ ಹಾಗೂ ಅವರನ್ನು ನಡೆಸಿಕೊಳ್ಳುತ್ತಿರುವ ಬಗೆಗೆ ಸ್ಪಷ್ಟಪಡಿಸಿಕೊಳ್ಳಬೇಕಾದ ಪ್ರಶ್ನೆಗಳು ಹುಟ್ಟುತ್ತವೆ. ಸಶಸ್ತ್ರ ಹೋರಾಟಕ್ಕೆ ತಗಲುವ ಸಮಯ, ಹಣ, ಪ್ರಾಣ, ಶ್ರಮವನ್ನು ರಾಜಕೀಯ ಹೋರಾಟಕ್ಕೆ ಬಳಸಿಕೊಳ್ಳುವುದು ಸಾಧ್ಯವಿಲ್ಲವೆ? ದುಡಿಯುವ ಕೈಗಳಿಗೆ ಬಂದೂಕು ಕೊಡುವುದಷ್ಟೇ ವಿಮೋಚನೆಯೇ? ಶೋಷಣೆಯ ಅರಿವು ಮೂಡಿಸುವಂತಹ ಸಂಘಟನೆ ಕ್ರಾಂತಿಯೆನಿಸುವುದಿಲ್ಲವೆ?

ಪಾಲ್ಗೊಂಡಿದ್ದು; ಬೆಳ್ಳಿಚುಕ್ಕಿ ಟ್ರಸ್ಟ್‌ನಿಂದ ಪುಸ್ತಕಗಳನ್ನು ಹೊರತಂದಿದ್ದು; ಪ್ರಭುತ್ವ ವಿರೋಧಿ ಚಟುವಟಿಕೆಗಳಿಗಾಗಿ ಭೂಗತರಾಗಬೇಕಾಗಿ ಬಂದಿದ್ದು; ಇಂದಿಗೂ ತಮ್ಮ ಮೇಲಿರುವ ನಾಲ್ಕಾರು ಕೇಸುಗಳಿಂದ ಭೂಗತರಾಗಿಯೇ ಉಳಿಯಬೇಕಾಗಿರುವುದು– ಇವೆಲ್ಲ ಪ್ರಕಾಶ್ ಝಾ ತೆರನ ನಿರ್ದೇಶಕರ ಕೈಯಲ್ಲಿ ರೋಚಕ ಸಿನಿಮಾ ಆಗಬಲ್ಲ ವಿವರಗಳು. ಆದರೆ ಅದಾವುದನ್ನೂ ಪುಸ್ತಕ ಚರ್ಚಿಸಿಲ್ಲ. ತಾನು ನಂಬಿಕೊಂಡು ಬಂದ ಸಿದ್ಧಾಂತವನ್ನು ಅರಗಿಸಿಕೊಂಡು ಬದುಕಿದ ಚಳವಳಿಗಾರನೊಬ್ಬ ಅದರ ಏಳುಬೀಳುಗಳನ್ನು ವಿಮರ್ಶಿಸಿದ ಪುಸ್ತಕ ಇದಾಗಿದೆ.

ತನ್ನ ಅತಿ ದುರ್ಬಲ ಪ್ರಜೆಯನ್ನು ಹೇಗೆ ನಡೆಸಿಕೊಳ್ಳುತ್ತದೆ ಎನ್ನುವುದರ ಮೇಲೆ ಒಂದು ದೇಶ ಎಷ್ಟು ಮಹಾನ್ ಎಂದು ಅಳೆಯಬಹುದು ಎನ್ನುವುದಾದರೆ ಇದು ಅಂಥ ದೇಶವಲ್ಲ. ಈ ನೆಲ ಅತಿ ದುರ್ಬಲನನ್ನು, ಬಡವನನ್ನು ಸಮಾನ ಗೌರವದಿಂದ ನಡೆಸಿಕೊಳ್ಳುತ್ತಿಲ್ಲ. ದೇಶದ 25% ಜಿಡಿಪಿ 100 ಕುಟುಂಬಗಳ ಪಾಲಾಗಿದೆ. 33% ಜನ ಹಸಿವಿನ ರೇಖೆಯ ಕೆಳಗೆ ಬದುಕುತ್ತಿದ್ದಾರೆ. ಅರ್ಧಕ್ಕರ್ಧ ಜನ ದಿನಕ್ಕೆ 30ರೂ ಆದಾಯದಲ್ಲಿ ಬದುಕುತ್ತಿದ್ದಾರೆ. ಅವಕಾಶ ಹುಡುಕುತ್ತ ನಿತ್ಯ ವಲಸೆ ಹೋಗುವ, ವಲಸೆಯ ಜಾಗದಲ್ಲಿ ನಾನಾ ಸಮಸ್ಯೆಗೆ ಸಿಲುಕುವ ಕೋಟ್ಯಂತರ ಜನ ಇದ್ದಾರೆ. ವ್ಯವಸ್ಥೆಯ ಹಿಂಸೆ ಏನೂ ಕಡಿಮೆಯಿಲ್ಲ.

ಈ ಹಿಂಸೆ, ಅಸಮಾನತೆ, ಶೋಷಣೆಗಳ ಬೆನ್ನುಹುರಿಯಿಂದಲೇ ವರ್ಗರಹಿತ ಸಮಾಜದ ಕನಸು ಹೊತ್ತ, ಸಮಾನ ಅವಕಾಶಗಳನ್ನು ಕೇಳುತ್ತ ಜನಸಂಘಟನೆಯಲ್ಲಿ ತೊಡಗಿರುವ ಗುಂಪಿನ ಬಗ್ಗೆ ಇರುವ ಜನಾಭಿಪ್ರಾಯ, ಸರ್ಕಾರ ಹಾಗೂ ಮಾಧ್ಯಮಗಳು ತಳೆದಿರುವ ನಿಲುವು ಮಾನವ ಘನತೆಯದಲ್ಲ. ತಮ್ಮಿಡೀ ಜೀವನವನ್ನೇ ಸಮುದಾಯಕ್ಕಾಗಿ ಮುಡಿಪಿಡಲು ಸಿದ್ಧವಿರುವ ನೂರ್ ಮತ್ತವರಂತಹ ಎಷ್ಟೋ ಜೀವಗಳನ್ನು ವ್ಯವಸ್ಥೆ ನಡೆಸಿಕೊಳ್ಳುತ್ತಿರುವ ರೀತಿ ಪ್ರಜಾಪ್ರಭುತ್ವ ವ್ಯವಸ್ಥೆಯ ವ್ಯಂಗ್ಯವೋ ಎಂಬಂತೆ ಭಾಸವಾಗುತ್ತದೆ. ಪುರಾಣದಲ್ಲಿ ರಾಕ್ಷಸರನ್ನು ಸೃಷ್ಟಿಸಿದ್ದಂತೆ ವ್ಯವಸ್ಥೆಯ ವಿರುದ್ಧ ಮಾತನಾಡುವವರನ್ನು ನಕ್ಸಲ್ ಎಂಬ ಹಣೆಪಟ್ಟಿಯಲ್ಲಿ ಗುರುತಿಸಲಾಗುತ್ತಿದೆ. ಸಾಮಾನ್ಯ ಜನತೆಯಿಂದ, ರೈತರಿಂದ, ಆದಿವಾಸಿಗಳಿಂದ ಬೇರ್ಪಡಿಸಲಾರದಷ್ಟು ಸಮುದಾಯದೊಂದಿಗೆ ಸಮುದಾಯವೇ ಆಗಿ ಮಿಳಿತಗೊಂಡಿರುವ ಮಾವೋವಾದಿಗಳು ಪ್ರಭುತ್ವದ ಆಂತರಿಕ ಭದ್ರತೆಗೆ ಸವಾಲಾಗಿರುವ ದೇಶದ್ರೋಹಿಗಳಂತೆ ಬಿಂಬಿಸಲ್ಪಟ್ಟಿದ್ದಾರೆ. ದನಿಯೆತ್ತುವವರನ್ನು ಅಡಗಿಸಲು ಹಲವು ಕಾನೂನುಗಳು ಬಂದಿವೆ. ತಕ್ಷಣದ ಬದಲಾವಣೆಗೆ ತುಡಿಯುವ, ಬದುಕು–ಪ್ರಾಣ ತ್ಯಾಗ ಮಾಡಲೂ ಸಿದ್ಧವಿರುವ ಕಮಿಟೆಡ್ ಮನಸ್ಸುಗಳು ಅಪರಾಧಿ ಸ್ಥಾನದಲ್ಲಿ ಭೂಗತರಾಗಿ ಬದುಕಬೇಕಿದೆ.

ಮಾವೋವಾದಿಗಳಾದರೂ ಏಕೆ ಆ ಹಾದಿ ತುಳಿದರು ಎಂದು ಯೋಚಿಸುವುದೂ ಅಗತ್ಯವಾಗಿದೆ.

'ಸ್ವತಂತ್ರ ಬಂತು ಅಂತ ಸುದ್ದಿ ಬಂತು
ಸ್ವರಾಜ್ಯನೂ ಬಂತು ಅಂದ್ರಪಾ
ಐವತ್ತರವತ್ ವರ್ಷ ಕೆಳಗೇ
ಕೆಂಪುಕೋಟೆ ಕಡಿಂದ ಆಜಾದಿ ಬಂತು ಅಂದ್ರು
ಆದ್ರೆ ಬಂದಿದ್ದು ಅದೆಲ್ಲಿ ಕಳೆದ್ಹೋಯ್ತು? ಗೊತ್ತೇ ಆಗ್ಲಿಲ್ಲ
ದಪ್ಪದಪ್ಪನ ದಪ್ತರದಾಗೆ ಹುಡುಕಿದ್ವಿ
ಪೊಲೀಸ್ ಠಾಣ್ಯಾಗೆ ನೋಡಿದ್ವಿ
ಹುಡುಕೇ ಹುಡುಕಿದ್ವಿ
ಎಲ್ಲೂ ಸಿಗಲಿಲ್ಲ
ಇಲ್ಲೀವರ್‍ಗೂ ನೋಡಿಲ್ಲ ಆ ಆಜಾದಿ ಅಂದ್ರೆ
ಹೆಂಗಿದೆ ಅಂತ
ಬೆಳ್ಳಗಿದೆಯೋ ಕರ್‍ರಗೋ
ದೊಡ್ಡಕಿದೆಯೋ ಸಣ್ಣಕೋ
ಓ ತಮ್ಮಾ, ನಿನಗೇನರೆ ಸಿಕ್ರೆ
ನಮ್ಮೂರ್‍ಗೂ ಸ್ವಲ್ಪ ಕರಕೊಂಡ್ ಬಾರಲಾ
ಒಂದ್ಸಲನಾದ್ರೂ ನೋಡೇ ಬಿಡಣ ಅದ ಏನದು
ಅಂತ..'

'ದಂಡಕಾರಣ್ಯ ಪ್ರದೇಶದ ಮೊದಲ ಹುತಾತ್ಮ' ಎಂದು ಪೆದ್ದಿ ಶಂಕರ್ ಕುರಿತು ಈ ಪುಸ್ತಕದಲ್ಲಿ ಉಲ್ಲೇಖವಿದೆ. 18 ವರ್ಷಕ್ಕೆ ಮರಣಿಸಿದ ಶಂಕರ್ ಊರು ಮಹಾರಾಷ್ಟ್ರದ ಗಡಚಿರೋಲಿ. ಮೇಲಿನ ಕವಿತೆ ಅಲ್ಲಿಯ ಅಜ್ಞಾತ ಕವಿಯೊಬ್ಬನದು. ಇಂಥ ಹಾಡು

ಹುಟ್ಟಲು ಕಾರಣವಾದ ಪರಿಸ್ಥಿತಿಯೇ ಪೆದ್ದಿ ಶಂಕರ್ ಹುಟ್ಟಲೂ ಕಾರಣವಾಯಿತು. ಬಂದರೂ ಬಾರದ ಆಜಾದಿ, ಬಂದು ಕಳೆದುಹೋದ ಆಜಾದಿಯನ್ನು ಹುಡುಕುತ್ತ ಶಂಕರ್, ಸಾಕೇತ್, ಶ್ರೀಧರ್ ಮತ್ತವರಂಥ ಎಷ್ಟೆಷ್ಟೋ ಅರಿವಿನೆಚ್ಚರದ ಮನಸ್ಸುಗಳು ತಮ್ಮ ಬದುಕಿನ ಸಣ್ಣಪುಟ್ಟ ಕಂಫರ್ಟ್‌ಗಳನ್ನೂ, ಕುಟುಂಬ–ಕಾಯಿಲೆ–ಅಪಾಯಗಳನ್ನೂ ಲೆಕ್ಕಿಸದೇ ಗುಡ್ಡ, ಕಾಡು, ಕಣಿವೆಗಳಲ್ಲಿ ಅಲೆದಾಡಿವೆ. ಶೋಷಿತನ ಪುಟ್ಟ ಅಹವಾಲನ್ನೂ ಕೇಳಿಸಿಕೊಳ್ಳದ ವ್ಯವಸ್ಥೆಯ ವಿರುದ್ಧ ವ್ಯವಸ್ಥೆಯ ಸ್ವರೂಪಕ್ಕೆ ತಕ್ಕಂತಹ ಹೋರಾಟ ಕಟ್ಟಬೇಕೆಂದು ಹಲವು ತೆರನ ಪ್ರತಿಭಟನಾ ಮಾದರಿಗಳನ್ನು ಪ್ರಯೋಗಿಸಿವೆ. ಈ ನೆಲದ ಶೋಷಿತರ ಆಕ್ರೋಶವನ್ನೇ ಗಮನ ಸೆಳೆವ ಪ್ರಜಾ ಹೋರಾಟವಾಗಿ ರೂಪಿಸುವಲ್ಲಿ ಮಾವೋವಾದಿಗಳ ಕೊಡುಗೆ ಗಮನಾರ್ಹವಾಗಿದೆ. ನಕ್ಸಲರಿದ್ದಾರೆ ಎಂದ ಕೂಡಲೇ ಸರ್ಕಾರದ ಗಮನ ಆ ಪ್ರದೇಶದತ್ತ ಹರಿಯುತ್ತದೆ. ಅಲ್ಲಿನ ಸಮಸ್ಯೆಗಳ ಕುರಿತು ಗಮನ ಹರಿಯುತ್ತದೆ. ವಿಶೇಷ ಪ್ಯಾಕೇಜ್, ಅಭಿವೃದ್ಧಿ ಯೋಜನೆಗಳ ಘೋಷಣೆಯಾಗುತ್ತದೆ. ಭೂಮಿಗಾಗಿನ ಹೋರಾಟಗಳು ಭೂಸುಧಾರಣಾ ಕಾನೂನು ಜಾರಿಯಾಗುವಲ್ಲಿ ಪ್ರಮುಖ ಪಾತ್ರ ವಹಿಸಿವೆ.

ಎಂದೇ ಮಾವೋವಾದಿಗಳ ಕುರಿತ ಅಪಪ್ರಚಾರ, ತಪ್ಪುಗ್ರಹಿಕೆಗಳು ಶೋಷಿತನಿಗೂ, ಪ್ರಭುತ್ವಕ್ಕೂ, ಚಳುವಳಿಗೂ ಒಳ್ಳೆಯದಲ್ಲ.

ಎಂದೇ ಮಾವೋವಾದಿಗಳಲ್ಲದವರೂ ಅದರ ಕುರಿತು ಮಾತನಾಡಬೇಕಾಗಿದೆ, ಮಾವೋವಾದಿಗಳೂ ಆ ಮಾತು ಕೇಳಿಸಿಕೊಳ್ಳಬೇಕಾಗಿದೆ.

* * *

ಈ ಪುಸ್ತಕದ ಮೂಲಕ ಮಾವೋ ಚಳವಳಿಯ ವಿಮರ್ಶೆ ಚಳವಳಿಕಾರನಿಂದಲೇ ಬಂದಿದೆ. ಎಂದೇ ಕನ್ನಡ ಸಾರಸ್ವತ ಲೋಕದಲ್ಲಿ ಈ ಹೊತ್ತಗೆಗೆ ಬೇರೆಯೇ ಸ್ಥಾನವಿದೆ. ಸಾಹಿತ್ಯ ಕೃತಿಯೊಂದನ್ನು ನೋಡುವಂತೆ ಈ ಪುಸ್ತಕವನ್ನು ಓದಲು ಸಾಧ್ಯವಿಲ್ಲ, ಇದನ್ನು ಪುಸ್ತಕವೂ ಬಯಸುವುದಿಲ್ಲ. ಬರಹಗಾರನ ಉದ್ದೇಶವೂ ಸಾಹಿತ್ಯಿಕ ವಿಮರ್ಶೆಗೊಳಪಡುವುದಲ್ಲ. ಓದುಗರನ್ನು ನಿಮ್ಮ ಅಭಿಪ್ರಾಯವೇನು ಎಂದು ಹಕ್ಕೊತ್ತಾಯದಿಂದ ಪ್ರಶ್ನಿಸುವ ದನಿ, ಮುಂದಿನ ದಾರಿ ಕ್ರಮಿಸಲು ಕೈಜೋಡಿಸುವಂತೆ ಕೇಳುತ್ತದೆ. ಬರೆದವನಲ್ಲಿ ಇರುವ ಹೋರಾಟದ ಕೆಚ್ಚು, ಸಿಟ್ಟು, ವ್ಯವಸ್ಥೆ ಕುರಿತ ಅಸಹನೆ ಪುಟಪುಟದಲ್ಲಿ ಮೈಗೆ ತಗಲುತ್ತದೆ. ಚುನಾವಣೆ, ಕಾನೂನುಬದ್ಧ ಹೋರಾಟ, ಸಂಸದೀಯ ರಾಜಕಾರಣಗಳು ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ವಿಫಲವಾಗಿರುವುದರಿಂದ ಪರ್ಯಾಯ ಹೋರಾಟದ ಅವಶ್ಯಕತೆಯ ಬಗೆಗೆ ಗಮನ ಸೆಳೆಯುತ್ತದೆ. ಹೋರಾಟಗಾರ ಚೇತನವೊಂದರ ಕೊನೆಯಿಲ್ಲದ ಉತ್ಸಾಹ ಪುಸ್ತಕದ ತುಂಬ ವಿದ್ಯುತ್ತಿನಂತೆ ಪ್ರವಹಿಸುವುದು ಅರಿವಿಗೆ ಬರುತ್ತದೆ.

ಡಾ॥ ಎಚ್. ಎಸ್. ಅನುಪಮಾ



13

ಎಲ್ಲ ಚಳವಳಿ ಹೋರಾಟಗಳೂ ಮನುಷ್ಯ ಬದುಕಿನ ಕನಿಷ್ಠ ನೆಮ್ಮದಿ-ಭದ್ರತೆ-ಘನತೆಗಳನ್ನು ಗಳಿಸುವ ಸಲುವಾಗಿಯೇ ರೂಪುಗೊಂಡಿವೆ ಎನ್ನುವುದಾದರೆ ಸಾಮಾನ್ಯ ಮನುಷ್ಯ ನೆಮ್ಮದಿಯ ಬದುಕನ್ನು ಬಯಸುವವನೇ ಹೊರತು ಹುತಾತ್ಮನಾಗಬಯಸುವುದಿಲ್ಲ. ಹುತಾತ್ಮತೆಯನ್ನು ವೈಭವೀಕರಣ ಮಾಡುವುದು ಹಿಂಸೆಯ ಸಮರ್ಥನೆಯೇ. ಯಾವುದೇ ತಾತ್ವಿಕತೆ ಇರಲಿ, ಹಿಂಸೆ ಒಳಬಂದರೆ ಅದರ ದೂರದೃಷ್ಟಿ, ಸೌಂದರ್ಯ, ವ್ಯಾಲಿಡಿಟಿ, ಇಮ್ಯಾಜಿನೇಷನ್ ಎಲ್ಲ ಮಬ್ಬುಮಬ್ಬಾಗುತ್ತದೆ. ಮಾವೋವಾದದ ದೊಡ್ಡ ಮಿತಿ ಇದೇ.

ಜನಪರ ಮಾವೋವಾದಿ ಚಳವಳಿಯ ವಿಮರ್ಶಾತ್ಮಕ ಒಳನೋಟ ಎಂದು ಪುಸ್ತಕದ ಮುಖಪುಟದ ಸಬ್‌ಟೈಟಲ್ಲೇ ಘೋಷಿಸುತ್ತದೆ. ಆದರೆ 60 ವರ್ಷಗಳಲ್ಲಿ 4 ಸಲ ರಿವೈವ್ ಆದ ಮಾವೋವಾದ ಕುರಿತ ಮುಕ್ತ ವಿಮರ್ಶೆ ಶ್ರೀಧರ್‌ಗೆ ಸಾಧ್ಯವಾಗಿಲ್ಲವೆಂದೇ ತೋರುತ್ತದೆ. ಉಳಿದ ಎಡಪಕ್ಷಗಳು ಪ್ರಭುತ್ವದ ಬಾಲ ಹಿಡಿದಿವೆಯೆಂದು ವಿಮರ್ಶೆಯ ಮಾತುಗಳನ್ನು ಹೇಳಿದರೂ ತಾನು ತುಳಿದ ದಾರಿಯ ಕುರಿತು ವಿಮರ್ಶೆ ತುಂಬ ಕಡಿಮೆಯಿದೆ. ತೋರು ಬೆರಳನ್ನು ನಮ್ಮ ಕಡೆಗೇ ತಿರುಗಿಸಿಕೊಳ್ಳುವುದು ಕಷ್ಟವೇ ಆಗಿದೆ.

ಪುಸ್ತಕದ ಮೊದಲರ್ಧ ಕಮ್ಯುನಿಸ್ಟ್ ಇತಿಹಾಸವನ್ನೊಳಗೊಂಡ ರಾಜ್ಯಶಾಸ್ತ್ರದ ಪಠ್ಯದಂತೆ ಭಾಸವಾಗುತ್ತದೆ. ಭಾರತದ ಕಮ್ಯುನಿಸ್ಟರ ಬಗೆಗೆ, ಕಮ್ಯುನಿಸಮ್ಮಿನ ವಿವಿಧ ಧಾರೆಗಳ ಬಗೆಗೆ, ಬೇರೆಬೇರೆ ದೇಶಗಳಲ್ಲಿ ನಡೆದ ಕ್ರಾಂತಿಗಳು, ಅದರ ನಾಯಕರ ಬಗೆಗೆ ಸಂಕ್ಷಿಪ್ತವಾಗಿ ಪುಸ್ತಕ ತಿಳಿಸುತ್ತದೆ. ಎಡಪಂಥದ ಭಿನ್ನ ಧಾರೆಗಳ ಉಗಮದ ಕಾರಣ, ಬೆಳವಣಿಗೆ, ಒಡೆಯುವಿಕೆ, ವಿಫಲಗೊಳ್ಳುವಿಕೆಯ ಬಗೆಗೆ ಐತಿಹಾಸಿಕ ಮಾಹಿತಿ ನೀಡುತ್ತ ಹೋಗುತ್ತದೆ. ಜೊತೆಗೇ ಅಂತರರಾಷ್ಟ್ರೀಯ ಸಂಬಂಧ ಭಾರತದ ಎಡಪಕ್ಷಗಳು ಎಡಬಿಡಂಗಿ ನಿಲುವು ತೆಗೆದುಕೊಳ್ಳಲು ಕಾರಣವಾಗಿದ್ದನ್ನೂ, ಮುಖ್ಯವಾಹಿನಿ ಎಡಪಕ್ಷಗಳ ನಾಯಕತ್ವದ ಮೃದು ಧೋರಣೆಗಳನ್ನೂ, ರಾಜಿಕೋರತನವನ್ನೂ ಕಟುವಾಗಿ ಪ್ರಶ್ನಿಸುತ್ತದೆ. ಸಂಸದೀಯ ರಾಡಿಯಲ್ಲಿ ಮುಳುಮುಳುಗೇಳುತ್ತಿರುವ ಎಡ ಪಕ್ಷಗಳಲ್ಲಿ ಕೆಂಪು ಬಣ್ಣ ಕಳೆದುಹೋಗಿದೆ ಎಂದು ಕಟಕಿಯಾಡುತ್ತದೆ. ಮುಖ್ಯವಾಹಿನಿಯಲ್ಲಿರುವ ಎಡಪಕ್ಷಗಳನ್ನು ಹಿಗ್ಗಾಮುಗ್ಗಾ ವಿಮರ್ಶೆಗೆ ಒಳಪಡಿಸಿದ ಲೇಖಕರ ಒಲವೆಲ್ಲ ಮಾವೋವಾದದ ಸುತ್ತ ಸುಳಿಯುತ್ತದೆ.

ಜನತಾ ಯಾರು, ಶತ್ರು ಯಾರೆಂಬ ಬಗ್ಗೆ; ನಗರ ಕೇಂದ್ರಿತ ಶತ್ರುವನ್ನು ಸದೆಬಡಿಯಲು ಹಳ್ಳಿಗಳನ್ನು ವಶಪಡಿಸಿಕೊಳ್ಳುವ ಬಗ್ಗೆ; ವರ್ಗ ಶತ್ರುವಿನ ನಾಶದ ಬಗ್ಗೆ; ಪ್ರಜಾರಾಜ್ಯ ಬಂದಾಗ ಶೋಷಿತ ಜನತೆ ಶೋಷಕನ ಮೇಲೆ ಸರ್ವಾಧಿಕಾರ ಚಲಾಯಿಸಬೇಕಾದ ಅಗತ್ಯದ ಬಗೆಗೆ ಇದರಲ್ಲಿರುವ ಪ್ರತಿಪಾದನೆಗಳನ್ನು ಓದುತ್ತ ಹೋದಂತೆ ಧಾರ್ಮಿಕ ಪಠ್ಯವನ್ನು ಓದುತ್ತಿಲ್ಲ ತಾನೇ ಎಂದು ಅನುಮಾನಪಡುವಂತಾಗುತ್ತದೆ. ಶತ್ರು ಯಾರೆಂಬ ವ್ಯಾಖ್ಯಾನ ದಿಗಿಲು ಹುಟ್ಟಿಸುವಂತಿದೆ.

ಈ ವಿಲಕ್ಷಣ ವ್ಯವಸ್ಥೆಯೇ ಶತ್ರು. ಅದು ಬಡಪೆಟ್ಟಿಗೆ ಸಿಕ್ಕಿಬೀಳುವುದಿಲ್ಲ. ಜನತೆಯೂ, ನಾವೂ ವ್ಯವಸ್ಥೆಯ ಭಾಗವೇ ಆಗಿರುವಾಗ ವ್ಯವಸ್ಥೆಯ ನಾಶಕ್ಕೆ ಬೀಳುವ ಕೊಡಲಿ ಪೆಟ್ಟು ನಮ್ಮ ಕಾಲಮೇಲೂ ಬೀಳುತ್ತದೆ. ನಡಿಗೆಯನ್ನು ಸಾವಧಾನಗೊಳಿಸುತ್ತದೆ. ಶೋಷಿತ-ಶೋಷಕ ಸ್ಥಾನಗಳನ್ನು ಕೆಲದಿನಗಳಲ್ಲೇ ಅದಲುಬದಲಾಗಿಸಬಲ್ಲ ಆಳುವ ವ್ಯವಸ್ಥೆ ಚಾಲ್ತಿಯಲ್ಲಿದೆ. ಕಾರಣ ನಮೂದಿಸಲು ವ್ಯಾಖ್ಯಾನಕ್ಕೇ ಸಿಗದ ಸಾಮಾಜಿಕ ಸಂರಚನೆಯ ತೊಡಕುಗಳಿವೆ. ಹಳ್ಳಿಗಳು ಮೊದಲಿನ ಹಳ್ಳಿಗಳಾಗಿಲ್ಲ. ನಗರದ ಜನಸಂಖ್ಯೆ ದಿನದಿನಾ ಬೆಳೆಯುತ್ತಿದೆ. ಆದರೆ ಬದಲಾದ ಕಾಲಕ್ಕೆ ತಕ್ಕಂತೆ ಮಾವೋವಾದ ಬದಲಾಗಿದೆಯೆ? ಮಾರ್ಕ್ಸ್‌ವಾದವನ್ನು ಲೆನಿನ್ ರಷಿಯಾದ ಅಗತ್ಯಗಳಿಗೆ ತಕ್ಕ ಕ್ರಿಯಾತತ್ವವಾಗಿಸಿದಂತೆ; ಚೀನಾದ ರೈತಾಪಿ ಅಗತ್ಯಗಳಿಗೆ ತಕ್ಕಂತೆ ಮಹಾಯುದ್ಧ ಕಾಲದಲ್ಲಿ ಮಾವೋ ರೂಪಾಂತರಗೊಳಿಸಿದಂತೆ, ಬದಲಾದ ಕಾಲಕ್ಕೆ ತಕ್ಕಂತೆ ಭಾರತದ ಮಾವೋವಾದವೂ ಬದಲಾಗಬೇಡವೆ? ಚಳವಳಿಕಾರ ಶ್ರೀಧರ್‌ರ ಪ್ರಮೇಯಗಳು ಸುಳಿಸುಳಿದು ಮತ್ತೆ ಸಶಸ್ತ್ರ ಕ್ರಾಂತಿಯ ಬಳಿಯೇ ನಿಲ್ಲುತ್ತವೆ.

ಈ ಕಾರಣಕ್ಕೇ ಮಾವೋವಾದ ನನ್ನೊಳಗೆ ಎಂದೆಂದೂ ಪ್ರಶ್ನೆಯಾಗೇ ಉಳಿದ ಐಡಿಯಾಲಜಿ. ಎಡಪಂಥೀಯ ಸಂಗಾತಿಗಳೊಡನೆ ಒಡನಾಡುವಾಗಲೂ, ಇಂಥ ಪುಸ್ತಕ ಓದಿದ ಮೇಲೂ ಸಂಕಟಕ್ಕೆ ಪೂರ್ತಿ ಸಮಾಧಾನ ಸಿಗುವುದಿಲ್ಲ. ಈ ಪುಸ್ತಕದ ಮುಖಪುಟದಲ್ಲಿ ಕುಳಿತ ಎಳೆಯ ಹುಡುಗ-ಆದಿವಾಸಿ ಪೋರನಂತೆಯೇ ಕಾಣುತ್ತಾನೆ- ಅವನ ಹೆಗಲಿಗೆ ಕೊಟ್ಟ ಬಂದೂಕು ಭಾರವಾಗಿ ಕಾಣುತ್ತದೆ. ಬಂದೂಕಿಲ್ಲದೆ ಅವನಿಗೆ ಪುಸ್ತಕ ಕೊಡಲು ಸಾಧ್ಯವಾಗುವುದಿಲ್ಲವೆ ಎಂಬ ಕಸಿವಿಸಿ ಹುಟ್ಟುತ್ತದೆ. ಜೊತೆಗೇ ಈ ಚಳವಳಿ ಸೆಳೆದುಕೊಳ್ಳುವ ಬುಡಕಟ್ಟು ಹೆಣ್ಣುಗಳ ಬಗೆಗೆ ಹಾಗೂ ಅವರನ್ನು ನಡೆಸಿಕೊಳ್ಳುತ್ತಿರುವ ಬಗೆಗೆ ಸ್ಪಷ್ಟಪಡಿಸಿಕೊಳ್ಳಬೇಕಾದ ಪ್ರಶ್ನೆಗಳು ಹುಟ್ಟುತ್ತವೆ.

ಬಹುಶಃ ನಾವು ಆಯ್ಕೆ ಮಾಡಿಕೊಳ್ಳುವ ಬದುಕೇ ನಮ್ಮ ರಾಜಕೀಯ ಒಲವುಗಳನ್ನೂ ನಿರ್ಧರಿಸುತ್ತದೆ ಎನ್ನುವುದಾದರೆ ಹುತಾತ್ಮನಾಗಹೊರಟ ಮನಸಿನ ಆದ್ಯತೆ, ದಾರಿ, ಮಾತುಗಳು ಬೇರೆಯೇ ಆಗಿರುತ್ತವೆ. ನಕ್ಸಲ್ಬರಿ ಸೇರಿದಂತೆ ಹತ್ತು ಹಲವು ಹೋರಾಟಗಳ ಬಗೆಗೆ ಬರೆಯುತ್ತಾ ಸಶಸ್ತ್ರ ಹೋರಾಟ ಮಾರ್ಗದ ಸಫಲತೆಯನ್ನು ಉತ್ಪ್ರೇಕ್ಷಿಸಲಾಗಿದೆ. ಆದರೆ ಸಶಸ್ತ್ರ ಹೋರಾಟಕ್ಕೆ ತಗಲುವ ಸಮಯ, ಹಣ, ಪ್ರಾಣ, ಶ್ರಮವನ್ನು ರಾಜಕೀಯ ಹೋರಾಟಕ್ಕೆ ಬಳಸಿಕೊಳ್ಳುವುದು ಸಾಧ್ಯವಿಲ್ಲವೆ? ದುಡಿಯುವ ಕೈಗಳಿಗೆ ಬಂದೂಕು ಕೊಡುವುದಷ್ಟೇ ವಿಮೋಚನೆಯೇ? ಶೋಷಣೆಯ ಅರಿವು ಮೂಡಿಸುವಂತಹ ಸಂಘಟನೆ ಕ್ರಾಂತಿಯೆನಿಸುವುದಿಲ್ಲವೆ? ಎಂಬ ಕುರಿತು ಸಣ್ಣ ಟಿಪ್ಪಣಿ ಎಲ್ಲೂ ಕಾಣಿಸುವುದಿಲ್ಲ.

ಪ್ರಿಯ ಶ್ರೀಧರ್, ಕ್ರಾಂತಿಗೆ ಇಷ್ಟು ರಿಜಿಡ್ ವ್ಯಾಖ್ಯಾನವೆ? ನಕ್ಸಲ್ಬರಿ ಕ್ರಾಂತಿಯಾಗಿ ಕಾಣುವಾಗ ಭೂಸುಧಾರಣೆ ಕಾನೂನು ಬಂದು 1,54,000 ಎಕರೆ ಭೂಮಿಗೆ

ಉಳುವವನೇ ಒಡೆಯನಾಗಿದ್ದು; ಭೂದಾನ ಚಳವಳಿಯಲ್ಲಿ ವ್ಯಕ್ತಿಯೊಬ್ಬ ಸಾವಿರಾರು ಎಕರೆ ಭೂಮಿ ಹಂಚಿಸುವಲ್ಲಿ ಸಫಲನಾಗಿದ್ದು; ಬ್ಯಾಂಕ್ ರಾಷ್ಟ್ರೀಕರಣಗೊಂಡಿದ್ದು; ಲ್ಯಾಂಡ್‌ಸೀಲಿಂಗ್ ಕಾನೂನಿನಲ್ಲಿ ಎಷ್ಟೆಷ್ಟೋ ದೇಶಮುಖ, ದೇಶಪಾಂಡೆ, ಇನಾಂದಾರ್‌ಗಳು ಸಾಮಾನ್ಯ ರೈತರಾಗಿದ್ದು; ಮುಟ್ಟಿಸಿಕೊಳ್ಳಬಾರದವರಿಗೆ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಮೀಸಲಾತಿ ಬಂದಿದ್ದು -ಇವು ಯಾವುವೂ ಕ್ರಾಂತಿಯೆನಿಸುವುದಿಲ್ಲವೆ? ಅವುಗಳಲ್ಲಿರುವ ಲೋಪದೋಷಗಳ ನಡುವೆಯೇ ಶಾಂತ ಬದಲಾವಣೆ ಸಾಧ್ಯವಾಯಿತಲ್ಲ?

ಸಾಂಸ್ಕೃತಿಕ ಅಂಗ, ವಿದ್ಯಾರ್ಥಿ-ಕಾರ್ಮಿಕ ಚಳವಳಿ, ರಾಜಕೀಯ ಹೋರಾಟದ ಮಾರ್ಗಗಳ ಜೊತೆಗೆ ಮಾವೋವಾದಿಗಳ ಸಶಸ್ತ್ರ ಗುಂಪು ಕ್ರಾಂತಿಯ ಕನಸನ್ನು ಅತಿ ಹೆಚ್ಚು ಜೀವಂತವಿರಿಸಿಕೊಂಡಿದೆ, ಹೌದು. ಆದರೆ ಅದಕ್ಕೆ ತೆರಬೇಕಾದ ಬೆಲೆ? 2005-2006 ಕೇವಲ ಒಂದು ವರ್ಷದಲ್ಲಿ 628 ಕಾಮ್ರೇಡ್‌ಗಳನ್ನು-ಸಾಕೇತ್ ರಾಜನ್ ಅವರನ್ನೂ ಸೇರಿಸಿ-ಚಳವಳಿ ಕಳೆದುಕೊಂಡಿದೆ. ಅವರೆಲ್ಲ ಸಮಾಜದ ಕೆನೆಪದರದವರು. ಇದು ಒಂದು ತೆರನ ನಷ್ಟ. ಅಬುಜ್ಮಾರ್ ಇರಬಹುದು, ದಂಡಕಾರಣ್ಯ ಇರಬಹುದು- ಮಾವೋವಾದಿಗಳು ಕ್ರಿಯಾಶೀಲರಾಗಿರುವಲ್ಲಿ ಎಸ್‌ಇಝಡ್‌ಗಳು ಬಂದಿಲ್ಲ ಎನ್ನುವುದು ನಿಜ. ಆದರೆ ಅವರಿಗೆ ಬದಲಾಗಿ ಪೊಲೀಸ್, ಅರೆಸೇನಾಪಡೆ, ಸೈನ್ಯ ಅಲ್ಲಿ ಬೀಡುಬಿಟ್ಟಿವೆ. ಬುಡಕಟ್ಟುಗಳ ಬದುಕು ಬಂದೂಕುಗಳ ನಡುವಿನ ಸ್ವರ್ಗವಾಗಿದೆ. ಇದಕ್ಕೆ ಕೊನೆ ಎಂದು? ಈ ಕುರಿತ ವಸ್ತುನಿಷ್ಠ ವಿಮರ್ಶೆ ಪುಸ್ತಕದಲ್ಲಿ ಕಂಡುಬರುವುದಿಲ್ಲ.

ಎಲ್ಲ ಚಳವಳಿ ಹೋರಾಟಗಳೂ ಮನುಷ್ಯ ಬದುಕಿನ ಕನಿಷ್ಠ ನೆಮ್ಮದಿ-ಭದ್ರತೆ-ಘನತೆಗಳನ್ನು ಗಳಿಸುವ ಸಲುವಾಗಿಯೇ ರೂಪುಗೊಂಡಿವೆ ಎನ್ನುವುದಾದರೆ ಸಾಮಾನ್ಯ

ಮನುಷ್ಯ ನೆಮ್ಮದಿಯ ಬದುಕನ್ನು ಬಯಸುವವನೇ ಹೊರತು ಹುತಾತ್ಮನಾಗಬಯಸುವುದಿಲ್ಲ. ಹುತಾತ್ಮತೆಯನ್ನು ವೈಭವೀಕರಣ ಮಾಡುವುದು ಹಿಂಸೆಯ ಸಮರ್ಥನೆಯೇ. ಯಾವುದೇ ತಾತ್ವಿಕತೆ ಇರಲಿ, ಹಿಂಸೆ ಒಳಬಂದರೆ ಅದರ ದೂರದೃಷ್ಟಿ, ಸೌಂದರ್ಯ, ವ್ಯಾಲಿಡಿಟಿ, ಇಮ್ಯಾಜಿನೇಷನ್ ಎಲ್ಲ ಮಬ್ಬುಮಬ್ಬಾಗುತ್ತದೆ. ಮಾವೋವಾದದ ದೊಡ್ಡ ಮಿತಿ ಇದೇ. ಯಾವ ಸಶಸ್ತ್ರ ಹೋರಾಟವನ್ನು ಚಳವಳಿಯ ತಾತ್ವಿಕತೆ ಮಾಡಿಕೊಂಡಿದೆಯೆಂದು ಶ್ರೀಧರ್ ಮಾವೋವಾದವನ್ನು ಬೆಂಬಲಿಸುತ್ತಾರೋ ಅಂಥ ಹೋರಾಟದ ಕಾರಣದಿಂದಲೇ ಸಾವಿರಾರು ಜನ ಅವರ ಬೆಂಬಲಕ್ಕೆ ನಿಲ್ಲುತ್ತಿಲ್ಲವೆಂದೂ; ಮಾವೋವಾದಿ ಹೋರಾಟ ಸಮೂಹ ಹೋರಾಟವಾಗದೇ ಇರಲು ಅದೇ ಕಾರಣವಾಗಿದೆಯೆಂದೂ ಶ್ರೀಧರ್ ನಿಮಗೇಕೆ ಹೊಳೆಯುತ್ತಿಲ್ಲ?

ಈ ಪುಸ್ತಕ ಬರೆಯುವುದರ ಹಿಂದಿನ ಉದ್ದೇಶ ಶ್ರೀಧರ್ ಮತ್ತವರ ಸಂಗಾತಿಗಳು ಕಟ್ಟಬಯಸಿರುವ 'ರೆವಲ್ಯುಷನರಿ ಕಮ್ಯುನಿಸ್ಟ್ ಪಾರ್ಟಿ'ಯ ಮುಂದಿನ ಹಾದಿಯನ್ನು ಸ್ಪಷ್ಟಗೊಳಿಸಿಕೊಳ್ಳುವುದು ಹಾಗೂ ಅದಕ್ಕೆ ವಿಶಾಲ ಐಕ್ಯರಂಗವೊಂದನ್ನು ಸಿದ್ಧಗೊಳಿಸುವುದೇ ಆಗಿರಬಹುದೆಂದು ಭಾವಿಸುತ್ತೇನೆ. ಹಾಗಿದ್ದಲ್ಲಿ ಈ ಹಂತದಲ್ಲೇ ಅವರು ಕೆಲ ಪ್ರಶ್ನೆಗಳನ್ನೆದುರಿಸುವುದು ಅಗತ್ಯ. ಇವು ಕೇವಲ ನನ್ನ ಪ್ರಶ್ನೆಗಳಲ್ಲ. ಆಫ್ ದಿ ರೆಕಾರ್ಡ್ ಬಹುತೇಕ ಪ್ರಗತಿಪರ ಮನಸ್ಸುಗಳು ಆಡಿಕೊಳ್ಳುವ ಮಾತುಗಳು:

1. ಬಂಡವಾಳವಾದವು ತನ್ನ ಬಾಹುಗಳನ್ನು ಎಲ್ಲೆಲ್ಲೋ ಚಾಚಿ ಅದರ ಪರಿಣಾಮ ಊಹಿಸದಂತೆ ಎಲ್ಲ ಕಡೆ ವಿಸ್ತರಿಸಿರುವಾಗ; ಬೆಳೆಯುತ್ತಿರುವ ನಗರ ಜನಸಂಖ್ಯೆ, ನಗರ ಕೇಂದ್ರಿತ ಆರ್ಥಿಕತೆ, ಪರಿಸರದ ಸಮಸ್ಯೆಗಳು, ಕೋಮುವಾದ ಇವೆಲ್ಲವೂ ಮುಖ್ಯವಾಹಿನಿಯಲ್ಲಿ ಬೆರೆಯದೇ ಅರಣ್ಯ ಕಾರ್ಯಾಚರಣೆಯಿಂದ ಪರಿಹಾರವಾಗುವುದೆ? ಐಕ್ಯರಂಗ ಕಟ್ಟಲು ಹೊರಡುವವರು ಯಾವ ನೆಲೆಯಲ್ಲಿ ಇತರ ಸಂಘಟನೆಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬಯಸುತ್ತೀರಿ? 'ಸಂಸದೀಯ ಕೊಚ್ಚೆಯಲ್ಲಿ ಮುಳುಗೇಳುತ್ತಿರುವ' (ಇದು ನಿಮ್ಮದೇ ಮಾತು) ಸಿಪಿಐ, ಸಿಪಿಎಂಗಳಿಗಿಂತ ಉತ್ತಮ ಹಾದಿ ಯಾವುದೆಂದು ಭಾವಿಸುತ್ತೀರಿ?

2. ಈ ವ್ಯವಸ್ಥೆಯಲ್ಲಿ ಅವಕಾಶ ಇದೆ, ಆದರೆ ಅದನ್ನು ಹೋರಾಡಿ ಪಡೆಯಬೇಕಾಗಿದೆ. ಅವಕಾಶ ವಂಚಿತರಿಗೆಂದು ಸರ್ಕಾರ ನೂರಾರು ಯೋಜನೆ ರೂಪಿಸುತ್ತದೆ, ಕೋಟ್ಯಂತರ ಹಣ ಬಿಡುಗಡೆ ಮಾಡುತ್ತದೆ. ಜನರ ದುಡ್ಡು ತಲುಪಬೇಕಾದವರನ್ನು ತಲುಪದೆ ನಡುವೆ ಎಲ್ಲೆಲ್ಲೋ ಸೋರಿ ಹೋಗುತ್ತಿರುವಾಗ ಸಂವಿಧಾನದತ್ತ ಅವಕಾಶ, ಹಕ್ಕುಗಳನ್ನು ಪಡೆಯಲು ವಿಸ್ತೃತ ಹೋರಾಟ ರೂಪಿಸಬಹುದೆಂದು ನಿಮಗನಿಸುವುದಿಲ್ಲವೆ? ಇಂಥ ಹೋರಾಟಕ್ಕೆ ಶಸ್ತ್ರವಿಲ್ಲದೆ ಜನರನ್ನು ಸಿದ್ಧಗೊಳಿಸಲು ಅಸಾಧ್ಯವೇ?

3. ಲಿಬರೇಟೆಡ್ ಜೋನ್‌ಗಳನ್ನು ಸೃಷ್ಟಿಸಬೇಕೆಂಬ ಕನಸಿದೆ ನಿಮಗೆ. ಪ್ರಸ್ತುತ ವ್ಯವಸ್ಥೆಯನ್ನು ನಿರಾಕರಿಸುವಿರಾದರೆ ಅಲ್ಲಿ ತರಬಯಸುವ ಅಭಿವೃದ್ಧಿ ಮಾಡೆಲ್ ಯಾವುದು? ಎಂಎನ್‌ಸಿಗಳು ಬರುವುದು ಬೇಡ. ನಾಗರಿಕ ಜಗತ್ತು ಅನುಭವಿಸುತ್ತಿರುವ ರಸ್ತೆ-ಶಾಲೆ-ಆಸ್ಪತ್ರೆ-ವಿದ್ಯುತ್-ಸಂಪರ್ಕದಂತಹ ಕನಿಷ್ಠ ಸೌಲಭ್ಯಗಳೂ ಅವರಿಗೆ ಬೇಡವೇ?

4. ಜಾತಿ ಆಧಾರಿತ, ಲಿಂಗಾಧಾರಿತ ಶೋಷಣೆ ಇರುವ ಈ ನೆಲದಲ್ಲಿ ಯಾವ ನೆಲೆಯ ಹೋರಾಟ ಕಟ್ಟಬಯಸುತ್ತೀರಿ? ಜಾತಿ ಆಧಾರಿತ ಶೋಷಣೆ ಹೊಸಹೊಸ ಹತಾರಗಳೊಂದಿಗೆ ಅನಾವರಣಗೊಳ್ಳುತ್ತಿರುವಾಗ ಜಾತಿ ಕೊಡಮಾಡುವ ಡಿಸ್‌ಎಬಿಲಿಟಿಗಳನ್ನು ಮೀರಲು; ಜಾತ್ಯತೀತ ಹೋರಾಟ ರೂಪಿಸಲು ಯಾವ ವಿಧಾನ ಅನುಸರಿಸಬಯಸುತ್ತೀರಿ?

5. ದೇಶದ ಎಲ್ಲ ಕ್ರಾಂತಿಕಾರಿಗಳು-ಈಶಾನ್ಯ ರಾಜ್ಯದ ಹೋರಾಟ, ಕಾಶ್ಮೀರಿ ಹೋರಾಟ, ಭಾಷಾ-ಪ್ರಾಂತ್ಯ ಹೋರಾಟಗಳನ್ನೆಲ್ಲ ಒಗ್ಗೂಡಿಸಿ ಕ್ರಾಂತಿಯಾಗಲೆಂಬ ಕನಸು ಬಿತ್ತುತ್ತೀರಿ. ಕೇವಲ ಶಸ್ತ್ರ ಹಿಡಿದವರೆಲ್ಲ ಕ್ರಾಂತಿಕಾರಿಗಳೆ? ಕೋಮುವಾದ, ಧರ್ಮಾಧಾರಿತ ಭಯೋತ್ಪಾದನೆಯನ್ನೂ ಸಶಸ್ತ್ರ ಹೋರಾಟವೆಂದು ಬೆಂಬಲಿಸುವುದಾದರೆ ಅದು ಈಗಿರುವ ಧಾರ್ಮಿಕ ಮೂಲಭೂತವಾದಿಗಳ ಭಯೋತ್ಪಾದನೆಗಿಂತ ಹೇಗೆ ಭಿನ್ನವಾಗುತ್ತದೆ?

6. ಈ 60 ವರ್ಷಗಳಲ್ಲಿ 4 ಸಲ ರಿವೈವ್ ಆದ ಚಳವಳಿ ಮತ್ತೆ ಮತ್ತೆ ಎಡವುತ್ತಿದೆ. ಅದರ ಮೂಲ ಸ್ವರೂಪದಲ್ಲೇ ಆಮೂಲಾಗ್ರ ಬದಲಾವಣೆ ಅವಶ್ಯವಿದೆಯೆಂದು ನೀವು ಭಾವಿಸುವುದಿಲ್ಲವೆ?

7. ಜನ ಸಿದ್ಧವಾಗುವುದರಲ್ಲೇ ಸಶಸ್ತ್ರ ಹೋರಾಟಕ್ಕೆ ಕರೆಯಿತ್ತ ಹಿರಿಯ ನಾಯಕರ ಮೇಲೆ ಅಸಮಾಧಾನ ವ್ಯಕ್ತಪಡಿಸಿದ್ದೀರಿ. ಜನ ಸಿದ್ಧವಾಗುವುದೆಂದರೇನು? ಜನ ಏನೇನಕ್ಕೋ ಸಿದ್ಧವಾಗುತ್ತಾರೆ. ಬೇಡವಾದದ್ದಕ್ಕೇ ಹೆಚ್ಚು ಸಿದ್ಧವಾಗುತ್ತಾರೆ. ಜನಮತವನ್ನು ಸದಾ ರೂಪಿಸುತ್ತಿರಬೇಕೆ? ಅಥವಾ ಅದು ತಂತಾನೇ ಆಗುವ ಪ್ರಕ್ರಿಯೆಯೆ?

8. ನಗರ ಪ್ರದೇಶದಲ್ಲಿದ್ದು, ಸಮೂಹ ಬೆಂಬಲ ಗಳಿಸುವುದರಲ್ಲಿ ಕ್ರಿಯಾಶೀಲವಾದ ಮಾವೋವಾದಿ ಗುಂಪು ಬೇರೆ; ದುರ್ಗಮ ಅರಣ್ಯ ಪ್ರದೇಶಗಳಲ್ಲಿ ಅನ್ನ ನೀರಿಲ್ಲದೆ ಹೋರಾಡುವ ಗುಂಪು ಬೇರೆ-ಇದು ಪರಸ್ಪರ ಬದಲಾಗದ ವರ್ಗವ್ಯವಸ್ಥೆ ಸೃಷ್ಟಿಸಿದೆ ಎನಿಸುವುದಿಲ್ಲವೆ?

* * *

ಎಡಪಂಥೀಯ ಸಂಗಾತಿಗಳು ಕ್ಷಮಿಸಲಿ, ನಾನು ಬಲಕ್ಕೆ ಪೂರಾ ವಿಮುಖಳಾದರೂ ಎಡ ತುದಿಯನ್ನು ಅಷ್ಟೇ ದೂರ ನಿಂತು ಗಮನಿಸಿದ್ದೆ. ಈ ಪುಸ್ತಕದಲ್ಲಿ ವರ್ಣಿಸಲಾದ ಯಾವುದೇ ತರಹದ ಹೋರಾಟದಲ್ಲಿ ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ಪಾಲ್ಗೊಂಡವಳಲ್ಲ. ನಮ್ಮೆಲ್ಲ ಕಾಳಜಿ, ಕೆಲಸ, ಬರವಣಿಗೆಗಳ ಹೊರತಾಗಿ ಮೂರು ಹೊತ್ತೂ ಸಮಯಕ್ಕೆ ಸರಿಯಾಗಿ ಉಂಡುಟ್ಟು ನಲಿವ ನಾವು ಬದುಕಿನ ಸಣ್ಣ ಕಂಫರ್ಟ್ ಅನ್ನೂ ಲೆಕ್ಕಿಸದೆ ಅಡವಿಯಲ್ಲಿ ಪ್ರಾಣ ಕಳೆದುಕೊಂಡ ಸಾವಿರಾರು ಕಮಿಟೆಡ್ ಯುವಕ-ಯುವತಿಯರ ಬಗೆಗೆ ಹೇಳುವುದೆಲ್ಲ ಗೌರವಪೂರ್ವಕವಾಗಿಯೇ. ಒಡಲ ಸಂಕಟ ತಡೆಯಲಾರದೆಯೇ.

ಪ್ರಿಯ ನೂರ್ ಜುಲ್ಫಿಕರ್, ಕಲ್ಲುಬಂಡೆಯ ಎದೆ ಮೇಲೆ ಒಂದು ಹೂವೂ ಅರಳುವುದಿಲ್ಲ, ಮಣ್ಣಲ್ಲಿ ಮಣ್ಣಾದ ದಿನ ಇಡೀ ವಸಂತವೇ ಅದರ ಎದೆಗಿಳಿಯುತ್ತದೆ. ಮಣ್ಣಲ್ಲಿ ಮಣ್ಣಾಗಹೊರಟ ಜೀವವನ್ನು ಮುಳ್ಳಿನ ತೋಟವೆಂದು ವ್ಯವಸ್ಥೆ ಭಾವಿಸುತ್ತಿರುವುದಕ್ಕೆ ನನಗೆ ಖೇದವಿದೆ. ನನ್ನ ಆಶಯವಿಷ್ಟೇ: ಎಳೆಯ ನೂರ್ ಜುಲ್ಫಿಕರ್ ಶ್ರೀಧರ್ ಆದ ಅನುಭವ ಕಥನ ಇದೇ ಲೇಖನಿಯಿಂದ ಮೂಡಿಬರಲಿ. ಆತ ಪಶ್ಚಿಮದ ಗುಡ್ಡಗಾಡುಗಳಲ್ಲಷ್ಟೇ ಅಲ್ಲ, ಕೋಮುವಾದದಿಂದ ಹೊತ್ತುರಿಯುತ್ತಿರುವ ಪೂರ್ವದ ಮರಳುಗಾಡಿನಲ್ಲಿ ಶಾಂತ ಓಯಸಿಸ್ ಆಗಿ ಹರಿಯಲಿ. ಬಂದೂಕಿನ ಬೆಂಕಿಬಾಯಿ ತಣ್ಣಗಾಗಿ ಹೂವರಳಲಿ. ಶಸ್ತ್ರ ಕೆಳಗಿಟ್ಟ ದೇಶೀ ಮಾವೋ ನಮಗಾಗಿ ಹುಟ್ಟಿಬರಲಿ... ■

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಎಸ್. ಮರಿಸ್ವಾಮಿ

ರಾಷ್ಟ್ರ ಪ್ರತಿಮೆಗಳು (ಐಕಾನ್‌ಗಳು)

ಒಂದು ರಾಷ್ಟ್ರ ಅನೇಕ ವಿಷಯಗಳ ಸುತ್ತ ವಿಕಾಸ ಹೊಂದುತ್ತದೆ. ಪ್ರತಿಮೆಗಳು ರಾಷ್ಟ್ರ ಕಟ್ಟುವ ಪ್ರಕ್ರಿಯೆಯ ಭಾಗ. ಎಲ್ಲ ಸಮಾಜಗಳೂ, ಸಾಮಾಜಿಕ ವರ್ಗಗಳೂ ತಮ್ಮ ಹೆಮ್ಮೆಯ ಪ್ರತಿಮೆಗಳನ್ನು ಹೊಂದುವುದು ಅತ್ಯಾವಶ್ಯಕ. ಮುಂದಿನ ಪೀಳಿಗೆಗಳನ್ನು ಪ್ರೋತ್ಸಾಹಿಸಲು ಆ ಪ್ರತಿಮೆಗಳ ಬುದ್ಧಿಮತ್ತೆ, ಹೋರಾಟ, ಕೊಡುಗೆ ಮುಂತಾದವುಗಳನ್ನು ಆ ಜನಾಂಗಗಳು ಮತ್ತೆ ಮತ್ತೆ ಹೆಮ್ಮೆಯಿಂದ ನೆನಪಿಸಿಕೊಳ್ಳುತ್ತವೆ.

ಆದರೆ ಜಾತಿಯಿಂದ ಒಡೆದು ಚೂರಾಗಿರುವ ಭಾರತದ ಸಮಾಜ ಅಥವಾ ಜನಾಂಗೀಯವಾಗಿ ಒಡೆದ ಅಮೆರಿಕಾದ ವಿಚಾರದಲ್ಲಿ ಇದು ಸ್ವಲ್ಪ ಕ್ಲಿಷ್ಟವಾಗುತ್ತದೆ. ಗಾಂಧೀಜಿ ಒಬ್ಬ ಶ್ರೇಷ್ಠ ರಾಷ್ಟ್ರ ಪ್ರತಿಮೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಅವರು ವಿವಾದಸ್ಪರೂ ಹೌದು. ದಲಿತರಪಕ್ಷಕ್ಕೆ ಹೇಳುವುದಾದರೆ ಅವರು ಅಂಬೇಡ್ಕರರಿಗಿಂತ ದೊಡ್ಡವರೇನಲ್ಲ. ಅಂಬೇಡ್ಕರರು ಸಹ ಒಬ್ಬ ಶ್ರೇಷ್ಠ ರಾಷ್ಟ್ರದ ಪ್ರತಿಮೆ. ಆದರೆ ರಾಷ್ಟ್ರದ ಮುಖ್ಯವಾಹಿನಿಗೆ ಗಾಂಧಿ ಅಂಬೇಡ್ಕರರಿಗಿಂತ ಶ್ರೇಷ್ಠರು. ಈ ವಿಭಿನ್ನ ಅಭಿಪ್ರಾಯಗಳು ಸಮಾಜದ ನೈಜ ಸ್ಥಿತಿಯನ್ನು ಪ್ರತಿನಿಧಿಸುತ್ತವೆ.

ನಮ್ಮದು ಒಡೆದ ಇತಿಹಾಸ. ನಮ್ಮ ಸಮಾಜದ ಮುಖ್ಯವಾಹಿನಿ ರಾಬರ್ಟ್ ಕ್ಲೈವ್‌ನಿಗಿಂತ ಲಾರ್ಡ್ ಮೆಕಾಲೆ ಅತಿಕೆಟ್ಟ ಮನುಷ್ಯ ಎಂದು ತಿಳಿದಿದೆ. ಇದು ನಿಜವಾಗಿಯೂ ಕುತೂಹಲಕರ. ರಾಬರ್ಟ್ ಕ್ಲೈವ್ ಕುದುರೆ ಏರಿ ಬಂದ. ಅವನ ಕೈಗಳಲ್ಲಿ ಕತ್ತಿ ಮತ್ತು ಬಂದೂಕುಗಳಿದ್ದವು. ಅವನು ಬೂಟು ಧರಿಸಿದ್ದ. ಭಾರತೀಯರನ್ನು ಎಲ್ಲದರಲ್ಲಿ ಅಟ್ಟಾಡಿಸಿದ. ಕುಯುಕ್ತಿ ಮತ್ತು ಸಾಹಸಗಳನ್ನುಪಯೋಗಿಸಿ ಬ್ರಿಟಿಷ್ ಸಾಮ್ರಾಜ್ಯ ಕಟ್ಟಲು ನೆರವಾದ.

ಮತ್ತೊಂದೆಡೆ, ಲಾರ್ಡ್ ಮೆಕಾಲೆ ಒಬ್ಬ ಸುಸಂಸ್ಕೃತ ಮತ್ತು ವಿದ್ವಾಂಸ. ಅವನು ಸೂಟು ಧರಿಸಿದ್ದ. ಟೈ ಕಟ್ಟಿದ್ದ. ಮತ್ತು ಅವನ ನಡೆನುಡಿಗಳೂ ಸಭ್ಯತೆಯಿಂದ ಕೂಡಿದ್ದುವು. ಅವನು ಈ ದೇಶದಲ್ಲಿ ಆಧುನಿಕ ಶಿಕ್ಷಣಕ್ಕೆ ತಳಹದಿ ಹಾಕಿದ. ಇಂಗ್ಲಿಷ್ ಭಾಷೆಯನ್ನು ಪರಿಚಯಿಸಿದ. ಅವನೇನೂ ಬಂದೂಕು ಹಿಡಿದಿರಲಿಲ್ಲ. ಅವನು ಹಿಡಿದಿದ್ದುದು ಒಂದೆರಡು ಪೆನ್‌ಗಳು ಮಾತ್ರ. ಈ ದೊಡ್ಡ ದೇಶಕ್ಕೆ ಅವನು ಭಾರತೀಯ ದಂಡ ಸಂಹಿತೆ ಮತ್ತು ಅಪರಾಧ ನಡವಳಿ ಸಂಹಿತೆ ಬರೆದ.



ಆದರೆ ಮೆಕಾಲೆಯನ್ನು ಕ್ಲೈವನಿಗಿಂತ ದೊಡ್ಡ ಕೇಡುಕನಾಗಿ ದೇಶದಲ್ಲಿ ನೋಡಲಾಗುತ್ತಿದೆ. ಕ್ಲೈವ್ ಭಾರತವನ್ನು ಸೋಲಿಸಿ ಸದೆಬಡಿದ. ಆದರೆ ಅವನು ಭಾರತದ ಜಾತಿ ವ್ಯವಸ್ಥೆ ಮತ್ತು ಧರ್ಮವನ್ನು ಪ್ರಶ್ನಿಸಲಿಲ್ಲ. ಆದರೆ, ಮೆಕಾಲೆ 1835ರಲ್ಲಿ ಬ್ರಿಟಿಷ್ ಸಂಸತ್ತಿನಲ್ಲಿ ಮಾಡಿದ ತನ್ನ ಮಹತ್ವದ ಭಾಷಣದಲ್ಲಿ ಭಾರತದ ಪರವಾಗಿದ್ದ. ಇಂದು ನಾವು ಹೆಮ್ಮೆ ಪಡುವ ಭಾರತದ ಎಲ್ಲಾ ಸಂಸ್ಥೆಗಳೂ ಲಾರ್ಡ್ ಮೆಕಾಲೆ ಹಾಕಿದ ತಳಹದಿಯ ಮೇಲೆಯೆ ನಿಂತಿವೆ. ಆದರೆ ಮೆಕಾಲೆ ಭಾರತದ ಜಾತಿ ಪದ್ಧತಿ ಮತ್ತು ತಾರತಮ್ಯಯುತ ಧಾರ್ಮಿಕ ಆಚರಣೆಗಳನ್ನು ಪ್ರಶ್ನಿಸಿದ. ಭಾರತದ ಅನೇಕ ಭಾಗಗಳಲ್ಲಿ ಇಂದೂ ಸಹ ದಲಿತರ ದೇವಸ್ಥಾನ ಪ್ರವೇಶ ನಿಷಿದ್ಧ. ಆದರೆ ಭಾರತದ ಮುಖ್ಯವಾಹಿನಿ ಜಾತಿಯನ್ನು ಪ್ರಶ್ನಿಸಿದ ಯಾರನ್ನೂ ಸುಮ್ಮನೆ ಬಿಡುವುದಿಲ್ಲ.

ಭಾರತದ ಮುಖ್ಯವಾಹಿನಿಯ ಈ ರೀತಿಯ ಅನುಕಂಪವಿಲ್ಲದ ನೀತಿ ಗುರು ರವಿದಾಸ್, ಚೊಖ್ಖಮೇಳ, ಮತ್ತು ನಂದನಾರ್ ಇಂತಹ ಸಂತರನ್ನೂ ತಮ್ಮ ಅರಿವಿನ ಒಳಗೆ ಬಿಟ್ಟುಕೊಳ್ಳುವುದಿಲ್ಲ. ಅಸ್ಪೃಶ್ಯರಾಗಿ ಹುಟ್ಟಿದ ಈ ಸಂತರಿಗೆ ಅಂಬೇಡ್ಕರ್ ತಮ್ಮ ಅಸ್ಪೃಶ್ಯರ ಮೇಲಿನ ಪುಸ್ತಕವನ್ನು ಅರ್ಪಿಸುತ್ತಾರೆ. 14ನೇ ಶತಮಾನದಲ್ಲಿ ಬದುಕಿದ್ದ ಸಂತ ಚೊಖ್ಖಮೇಳ ಮರಾಠಿ ದಲಿತರ ಅರಿವಿನ ಒಳಹೊಕ್ಕ ದೊಡ್ಡ ಸಾಧಕ. ಅವನು ಇಂದೂ ಅದೆಷ್ಟೋ ಜನರ ಮೇಲೆ ಮೇರೆಯಿಲ್ಲದ ಪ್ರಭಾವವನ್ನು ಹೊಂದಿದ್ದಾನೆ. ಚೊಖ್ಖಮೇಳನ ಸಮಕಾಲೀನರಾದ ದಲಿತ ಸಂತ ನಂದನಾರ್ ಇಂದಿನ ತಮಿಳುನಾಡಿಗೆ ಸೇರಿದವನು. ಅಸ್ಪೃಶ್ಯನಾದ ನಂದನಾರ್ ತನ್ನ ಜೀವಿತ ಸಮಯದಲ್ಲಿಯೇ ಅಸಂಖ್ಯ ಅನುಯಾಯಿಗಳನ್ನು ಹೊಂದಿದ್ದನು. ತಮಿಳುನಾಡಿನ ದಲಿತರಿಗೆ ನಂದನಾರ್ ಒಬ್ಬ ಪ್ರಭಾವಿ ಸಂತ. ಉತ್ತರ ಭಾರತದ ರವಿದಾಸ್ ಕಾಶಿಯ ಬ್ರಾಹ್ಮಣರನ್ನು ಸೋಲಿಸಿದ. 15ನೇ ಶತಮಾನದ ಈ ಸಂತನನ್ನು ಸಿಖ್ ಧರ್ಮ ಕೂಡ ಅಂಗೀಕರಿಸಿದ್ದು, ಪವಿತ್ರ 'ಗುರುಬಾನಿ'ಯಲ್ಲಿ ಅವನ ಹಾಡುಗಳನ್ನೂ ಸೇರಿಸಲಾಗಿದೆ.

ಈ ಮೂರೂ ಸಂತರು ರಾಷ್ಟ್ರದ ದಲಿತರ ಅರಿವಿನ ಭಾಗವಾಗಿದ್ದಾರೆ. ಈ ಮೂರೂ ಸಂತರು ವ್ಯವಸ್ಥೆಯ ವಿರುದ್ಧ ತಿರುಗಿ ಬಿದ್ದರು ಮತ್ತು ಸಾವಿರಾರು ಅನುಯಾಯಿಗಳನ್ನು ತಮ್ಮ ಕಾಲದಲ್ಲಿ ಹೊಂದಿದ್ದರು. ಜಾತಿರಹಿತ ಸಮಾಜಕ್ಕಾಗಿ ಹೋರಾಡಿದ ಈ ಸಂತರನ್ನು ದಲಿತರು ಹೆಮ್ಮೆಯಿಂದ ನೆನಪಿಸಿಕೊಳ್ಳುತ್ತಾರೆ.

ಆದರೆ ರವಿದಾಸ್, ಚೊಖ್ಖಮೇಳ ಮತ್ತು ನಂದನಾರ್ ಇವರು ಭಾರತದ ಮುಖ್ಯವಾಹಿನಿಗೆ ರಾಷ್ಟ್ರಮಟ್ಟದ ಸಂತರೆ? ಅವರ ಬಗ್ಗೆ ಶಾಲಾ ಪುಸ್ತಕಗಳಲ್ಲಿ ಭೋದಿಸಲಾಗುತ್ತಿದೆಯೇ? ಶಾಲಾ ಪುಸ್ತಕಗಳನ್ನು ಮುಖ್ಯವಾಹಿನಿಯ ವಿದ್ವಾಂಸರು ಬರೆಯುತ್ತಾರೆ. ವಿದ್ವಾಂಸರು ಮತ್ತು ಚಿಂತಕರನ್ನು ಯಾವುದೇ ಸಮಾಜದ ಮಾರ್ಗದರ್ಶಕರಾಗಿ ಪರಿಗಣಿಸಲಾಗುತ್ತದೆ. ಅವರು ಸಾಮಾನ್ಯವಾಗಿ ಉದಾರವಾದಿಗಳಾಗಿದ್ದು ಉತ್ತಮ ಸಮಾಜ ಕಟ್ಟುವುದರಲ್ಲಿ ಪಕ್ಷಾತೀತ ಪಾತ್ರವನ್ನು ವಹಿಸುತ್ತಾರೆ. ಆದರೆ ಈ ಸಂದರ್ಭದಲ್ಲಿ ಮುಖ್ಯವಾಹಿನಿಯ ಈ ವಿದ್ವಾಂಸರು ಸಮಾಜದ ಪ್ರತಿಮೆಗಳನ್ನು ಗುರುತಿಸುವುದರಲ್ಲಿ ನಿಜವಾಗಿಯೂ ಹಿಂದುಳಿದಿರುತ್ತಾರೆ.

ತನ್ನ ಚರಿತ್ರೆಯ ಈ ಹಂತದಲ್ಲಿ ಭಾರತ ಬಹಳ ವೇಗವಾಗಿ ಬದಲಾಗುತ್ತಿದೆ. ಸಮಾಜ ವಿಭಜನೆಯ ದೊಡ್ಡ ಇತಿಹಾಸವನ್ನು ಹೊಂದಿರುವ ಈ ನಾಡಿನಲ್ಲಿ ಮುಖ್ಯವಾಹಿನಿ ಮೊದಲು ತಗ್ಗಬೇಕಾಗುತ್ತದೆ. ದಲಿತರು

ಸಮಾಜ ವಿಭಜನೆಯ ದೊಡ್ಡ ಇತಿಹಾಸವನ್ನು ಹೊಂದಿರುವ ಈ ನಾಡಿನಲ್ಲಿ ಮುಖ್ಯವಾಹಿನಿ ಮೊದಲು ತಗ್ಗಬೇಕಾಗುತ್ತದೆ. ದಲಿತರು ಪೂಜ್ಯರೆಂದುಕೊಳ್ಳವವರ ಪ್ರತಿಮೆಗಳನ್ನು ಮುಖ್ಯವಾಹಿನಿ ಗುರುತಿಸಬೇಕಾಗುತ್ತದೆ. ಈ ಪ್ರತಿಮೆಗಳನ್ನು ಮುಖ್ಯವಾಹಿನಿಗೆ ತರುವ ಜವಾಬ್ದಾರಿಯನ್ನು ಅದು ಹೊರಬೇಕಾಗುತ್ತದೆ. ಈವರೆಗೆ ಹಾಗೆ ಗುರುತಿಸಲಾಗದಿದ್ದುದಕ್ಕೆ ಅದು ಮುಖ್ಯವಾಹಿನಿಯ ಪರವಾಗಿ ಕ್ಷಮೆಯಾಚಿಸಬೇಕಾಗುತ್ತದೆ.

ಪೂಜ್ಯರೆಂದುಕೊಳ್ಳವವರ ಪ್ರತಿಮೆಗಳನ್ನು ಮುಖ್ಯವಾಹಿನಿ ಗುರುತಿಸಬೇಕಾಗುತ್ತದೆ. ಈ ಪ್ರತಿಮೆಗಳನ್ನು ಮುಖ್ಯವಾಹಿನಿಗೆ ತರುವ ಜವಾಬ್ದಾರಿಯನ್ನು ಅದು ಹೊರಬೇಕಾಗುತ್ತದೆ. ಈವರೆಗೆ ಹಾಗೆ ಗುರುತಿಸಲಾಗದಿದ್ದುದಕ್ಕೆ ಅದು ಮುಖ್ಯವಾಹಿನಿಯ ಪರವಾಗಿ ಕ್ಷಮೆಯಾಚಿಸಬೇಕಾಗುತ್ತದೆ.

ನೊಂದ ಜನ ಸಹಜವಾಗಿಯೆ ಕಹಿಯಾಗಿರುತ್ತಾರೆ. ಅಸ್ಪೃಶ್ಯರಾಗಿ ದಲಿತರು ಎಂತಹ ಅವಮಾನಗಳನ್ನು ಅನುಭವಿಸಿದ್ದಾರೆ ಎಂದು ಭಾರತದ ಹೊರಗಿನ ಜನ ಅರ್ಥ ಮಾಡಿಕೊಳ್ಳುವುದು ಕಷ್ಟ. ಇಂದೂ ದಲಿತರು ಅನೇಕ ಕಡೆ ಅಂತಹುದೇ ಅವಮಾನಗಳಿಂದ ನರಳುತ್ತಿದ್ದಾರೆ.

ಭಾರತ ಎಲ್ಲರಿಂದ ಪ್ರೀತಿಸಲ್ಪಡಬೇಕಾದರೆ ಅದು ಎಲ್ಲರೂ ಹರ್ಷಿಸುವ ಸಾಮಾಜಿಕ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ನಾವು ಕಟ್ಟುವ ಪ್ರತಿಮೆಗಳ ಬಗ್ಗೆ ನಾವು ಎಲ್ಲರ ಗೌರವ ಸಾಧಿಸಲಾಗದಿದ್ದಲ್ಲಿ ಸಮಾಜದಲ್ಲಿ ಒಗ್ಗಟ್ಟು ಮೂಡುವುದಿಲ್ಲ. ಪ್ರತಿಮೆಗಳ ಬಗ್ಗೆ ಒಡೆದ ಅಭಿಪ್ರಾಯವಿದ್ದಲ್ಲಿ ಅದು ಸಮಾಜವನ್ನು ಒಡೆಯಬಲ್ಲುದು.

ಗಾಂಧಿ ಮತ್ತು ಅಂಬೇಡ್ಕರ್ ಬಗ್ಗೆ ಮೂಡಿರುವ ಭಿನ್ನಾಭಿಪ್ರಾಯಗಳು ತಿಳಿಯಾದ ದಿನ ಭಾರತ ಎಲ್ಲ ಸಮಾಜಗಳೂ ಅನುಕರಿಸಬಹುದಾದ ದಾರಿಯಲ್ಲಿ ಹೆಜ್ಜೆ ಹಾಕಿರುತ್ತದೆ.

ಹಿಂದುಳಿದ ಜಾತಿಯ ಜನರು ಮೀಸಲಾತಿಯನ್ನು ವಿವಾದಾತ್ಮಕವನ್ನಾಗಿ ಮಾಡಿದ್ದಾರೆ. ದಲಿತ ಚಿಂತಕರು ಕಣ್ಣು ಮುಚ್ಚಿಕೊಂಡು ಇತರ ಹಿಂದುಳಿದ ಜಾತಿಗಳ ಮೀಸಲಾತಿ ಕಲ್ಪನೆಯನ್ನು ಒಪ್ಪಿಕೊಳ್ಳುವುದರ ಮೂಲಕ ತಮ್ಮ ಮೇಲೆ ದಬ್ಬಾಳಿಕೆ ನಡೆಸುವವರಿಗೆ ಬಹುಮಾನ ನೀಡುತ್ತಿದ್ದಾರೆ.

* * *

ಕೇವಲ ಮೂರು ದಶಕಗಳ ಹಿಂದೆ ನನ್ನ ದಲಿತ ಹಿರಿಯರು ಏಪ್ರಿಲ್ 14, ಬರುತ್ತಿದ್ದಂತೆಯೆ ಸ್ಥಳೀಯ ಪೊಲೀಸ್ ಠಾಣೆಗಳಿಗೆ ಸುತ್ತುವುದನ್ನು ನಾನು ನೋಡಿದ್ದೇನೆ. ಡಾ.ಅಂಬೇಡ್ಕರ್ ಜನ್ಮದಿನದ ಆಚರಣೆಯಲ್ಲಿ ಪೊಲೀಸ್ ಉಪಸ್ಥಿತಿ ಆ ದಿನಗಳಲ್ಲಿ ಅವಶ್ಯವಾಗಿತ್ತು. ಒಂದೆರಡು ಕಾನ್ಸ್‌ಟೇಬಲ್‌ಗಳು ಬಂದ ಕೂಡಲೆ ಭಾಷಣ ಶುರುವಾಗುತ್ತಿತ್ತು.

ಇಂದು ಪಶ್ಚಿಮ ಉತ್ತರ ಪ್ರದೇಶದ ಕೆಲವು ಭಾಗಗಳು, ಹರಿಯಾಣ, ರಾಜಸ್ಥಾನಗಳಲ್ಲಿ ದಲಿತರ ಮದುವೆ ಸಮಾರಂಭದಲ್ಲಿ ಪೊಲೀಸ್ ಉಪಸ್ಥಿತಿಬೇಕಾಗಿದೆ. ಕುದುರೆ ಮೇಲೆ ಸವಾರಿ ಮಾಡಬಯಸುವ ದಲಿತ ವರ ಪೊಲೀಸರ ರಕ್ಷಣೆಯನ್ನು ಕೋರಬೇಕಾಗಿದೆ.

ಈ ಮೂಲಕವೇ ನಾವು ಸರ್ಕಾರಿ ಹುದ್ದೆಗಳಲ್ಲಿ, ಶಿಕ್ಷಣದಲ್ಲಿ ಮತ್ತು ಶಾಸನ ಸಭೆಗಳಲ್ಲಿ ದಲಿತರ ಮೀಸಲಾತಿಯನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ನಾಗರೀಕ ಸಮಾಜ ಹೊಡೆದೋಡಿಸುತ್ತಿದೆ, ಸರ್ಕಾರ ರಕ್ಷಿಸುತ್ತದೆ. ಸರ್ಕಾರ ಎಷ್ಟೇ ಕೆಟ್ಟದಾಗಿ ನಡೆಯುತ್ತಿದ್ದರೂ ಅದು ಉತ್ತಮವಾಗಿ ನಡೆಯುವ ನಾಗರೀಕ ಸಮಾಜಕ್ಕಿಂತ ಹೆಚ್ಚು ವಿಮೋಚನಾತ್ಮಕವಾಗಿರುತ್ತದೆ.

ಪ್ರಪಂಚದುದ್ದಕ್ಕೂ ಮಾಧ್ಯಮ, ಸಿನಿಮಾ ಮತ್ತು ಕಲಾ ಪ್ರಪಂಚ ಇವುಗಳನ್ನು ಉದಾರವಾದಿಗಳಾಗಿಯೂ, ಒಳಗೊಳ್ಳುವವುಗಳಾಗಿಯೂ ಮತ್ತು ಪ್ರಗತಿಪರವಾಗಿರುವಂತಹವುಗಳಾಗಿಯೂ ಪರಿಗಣಿಸಲಾಗುತ್ತದೆ. ಬಹಳ ಉದಾರವಾದಿಗಳೆಂದು ಪರಿಗಣಿಸಲಾದ ಈ ಕ್ಷೇತ್ರಗಳಲ್ಲಿಯೂ ದಲಿತರು ಕಾಣಸಿಗುವುದಿಲ್ಲ.

ಮೀಸಲಾತಿಯ ಕಾರಣದಿಂದ ಸರ್ಕಾರದಲ್ಲಿ ಮತ್ತು ಅದು ನಡೆಸುತ್ತಿರುವ ಸಂಸ್ಥೆಗಳಲ್ಲಿ ದಲಿತರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಆದರೆ ಮೀಸಲಾತಿಯ ಸದುದ್ದೇಶದ ಬಗ್ಗೆಯೆ ಅನೇಕರಿಗೆ ಸಂಶಯವಿದೆ. ಆಗಸ್ಟ್ 28ರಂದು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬರೆದ "ಜಾತಿಯ ಉಸುಕು" ಎನ್ನುವ ತಮ್ಮ ಅಂಕಣದಲ್ಲಿ ಪ್ರೊ.ಪ್ರತಾಪ್ ಭಾನು ಮೆಹತಾ "ಮೀಸಲಾತಿ, ಎಲ್ಲಿಯ ತನಕ?" ಎಂಬ ಪ್ರಶ್ನೆ ಕೇಳುತ್ತಾರೆ. ಪ್ರೊ.ಪ್ರತಾಪ್ ಈ ಅಂಕಣವನ್ನು ತನ್ನ ದಲಿತ ಮಿತ್ರನಿಗೊಂದು ಮುಕ್ತ ಪತ್ರ ಎಂದು ಕರೆದಿದ್ದಾರೆ. ಪ್ರತಾಪರ ಸ್ನೇಹಿತರಲ್ಲಿ ನಾನೂ ಒಬ್ಬ. ಪ್ರೊ.ಪ್ರತಾಪ್‌ರ ಈ ಬರಹಕ್ಕೆ ಮುಖ್ಯ ಕಾರಣ ಈಗ ಚರ್ಚಿತವಾಗುತ್ತಿರುವ ಬಡ್ತಿಯಲ್ಲಿ ಮೀಸಲಾತಿ ಪ್ರಕರಣ. ಹುದ್ದೆಗಳಲ್ಲಿನ ಮೀಸಲಾತಿಗಿಂತ ಬಡ್ತಿಯಲ್ಲಿ ಮೀಸಲಾತಿ ಹೆಚ್ಚು ನ್ಯಾಯಯುತ ಎಂಬುದು ನನ್ನ ಅನಿಸಿಕೆ. ಹುದ್ದೆಗಳಿಗೆ ಆಯ್ಕೆ ಮಾಡುವುದಕ್ಕಿಂತ ಬಡ್ತಿ ನೀಡುವುದರಲ್ಲಿಯೆ ಹೆಚ್ಚು ಶಿಫಾರಸ್ಸು ಮತ್ತು ಪಕ್ಷಪಾತ ನಡೆಯುವುದು. ಜಾತಿ ಸಹ ತನ್ನ ಪಾತ್ರ ವಹಿಸುವುದು.

ಆದರೆ, ವಿಷಯ ನಾವು ಯೋಚಿಸುವುದಕ್ಕಿಂತ ಹೆಚ್ಚು ಕ್ಲಿಷ್ಟವಾದುದು. ಸಂಸತ್ತು ಮತ್ತು ನ್ಯಾಯಾಂಗದ ಮಧ್ಯೆ ತಿಕ್ಕಾಟಕ್ಕೆ ಎಡೆ ಮಾಡಿಕೊಡುವಂತಹ ಶಕ್ತಿ ಇದಕ್ಕಿದೆ. ಸರ್ವೋಚ್ಚ ನ್ಯಾಯಾಲಯ ಬಡ್ತಿಯಲ್ಲಿ ಮೀಸಲಾತಿಯನ್ನು ಒದಗಿಸುವುದರ ಔಚಿತ್ಯವನ್ನು ಪ್ರಶ್ನಿಸಿದಾಗ ಭಾರತ ಸರ್ಕಾರ ಸಂವಿಧಾನ ತಿದ್ದುಪಡಿ ತರುವುದನ್ನು ಪರಿಶೀಲಿಸಲು ಎಲ್ಲ ಪಕ್ಷಗಳ ಸಭೆ ಕರೆಯಿತು. ಒಂದು ಪಕ್ಷವನ್ನು ಹೊರತುಪಡಿಸಿ ಉಳಿದೆಲ್ಲ ಪಕ್ಷಗಳೂ ಸಂವಿಧಾನ ತಿದ್ದುಪಡಿಗೆ ಒಪ್ಪಿಗೆ ನೀಡಿದುವು. ಇದೊಂದು ನಗೆ ಬರಿಸುವ ಆದರೆ ಅಪಾಯಕಾರಿ ಬೆಳವಣಿಗೆ. ನಗೆ ಬರಿಸುವಂತದ್ದು, ಏಕೆಂದರೆ ಸರ್ವೋಚ್ಚ ನ್ಯಾಯಾಲಯ ಈ ಮುಂದಿನ ಅಂಶಗಳನ್ನು ಸಾಬೀತು ಪಡಿಸಲು ಅಂಕಿ-ಸಂಖ್ಯೆ ನೀಡುವಂತೆ ಸರ್ಕಾರವನ್ನು ಕೇಳಿತು. 1) ಮೀಸಲಾತಿ ಇಲ್ಲದಿರುವ ಕಡೆ ದಲಿತ ಮತ್ತು ಆದಿವಾಸಿ ಅಧಿಕಾರಿಗಳ ಸಂಖ್ಯೆ ಅತಿ ಕಡಿಮೆ ಇದೆ. 2) ದಲಿತರು ಮತ್ತು ಆದಿವಾಸಿಗಳು ಇನ್ನೂ ಹಿಂದುಳಿದಿದ್ದಾರೆ.

ಸರ್ಕಾರ ಇದನ್ನು ಸುಲಭವಾಗಿ ಸಾಬೀತು ಪಡಿಸಬಹುದಿತ್ತು. ಆದರೆ, ಸರ್ಕಾರ ಸರ್ವೋಚ್ಚ ನ್ಯಾಯಾಲಯಕ್ಕೆ ಅವರು ಕೇಳಿದ ಮಾಹಿತಿಯನ್ನು ಒದಗಿಸುವ ಬದಲು ಸಂವಿಧಾನವನ್ನು ತಿದ್ದುಪಡಿ ಮಾಡಲು ಹೊರಟಿದೆ. ಇದು ನಗೆ ಬರಿಸುವುದಿಲ್ಲವೆ?

ಇದೊಂದು ಅಪಾಯಕಾರಿ ಬೆಳವಣಿಗೆ ಸಹ. ಏಕೆಂದರೆ ಇದರಿಂದ ರಾಷ್ಟ್ರದ ಎರಡು ಮುಖ್ಯ ಸ್ತಂಭಗಳಾದ ನ್ಯಾಯಾಂಗ ಮತ್ತು ಸಂಸತ್ತು ಒಬ್ಬರ ಎದುರು ಇನ್ನೊಬ್ಬರು ನಿಲ್ಲಬೇಕಾಗಿದೆ. ಇದಕ್ಕೆ ಸಂಬಂಧಿಸಿದವರ ಬೇಜವಾಬ್ದಾರಿಯೆ ಕಾರಣ. ಇದು ಸರ್ಕಾರವನ್ನು ಅಶಕ್ತವಾಗಿ ಮಾಡುತ್ತದೆ. ಸರ್ಕಾರ ದಲಿತರ ಸ್ನೇಹಿತ ಎಂದುಕೊಂಡರೆ, ದಲಿತರಿಗೆ ಸಂಬಂಧಿಸಿದ ಒಂದು ವಿಚಾರದಲ್ಲಿ ಸರ್ಕಾರವನ್ನು ಅಶಕ್ತನನ್ನಾಗಿ ಮಾಡುವುದು ಸರಿಯೆ?

ಈಗ ಮೀಸಲಾತಿಯ ವಿಷಯಕ್ಕೆ ಬರೋಣ. ಮೀಸಲಾತಿ ಎಂದರೇನು?

ಡಾ.ಅಂಬೇಡ್ಕರ್ ವಿವರಿಸಿರುವಂತೆ ಮೀಸಲಾತಿ ಸರ್ಕಾರ ಮತ್ತು ಸರ್ಕಾರದ ಸಂಸ್ಥೆಗಳಲ್ಲಿ ದಲಿತರ ಪ್ರತಿನಿಧಿತ್ವವನ್ನು ದೃಢಪಡಿಸುತ್ತದೆ. ಇತರ ಹಿಂದುಳಿದ ಜಾತಿಗಳ ಮೀಸಲಾತಿ ಬ್ರಾಹ್ಮಣರ ಏಕಸ್ವಾಮ್ಯವನ್ನು ಕೊನೆಗೊಳಿಸಲು ಬೇಕು ಎಂದು ದ್ರಾವಿಡರು ಅಂದುಕೊಳ್ಳುತ್ತಾರೆ. ಮಂಡಲ್ ಕಮಿಷನ್ ಸಹ ಹಾಗೇ ಹೇಳಿತು. ಸರ್ಕಾರಿ ಹುದ್ದೆಗಳು ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಮೇಲ್ಜಾತಿಗಳ ಏಕ ಸ್ವಾಮ್ಯವನ್ನು ಕೊನೆಗಾಣಿಸಲು ಇತರೆ ಹಿಂದುಳಿದ ಜಾತಿಗಳಿಗೆ ಮೀಸಲಾತಿ ಅವಶ್ಯಕ ಎಂದಿತು ಅದು.

ಹೆಚ್ಚು ವೇಳೆ ದಲಿತ ಚಿಂತಕರು ಈ ವೈರುಧ್ಯ ತಲೆಎತ್ತಿದಾಗ ಮುಂದೆ ಚಿಂತಿಸದವರಾಗುತ್ತಾರೆ.

ಸದ್ಯಕ್ಕೆ ನಾವು ಸರ್ಕಾರಿ ಹುದ್ದೆಗಳು ಮತ್ತು ಇತರೆ ಸಾರ್ವಜನಿಕ ಸಂಸ್ಥೆಗಳ ಮೇಲಿನ ಮೇಲ್ಜಾತಿಗಳ ಹಿಡಿತವನ್ನು ಕೊನೆಗಾಣಿಸುವುದಕ್ಕಾಗಿ ಮೀಸಲಾತಿ ಬೇಕು ಎಂಬ ಇತರೆ ಹಿಂದುಳಿದ ಜಾತಿಗಳ ಕಲ್ಪನೆಯ ಜೊತೆ ನಡೆಯೋಣ. ಆದರೆ, ಹೆಚ್ಚು ದಲಿತರು ಗ್ರಾಮೀಣ ಪ್ರದೇಶಗಳಲ್ಲಿಯೇ ವಾಸಿಸುತ್ತಾರೆ ಮತ್ತು ಅಲ್ಲಿ ಅವರು ತುಳಿತಕ್ಕೊಳಗಾಗುವುದು ಭೂಮಾಲೀಕರಿಂದಲೆ. ಈಗ ಭೂಮಿ ಮತ್ತು ಗ್ರಾಮೀಣ ಸಂಸ್ಥೆಗಳು ಯಾರ ಹಿಡಿತದಲ್ಲಿವೆ? ಅವರು ಬ್ರಾಹ್ಮಣರೇ?

ನಿಶ್ಚಯವಾಗಿಯೂ ಗ್ರಾಮೀಣ ಭಾಗಗಳಲ್ಲಿ ದಲಿತರನ್ನು ತುಳಿಯುವವರು ಇತರ ಹಿಂದುಳಿದ ಜಾತಿಗಳೆ. ಭೂ ಒಡೆಯರಾಗಿದ್ದು, ಹಿಂಸೆಯನ್ನು ಸತತವಾಗಿ ನಡೆಸುತ್ತಾ ಬಂದಿರುವ ಒಂದು ಸಾಮಾಜಿಕ ವರ್ಗ ಯಾವ ರೀತಿ ತಾವು ಅನ್ಯಾಯಕ್ಕೆ ಒಳಗಾದವರೆಂದು ಮೀಸಲಾತಿ ಪಡೆಯಬಯಸುತ್ತಾರೆ?

ಮೀಸಲಾತಿಯನ್ನು ಕೊನೆಗೊಳಿಸಲು ಮೀಸಲಾತಿ

ಇತರೆ ಹಿಂದುಳಿದ ಜಾತಿಯ ಜನರು ಮೀಸಲಾತಿಯನ್ನು ವಿವಾದಾತ್ಮಕವನ್ನಾಗಿ ಮಾಡಿದ್ದಾರೆ. ದಲಿತ ಚಿಂತಕರು ಕಣ್ಣು ಮುಚ್ಚಿಕೊಂಡು ಇತರ ಹಿಂದುಳಿದ ಜಾತಿಗಳ ಮೀಸಲಾತಿ ಕಲ್ಪನೆಯನ್ನು ಒಪ್ಪಿಕೊಳ್ಳುವುದರ ಮೂಲಕ ತಮ್ಮ ಮೇಲೆ ದಬ್ಬಾಳಿಕೆ ನಡೆಸುವವರಿಗೆ ಬಹುಮಾನ ನೀಡುತ್ತಿದ್ದಾರೆ.

ಮೀಸಲಾತಿಯನ್ನು ಕೊನೆಗಾಣಿಸುವುದಕ್ಕಾಗಿ ಮೀಸಲಾತಿ ಬೇಕಾಗಿದೆ ಎಂದು ನಾನು ಬಹಳ ಹಿಂದಿನಿಂದ ವಾದಿಸುತ್ತಾ ಬಂದಿದ್ದೇನೆ. ಸರಳವಾಗಿ ಹೇಳುವುದಾದರೆ, ಮೀಸಲಾತಿಯ ಜವಾಬ್ದಾರಿ ಎರಡು. 1) ಶತಮಾನಗಳ ಕಾಲ ನಡೆದು ಬಂದ ಜಾತಿ ಆಧಾರಿತ ಮೀಸಲಾತಿಯನ್ನು ಕೊನೆಗಾಣಿಸುವುದು. ಜಾತಿ ಕಸುಬು ಆಧಾರಿತ ಮೀಸಲಾತಿಯಲ್ಲದೆ ಬೇರೇನೂ ಅಲ್ಲ. 2) ಮೀಸಲಾತಿಯ ಅವಶ್ಯಕತೆಯನ್ನೇ ಕೊನೆಗಾಣಿಸುವುದು.

ಬೇರೆಲ್ಲರಿಗಿಂತ ದಲಿತ ಮಧ್ಯಮ ವರ್ಗ ಅತೀ ಮುಖ್ಯವಾದ "ಮೀಸಲಾತಿ ಎಷ್ಟು ಪೀಳಿಗೆಯವರೆಗೆ?" ಎನ್ನುವ ಪ್ರಶ್ನೆಗೆ ಉತ್ತರಿಸಬೇಕು. ನನ್ನ ಮಕ್ಕಳಿಗೆ ಮೀಸಲಾತಿ ಅವಶ್ಯಕವಾದರೆ ಆಗ ಮೀಸಲಾತಿ ಸೋತಿದೆ ಎಂದೇ ಅರ್ಥ. ನಾನು ದೆಹಲಿಯ ಜವಹರ್‌ಲಾಲ್ ನೆಹರು ವಿಶ್ವವಿದ್ಯಾಲಯವನ್ನು ಪ್ರವೇಶಿಸಲು ಮೀಸಲಾತಿಯನ್ನು ಉಪಯೋಗಿಸಿಕೊಂಡೆ. ಅದು ಭಾರತದ ಅತ್ಯುತ್ತಮ ವಿಶ್ವವಿದ್ಯಾಲಯ. ನನ್ನ ಇಬ್ಬರು ಮಕ್ಕಳೂ ಸಾರ್ವಜನಿಕ ಶಾಲೆಯಲ್ಲಿ ಓದುತ್ತಿದ್ದು, ಅವರು ಜಾಗತೀಕ ಸ್ಪರ್ಧೆಯಲ್ಲಿ ಭಾಗವಹಿಸಿ ಯಶಸ್ವಿಗೊಳ್ಳುವಂತೆ ಮಾಡುವುದು ನನ್ನ ಜವಾಬ್ದಾರಿ. ದಲಿತ ಮಧ್ಯಮ ವರ್ಗ ಇದನ್ನು ಅರ್ಥ ಮಾಡಿಕೊಳ್ಳಬೇಕು. ಇಲ್ಲದಿದ್ದಲ್ಲಿ ಮೀಸಲಾತಿ ಕಲ್ಪನೆ ತನ್ನ ಹೊಳಪನ್ನು ಕಳೆದುಕೊಳ್ಳುತ್ತದೆ ಮತ್ತು ಸರ್ಕಾರ ಕೆಟ್ಟ ಹೆಸರು ಕೂಡ ಪಡೆಯುತ್ತದೆ. ಆಗ ದಲಿತರ ಜೊತೆ ನಿಲ್ಲುವವರಾರು?

ದಲಿತರು ಈಗ ಎಲ್ಲಿ ನಿಂತಿದ್ದಾರೆ? ಈ ಸಂವಿಧಾನ ತಿದ್ದುಪಡಿಯಿಂದ ದಲಿತರು ಪಡೆದುಕೊಳ್ಳುತ್ತಿರುವ ಹಕ್ಕನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಸಾಕ್ಷ್ಯವನ್ನು ನೀಡುವಂತಹ ಬಹಳ ಸುಲಭ ಪ್ರಕ್ರಿಯೆಯಿಂದ ಪಡೆದುಕೊಳ್ಳಬಹುದಿತ್ತು. ಆದರೆ ಯೋಚನಾ ರಹಿತ ದಲಿತ ನಾಯಕತ್ವ ಮತ್ತು ಬುದ್ಧಿಹೀನ ಸರ್ಕಾರ ದಲಿತರು ಶತಾಯಗತಾಯ ನ್ಯಾಯಾಂಗವನ್ನು ನಿರ್ನಾಮ ಮಾಡುವ ಜನರಾಗಿ ಕಾಣಿಸಿಕೊಳ್ಳುವಂತೆ ಮಾಡಿವೆ.

* * *

ಪಾರಂಪರಿಕವಾಗಿ ಭಾರತ ಸರ್ಕಾರ ದಲಿತರ ಆತ್ಮೀಯ ಸ್ನೇಹಿತ ಮತ್ತು ಹಿತಚಿಂತಕ. ಸಮಾಜ ಮತ್ತು ಸರ್ಕಾರಗಳ ನಡುವೆ ದಲಿತರು ಸರ್ಕಾರವನ್ನೇ ಹೆಚ್ಚು ನಂಬುತ್ತಾರೆ. ಸರ್ಕಾರದ ಹಿಡಿತದಲ್ಲಿಲ್ಲದ ಸಂಸ್ಥೆಗಳನ್ನು ದಲಿತರು ಅನುಮಾನದಿಂದಲೇ ನೋಡುತ್ತಾರೆ. ಮಾಧ್ಯಮ ಸಹ ಅಂತಹುಗಳಲ್ಲಿ ಒಂದು. ಮಾಧ್ಯಮ ಅತಿ ನೀತಿಯುತವೆಂದು ತೋರಿಸಿಕೊಳ್ಳುತ್ತಿದ್ದಾಗ್ಯೂ ಇದು ನಿಜ. ದಲಿತರು ಟಿ.ವಿ ಸ್ಟುಡಿಯೋಗಳಲ್ಲಿ ಮತ್ತು ವಾರ್ತಾ ಕೊಠಡಿಗಳಲ್ಲಿ ಇರುವುದಿಲ್ಲ.

ದಲಿತರಿಗೆ ರಕ್ಷಣೆ ನೀಡುವುದರಲ್ಲಿ ಸರ್ಕಾರದ ಹಿನ್ನಲೆಯನ್ನು ನೋಡಿಯಾದರೂ ದಲಿತ ಸಮಾಜ ಸರ್ಕಾರದ ಅಸ್ತಿತ್ವವನ್ನು ಪ್ರಶ್ನಿಸದಂತೆ ನೋಡಿಕೊಳ್ಳಲು ಕಟಿಬದ್ಧರಾಗಿರಬೇಕು.

ಸರ್ಕಾರ ಸಹ ವಾಸ್ತವಿಕವಾಗಿ ಒಂದು ಸಂಸ್ಥೆ. ಪ್ರತಿದಿನ ಪ್ರಜೆಗಳ ಅನುಭವಕ್ಕೆ ಬರುವ ಒಂದು ಸಜೀವ ರೂಪ. ಬೀದಿಗಳಲ್ಲಿ ಟ್ರಾಫಿಕ್ ಪೋಲೀಸ್‌ನವ ಸರ್ಕಾರವನ್ನು ಪ್ರತಿನಿಧಿಸುತ್ತಾನೆ. ಸರ್ಕಾರದ ಮೂರು ಮುಖ್ಯ ಅಂಗಗಳು–ಸಂಸತ್ತು, ನ್ಯಾಯಾಂಗ, ಮತ್ತು ಕಾರ್ಯಾಂಗ. ಇವುಗಳಲ್ಲಿ ಸಮತೋಲನ ಕಾಪಾಡುವ ಕಾರ್ಯವನ್ನು ನ್ಯಾಯಾಂಗ ಮಾಡುತ್ತದೆ. ಹೆಚ್ಚು ಕಡೆ ಶಾಸಕಾಂಗ ಮತ್ತು ಕಾರ್ಯಾಂಗ ನ್ಯಾಯಾಂಗಕ್ಕೆ ಹೊಣೆಯಾಗಿರುತ್ತವೆ. ನ್ಯಾಯಾಂಗ ಮತ್ತು ಕಾರ್ಯಾಂಗ ಕಾನೂನಿನ ಆಡಳಿತವನ್ನು ಜಾರಿಗೊಳಿಸುವುದನ್ನು ನೋಡಿಕೊಳ್ಳುತ್ತವೆ ಎಂಬುದು ಕಡಿಮೆ ವಿಷಯವೇನೂ ಅಲ್ಲ.

ಕಾನೂನಿನ ಆಡಳಿತ ಪ್ರಜಾಪ್ರಭುತ್ವದ ತಳಹದಿ. ಸರ್ಕಾರ ಕಾನೂನುಬದ್ಧ ಆಡಳಿತವನ್ನು ಜಾರಿಗೊಳಿಸಬೇಕು. ಉದಾಹರಣೆಗೆ, ಒಬ್ಬ ದಲಿತ ವರ ಕುದುರೆ ಮೇಲೆ ಸವಾರಿ ಮಾಡುತ್ತ ತನ್ನ ಮದುವೆಗೆ ಹೊರಟಾಗ ಸಮಾಜ ಅವನನ್ನು ನಿಂದಿಸಿ ಕೆಳಗಿಳಿಯುವಂತ ಮಾಡುತ್ತದೆ. ಆಗ ಆ ವರ ಪೋಲೀಸರ ಮೊರೆ ಹೋಗುತ್ತಾನೆ. ಅಥವಾ ಡಾ.ಅಂಬೇಡ್ಕರ್ ಅವರ ಪ್ರತಿಮೆಗೆ ಅಪಮಾನವಾದಾಗ ಸರ್ಕಾರ ಮತ್ತೊಂದು ಹೊಸ ಪ್ರತಿಮೆಯನ್ನು ಅದೇ ಸ್ಥಳದಲ್ಲಿ ಸ್ಥಾಪಿಸುತ್ತದೆ. ಮತ್ತು ಹಾಗೆ ಅಪಮಾನಗೊಳಿಸಿದವರನ್ನು ಜೈಲಿಗೆ ತಳ್ಳುತ್ತದೆ.

ನ್ಯಾಯಾಂಗ ವ್ಯವಸ್ಥೆ ಆಧುನಿಕ ಸರ್ಕಾರದ ವ್ಯವಸ್ಥೆಯಲ್ಲಿ ಅತಿ ಮುಖ್ಯವಾದ ಸ್ಥಾನವನ್ನು ಪಡೆದಿದೆ. ಭಾರತೀಯ ನ್ಯಾಯಾಂಗ ವ್ಯವಸ್ಥೆ ದಲಿತರು ಸಂಪೂರ್ಣವಾಗಿ ತಿರಸ್ಕರಿಸಿರುವ ಮನುವಿನ ನ್ಯಾಯ ವ್ಯವಸ್ಥೆಯ ಸ್ಥಾನದಲ್ಲಿ ಬಂದಿರುತ್ತದೆ. ಮನುವಿನ ಜಾತಿ ಪದ್ಧತಿಯ ನ್ಯಾಯ ವ್ಯವಸ್ಥೆಯನ್ನು ಪ್ರಶ್ನಿಸುವ ಅದರ ವಿರುದ್ಧ ಹೋರಾಡುವ ಎಲ್ಲಾ ಶಕ್ತಿಗಳೂ ಅದನ್ನು ನಿಜವಾಗಿ ತಿರಸ್ಕರಿಸುತ್ತವೆ. ಭಾರತೀಯ ನ್ಯಾಯಾಂಗ ವ್ಯವಸ್ಥೆ ಮನು ಧರ್ಮವನ್ನು ಈಗಾಗಲೇ ಅನೇಕ ದಶಕಗಳ ಕಾಲ ಹೊರದಬ್ಬಿದೆ. ಕದನ ನಡದೇ ಇದೆ.

ಇದ್ದಕ್ಕಿದ್ದಂತೆ ಒಂದು ವಿಚಿತ್ರ ಪರಿಸ್ಥಿತಿ ಎದ್ದಿದೆ. ಶಾಸಕಾಂಗ ಮತ್ತು ನ್ಯಾಯಾಂಗ ಒಂದರೊಡನೊಂದು ಕಾದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮೊತ್ತ ಮೊದಲಿಗೆ ಹೀಗಾಗುತ್ತಿಲ್ಲ. ಅನೇಕ ಸಲ ಇದು ನಡೆದಿದೆ. ಅನೇಕ ವೇಳೆ ನ್ಯಾಯಾಂಗವು ಸಾಮಾಜಿಕ ಸ್ಪಂದನವಿಲ್ಲದೆ ಭಾವನಾ ಶೂನ್ಯವಾಗಿ ಸಂವಿಧಾನವನ್ನು ಸರಿಯಾಗಿ ವಿಶ್ಲೇಷಿಸುತ್ತಿಲ್ಲ ಎಂದು ಯೋಚಿಸಿ ಶಾಸಕಾಂಗವು ಸಂವಿಧಾನ ತಿದ್ದುಪಡಿಯ ಕಡೆಗೆ ವಾಲುತ್ತದೆ. ಸಂವಿಧಾನದ ತಿದ್ದುಪಡಿಯಾದಾಗ ನ್ಯಾಯಾಂಗ ತನ್ನ ಹೆಮ್ಮೆಯನ್ನು ಬದಿಗೊತ್ತಿ ಶಾಸಕಾಂಗ ಸರಿ ಎಂದು ಯೋಚಿಸಿದುದನ್ನೆ ತಾನೂ ಸರಿ ಎಂದು ಒಪ್ಪಬೇಕಾಗುತ್ತದೆ. ಈ ತಿದ್ದುಪಡಿಯ ಆಟ ಅನೇಕ ವೇಳೆ ಶಾಸಕಾಂಗ ಮತ್ತು ನ್ಯಾಯಾಂಗದ ಮಧ್ಯೆ ಅಪನಂಬಿಕೆಯನ್ನು ಹುಟ್ಟಿಹಾಕುತ್ತದೆ. ಶಾಸಕಾಂಗ ಸಾರ್ವಜನಿಕ ಮತದಾನದಿಂದ ಚುನಾಯಿತವಾಗುವುದರಿಂದ ಅತೀ ಮುಖ್ಯವಾಗಿದ್ದು, ಅನೇಕ ವೇಳೆ ಯೋಗ್ಯರಲ್ಲದ ವ್ಯಕ್ತಿಗಳು ಚುನಾಯಿತರಾಗಿ ಬರುವುದರಿಂದ ಪ್ರಾತಿನಿಧಿಕ ಪ್ರಜಾಪ್ರಭುತ್ವ ಸತ್ವ ಕಳೆದುಕೊಳ್ಳುತ್ತಿದೆ ಎಂದು ನ್ಯಾಯಾಂಗ ಭಾವಿಸುತ್ತದೆ.

ಸತ್ಯ ಏನೇ ಇರಲಿ, ಪ್ರಜಾಪ್ರಭುತ್ವದಲ್ಲಿ ಶಾಸಕಾಂಗ ಎಲ್ಲಕ್ಕಿಂತ ಮಹತ್ವದ ಸ್ಥಾನ ಪಡೆದಿದ್ದು, ಅದನ್ನು ನ್ಯಾಯಾಂಗವನ್ನು ಒಳಗೊಂಡಂತೆ ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ, ನ್ಯಾಯಾಂಗ ಪ್ರಜಾಪ್ರಭುತ್ವದ ಅತಿ ಮುಖ್ಯ ಸ್ತಂಭಗಳಲ್ಲಿ ಒಂದಾಗಿರುವುದರಿಂದ ಮತ್ತು ರಾಷ್ಟ್ರ ಈ ಸ್ತಂಭಗಳ ಮೇಲೆ ನಿಂತಿರುವುದರಿಂದ ನ್ಯಾಯಾಂಗಕ್ಕೆ ಅಪಮಾನವಾಗದಂತೆ ಅಥವಾ ನೋವಾಗದಂತೆ ನೋಡಿಕೊಳ್ಳಲು ಎಲ್ಲರೂ ಎಚ್ಚರಿಕೆ ವಹಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಶಾಸಕಾಂಗ ಮತ್ತು ನ್ಯಾಯಾಂಗಗಳ ಮಧ್ಯೆ ಪ್ರತಿರೋಧಗಳನ್ನು ತೋರುವವರಂತೆ ದಲಿತರು ಎಂದೂ ಕಾಣಿಸಿಕೊಳ್ಳಬಾರದು.

ದುರಾದೃಷ್ಟವಶಾತ್ ಈಗ ಅಂಥದ್ದೊಂದು ಕೆಲಸ ನಡೆಯುತ್ತಿದೆ. ಬಡ್ತಿಯಲ್ಲಿ ದಲಿತರು ಮತ್ತು ಆದಿವಾಸಿಗಳಿಗೆ ಮೀಸಲಾತಿ ನೀಡುವ ವಿಚಾರದಲ್ಲಿ ಸರ್ಕಾರ ನೀಡಿದ ಮೀಸಲಾತಿ ಸವಲತ್ತನ್ನು ಸರ್ವೋಚ್ಚ ನ್ಯಾಯಾಲಯ ಕಿತ್ತುಹಾಕಿದೆ ಎಂಬ ಒಂದು ಭಾವನೆ ಬರುವಂತಾಗಿದೆ. ಅದು ನಿಜವಲ್ಲ.

ಸರ್ವೋಚ್ಚ ನ್ಯಾಯಾಲಯ ಕೇಳಿರುವ ಮಾಹಿತಿ ಇಷ್ಟೆ. 1) ಹುದ್ದೆಗಳಿಗೆ ಸೇರಿದ ನಂತರದ ಹಿಂದುಳಿದಿರುವಿಕೆಯನ್ನು ಸಾಬೀತು ಪಡಿಸುವುದು. 2) ಎಲ್ಲೆಲ್ಲಿ ಮೀಸಲಾತಿ

ನ್ಯಾಯಾಂಗವನ್ನು ಅಪಮಾನಿಸಬೇಡಿ

ಇಲ್ಲವೊ, ಅಂಥ ಕಡೆ ಸರಿಯಾದ ಪ್ರಾತಿನಿಧಿತ್ವ ಸಿಗುತ್ತಿಲ್ಲ ಎಂದು ಸಾಬೀತುಪಡಿಸುವುದು. 3) ಮೀಸಲಾತಿ ನಂತರ ದಕ್ಷತೆಯನ್ನು ಉಳಿಸಿಕೊಳ್ಳಲಾಗುತ್ತದೆ ಎಂದು ದೃಢಪಡಿಸುವುದು.

ದಲಿತ ನಾಯಕರು ಸರ್ವೋಚ್ಚ ನ್ಯಾಯಾಲಯ ಬಡ್ತಿಯಲ್ಲಿ ಮೀಸಲಾತಿಯನ್ನು ಕಿತ್ತುಹಾಕಿದೆ ಎಂದು ಸುಳ್ಳಾಗಿ ಪ್ರಚಾರ ಮಾಡುತ್ತಾ ಸಮಾಜವನ್ನು ಅಡ್ಡದಾರಿಗೆಳೆದಿದ್ದಾರೆ. ನಮಗೆಲ್ಲರಿಗೂ ತಿಳಿದಿರುವಂತೆ, ದಲಿತರ ಹಿಂದುಳಿದಿರುವಿಕೆಗೆ ಅತಿ ಮುಖ್ಯಕಾರಣ ಅಸ್ಪೃಶ್ಯತೆ.

ನೆನಪಿಡಿ, ಸರ್ವೋಚ್ಚ ನ್ಯಾಯಾಲಯ ಸರ್ಕಾರವನ್ನು ಕೇಳುತ್ತಿರುವುದು ಮೇಲಿನದನ್ನು ಸಾಬೀತುಪಡಿಸಿ ಎಂದು. ಈಗ ಪ್ರಶ್ನೆ ಎಂದರೆ ಸರ್ಕಾರಿ ಕೆಲಸವನ್ನು ಪಡೆದ ನಂತರವೂ ಅಸ್ಪೃಶ್ಯತೆ ಉಳಿಯುತ್ತದೆ ಎಂಬುದನ್ನು ಸಾಬೀತು ಪಡಿಸುವುದು. ಇದು ಅಷ್ಟು ಕಷ್ಟವೇ? ಅಸ್ಪೃಶ್ಯತೆ ಕಡಿಮೆಯಾಗುತ್ತಿರುವುದಾದರೂ ಇನ್ನೂ ಉಳಿದಿದೆ ಎಂಬುದನ್ನು ಸಾಬೀತು ಪಡಿಸಲು ನೂರಾರು ದಾರಿಗಳಿವೆ.

ಮೀಸಲಾತಿಯನ್ನು ಎಲ್ಲೆಲ್ಲಿ ಅನುಸರಿಸುತ್ತಿಲ್ಲವೋ ಅಲ್ಲೆಲ್ಲಾ ದಲಿತರ ಪ್ರಾತಿನಿಧಿತ್ವ ಕಡಿಮೆ ಇದೆ ಎಂಬುದನ್ನು ಸಾಬೀತು ಪಡಿಸಲು ಅಷ್ಟು ಕಷ್ಟವೇ? ಸರ್ಕಾರ ಸಂವಿಧಾನದ ತಿದ್ದುಪಡಿಯನ್ನು ತರಲು ರಾಜ್ಯಸಭೆಯಲ್ಲಿ ಶಾಸನವನ್ನು ಮಂಡಿಸಿದ ಸಂದರ್ಭದಲ್ಲಿ ದೆಹಲಿಯ ವಾರ್ತಾ ಪತ್ರಿಕೆಯೊಂದು ಕೇಂದ್ರ ಸರ್ಕಾರದ ಉಚ್ಚ ಹುದ್ದೆಗಳಲ್ಲಿ ದಲಿತರ ಅಂಕಿ-ಸಂಖ್ಯೆಗಳ ವರದಿಯನ್ನು ಪ್ರಕಟಿಸಿತು. ಆ ವರದಿಯಂತೆ 149 ಕಾರ್ಯದರ್ಶಿ ಮಟ್ಟದ ಹುದ್ದೆಗಳಲ್ಲಿ ದಲಿತ ಅಧಿಕಾರಿಗಳಾರೂ ಇರುವುದಿಲ್ಲ. ಸರ್ವೋಚ್ಚ ನ್ಯಾಯಾಲಯ ಕೇಳಿರುವ ಮಾಹಿತಿಯನ್ನು ನೀಡಲು ಕೆಲ ದಿನಗಳಲ್ಲದಿದ್ದರೆ ಕೆಲ ವಾರಗಳಷ್ಟೇ ಬೇಕಾಗಬಹುದು. ಆ ವರದಿಯನ್ನು ಕಳುಹಿಸಿಕೊಡುವಂತೆ ಕೇಳುವ ಬದಲು ದಲಿತ ನಾಯಕತ್ವ ಸಂವಿಧಾನದ ತಿದ್ದುಪಡಿ ಬೇಕೆಂದು ಕೇಳಿತು. ಸರ್ಕಾರ ಅದಕ್ಕೆ ಸುಲಭವಾಗಿ ಒಪ್ಪಿಕೊಂಡಿತು.

ದಲಿತರು ಈಗ ಎಲ್ಲಿ ನಿಂತಿದ್ದಾರೆ? ಈ ಸಂವಿಧಾನ ತಿದ್ದುಪಡಿಯಿಂದ ದಲಿತರು ಪಡೆದುಕೊಳ್ಳುತ್ತಿರುವ ಹಕ್ಕನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಸಾಕ್ಷ್ಯವನ್ನು ನೀಡುವಂತಹ ಬಹಳ ಸುಲಭ ಪ್ರಕ್ರಿಯೆಯಿಂದ ಪಡೆದುಕೊಳ್ಳಬಹುದಿತ್ತು. ಆದರೆ ಯೋಚನಾ ರಹಿತ ದಲಿತ ನಾಯಕತ್ವ ಮತ್ತು ಬುದ್ಧಿಹೀನ ಸರ್ಕಾರ ದಲಿತರು ಶತಾಯಗತಾಯ ನ್ಯಾಯಾಂಗವನ್ನು ನಿರ್ನಾಮ ಮಾಡುವ ಜನರಾಗಿ ಕಾಣಿಸಿಕೊಳ್ಳುವಂತೆ ಮಾಡಿವೆ.

'ದಲಿತ' ಕಲ್ಪನೆಗೆ ಇದು ಅತಿ ಕೆಡಕು ಮಾಡುತ್ತದೆ. ಮನು ಧರ್ಮವನ್ನು ನಿಧಾನವಾಗಿಯಾದರೂ, ಆದರೆ ನಿಶ್ಚಿತವಾಗಿ ಕಿತ್ತೊಗೆಯುತ್ತಿರುವ ನ್ಯಾಯಾಂಗವನ್ನು ಕೆಂಗಣ್ಣಿನಿಂದ ದುರುಗುಟ್ಟಿ ನೋಡುವವರಿಗಾಗಿ ದಲಿತರು ಎಂದೂ ಕಾಣಿಸಿಕೊಳ್ಳಬಾರದು.

* * *

ಉತ್ತರ ಭಾರತದ ಠಾಕ್ರೆಗಳು

ಮೂರು ವರ್ಷಗಳ ಹಿಂದೆ ನಾನು ಮುಂಬೈಗೆ ಬೇಟಿ ನೀಡಿದ್ದೆ. ಸ್ನೇಹಿತರೊಬ್ಬರು ನನಗೊಂದು ಕಾರ್ ಕಳುಹಿಸಿದ್ದರು. ಅದರ ಡ್ರೈವರ್ ಮರಾಠಿಯವನಾಗಿದ್ದ. ಅವರು ಕಾರ್ ಕಳುಹಿಸುವ ಜೊತೆಗೆ ಡ್ರೈವರ್ ಮರಾಠಿಯವನಾಗಿರುವ ಬಗ್ಗೆ ಕ್ಷಮೆ ಯಾಚಿಸಿದರು. ನನಗೆ ಕಾರ್ ಕಳುಹಿಸಿದ್ದವರು ಮರಾಠಿಯವರೇ ಆಗಿದ್ದರು.

ನಾನು ಆಗಾಗ್ಗೆ ಮಹಾರಾಷ್ಟ್ರಕ್ಕೆ ಭೇಟಿ ನೀಡುತ್ತಿರುವುದರಿಂದ ಅಲ್ಲಿ ಕೆಲವು ಪ್ರಶ್ನೆ ಕೇಳುವುದನ್ನು ಪರಿಪಾಠ ಮಾಡಿಕೊಂಡಿದ್ದೇನೆ. ಹೆಚ್ಚು ವೇಳೆ ನನ್ನ ದಲಿತ ಉದ್ಯಮಿ ಮರಾಠಿ ಕೆಲಸಗಾರರು ತಮ್ಮ ಕೊನೆಯ ಆಯ್ಕೆ ಎಂದು ಒತ್ತಿಹೇಳುತ್ತಾರೆ. ಮಹಾರಾಷ್ಟ್ರದಲ್ಲಿ ಹೆಚ್ಚು ಕೆಲಸ ನೀಡುತ್ತಿರುವವರು ಉತ್ತರ ಮತ್ತು ದಕ್ಷಿಣ ಭಾರತದ ಕೆಲಸಗಾರರನ್ನೇ ಆಯ್ದುಕೊಳ್ಳುತ್ತಾರೆ. ಈ ಒಂದು ವಿಚಿತ್ರ ಪರಿಸ್ಥಿತಿಗೆ ನಾನು ಮಹಾರಾಷ್ಟ್ರವನ್ನು ದೂಷಿಸಬೇಕಿಲ್ಲ. ಈ ಬೇಸಿಗೆಯಲ್ಲಿ ನಾನು ಪಂಥ್ ನಗರಕ್ಕೆ ಭೇಟಿ ನೀಡಿದ್ದೆ. ಅಲ್ಲಿ ನನಗೆ ಒಂದು ವಿಶಿಷ್ಟವಾದ ಸರ್ಕಾರಿ ನಿರ್ದೇಶನದ ಬಗ್ಗೆ ತಿಳಿಸಲಾಯಿತು. ಎಲ್ಲಾ ಕೈಗಾರಿಕೆಗಳೂ ಉತ್ತರ ಕಾಂಡದಲ್ಲಿ ಜನಿಸಿದ ಶೇಕಡ 70ರಷ್ಟು ಕಡಿಮೆ ಕೆಲಸಗಾರರನ್ನು ನೇಮಿಸಿಕೊಳ್ಳಬೇಕೆಂದು ಅಲ್ಲಿಯೂ ನಿರ್ದೇಶನವಿದೆ. ನನ್ನ ಅತಿಥೇಯರು ಸ್ಥಳೀಯ ಕೆಲಸಗಾರರನ್ನು ನಿಭಾಯಿಸುವುದು ಎಷ್ಟು ಕಷ್ಟ ಎಂಬುದನ್ನು ತಿಳಿಸಿದರು.

ಉತ್ತರ ಪ್ರದೇಶ ಮತ್ತು ಬಿಹಾರಗಳಲ್ಲಿಯೂ ಹೊರಗಿನ ಕೆಲಸಗಾರರನ್ನು ಹೆಚ್ಚು ಇಷ್ಟಪಡುವ ಕೈಗಾರಿಕೆಗಳಿದ್ದರೆ, ನನಗೇನೂ ಆಶ್ಚರ್ಯವಾಗುವುದಿಲ್ಲ. ಭಾರತದ ಸಂದರ್ಭದಲ್ಲಿ ಇದು ಹೆಚ್ಚು ವೇಳೆ ಎಲ್ಲಾ ಕಡೆಯೂ ಇರುವಂತಿದೆ. ಸ್ಥಳೀಯರು ಸಮಸ್ಯೆಗಳನ್ನು ಸೃಷ್ಟಿಸುತ್ತಾರೆ ಮತ್ತು ಅನೇಕ ವೇಳೆ ಕೈಗಾರಿಕೆಗಳನ್ನು ನಡೆಸುವುದಕ್ಕೆ ಕಷ್ಟವಾಗುವಂತಹ ಕ್ರಿಯೆಗಳಲ್ಲಿ ತೊಡಗುತ್ತಾರೆ. ಠಾಕ್ರೆಯವರಂತವರಿದ್ದರೆ ಸಮಸ್ಯೆಗಳು ಇನ್ನೂ ಉಲ್ಬಣವಾಗುತ್ತವೆ. ಮಹಾರಾಷ್ಟ್ರ ಹುದ್ದೆಗಳನ್ನು ನೀಡುವ ರಾಜ್ಯ. ಮುಂಬೈ, ಪುಣೆ, ನಾಗ್ಪುರ, ಸೂರತ್, ಔರಂಗಾಬಾದ್, ನಾಸಿಕ್ ಮುಂತಾದ ಪಟ್ಟಣಗಳು ಭಾರತದ ಎಲ್ಲ ಕಡೆ ನಂಬಿಕೆ ಕಳೆದುಕೊಂಡವರಿಗೆ ನಂಬಿಕೆ ನೀಡುವ ಪಟ್ಟಣಗಳು.

ಆದರೆ ಉತ್ತರ ಪ್ರದೇಶ ಮತ್ತು ಬಿಹಾರದಂತ ರಾಜ್ಯಗಳು ಉದ್ಯೋಗ ಹುಡುಕುವವರಿಂದ ತುಂಬಿರುವ ರಾಜ್ಯಗಳು. ಜಮೀನುದಾರರಿಂದ ಮತ್ತು ಕೃಷಿ ಕೆಲಸದಿಂದ ತಪ್ಪಿಸಿಕೊಳ್ಳಲು ಹಿಂದಿ ರಾಜ್ಯಗಳ ಸಾಮಾನ್ಯ ಪ್ರಜೆಗಳು ಮಹಾರಾಷ್ಟ್ರದ ನಗರಗಳಿಗೆ ಹರಿದು ಹೋಗುತ್ತಾರೆ. ಮಹಾರಾಷ್ಟ್ರದ ನಗರಗಳಲ್ಲಿ ಕೆಲಸ ಮಾಡುತ್ತಾ ಲಕ್ಷ ಲಕ್ಷ ಜನ ದೊಡ್ಡದಾಗಿ ಬೆಳೆದಿದ್ದಾರೆ.

ಅಲ್ಲೇ ಸಮಸ್ಯೆಯಿರುವುದು, ಸ್ಥಳೀಯರಾಗಿ ಸಾಮಾನ್ಯ ಮಹಾರಾಷ್ಟ್ರೀಯರು ಸಮಸ್ಯೆ ಉತ್ಪಾದಕರಾಗಿ ಮತ್ತು ಆ ಕಾರಣಕ್ಕಾಗಿ ಕೈಗಾರಿಕೆಗಳಲ್ಲಿನ ಹುದ್ದೆಗಳಿಗೆ ಅನರ್ಹರಾಗಿದ್ದಾರೆ. ಅವರಿಗೆ ಕೆಲಸ ನೀಡಲು ಯಾರೂ ಇಷ್ಟಪಡುವುದಿಲ್ಲ. ಒಮ್ಮೆ ಇದು ಅವರ ಅರಿವಿಗೆ ಬಂದ ನಂತರ ಅವರು ಪ್ರಯತ್ನ ಮಾಡುವುದನ್ನೇ ಬಿಡುತ್ತಾರೆ. ಬಿಹಾರ, ಉತ್ತರ ಪ್ರದೇಶ ಮತ್ತು ಹತ್ತಿರದ ರಾಜ್ಯಗಳಾದ ಆಂಧ್ರ ಪ್ರದೇಶ ಮತ್ತು ಕರ್ನಾಟಕ ಇಲ್ಲಿಯ ಕೆಲಸಗಾರರಿಗೆ ಬೇಡಿಕೆ ಇದೆ ಎಂದು ತಿಳಿದು ಬಂದ ಕೂಡಲೆ ಈ ರಾಜ್ಯಗಳಿಂದ ವಲಸೆ ಬರುವುದು ಸಾಮಾನ್ಯವಾಯಿತು.

ಮುಂಬೈ ವಿಸ್ತರಿಸಿದಂತೆ ಅಲ್ಲಿಯ ರಸ್ತೆಗಳಲ್ಲಿ ಮರಾಠಿಗಳ ಸಂಖ್ಯೆ ಕಡಿಮೆಯಾಯಿತು. ಹಣ್ಣು ತರಕಾರಿ ಅಂಗಡಿಗಳನ್ನು ಮರಾಠಿಗಳಲ್ಲದವರು ನಡೆಸುತ್ತಾರೆ.

ಉತ್ತರ ಪ್ರದೇಶ ಮತ್ತು ಬಿಹಾರವನ್ನು ಇಂದು ಆಳುವವರು ತಮ್ಮ ರಾಜ್ಯಗಳಲ್ಲಿ ಹೊರದೇಶೀ ಶಾಪಿಂಗ್ ಮಾಲ್‌ಗಳು ತೆರೆಯುವುದಕ್ಕೆ ಬಿಡುವುದಿಲ್ಲ. ಆ ಮಾಲ್‌ಗಳು ಮಹಾರಾಷ್ಟ್ರದಲ್ಲಿ ತಲೆ ಎತ್ತುತ್ತವೆ. ಇಲ್ಲಿಯ ನಿರುದ್ಯೋಗಿ ಯುವಕರು ಮಾಲ್‌ಗಳಲ್ಲಿ ಕೆಲಸ ಮಾಡಲು ಮುಂಬೈ ಮತ್ತು ಪುಣೆಗಳಿಗೆ ವಲಸೆ ಹೋಗುತ್ತಾರೆ. ಅವರು ಠಾಕ್ರೆಗಳ ಬೈಗಳನ್ನು ತಾಳಿಕೊಳ್ಳಬೇಕಾಗಿರುತ್ತದೆ.

ಹಾಲು ಉತ್ಪಾದನೆ ಸಹ ಮರಾಠಿಗರಲ್ಲದವರ ಕೈಸೇರಿತು. ಎಲ್ಲಕ್ಕಿಂತ ಎದ್ದು ಕಾಣುವುದೆಂದರೆ ಬಾಲಿವುಡ್‌ನಲ್ಲಿ ಸಹ ಮರಾಠೇತರರು ವಿಜೃಂಭಿಸಿದ್ದಾರೆ.

ನಿಧಾನವಾಗಿ ಮುಂಬೈ ಒಂದು ಬೃಹತ್ ನಗರವಾಗಿ ಬೆಳೆಯಿತು ಮತ್ತು ಅದು ಭಾರತದ ಹಣಕಾಸು ರಾಜಧಾನಿ ಎಂಬ ಹಣೆಪಟ್ಟಿಯನ್ನು ಪಡೆಯಿತು. ಇದರಿಂದ ದಿಗ್ಭ್ರಮೆಗೊಂಡ ಸಾಮಾನ್ಯ ಮರಾಠಿಗನಿಗೆ ನಿರ್ಲಕ್ಷಿತನ ಪ್ರಜ್ಞೆ ಕಾಡತೊಡಗಿತು. ವೈಷಮ್ಯದ ಬೀಜ ಬಿತ್ತಲಾಯಿತು. ಈ ಬೀಜಗಳಿಗೆ ನೀರೆರೆದು ಪೋಷಿಸಲು ಒಬ್ಬ ಠಾಕ್ರೆ ಅಷ್ಟೆ ಬೇಕಿತ್ತು. ಇದರ ಪರಿಣಾಮವೆಂದರೆ ಶಿವಸೇನೆ ಎಂಬ ಗಿಡ. ಈ ಗಿಡ ಠಾಕ್ರೆಯ ಅಸ್ನಾಹಾರಗಳ ಕಣಜ. ನಿಧಾನವಾಗಿ ಮರಾಠಿಗರ ಸಣ್ಣ ಗುಂಪು ತಮ್ಮ ಜೀವನೋಪಾಯಕ್ಕಾಗಿ ಶಿವಸೇನೆಗೆ ಜಿಗಿಯಿತು. ದ್ವೇಷದ ಬೆಳೆ ಎತ್ತರವಾಗಿ ಬೆಳೆಯುತ್ತಿದೆ.

ಆದರೆ, ಉತ್ತರ ಭಾರತದ ರಾಜ್ಯಗಳಲ್ಲಿ ಠಾಕ್ರೆಗಳಿಲ್ಲವೆ! 2008 ಅಕ್ಟೋಬರ್‌ನಲ್ಲಿ ಬಿಹಾರದಲ್ಲಿ ಸಹ ಒಬ್ಬ ಠಾಕ್ರೆ ಕೆಲಸ ಮಾಡುವುದನ್ನು ನಾವು ಕಂಡೆವು. ರಾಹುಲ್ ರಾಜ ಎಂಬ ಹೆಸರಿನ ಒಬ್ಬ ಯುವಕ ಆರು ಸುತ್ತು ಗುಂಡುಗಳನ್ನೊಳಗೊಂಡ ಒಂದು ರಿವಾಲ್ವರ್‌ನೊಂದಿಗೆ ಮುಂಬೈ ತಲುಪಿದ. ಅವನು ಹನ್ನೆರಡು ಪ್ರಯಾಣಿಕರಿದ್ದ ಒಂದು ಬಸ್ಸನ್ನು ಅಪಹರಿಸಿದ. ಅವನು ಗೊತ್ತು ಗುರಿಯಿಲ್ಲದೆ ತನ್ನ ರಿವಾಲ್ವರ್‌ನಿಂದ ಶೂಟ್ ಮಾಡಿದ. ಠಾಕ್ರೆ ವಿರುದ್ಧ ಘೋಷಣೆಗಳನ್ನು ಕೂಗಿದ. ರಾಹುಲ್ ರಾಜ್ ಸಿಂಗ್ ಆರಿಸಿದ ಗುಂಡಿನಿಂದ ಪ್ರಯಾಣಿಕನೊಬ್ಬನಿಗೆ ಗಾಯವಾಯಿತು.





ಅಂಥ ಒಂದು ಪರಿಸ್ಥಿತಿಯಲ್ಲಿ ಪ್ರಪಂಚದ ಯಾವುದೇ ಮೂಲೆಯ ಪೊಲೀಸರೂ ಏನು ಮಾಡುತ್ತಾರೆ? ಅವರು ಗುಂಡು ಹಾರಿಸುವವನನ್ನು ಗುಂಡು ಹೊಡೆದು ಕೊಲ್ಲುತ್ತಾರೆ. ಅದರಂತೆ ಈ ಬಿಹಾರದ ಯುವಕನನ್ನು ಕೊಲ್ಲಲಾಯಿತು. ಪ್ರಜಾಸತ್ತಾತ್ಮಕವಾಗಿ ಚುನಾಯಿತಗೊಂಡು ಬಿಹಾರದ ಮುಖ್ಯಮಂತ್ರಿಯಾಗಿರುವ ನಿತೀಶ್ ಕುಮಾರ್ ಎಂಬ ನಾಯಕನ ಸ್ಪಂದನ ಈ ಘಟನೆಗೆ ಹೇಗಿರಬೇಕಿತ್ತು? ಭಾರತ ಎಂದು ಕರೆಯಲ್ಪಡುವ ದೊಡ್ಡ ರಾಷ್ಟ್ರದ ಪ್ರಜೆಯಾಗಿ ಉಗ್ರವಾದಿಯಂತೆ ನಡೆದುಕೊಳ್ಳುತ್ತಿದ್ದ ಒಬ್ಬ ವ್ಯಕ್ತಿಯನ್ನು ಕೊಂದದ್ದಕ್ಕಾಗಿ ಮುಂಬೈನ ಪೊಲೀಸರಿಗೆ ಅಭಿನಂದಿಸಬೇಕಿತ್ತು.

ಆದರೆ ನಿತೀಶ್ ಕುಮಾರ್‌ಗೆ ಬಿಹಾರಿಗಳ ಪರವಾಗಿ ತನ್ನ ಜೀವವನ್ನೇ ತ್ಯಾಗ ಮಾಡಿದ ಬಿಹಾರದ ವೀರನಂತೆ ರಾಹುಲ್ ರಾಜ್ ಕಂಡ. ಬಿಹಾರದ ಠಾಕ್ರೆಯಂತೆ ನಿತೀಶ್ ಕುಮಾರ್ ಎಲ್ಲ ರೀತಿಯ ನಾಚಿಕೆಯನ್ನೂ ಬಿಟ್ಟು ರಾಹುಲ್ ರಾಜ್‌ನ ತಂದೆ–ತಾಯಿಗಳಿಗೆ ಸಾಂತ್ವನ ಹೇಳಲು ನಡೆದರು. ನಿಶ್ಚಯವಾಗಿ ಬಿಹಾರ ಮತ್ತು ಉತ್ತರ ಪ್ರದೇಶದ ಠಾಕ್ರೆಗಳು ಸಹ ಠಾಕ್ರೆಯಂತೆಯೆ ಯೋಚಿಸುತ್ತಾರೆ. ಎಲ್ಲ ವಿಧದ ಠಾಕ್ರೆಗಳು ತಾವು ಮೊದಲು ಭಾರತೀಯರು ಎಂದು ಯೋಚಿಸುವುದಕ್ಕೆ ಅಶಕ್ತರು. ನಿತೀಶ್ ಕುಮಾರ್ ತಾನು ಮೊದಲು ಭಾರತೀಯ ಎಂದು ಯೋಚಿಸಿದ್ದಿದ್ದರೆ ಅವನು ಬಿಹಾರಿ ವೀರನ ತಂದೆ–ತಾಯಿಗಳ ಬಳಿ ಹೋಗುತ್ತಿರಲಿಲ್ಲ.

ಅದಲ್ಲದೆ ಉತ್ತರ ಭಾರತದ ಠಾಕ್ರೆಗಳ ಹಿಂದಿ ಹೃದಯ ಆ ರಾಜ್ಯಗಳ ಯುವಕರು ಮಹಾರಾಷ್ಟ್ರದ ನಗರಗಳಿಗೇಕೆ ಓಡುತ್ತಾರೆ ಎಂಬುದನ್ನು ನಿಜವಾಗಿಯೂ ವಿವರಿಸುವುದಿಲ್ಲ. ಹಿಂದಿಯ ಹೃದಯ ಭಾಗದಲ್ಲಿ ಹುದ್ದೆಗಳೇಕೆ ಅತಿ ನಿಧಾನವಾಗಿ ಸೃಷ್ಟಿಯಾಗುತ್ತಿವೆ? ಹಿಂದಿ ಹೃದಯ ಭಾಗ ಹಿಂದುಳಿದಿರುವಿಕೆಯ ಅತಿ ದೊಡ್ಡ ಚಿಹ್ನೆಯಾಗಿದೆ ಏಕೆ?

ಉತ್ತರದ ಹಿಂದುಳಿದಿರುವಿಕೆಯನ್ನು ಅರ್ಥ ಮಾಡಿಕೊಳ್ಳುವುದು ರಾಕೆಟ್ ವಿಜ್ಞಾನವೇನೂ ಅಲ್ಲ. ಉತ್ತರ ಪ್ರದೇಶ ಮತ್ತು ಬಿಹಾರ ಭಾರತದ ಅತಿ ದೊಡ್ಡ ರಾಜ್ಯಗಳು. ನಿತೀಶ್ ಕುಮಾರ್ ಬಿಹಾರವನ್ನು ಆಳುತ್ತಿದ್ದರೆ ಅಖಿಲೇಶ್ ಯಾದವ್ ಉತ್ತರ ಪ್ರದೇಶವನ್ನು ಆಳುತ್ತಿದ್ದಾರೆ. ಇವರಿಬ್ಬರೂ ಸಗಟು ಉದ್ದಿಮೆಯಲ್ಲಿ ಹೊರ ದೇಶಗಳು ಹಣ ತೊಡಗಿಸುವುದನ್ನು ವಿರೋಧಿಸುತ್ತಾರೆ.

ಬೇರೆ ಮಾತುಗಳಲ್ಲಿ ಹೇಳುವುದಾದರೆ ಉತ್ತರ ಪ್ರದೇಶ ಮತ್ತು ಬಿಹಾರವನ್ನು ಇಂದು ಆಳುವವರು ತಮ್ಮ ರಾಜ್ಯಗಳಲ್ಲಿ ಹೊರದೇಶೀ ಶಾಪಿಂಗ್ ಮಾಲ್‌ಗಳು ತೆರೆಯುವುದಕ್ಕೆ ಬಿಡುವುದಿಲ್ಲ. ಆ ಮಾಲ್‌ಗಳು ಮಹಾರಾಷ್ಟ್ರದಲ್ಲಿ ತಲೆ ಎತ್ತುತ್ತವೆ. ಇಲ್ಲಿಯ ನಿರುದ್ಯೋಗಿ ಯುವಕರು ಮಾಲ್‌ಗಳಲ್ಲಿ ಕೆಲಸ ಮಾಡಲು ಮುಂಬೈ ಮತ್ತು ಪುಣೆಗಳಿಗೆ ವಲಸೆ ಹೋಗುತ್ತಾರೆ. ಅವರು ಠಾಕ್ರೆಗಳ ಬೈಗಳನ್ನು ತಾಳಿಕೊಳ್ಳಬೇಕಾಗಿರುತ್ತದೆ.

ಇದು ನಿಜವಾಗಿಯೂ ದುರದೃಷ್ಟಕರ. ಮುಂಬೈನ ಠಾಕ್ರೆಗಳು ಪ್ರಪಂಚದ ಮುಂದೆ ಧಿಕ್ಕರಿಸಲ್ಪಡುತ್ತಾರೆ. ಉತ್ತರ ಪ್ರದೇಶ ಮತ್ತು ಬಿಹಾರದ ಠಾಕ್ರೆಗಳು ಯಾವುದೇ ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಾರೆ. ಅದು ನಿಜವಾಗಿಯೂ ಭಾರತಕ್ಕೆ ಕೆಡುಕುಮಾಡುವಂತಹುದು. ■

ಅವನು ಹೇಳುತ್ತಿದ್ದಾನೆ

ನಾನೊಬ್ಬ ಭಯೋತ್ಪಾದಕ
ಏಕೆಂದರೆ ನಾನೊಬ್ಬ ಮುಸಲ್ಮಾನ
ಹೀಗೆಂದು ಲೋಕದ ಠೇಕೇದಾರ
ಅವನು ಹೇಳುತ್ತಿದ್ದಾನೆ

ನಾನೊಬ್ಬ ಮಾನವ ಪೀಡಕ
ಏಕೆಂದರೆ ನಾನು ಕಾಶ್ಮೀರಿ
ಹಾಗೆಂದು ಸೂತಕದ ಮನೆವಾಸಿ
ಅವನು ಹೇಳುತ್ತಿದ್ದಾನೆ

ನಾನೊಬ್ಬ ಹಿಂಸಕ ಪ್ರಾಣಿ
ಏಕೆಂದರೆ ಬದುಕಿಗಾಗಿ ಹೋರಾಡುತ್ತೇನೆ
ಹಾಗೆಂದು ಮದ್ದಿನ ಮನೆಯಲ್ಲಿ ನಿಂತ
ಅವನು ಹೇಳುತ್ತಿದ್ದಾನೆ

ನಾನೊಬ್ಬ ಕ್ರೂರಿ, ಕೊಲೆಗಡುಕ
ಏಕೆಂದರೆ ಆತ್ಮರಕ್ಷಣೆ ಬೇಕೆನ್ನುವೆ
ಹಾಗೆಂದು ಮನುಜರ ಸುಟ್ಟ ಬೂದಿ ಬೆಟ್ಟ
ಎಲುಬುಗಳ ಗುಡ್ಡೆಯ ಮೇಲೆ ನಿಂತ
ಅವನು ಹೇಳುತ್ತಿದ್ದಾನೆ

ನಾನೊಬ್ಬ ಯುದ್ಧಕೋರ
ರೊಟ್ಟಿಗಾಗಿ ಮಾರಿಕೊಳ್ಳಲಿಲ್ಲ
ಹಾಗೆಂದು ನೆರೆಯವರ ತುತ್ತು ಕಿತ್ತು
ರಕ್ತದ ಹೊಳೆ ಹರಿಸುತ್ತಿರುವ
ಅವನು ಹೇಳುತ್ತಿದ್ದಾನೆ

– ಡಾ|| ಕೆ ಷರೀಫಾ

(33ನೇ ಪುಟದಿಂದ)

ಮಕ್ಕಳ ಅನ್ನದಲ್ಲಿ ಕಲ್ಲು ಮಣ್ಣು...

ಕಾಕ, ವಾಯಸ, ಕುದುರೆ–ಅಶ್ವ, ತುರಗ, ಭರತ–ಒಬ್ಬ ಮುನಿ, ದಶರಥನ ಮಗ, ದುಶ್ಯಂತನ ಮಗ, ಹುಲಿ–ವನ್ಯಜೀವಿ, ವ್ಯಾಘ್ರ

ಮಕ್ಕಳಿಗೆ ಹೆಚ್ಚೆಚ್ಚು ಬಳಕೆಯ ಕನ್ನಡ ಪದಗಳನ್ನು ಪರಿಚಯಿಸಬೇಕು ಎನ್ನುವ ನೆಪದಲ್ಲಿ ಹೀಗೆ ಹತ್ತಾರು ತಪ್ಪು ದಾರಿಗಳನ್ನು ಹಿಡಿದಿರುವುದು ಇಲ್ಲಿ ಕಾಣುತ್ತದೆ. ಕಲಿಯುವ ಮಕ್ಕಳನ್ನು ಯಾವ ಬಗೆಯಿಂದಲೂ ಸರಿಯಾಗಿ ಗಮನದಲ್ಲಿರಿಸಿಕೊಳ್ಳದ ಎಚ್ಚರಗೇಡಿತನವೇ ಇಲ್ಲಿ ಹೆಚ್ಚಾಗಿ ಕಾಣುತ್ತದೆ. ನಾವು ನಮ್ಮದಲ್ಲದ ನುಡಿಯ ಪದಗಳನ್ನು, ತಿರುಳನ್ನು ಅರಿಯಲಾಗದ ಶಬ್ದಗಳನ್ನು, ಹೊಂದಿಸಿಕೊಳ್ಳಲಾಗದ ಪದ ಪುಂಜಗಳನ್ನು, ಚಿತ್ರಗಳನ್ನು ಹೀಗೆ ಬಳಸುವುದರ ಮೂಲಕ ನಮ್ಮ ಬದುಕಿಗೆ ಸಂಬಂಧಿಸಿದ ಏನನ್ನೂ ತಲುಪಿಸುತ್ತಿರುವುದಿಲ್ಲ. ಬದಲಾಗಿ ಈ ಪದಗಳು, ಪದಕಂತೆಗಳು ನಮ್ಮ ಅರಿವಿಗೇ ಬರದಿರುವ ಏನನ್ನೋ ಹುಡುಕುತ್ತಲೇ ಇರಬೇಕಾದ ಮರುಳುತನಕ್ಕೆ ತಳ್ಳಿಬಿಡುತ್ತವೆ. ಹಾಗೆ ಸಿಗಲಾರದ್ದನ್ನು ಜೀವಿಸುವ ನಾವೂ ಸಹ ಇದೇ ಬಗೆಯ ಪದಗಳು, ಪದಕಂತೆಗಳನ್ನು ಉಚ್ಚರಿಸುತ್ತಾ 'ದೊಡ್ಡಜನ'ವಾಗಿ ತೋರಿಸಿಕೊಳ್ಳಲು ಹಪಾಹಪಿಸುವುದನ್ನು ಕಲಿಸುತ್ತವೆ. ಈವರೆಗೆ ಕಲಿಸುವವರು ಮತ್ತು ಕಲಿಯುವವರ ನಡುವೆ ಒಂದು ಸಲಿಗೆಯ ಸಂಬಂಧ ಇಲ್ಲದಿರಲು ಕಾರಣವೂ ಇದಾಗಿದೆ ಎಂಬುದನ್ನು ನಾವು ಇವತ್ತಿಗೂ ಗಮನಿಸಿಕೊಂಡೇ ಇಲ್ಲ. ಅಥವಾ ಇಂತಹ ಮರುಳುತನಕ್ಕೆ ಬಿದ್ದಿರುವ ನಮಗೆ ದೇಶ, ಕೋಶ, ಮಾತು ಮತ್ತು ಮಾನವ ನಡುವಳಿಕೆಗಳ ನೆಪದಲ್ಲಿ ಇಲ್ಲದ ನೈತಿಕ ದಾರಿಗಳ ಬೆನ್ನು ಹತ್ತಿ ಇಲ್ಲದ್ದನ್ನು ತಡಕಾಡುವಂತಾಗಿದೆಯಷ್ಟೆ. ಇದು ನಿಜವಾಗಿಯೂ 'ಪಠ್ಯಪುಸ್ತಕ ಪರಿಷ್ಕರಣ ಸಮಿತಿ'ಯು ಹೇಳಿ(ಕನ್ನಡ ಕಲಿ–ನಲಿ 1, 2010)ರುವಂತೆ;

ಹೊಸ ಆಶಯ ಮತ್ತು ಕಾಲಧರ್ಮಕ್ಕೆ ಹೊಂದಿಕೊಂಡ ವೈಜ್ಞಾನಿಕ ಶೈಕ್ಷಣಿಕ ಕ್ರಮ, ವ್ಯಕ್ತಿತ್ವ ವಿಕಸನಕ್ಕೆ ಮಾದರಿಯೇ?

ಇಲ್ಲಿನವು ನಿಜಕ್ಕೂ ಸರಿಯಾಗಿ ಪೂರಕ ಕಲಿಕೆಗೆ ಅನುವಾಗುವ ಪರಾಮರ್ಶನ ಭಾಗಗಳೇ?

ಇವು ನಿಜವಾಗಿಯೂ, ಓದು–ಬರಹವನ್ನು ಒಟ್ಟೊಟ್ಟಿಗೆ ಸೂತ್ರಬದ್ಧವಾಗಿ ಕಲಿಸುತ್ತಿರುವ ಸಂಗತಿಗಳೇ?

ಇವು ಮುಂದಿನ ಪಾಠಕ್ಕೆ ಪೀಠಿಕೆಯಾಗಿ ಬಳಸಿ ಕಲಿಸಬೇಕಾದ ಕಲಿಕಾ ಹಂತದ ಸೂತ್ರಗಳೇ?

ನಾಡಿನ ಸಾಂಸ್ಕೃತಿಕ ಭವ್ಯತೆ, ಭಾಷಿಕ ಮೌಲ್ಯಕ್ಕೆ ಮೂರ್ತರೂಪ ನೀಡುವುದು ಎಂದರೆ ಇದೇನಾ?

ಕನ್ನಡ ಬದುಕನ್ನು ಕನ್ನಡದಲ್ಲಿ ಸರಿಯಾಗಿ ಪರಿಚಯಿಸಲಾಗದ ಇಂತಹ ಕಲಿಕೆಯ ಸಂಗತಿಗಳ ಮೂಲಕವೇ ಪದರಚನೆ, ಕಿರುವಾಕ್ಯ ರಚನೆ ಅಂತಾ 'ಪುನರಾವರ್ತಿಸಿ' ಚಿತ್ರ ನೋಡು–ಆಲಿಸು–ಓದು–ಬರೆ ಅಂತಾ 'ಕೌಶಲ–ಆ ಮೂಲಕ ಕಲೆ–ಸೃಜನಶೀಲತೆ'ಯನ್ನು ಹೇಳಿಕೊಡಲು ಬರುವುದಿಲ್ಲ. ಈ ನಿಟ್ಟಿನಲ್ಲಿ, ಕಲಿಕೆಯಲ್ಲಿ ದಿನದಿನದ ಜನದ ಕನ್ನಡ ಬಳಕೆಯ ನುಡಿಯನ್ನು ಕುರಿತು ಆಲೋಚಿಸುವಾಗ ನಾವು ಮೊದಲಿಗೆ ಎದುರಿಸಬೇಕಾದ ಕೇಳ್ವಿಗಳೆಂದರೆ;

1. ಗುರುವಿನೊಂದಿಗೆ ಗುಲಾಮತನವನ್ನಷ್ಟೇ ಆಗುಮಾಡಿ ಜೀವಿಸುವ ಇಂತಹ ಕಲಿಕೆಯನ್ನು ಬದಲಿಸುವುದು ಹೇಗೆ?

2. ಕಲಿಯುವುದರ ಉದ್ದೇಶವೆನ್ನುವುದು ನಮ್ಮದೆನ್ನುವುದರಿಂದ ವಂಚಿತರಾಗುವುದು ಅಂತಾಗಿದೆಯಲ್ಲಾ, ಅದರಿಂದ ಹೊರಗೆ ಬರುವ ದಾರಿಗಳು ಯಾವುವು?

3. ಈವರೆಗಿನ ಬೋಧನೆ ಮತ್ತು ಕಲಿಕೆಯನ್ನು 'ಮೌಲಿಕ, ಸಮರ್ಪಕ, ವ್ಯವಸ್ಥಿತ, ವೈಜ್ಞಾನಿಕ'(ಅದೇ2002) ಎಂದು ಕರೆಯಲಾಗಿದೆಯಲ್ಲ, ಅದು ತಪ್ಪೆಂದು ಕಲಿಯುವವರಿಗೆ, ಕಲಿಸುವವರಿಗೆ ಮನವರಿಕೆ ಮಾಡಿಕೊಡುವ ಬಗೆ ಹೇಗೆ?

4. ನಾವಾಡುವ ನುಡಿಯೇ ಕನ್ನಡ ನುಡಿ, ಅದನ್ನು ಕಲಿಕೆಯಲ್ಲಿ ಯೋಜಿಸುವುದು ಹೇಗೆ?

ಇಂತಹ ಕೇಳ್ವಿಗಳನ್ನು ಇರಿಸಿಕೊಂಡು, ನುಡಿಯನ್ನು ಕಲಿಯಲು ಇರುವ ಪರಿಕರಗಳನ್ನು ನೋಡಿಮಾಡಿ ನಮ್ಮ ಆಲೋಚನೆಗಳನ್ನು ಮುಂದುವರಿಸಬೇಕಾಗಿದೆ. ಪಠ್ಯಪುಸ್ತಕ ಸಂಸ್ತೆಗಳ ನೀತಿ–ನಿಯಮಗಳನ್ನು ಹೇಗೆ ಬೇಕಾದರೂ ಹೊಂದಿಸಿ(ಸಮರ್ಥಿಸಿ)ಕೊಳ್ಳಲು ಬರುತ್ತದೆ ಎನ್ನುವುದನ್ನು ತಿಳಿದೂ ನಮ್ಮ ಹೊಣಗೇಡಿತನಗಳನ್ನು ಬಿಟ್ಟುಕೊಡಬೇಕಾಗಿದೆ. ಮಕ್ಕಳನ್ನು ನಲಿಯುತ್ತಲೇ ಕಲಿಯುವಂತೆ ಮಾಡುವ ಗುರಿಯನ್ನು ಸರಿಯಾಗಿ ಕಟ್ಟಿಕೊಡಬೇಕಾಗಿದೆ. ■

(35ನೇ ಪುಟದಿಂದ)

ಇನ್ನಷ್ಟು ಕನ್ನಡ: ಮತ್ತಷ್ಟು ಗೊಂದಲ

ತಾಳ್ಮೆಯಿಂದ ಓದುವುದಕ್ಕೂ ತಯಾರಿಲ್ಲ. 'ಇನ್ನಷ್ಟು ಕನ್ನಡ' ಈ ಪುಸ್ತಕವನ್ನು ಬರೆದಿರುವುದು 'ಕನ್ನಡದ್ದೇ ವ್ಯಾಕರಣ' ನೆಲೆಯನ್ನು ಒಪ್ಪಿತ ನೆಲೆಯಲ್ಲಿ ನೋಡುವ ಮನಸ್ಥಿತಿ ಇಲ್ಲದ ಫಲಿತವಾಗಿ. ಇಡೀ ಪುಸ್ತಕದುದ್ದಕ್ಕೂ ದಾಳಿಕೋರನ ಶೈಲಿಯಲ್ಲಿ, ಸಂಸ್ಕೃತಿ, ಭಾಷೆ, ನಾಡನ್ನು ಗುತ್ತಿಗೆ ಪಡೆದು; ಅದಕ್ಕೆ ಧಕ್ಕೆ ಉಂಟಾದಾಗಿನ ಹತಾಶತೆ ಆಕ್ರೋಶವನ್ನು ರೂಪಿಸಿಕೊಂಡಿದ್ದಾರೆ. ಯಾವುದೇ ಒಂದು ತಾತ್ವಿಕ ನೆಲೆಗಟ್ಟು ಇಲ್ಲದೆ ಬಂದ ಬರಹ ಇದಾಗಿದೆ.

ಎಷ್ಟರಮಟ್ಟಿಗೆ ಹಸಿಬಿಸಿಯಾಗಿ ಬರೆಯುತ್ತಾರೆಂದರೆ, 'ಕನ್ನಡದ ಮಹತ್ವದ ಭಾಷಾವಿಜ್ಞಾನಿ ಪ್ರೊಫೆಸರ್ ಭಟ್' ಎಂದು ಗೌರವ ಕೊಟ್ಟು ಸಂಬೋಧಿಸಿದರೆ, ಉಳಿದೆಡೆ 'ಅಡ್ಡಹಾದಿ ತುಳಿದವರು', 'ಸ್ವಯಮ್‌ಕಥಿತ ಅಧ್ವರ್ಯರು', 'ಜನಾಂಗ ಶುದ್ಧೀಕರಣ ಜೀವ ವಿರೋಧಿ ಆತ್ಮಘಾತುಕ ಕೆಲಸಮಾಡುವವರು', 'ಹಿಟ್ಲರ್‌ನಂತೆ ಜನಾಂಗ ಶುದ್ಧೀಕರಣ ಮಾಡ ಹೊರಟವರು' ಮುಂತಾಗಿ ಪದಗಳನ್ನು ಬಳಸುತ್ತಾರೆ. ಪ್ರತಿಕ್ರಿಯಿಸುತ್ತಲೇ 'ಮಹಾಪ್ರಾಣಗಳಿಲ್ಲದ ಭಾಷೆ ಲಬೊ ಲಬೊ ಎಂದು ತೀರಾ ದುರ್ಬಲವಾಗುತ್ತದೆ' ಎಂದು ತಾಳ್ಮೆ ಕಳೆದುಕೊಳ್ಳುತ್ತಾರೆ.

ಸಂಸ್ಕೃತದ ಪ್ರಭಾವವಿಲ್ಲದ ಕನ್ನಡವನ್ನು ಊಹಿಸಲು ಸಾಧ್ಯವಿಲ್ಲದ್ದು ಮಹಾಪುರುಷನ ತಲೆಯಿಂದ ಜನಿಸಿದವರಿಗೆ, ಪಾದದಿಂದ ಜನಿಸಿದವರಿಗೆ ನಿಜಕ್ಕೂ ಸಾಧ್ಯವಿದೆ. ಅಸಂಖ್ಯ ಶೂದ್ರರು ಚರಿತ್ರೆಯುದ್ದಕ್ಕೂ ಸಂಸ್ಕೃತವನ್ನೇ ಉಸಿರಾಡಿಲ್ಲ. ಉಸಿರಾಡಲೂ ಬಿಟ್ಟಿಲ್ಲ. ಈಗಲೂ ಕನ್ನಡವೇ ಬದುಕು. ಈ ಚಿಂತನೆ ಅಸ್ಪೃಶ್ಯತೆಯ ಅಮೇಧ್ಯವನ್ನು ಮತ್ತೆ ಪ್ರೋಕ್ಷಣೆಮಾಡುವ ಬಗೆಯದ್ದಾಗಿದೆ. ದೇವಸ್ಥಾನದಲ್ಲಿ ಅಂಗಾಂಗಗಳು ಹಿಂಗಿಹೋಗಿರುತ್ತವೆ, ಆದರೆ ದೇವಸ್ಥಾನದಿಂದ ದೂರ ಉಳಿದ ಜನಾಂಗ? ಇವರ ಭಾಷೆ ಬದುಕು ಕಾಣಬೇಕಿದೆ ಅಲ್ಲವೇ?.

'ಯಜಮಾನ್ಯ' ಪದವನ್ನು ಸುಲಭವಾಗಿ ತಿರುಮಲೇಶ್ ಅಂತಹವರು ಬಳಸಲು ಸಾಧ್ಯ ನನಗೆ ಅದು ಅತ್ಯಂತ ಅಪಾಯಕಾರಿಯಾಗಿ ಕೇಳಿಸುತ್ತದೆ. ಮನೆಗೂ ಸಮಾಜಕ್ಕೂ ಸಂಬಂಧವಿಲ್ಲ. ಕಲಿಕೆಗೂ ಸಮಾಜಕ್ಕೂ ಸಂಬಂಧವಿಲ್ಲ–ಇವು ಆಭಾಸಕಾರಿ ಮಾತ್ರವಲ್ಲ ತಾರತಮ್ಯವನ್ನು ರಕ್ಷಿಸುವ ಅಪಾಯಕಾರಿಗಳು ಕೂಡ.

ಆಡುಭಾಷೆಯಲ್ಲಿ ಮಹಾಪ್ರಾಣಾಕ್ಷರಗಳು ಇಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಮಹಾಪ್ರಾಣ ಆಡುಭಾಷೆಯಲ್ಲಿ ಕ್ಲಿಷ್ಟವಾಗಿರುವುದರಿಂದ ಬಳಕೆಗೆ ಇಲ್ಲ ಎನ್ನುತ್ತಾರೆ. ಅಷ್ಟಕ್ಕೆ ಮಹಾಪ್ರಾಣದ ವಿಚಾರ ನಿಲ್ಲಿಸುವುದಿಲ್ಲ. ಸಂಸ್ಕೃತದ ಪದಗಳು, ಮಹಾಪ್ರಾಣಗಳು ಇದ್ದರೆ ಅರ್ಥವೇ ಆಗುವುದಿಲ್ಲವೇ ಪಂಡಿತರಿಗೆ? ಮಹಾಪ್ರಾಣ ತೊಡಕನ್ನು ಉಂಟುಮಾಡುವುದಿಲ್ಲ. ಮಹಾಪ್ರಾಣ ಬಿಟ್ಟರೆ ಭಾಷೆ ಸಪ್ಪೆಯಾಗುತ್ತದೆ. ಊಹಿಸಿಕೊಳ್ಳಲಾಗದು ಎನ್ನುವ ಇವರು ಪುಟ–56ರಲ್ಲಿ ಸಂದೀಪ ನಾಯಕ ಅವರ ಬರಹದ ಭಾಗವನ್ನು ಉಲ್ಲೇಖಿಸುತ್ತಾರೆ. ಆ ಬರಹದಲ್ಲಿ ಒಂದೂ ಮಹಾಪ್ರಾಣಗಳಿಲ್ಲ.

ದೇವನೂರು ಮಹಾದೇವ, ಸಿದ್ಧಲಿಂಗಯ್ಯ, ಕುಂ.ವೀರಭದ್ರಪ್ಪ, ರಾಜಶೇಖರ ಹತಗುಂಧಿ ಇನ್ನೂ ಸಾಕಷ್ಟು ಬರಹಗಾರರು ಪ್ರಾದೇಶಿಕ ಭಾಷೆಯಲ್ಲೇ ಬರೆಯುತ್ತಿದ್ದಾರೆ. ಈ ಕುರಿತು ಏನೂ ಹೇಳುವುದಿಲ್ಲ. ಈ ಬಗೆಯ ಬರವಣಿಗೆ, ಬರಹಗಾರರ ಬಗ್ಗೆ ಗೌರವವಿದೆ ಎನ್ನುವ ಇವರಿಗೆ ಭಾಷಾವಿಜ್ಞಾನದ ಕುತೂಹಲದ, ಅಧ್ಯಯನದ ಸಂಗತಿಯಾಗಿ ಅಥವಾ ಜಿಡ್ಡುಗಟ್ಟಿದ ಭಾಷಾವಿಜ್ಞಾನ ಕ್ಷೇತ್ರಕ್ಕೆ ಚುರುಕುತನ ತಂದುಕೊಳ್ಳದೇ ದೂರವಿರಿಸುತ್ತಾರೆ. ಮತ್ತು ನಡೆದ ದಾರಿಯಲ್ಲೇ ಮತ್ತೆ ನಡೆಯುತ್ತಾರೆ.

'Apple ಎಂಬುದು ಆಪಲ್ ಎಂದು ಬರೆಯಬೇಕೆ, ಏಪಲ್ ಎಂದು ಬರೆಯಬೇಕೆ ಅಥವಾ ಬೇರೇನಾದರೂ ವಿಧಾನ ಸಾಧ್ಯವೇ ಎಂದು ಯೋಚಿಸಬೇಕಾಗಿದೆ' ಎಂದು ಪ್ರಸ್ತಾಪಿಸುವ ಇವರು ಇದರಲ್ಲಿ ಯಾವುದಾದರೊಂದನ್ನು ಅಧಿಕೃತಗೊಳಿಸಬೇಕು ಮತ್ತು ಕನ್ನಡದಲ್ಲಿ ಉಂಟಾಗುವ ಇಂತಹ ಗೊಂದಲದ ಪದಗಳನ್ನು ಕುರಿತು ಯೋಚಿಸಬೇಕು ಎಂದು ಹೇಳುತ್ತಾರೆ. ಆದರೆ ಭಾಷೆಯು ಯಾವುದೇ ಭಾಷಾವಿಜ್ಞಾನಿಯ ಮಾತು ಕೇಳುವುದಕ್ಕಿಂತ ತನಗೆ ತನ್ನದೇ ಆದ ಬಳಕೆಯ ಜನರು ಮತ್ತು ಸಂಸ್ಕೃತಿಯ ತಿರುಳಾಗಿ ಚಲಿಸುತ್ತಿರುತ್ತದೆ. ಭಾಷಾವಿಜ್ಞಾನಿ ಲೋಕದಲ್ಲಿ ಬದುಕುವ ಭಾಷೆಯನ್ನು ಕುರಿತು ಸೂಕ್ಷ್ಮವಾಗಿ ಗಮನಿಸುತ್ತ ಅದರ ನಿಯಮಗಳನ್ನು ಕಂಡುಕೊಳ್ಳಬೇಕು. ಭಾಷಾವಿಜ್ಞಾನಿಗಳು ವಿಧಿಸುವ ವಿಧಿಗಳು ಭಾಷೆಯ ಜೈಲು ಅಥವಾ ನೇಣುಗಂಬವಾಗುತ್ತವೆ. ಇದಕ್ಕೆ ನಿದರ್ಶನವಾಗಿ ಸಂಸ್ಕೃತ ಮತ್ತು ಲ್ಯಾಟಿನ್‌ನ ಭಾಷೆಗಳನ್ನು ಗಮನಿಸಬಹುದಾಗಿದೆ. ■



ಡಾ. ಜೆ. ಬಾಲಕೃಷ್ಣ

ಅಂಗಿಯಲ್ಲಿ ನಾನಿರಲಿಲ್ಲ

ಒಂದು ದಿನ ಮುಲ್ಲಾ ನಸ್ರುದ್ದೀನ್ ತನ್ನ ಪತ್ನಿಯೊಂದಿಗೆ ಹಿತ್ತಲಲ್ಲಿ ಕೂತು ಹರಟೆ ಹೊಡೆಯುತ್ತಿದ್ದಾಗ ಅಲ್ಲೇ ಪಕ್ಕದಲ್ಲಿ ತಂತಿಯ ಮೇಲೆ ಒಗೆದು ಒಣಗಿಹಾಕಿದ್ದ ಮುಲ್ಲಾನ ಅಂಗಿ ಜೋರಾಗಿ ಗಾಳಿ ಬೀಸಿ ದೂರದಲ್ಲಿದ್ದ ಚರಂಡಿಗೆ ಬಿದ್ದು ಎಲ್ಲಾ ಕೆಸರಾಯಿತು. ತಕ್ಷಣ ಮುಲ್ಲಾ ದೇವರಿಗೆ ಧನ್ಯವಾದಗಳನ್ನು ತಿಳಿಸಿದ. ಆತನ ನಡತೆ ವಿಚಿತ್ರವೆನ್ನಿಸಿ ಆತನ ಪತ್ನಿ, 'ಅದ್ಯಾಕೆ, ಅಂಗಿ ಚರಂಡಿಗೆ ಬಿದ್ದು ಕೆಸರಾದರೆ ದೇವರಿಗೆ ಧನ್ಯವಾದ ಹೇಳುತ್ತೀರಿ' ಎಂದಳು.

'ಅಂಗಿ ಮಾತ್ರ ಬಿದ್ದು ಕೆಸರಾಯಿತು. ಸದ್ಯ ಆ ಅಂಗಿಯಲ್ಲಿ ನಾನಿರಲಿಲ್ಲವಲ್ಲ' ಎಂದ ಮುಲ್ಲಾ ನಸ್ರುದ್ದೀನ್.

ಬೆಲೆ

ಆ ರಾಜ್ಯದ ಹೊಸ ಸಾಮ್ರಾಟ ಒಂದು ದಿನ ಮುಲ್ಲಾ ನಸ್ರುದ್ದೀನ್‌ನನ್ನು ಕೇಳಿದ, 'ನಾನೇನಾದರೂ ಗುಲಾಮನಾಗಿದ್ದಲ್ಲಿ ನನ್ನ ಬೆಲೆ ಎಷ್ಟಿರುತ್ತಿತ್ತು?'

'ಐದು ಸಾವಿರ ರೂಪಾಯಿ' ಎಂದ ನಸ್ರುದ್ದೀನ್.

'ಏನು?' ಗುಡುಗಿದ ಸಾಮ್ರಾಟ. 'ನನ್ನ ಮೈಮೇಲಿರುವ ಬಟ್ಟೆಗಳ ಬೆಲೆಯೇ ಐದು ಸಾವಿರ ರೂಪಾಯಿಗಳಾಗುತ್ತದೆ, ತಿಳಿದಿದೆಯೇನು?'

'ತಿಳಿದಿದೆ ಸ್ವಾಮಿ. ನಾನು ಅಷ್ಟನ್ನೇ ಲೆಕ್ಕಕ್ಕೆ ತೆಗೆದುಕೊಂಡಿರುವುದು' ಎಂದ ನಸ್ರುದ್ದೀನ್.

ಕೊಟ್ಟ ಬೆಲೆ

ಮುಲ್ಲಾ ನಸ್ರುದ್ದೀನ್ ಕರ್ಜೂರ ತಿನ್ನುವಾಗ ಅದರೊಂದಿಗೆ ಬೀಜಗಳನ್ನು ತಿನ್ನುತ್ತಿದ್ದುದನ್ನು ಒಬ್ಬಾತ ಗಮನಿಸಿದ.

'ನೀವು ಕರ್ಜೂರದ ಬೀಜಗಳನ್ನೂ ಏಕೆ ತಿನ್ನುತ್ತಿದ್ದೀರಿ?' ಆತ ಕೇಳಿದ.

'ಏಕೆಂದರೆ.... ಕರ್ಜೂರ ನನಗೆ ಮಾರಿದಾತ ಬೀಜಗಳನ್ನೂ ಸೇರಿಸಿ ತೂಕಹಾಕಿ ಕೊಟ್ಟಿದ್ದ... ಅದಕ್ಕೆ' ಎಂದ ನಸ್ರುದ್ದೀನ್.

ಕಣ್ಣು ನೋವು

ಮುಲ್ಲಾ ನಸ್ರುದ್ದೀನನಿಗೆ ಒಮ್ಮೆ ಕಣ್ಣು ಬೇನೆ ಬಂದು ಉರಿಯಾಗತೊಡಗಿತು. ಆತ ಕಣ್ಣಿನ ವೈದ್ಯರ ಬಳಿಗೆ ಹೋದ. ಆತನನ್ನು ನೋಡಿದ ವೈದ್ಯರು,

'ನಿನ್ನ ಕಣ್ಣುಗಳು ಕೆಂಪಗಾಗಿವೆ' ಎಂದರು.

'ಹೌದೆ? ಅವುಗಳಿಗೆ ನೋವೂ ಆಗುತ್ತಿದೆಯೆ?' ಕೇಳಿದ ನಸ್ರುದ್ದೀನ್.

ಕುಸ್ತಿಯ ಕನಸು

ಮುಲ್ಲಾ ನಸ್ರುದ್ದೀನ್ ಸ್ಥಳೀಯ ವೈದ್ಯರ ಬಳಿ ಹೋಗಿ, 'ಕಳೆದ ಒಂದು ತಿಂಗಳಿನಿಂದ ನನಗೆ ವಿಚಿತ್ರ ಕನಸ್ಸು ಬೀಳುತ್ತಿದೆ. ಪ್ರತಿ ರಾತ್ರಿ ನಾನು ಕನಸಿನಲ್ಲಿ ಕತ್ತೆಗಳೊಂದಿಗೆ ಕುಸ್ತಿ ಮಾಡುತ್ತಿರುತ್ತೇನೆ' ಎಂದ.

ವೈದ್ಯರು ನಾಡಿ ಪರೀಕ್ಷಿಸಿ ಮೂಲಿಕೆಯ ಔಷಧ ಕೊಟ್ಟು, 'ಇದನ್ನು ಮಲಗುವಾಗ ಸೇವಿಸು, ಆ ರೀತಿಯ ಕನಸುಗಳು ಬೀಳುವುದು ನಿಂತುಹೋಗುತ್ತದೆ' ಎಂದರು.

'ಇದನ್ನು ನಾಳೆಯಿಂದ ಸೇವಿಸಲು ಪ್ರಾರಂಭಿಸಲೆ?' ಕೇಳಿದ ನಸ್ರುದ್ದೀನ್.

'ಏಕೆ? ಇವತ್ತೇ ಯಾಕಾಗಬಾರದು?' ವೈದ್ಯರು ಕೇಳಿದರು.

'ಈ ರಾತ್ರಿ ಕುಸ್ತಿಯ ಫೈನಲ್ಸ್ ಇದೆ, ಅದಕ್ಕೆ' ಎಂದ ನಸ್ರುದ್ದೀನ್.

ಒಂದು ಪ್ರಶ್ನೆಗೆ ಒಂದು ಸೇಬು

ಮುಲ್ಲಾ ನಸ್ರುದ್ದೀನ್ ಊರಿನ ಚೌಕದಲ್ಲಿ ಬಂದು ಕೂತರೆ ಊರಿನ ಜನವೆಲ್ಲಾ ಅವನ ಬಳಿ ಬಂದು ಅದೂ ಇದೂ ಪ್ರಶ್ನೆಗಳನ್ನು ಕೇಳುವರು. ಅವರಿಗೆ ಉತ್ತರ ಹೇಳಿ ಹೇಳಿ ಅವನಿಗೆ ಸಾಕಾಗಿತ್ತು. ಹಾಗಾಗಿ ಒಂದು ಹೊಸ ನಿಯಮ ಮಾಡಿದ– ಪ್ರಶ್ನೆ ಕೇಳುವವರು ಒಂದು ಪ್ರಶ್ನೆಗೆ ಒಂದು ಸೇಬು ಕೊಡಬೇಕು. ಊರಿನವರೂ ಒಪ್ಪಿಕೊಂಡರು.

ಒಂದು ದಿನ ಮುಲ್ಲಾ ಚೌಕದಲ್ಲಿ ಕೂತಿದ್ದಾಗ ಒಬ್ಬಾತ ಬುಟ್ಟಿಯ ತುಂಬ ಸೇಬು ತಂದು ತನ್ನ ಹಲವಾರು ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಂಡ. ಪ್ರಶ್ನೆಗೊಂದರಂತೆ ಸೇಬು ಕೊಟ್ಟು ಆತನ ಬುಟ್ಟಿಯೂ ಖಾಲಿಯಾಗಿತ್ತು. ಆತ ಹೊರಡುವ ಮುನ್ನ, 'ಆಯಿತು ಹೊರಡುತ್ತೇನೆ. ಹೊರಡುವ ಮುನ್ನ ಒಂದು ಕೊನೆಯ ಪ್ರಶ್ನೆ... ನೀವು ಅಷ್ಟು ಸೇಬು ಹೇಗೆ ತಿಂದಿರಿ?' ಎಂದು ಕೇಳಿದ.

ಅದಕ್ಕೆ ಮುಲ್ಲಾ 'ನಿನ್ನ ಬಳಿ ಸೇಬೆಲ್ಲಾ ಖಾಲಿಯಾಗಿರುವುದರಿಂದ ಆ ಪ್ರಶ್ನೆಗೆ ಉತ್ತರ ಹೇಳಲಾಗುವುದಿಲ್ಲ' ಎಂದ.

DR. AMBEDKAR INSTITUTE OF TECHNOLOGY

An Autonomous Institution affiliated to Visvesvaraya Technological University, Belgaum and Aided by Govt. of Karnataka

ADMISSION OPEN FOR 2012-2013

The 23 acre flourishing campus is situated on the outer ring road, adjacent to Jnana Bharathi Campus of Bangalore University and just 10 Kms from the heart of the city. Its other illustrious neighboring institutions are Indian Institute of Plantation Management (IIPM), National Law School of India University (NLSIU), Institute for Social and Economic Change (ISEC), Atomic Energy Department (AED) and National Assessment and Accreditation Council (NAAC). The conveyance to the college is very cosy with the help of better transport connectivity from all the locations.

As a Grant in-Aid Institution of Government of Karnataka, 95% of the seats are filled up purely on the basis of merit through Common Entrance Test (CET) Cell. Thus The academic environment is assiduous and intellectual on the campus. The Institution is accredited by National Board of Accreditation (NBA), New Delhi.

It has a total built-up area of 39691sq.mtrs with a large number of spacious, well ventilated class rooms with e-learning facilities, laboratories, Data Center, Virtual Instrumentation laboratory, English language laboratory, Workshops, Drawing halls, Seminar halls, Library & Information centre, Sports complex and Auditorium. Besides the campus also provide hostel facilities separately to the boys and girls students of the institute.

The entire campus is a Wi-Fi campus with 1:1 symetric dedicated leased line internet connectivity with optical fiber back bone.

Computer Lab

Chemistry Lab


Digital Library

Data Centre

Gym

Auditorium

Under - Graduate Courses Offered

Sl. No	B.E. Degree Course in	Sanctioned Student Intake
1	Civil Engineering	60
2	Mechanical Engineering	120
3	Electrical & Electronics Engineering	60
4	Electronics & Communication Engineering	120
5	Industrial Engineering & Management	30
6	Instrumentation & Technology	60
7	Computer Science & Engineering	120
8	Telecommunication Engineering	60
9	Information Science & Engineering	60
10	Medical Electronics	30

Post - Graduate Courses Offered

Sl. No	Master Degree Course in	Sanctioned Student Intak
1	M.Tech. in Computer Science & Engg.	25
2	M.Tech. in VLSI Design & Embedded Systems	18
3	M.Tech. in Digital Communication & Networking	18
4	M.Tech. in Power Electronics	18
5	M.Tech. in Structrural Engineering	18
6	Master of Computer Application (MCA)	60
7	Master of Business Administration (MBA)	60

Sl. No	Ph.D. Degree through research
1	Civil Engineering
2	Mechanical Engineering
3	Electrical & Electronics Engineering
4	Electronics & Communication Engineering
5	Instrumentation Technology
6	Telecommunication Engineering
7	Master of Computer Application
8	Physics
9	Chemistry
10	Mathematics

Girls Hostel

Boys Hostel

VISION

True to the characteristics of the Panchajanya, the trust envisions eradication of illiteracy, ignorance and poverty using quality education as the means. The aim is to transform our large population in to a national asset where each individual contributes to the overall development of India.

MISSION

To create an environment for the moral, social, cultural and educational progress of the underprivileged population in the realization of an egalitarian society.

556 STUDENTS

Students Selection through campus interview

PLACED IN 2010-11

TCS | HCL TECHNOLOGIES | MINDTREE
TITAN | SOMA CONSTRUCTION CO.
ACT TV | SYNTEL | MPHASIS (HP Company)
RAMKY INFRASTRUCTURE | ROBERT BOSCH
ORACLE | SASKEN | YOKOGAWA | L&T ECC
TECH MAHINDRA | INFOTECH |
EUREKA FORBES LTD.

For Admission contact : Managing Trustee
Panchajanya Vidya Peetha Welfare Trust (R)
Tel : 080-23211351 / 23215070

Near Jnana Bharathi Campus, Bangalore - 560 056
Tel +91 80 23211505 / 06 / 07, 23218534
Fax +91 80 23217789, E-mail : principal@dr-ait.org
www.dr-ait.org

'SAMVADA' Kannada Monthly, DECEMBER 2012 KA/BGW-706/2012-2014 RNI No. KARKAN/ 2002/ 9246
Posted at Bengaluru G.P.O on 1st & 7th of Every Month. (No of pages- 52)









ಸಂವಾದ

ವಿಶೇಷಾಂಕ - 2013

ಸಹೃದಯರೆ,

ನಿಮ್ಮೆಲ್ಲರ ಪ್ರೀತಿ-ಅಭಿಮಾನ ಮತ್ತು ಸಹಕಾರದಿಂದಾಗಿ ನಿರಂತರವಾಗಿ ತಮ್ಮ ಜತೆ ಸಂವಾದಿಸುತ್ತಿರುವ 'ಸಂವಾದ' ಮಾಸ ಪತ್ರಿಕೆ ಇದೀಗ ಹನ್ನೊಂದನೆ ವರ್ಷಕ್ಕೆ ದಾಪುಗಾಲಿಟ್ಟಿದೆ. ಪ್ರತಿ ವರ್ಷದಂತೆ ಈ ವರ್ಷವೂ ವಿಶೇಷಾಂಕ ಹೊರಬರಲಿದೆ.

ಕಳೆದ ವರ್ಷ ಪ್ರಕಟವಾದ ವಿಶೇಷಾಂಕ ಕೇವಲ ಒಂದೇ ವಾರದಲ್ಲಿ ಸಂಪೂರ್ಣ ಮಾರಾಟವಾಗಿ, ಓದುಗರ ಅಪಾರ ಬೇಡಿಕೆಯಿಂದಾಗಿ ಪುನರ್ ಮುದ್ರಣ ಕಂಡಿದ್ದು ಕನ್ನಡ ಪತ್ರಿಕೋದ್ಯಮದ ಇತಿಹಾಸದಲ್ಲಿ ಕಂಡರಿಯದ ವಿದ್ಯಮಾನ. 2012ರ ಶ್ರೇಷ್ಠ ವಿಶೇಷಾಂಕವೆಂಬ ಹೆಗ್ಗಳಿಕೆ 'ಸಂವಾದ'ಕ್ಕೆ ಸಿಕ್ಕಿದ್ದು ನಿಮಗೆಲ್ಲಾ ತಿಳಿದೇ ಇದೆ.

ಬದಲಾಗುತ್ತಿರುವ ಸಾಮಾಜಿಕ ಮೌಲ್ಯಗಳು, ಮರೆಯಾಗುತ್ತಿರುವ ಜೀವನಕ್ರಮಗಳು, ತಲ್ಲಣಗೊಳ್ಳುತ್ತಿರುವ ಸಿದ್ಧಾಂತಗಳು, ಖಾಸಗೀಕರಣಗೊಂಡು ವ್ಯಕ್ತಿಸ್ವಾಮ್ಯಕ್ಕೆ ಒಳಪಡುತ್ತಿರುವ ಉದ್ಯಮಗಳು, ಅನುಕೂಲ ಸಿಂಧುಗಳಾಗುತ್ತಿರುವ ಜನರ ಮನಸ್ಸಿನಲ್ಲಿ ನಡೆಯುತ್ತಿರುವ ಚೌಕಾಸಿಗಳು, ಬಿಕ್ಕಟ್ಟಿಗೆ ಒಳಗಾಗುತ್ತಿರುವ ಬಹುರೂಪಿ ಸಂಸ್ಕೃತಿಯ ಜತೆಗೆ ಈ ನಾಡಿನ ಕೃಷಿ ಕಾರ್ಮಿಕರು, ವಿದ್ಯಾರ್ಥಿ ಯುವ ಜನರು, ಮಹಿಳೆಯರು, ಸಂಘ-ಸಂಸ್ಥೆಗಳು ಹಾಗೂ ಉದ್ಯೋಗಸ್ಥರು ಎದುರಿಸುತ್ತಿರುವ ಹೊಸ ಸವಾಲುಗಳನ್ನು ಕುರಿತ ಲೇಖನಗಳನ್ನು 'ಸಂವಾದ ವಿಶೇಷಾಂಕ'ದಲ್ಲಿ ಪ್ರಕಟಿಸಲು ಯೋಜಿಸಲಾಗಿದೆ.

ಇಂಥ ಗಂಭೀರ ವಿಚಾರಗಳನ್ನೊಳಗೊಂಡ ವಿಶ್ಲೇಷಣಾತ್ಮಕ ಲೇಖನಗಳಲ್ಲದೆ ಕಥೆ, ಕವನ, ವಿಡಂಬನೆ, ವ್ಯಕ್ತಿ ಚಿತ್ರ, ಛಾಯಾಚಿತ್ರಗಳ ನುಡಿಬರಹ ಮುಂತಾದ ಲೇಖನಗಳನ್ನು ಬರೆದು ಕಳುಹಿಸಿಕೊಡುವುದರ ಮೂಲಕ 'ಸಂವಾದದ ವಿಶೇಷಾಂಕ' ಸುಂದರವಾಗಿ ಮೂಡಿಬರಲು ಸಹಕರಿಸಬೇಕೆಂದು ಕೋರುತ್ತೇವೆ.

ನಿಮ್ಮ ಲೇಖನಗಳು ನಮಗೆ ತಲುಪಲು ಕೊನೆಯ ದಿನಾಂಕ: 20-12-2012

ಲೇಖನಗಳನ್ನು ಇ-ಮೈಲ್ ಮೂಲಕ ಕಳುಹಿಸುವವರು 'ನುಡಿ' ಅಥವಾ 'ಬರಹ' ತಂತ್ರಾಂಶದಲ್ಲಿ ಟೈಪ್ ಮಾಡಿ **Page Maker** ಅಥವಾ **Word File**ನಲ್ಲಿ ಮಾತ್ರ ಇ-ಮೈಲ್ ಮಾಡಬೇಕು ಹಾಗೂ ಲೇಖನದೊಂದಿಗೇ ತಮ್ಮ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿ ಕಳುಹಿಸಬೇಕು.

e-mail: samvaada@hotmail.com
honnapura@yahoo.co.in
ವಿಳಾಸ: ಸಂಪಾದಕರು, ಸಂವಾದ ಮಾಸ ಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ, ಬೆಂಗಳೂರು-560091.
ಮೊ: 9448048306, 080 - 23480278